ಮಂಗಳೂರು
ಸೋಮವಾರ, 16 ಫೆಬ್ರವರಿ 2026
ಸಂಪುಟ 47, ಸಂಚಿಕೆ 319, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಿಶನ್ ಅಬ್ಬರ ಪಾಕಿಸ್ತಾನ ತತ್ತರ

ಪಾಕ್ ವಿರುದ್ಧ ಭಾರತಕ್ಕೆ 61 ರನ್ ಜಯ

ಕೊಲಂಬೋ: ಪಾಕಿಸ್ತಾನ ತಂಡವನ್ನು ಸೋಲಿಸುವ ತನ್ನ ರೂಢಿ ಮುಂದುವರಿಸಿಕೊಂಡು ಬಂದಿರುವ ಭಾರತ ತಂಡವು ವಿಶ್ವಕಪ್‌ನ ಲೀಗ್ ಹಂತದ ಪಂದ್ಯದಲ್ಲಿ 61 ರನ್‌ಗಳಿಂದ ಮುಖಭಂಗವಾಗುವಂತೆ ಸೋಲಿಸಿದೆ. ಇದರೊಂದಿಗೆ ಪಾಕ್‌ಗೆ ತನ್ನೊಂದಿಗೆ ಸೋಲುವುದನ್ನು ಬಿಟ್ಟರೆ ಬೇರೆ ಆಯ್ಕೆಯೇ ಇಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿತು.

ಭಾರತ 175/7
ಪಾಕಿಸ್ತಾನ 114/10

- ವಿಶ್ವಕಪ್‌ನಲ್ಲಿ ಭಾರತಕ್ಕೆ ಹ್ಯಾಟ್ರಿಕ್ ಗೆಲುವು
- ಭಾರತದ ನಾಲ್ವರಿಗೆ 2, ಇಬ್ಬರಿಗೆ 1 ವಿಕೆಟ್



- ಪಾಕ್ ವಿರುದ್ಧದ ಅತಿದೊಡ್ಡ ಗೆಲುವುಗಳಲ್ಲಿ ಒಂದು
- ಭಾರತದ ಸಾಂಘಿಕ ಬೌಲಿಂಗ್‌ಗೆ ಬಸವಳಿದ ಸಲ್ಮಾನ್ ಪಡೆ
- ಸೂಪರ್ 8ಕ್ಕೆ ಭಾರತ ಲಗ್ಗೆ
- ಪಾಕಿಸ್ತಾನ ವಿರುದ್ಧ ಸತತ ಗೆಲುವು

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಶ್ರವಣ

ದಿನದ ಮಾತು

ಸಾಕಾಗುವಷ್ಟಿದ್ದರೂ ಇನ್ನೂ ಬೇಕು ಎನ್ನುವವನಿಗೆ ಎಷ್ಟು ಬಂದರೂ ಸಾಲದು.

▲ ಲೋಕೋಕ್ತಿ

ಸಮಾಜೋತ್ಸವ: ಆಗಲಿ ನಿತ್ಯೋತ್ಸವ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಕಾರು-ಬಸ್ ಡಿಕ್ಕಿ: ಐವರು ಸಾವು

• **ನೆಲಮಂಗಲ:** ರಾಷ್ಟ್ರೀಯ ಹೆದ್ದಾರಿ 48ರ ಜಿಂದಾಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಐವರು ಯುವಕರು ಮೃತಪಟ್ಟಿರುವ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.ದೊಡ್ಡಬಳ್ಳಾಪುರದ ದುರ್ಗಾಪ್ರಸಾದ್(20), ಕೇಶವ್(19), ಧನುಷ್(22), ಹರ್ಷಿತ್(20) ಹಾಗೂ ಲಲಿತ್(22) ಮೃತಪಟ್ಟವರು.

• ಪುಟ ೪

ದೇಶಾದ್ಯಂತ ಮಹಾಶಿವರಾತ್ರಿ ಜಪಯಜ್ಞ,ಭಜನೆ, ಉಪವಾಸ

• **ಹೊಸದಿಲ್ಲಿ :**ದೇಶಾದ್ಯಂತ ಭಾನುವಾರ ಮಹಾಶಿವರಾತ್ರಿ ಆಚರಣೆ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ನಡೆಯಿತು. ಎಲ್ಲೆಡೆ ರುದ್ರಮಂತ್ರ ಪಠಣ, ಶ್ಲೋಕಪಠಣ, ಭಜನೆ, ಜಪಯಜ್ಞ, ಉಪವಾಸ ಆಚರಣೆಗಳೊಂದಿಗೆ ಜಾಗರಣೆ ನಡೆಯಿತು. ಶಿವ-ಪಾರ್ವತಿ ದೇವಿಯ ಪ್ರಾರ್ಥನೆ ,ಪೂಜೆಗಳು ಎಲ್ಲೆಡೆ ನಡೆದವು.ಹಿಂದುಗಳ ಅತ್ಯಂತ ಪವಿತ್ರ ಉತ್ಸವಗಳಲ್ಲಿ ಒಂದಾದ ಮಹಾಶಿವರಾತ್ರಿ ಈ ಬಾರಿ ಮಾಘ ಮಾಸದ ಕೃಷ್ಣಪಕ್ಷದ ತ್ರಯೋದಶಿ ತಿಥಿಯಂದು ಬಂದಿದ್ದು, ಆಧ್ಯಾತ್ಮಿಕ ಜಾಗೃತಿ, ಆತ್ಮಸಾಕ್ಷಾತ್ಕಾರ ಮತ್ತು ಆಂತರಿಕ ಸ್ಥಿರತೆ, ಧನಾತ್ಮಕತೆಯನ್ನು ಸಂಕೇತಿಸುವ ಮಹಾಶಿವರಾತ್ರಿಯನ್ನು ಭಕ್ತರು ಅಪಾರ ಉತ್ಸಾಹ, ಶ್ರದ್ಧೆ, ಭಕ್ತಿ, ತಾದಾತ್ಮ್ಯಗಳೊಂದಿಗೆ ಆಚರಿಸಿದರು. ಎಲ್ಲೆಡೆ ವಿಶೇಷ ಪೂಜೆಗಳು, ಭಜನೆ, ಉಪವಾಸ, ಧ್ಯಾನ, ಜಪಯಜ್ಞಗಳೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ನಡೆದವು.ದೇಹ, ಬುದ್ಧಿ, ಮನಸ್ಸುಗಳ ಅನುಸಂಧಾನದೊಂದಿಗೆ ಮಹಾಶಿವರಾತ್ರಿಯಂದು ಜನರು ಬಾಹ್ಯ ಕಾರ್ಯಕ್ರಮಗಳಿಗಿಂತಲೂ ಆತ್ಮಸಾಕ್ಷಾತ್ಕಾರದ ಸಾಧನೆಯತ್ತ ಒತ್ತು ನೀಡಿದರು .

➡ಪುಟ ೫

ಸ್ಪರ್ಧಾತ್ಮಕ ದರದಲ್ಲಿ ಸಿಗಲಿದೆ ಕಚ್ಚಾತೈಲ: ಗೋಯಲ್

• ಪುಟ ೭



ಶಿವನಾಮ ಸ್ಮರಣೆ ಧ್ಯಾನ, ಜಾಗರಣೆ

• ಪುಟ ೭

ಸುದ್ದಿ ಸಮಗ್ರ



ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ ಭಾನುವಾರ ಆಯೋಜನೆಗೊಂಡಿದ್ದ ಈಶ ಮಹಾಶಿವರಾತ್ರಿ 2026 ಕಾರ್ಯಕ್ರಮದಲ್ಲಿ ಸದ್ಗುರು ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಧ್ಯಾನಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಿದರು.

14 ಹಿಂದು ಮುಖಂಡರು ಪೂಜೆಯಲ್ಲಿ ಭಾಗಿ

ಖಾಕಿ ಕಣ್ಗಾವಲಲ್ಲಿ ಶಿವಲಿಂಗಕ್ಕೆ ಪೂಜೆ

• **ಕಲಬುರಗಿ:** ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠದ ಆದೇಶದಂತೆ ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶ್ರೀ ರಾಘವ ಚೈತನ್ಯರ ಮೂಲ ಸಮಾಧಿಯ ಮೇಲಿನ ಶಿವಲಿಂಗಕ್ಕೆ ಮಹಾಶಿವರಾತ್ರಿಯ ದಿನವಾದ ಭಾನುವಾರ ಶಿವನ ಸ್ವರೂಪಿಯಾದ ಶಿವಲಿಂಗಕ್ಕೆ ಸಹಸ್ರ ಬಿಲ್ವಪತ್ರೆಯೊಂದಿಗೆ 14 ಹಿಂದು ಮುಖಂಡರು ಖಾಕಿ ಕಣ್ಗಾವಲಿನಲ್ಲಿ ಪೂಜೆ ಸಲ್ಲಿಸಿದರು.

ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠ ಆದೇಶಿಸಿದಂತೆ ನಿಗದಿತ ಸಮಯ ಮಧ್ಯಾಹ್ನ 3ಗಂಟೆಗೆ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾ ಬಳಿ ಮೊದಲನೇ ಅರ್ಜಿದಾರ ಸಿದ್ರಾಮಯ್ಯ ಹಿರೇಮಠ ಆಗಮಿಸಿದರು.

➡ಪುಟ ೪



ಮುಂಡರಗಿ: ಶಿವಲಿಂಗ, ನಂದಿ ವಿಗ್ರಹ ಭಗ್ನ • ಪುಟ ೪

ಜಾಗತಿಕ ದಕ್ಷಿಣ ದೇಶದಲ್ಲಿ ಮೊದಲ ಬಾರಿ ಆಯೋಜನೆ

ಇಂದಿನಿಂದ ಎಐ ಶೃಂಗ

• **ಹೊಸದಿಲ್ಲಿ:** ಜಾಗತಿಕ ದಕ್ಷಿಣ ದೇಶದಲ್ಲಿ ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ಇಂಡಿಯಾ-ಎಐ ಇಂಪ್ಯಾಕ್ಟ್ ಸಮಿಟ್ 2026 ಸೋಮವಾರ ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಭವ್ಯವಾಗಿ ಆರಂಭಗೊಳ್ಳಲಿದೆ. ಐದು ದಿನಗಳ ಈ ಮಹಾಸಮ್ಮೇಳನದಲ್ಲಿ 20 ದೇಶಗಳ ವಿಶ್ವ ನಾಯಕರು ಭಾಗವಹಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ಸಂಜೆ 5 ಗಂಟೆಗೆ ಭಾರತ್ ಮಂಡಪಂನಲ್ಲಿ ಇಂಡಿಯಾ-ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026ಅನ್ನು ಉದ್ಘಾಟಿಸಲಿದ್ದಾರೆ ಎಂದು ಪ್ರಧಾನಿ ಕಚೇರಿ ಪ್ರಕಟಿಸಿದೆ. ಫೆ.20ರವರೆಗೆ ನಡೆಯುವ ಐದು ದಿನಗಳ ಪ್ರದರ್ಶನ, 70,000 ಚದರ ಮೀಟರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಪ್ರದರ್ಶಿಸಲಿದೆ.


AI IMPACT SUMMIT

ಈ ಕಾರ್ಯಕ್ರಮ, ಕೃತಕ ಬುದ್ಧಿಮತ್ತೆ ನೀತಿಯನ್ನು ಹೇಗೆ ಜಾರಿಗೆ ತರಬಹುದು ಮತ್ತು ಈ ತಂತ್ರಜ್ಞಾನ ದೈನಂದಿನ ಜೀವನದಲ್ಲಿ ನಾಗರಿಕರಿಗೆ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಪ್ರದರ್ಶಿಸುವ ಗುರಿ ಹೊಂದಿದೆ.

ಬೃಹತ್ ಪ್ರದರ್ಶನ: ಈ ಪ್ರದರ್ಶನದಲ್ಲಿ ಅಂತಾರಾಷ್ಟ್ರೀಯ ಪ್ರತಿನಿಧಿಗಳು ಸೇರಿದಂತೆ 2.5 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭಾಗವಹಿಸಲಿದ್ದಾರೆ. 10 ಮೈದಾನಗಳಿಗೆ ಹರಡಿರುವ ಇದು, 300ಕ್ಕೂ ಹೆಚ್ಚು ಪ್ರದರ್ಶನ ಮಳಿಗೆಗಳನ್ನು ಹೊಂದಿರಲಿದೆ. ಜನರು, ಗ್ರಹ ಮತ್ತು ಪ್ರಗತಿ ಎಂಬ ಮೂರು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಆಯೋಜಿಸಲಾದ ಈ ಪ್ರದರ್ಶನದಲ್ಲಿ ಸ್ಥಳದಲ್ಲೇ ವಿವಿಧ ಪ್ರಾತ್ಯಕ್ಷಿಕೆಗಳು ಗಮನ ಸೆಳೆಯುವ ನಿರೀಕ್ಷೆಯಿದೆ.

ಜಾಗತಿಕ ಭಾಗವಹಿಸುವಿಕೆ: ಆಸ್ಟ್ರೇಲಿಯಾ, ಜಪಾನ್, ರಷ್ಯಾ, ಯುನೈಟೆಡ್ ಕಿಂಗ್‌ಡಮ್, ಫ್ರಾನ್ಸ್, ಜರ್ಮನಿ, ಇಟಲಿ, ನೆದರ್ಲ್ಯಾಂಡ್ಸ್, ಸ್ವಿಟ್ಜರ್ಲೆಂಡ್, ಸೆರ್ಬಿಯಾ, ಎಸ್ಟೋನಿಯಾ, ತಝಿಕಿಸ್ತಾನ್ ಮತ್ತು ಆಫ್ರಿಕಾದ ಹದಿ ಮೂರು ದೇಶಗಳು ಕೃತಕ ಬುದ್ಧಿಮತ್ತೆಯ ಅಭಿವೃದ್ಧಿಯಲ್ಲಿ ಅಂತಾರಾಷ್ಟ್ರೀಯ ಸಹಯೋಗವನ್ನು ಬೆಂಬಲಿಸಿವೆ.

➡ಪುಟ ೪



ಶೃಂಗ ಸಭೆ, ನಾಯಕತ್ವ ಸಭೆ

ಪ್ರದರ್ಶನದ ಜತೆಗೆ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ವಿವಿಧ ದೇಶಗಳ 15ರಿಂದ 20 ಸರ್ಕಾರಗಳ ಮುಖ್ಯಸ್ಥರು ಮತ್ತು 50ಕ್ಕೂ ಹೆಚ್ಚು ಮಂತ್ರಿಗಳು ಭಾಗವಹಿಸಲಿದ್ದಾರೆ. ಓಪನ್ ಎಐನಿಂದ ಸ್ಯಾಮ್ ಆಲ್ಟ್ಮನ್, ಗೂಗಲ್‌ನಿಂದ ಸುಂದರ್ ಪಿಚೈ, ಎನ್‌ವಿಡಿಯಾದಿಂದ ಜೆನ್ಸನ್ ಹುವಾಂಗ್ ಮತ್ತು ಬಿಲ್ ಗೇಟ್ಸ್ ಸೇರಿದಂತೆ 40ಕ್ಕೂ ಹೆಚ್ಚು ಭಾರತೀಯ ಮತ್ತು ಜಾಗತಿಕ ಸಿಇಒಗಳು ಭಾಗವಹಿಸಲಿದ್ದಾರೆ. ಮುಖೇಶ್ ಅಂಬಾನಿ, ಕಿರಣ್ ಮಜುಂದಾರ್ ಷಾ ಮತ್ತು ನಂದನ್ ನಿಲೇಕಣಿ ಅವರಂತಹ ಭಾರತೀಯ ಉದ್ಯಮಿಗಳು ಗಮನ ಸೆಳೆಯಲಿದ್ದಾರೆ. ಫೆ.19ರಂದು ಶೃಂಗಸಭೆಯನ್ನು ಪ್ರಧಾನಿ ಮೋದಿ ಔಪಚಾರಿಕವಾಗಿ ಉದ್ಘಾಟಿಸಲಿದ್ದಾರೆ. ಕಾರ್ಯತಂತ್ರದ ಆದ್ಯತೆಗಳು ಮತ್ತು ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಮೋದಿಯವರು ಜಾಗತಿಕ ಉದ್ಯಮದ ನಾಯಕರೊಂದಿಗೆ ಉನ್ನತ ಮಟ್ಟದ ಸಿಇಒಗಳ ದುಂಡುಮೇಜಿನ ಸಭೆ ಕರೆದಿದ್ದಾರೆ. ಈ ಕಾರ್ಯಕ್ರಮ ಫೆ.20ರಂದು ಕೃತಕ ಬುದ್ಧಿಮತ್ತೆ ಸಹಕಾರ ಮತ್ತು ಆಡಳಿತದ ಕುರಿತಾಗಿ ನಾಯಕರ ಘೋಷಣೆಯನ್ನು ಅಂಗೀಕರಿಸುವುದರೊಂದಿಗೆ ಮುಕ್ತಾಯಗೊಳ್ಳಲಿದೆ.

» 20 ದೇಶ ಭಾಗಿ
» ಮೋದಿ ಉದ್ಘಾಟನೆ

ಕೇಂದ್ರೀಕೃತ ವಿಷಯಗಳು

3,250ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು, 500ಕ್ಕೂ ಹೆಚ್ಚು ಅಧಿವೇಶನಗಳಲ್ಲಿ, ಆರೋಗ್ಯ ರಕ್ಷಣೆ, ಕೃಷಿ, ಶಿಕ್ಷಣ, ಹವಾಮಾನ ಕ್ರಿಯೆ ಮತ್ತು ಇಂಧನ ದಕ್ಷತೆ ಕ್ಷೇತ್ರಗಳಲ್ಲಿ ಎಐನ ಪರಿವರ್ತಕ ಪರಿಣಾಮಗಳ ಬಗ್ಗೆ ಮಾತನಾಡಲಿದ್ದಾರೆ. ಈ ಶೃಂಗಸಭೆ, ಎಐ ಫಾರ್ ಆಲ್, ಎಐ ಬೈ ಎಚ್‌ಇಆರ್ ಯುವೈ ಮತ್ತು ಇಂಡಿಯಾ ಎಐ ಟಿಂಕಪ್ರೆರ್‌ನಿಯರ್ ಸೇರಿದಂತೆ ರಾಷ್ಟ್ರೀಯ ಎಐ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ ಬೆಳಕು ಚೆಲ್ಲಲಿದೆ.

ಅನ್ಸಾರ್ ಇಂಟೆರಿಮ್ ಜಾಲ ರಚಿಸಿದ ವೈದ್ಯರು

ವೈದ್ಯರಿಂದ ವೈಟ್ ಕಾಲರ್ ಭಯೋತ್ಪಾದನೆ ಬಹಿರಂಗ

• **ಹೊಸದಿಲ್ಲಿ:** ಜಮ್ಮು ಮತ್ತು ಕಾಶ್ಮೀರ ಪೊಲೀಸರ ತನಿಖೆ ವೈಟ್-ಕಾಲರ್ ಭಯೋತ್ಪಾದಕ ಮಾದರಿಯನ್ನು ಬಹಿರಂಗಪಡಿಸಿದೆ. ಹಲವು ವೈದ್ಯರನ್ನು ಈಗಾಗಲೇ ತೀವ್ರಗಾಮಿಗಳನ್ನಾಗಿ ಮಾಡಲಾಗಿದೆ ಮತ್ತು ಕೇಂದ್ರಾಡಳಿತ ಪ್ರದೇಶದೊಳಗೆ ಮತ್ತು ಅದರಾಚೆ ದಾಳಿಗಳನ್ನು ಯೋಜಿಸಲು 'ಅನ್ಸಾರ್ ಇಂಟೆರಿಮ್' ಎಂಬ ಹೊಸ ಗುಂಪನ್ನು ರಚಿಸಲಾಗಿತ್ತು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

2022ರಲ್ಲೇ ಆರಂಭ: ಕಳೆದ ವರ್ಷ ಶ್ರೀನಗರದಲ್ಲಿ ಜೆಇಎಂ ಪೋಸ್ಟರ್‌ಗಳು ಕಾಣಿಸಿಕೊಂಡ ನಂತರ ಪೊಲೀಸರು ಮತ್ತು ಭದ್ರತಾ ಸಂಸ್ಥೆಗಳು ಜಾಲದ ಮೂಲವನ್ನು ಪತ್ತೆಹಚ್ಚಲು ಪ್ರಾರಂಭಿಸಿದ್ದವು. ಸ್ಥಳೀಯ ಕೆಲವು ಶಂಕಿತರನ್ನು ಬಂಧಿಸಿ ಅವರನ್ನು ತೀವ್ರ ವಿಚಾರಣೆಗೆ ಗುರಿಪಡಿಸಲಾಯಿತು. 2016ರಿಂದ ತೀವ್ರಗಾಮಿಗಳಾಗಿದ್ದ ವೈದ್ಯರು, 2022ರ ಏಪ್ರಿಲ್‌ನಲ್ಲಿ ಶ್ರೀನಗರದ ಈದ್ಗಾದಲ್ಲಿ ಭೇಟಿಯಾಗಿದ್ದರು. ಮುಖ್ಯಸ್ಥ, ಉಪ ಮುಖ್ಯಸ್ಥ ಮತ್ತು ಖಜಾಂಚಿ ಸೇರಿದಂತೆ ವಿವಿಧ ಹುದ್ದೆಗಳನ್ನು ಒಳಗೊಂಡ ಸಂಘಟನೆ ರಚಿಸಲು ಒಪ್ಪಿಕೊಂಡಿದ್ದರು ಎಂದು ತನಿಖೆಗಳು ಬಹಿರಂಗಪಡಿಸಿವೆ.



ದಾಳಿಗೆ ಸಂಚು-ತನಿಖೆಯಿಂದ ಬಹಿರಂಗ

ಮತ್ತಷ್ಟು ಮಾಹಿತಿ: ಗುಂಪು ಹಿಂಸಾತ್ಮಕ ದಾಳಿಗಳ ಬಗ್ಗೆ ಚರ್ಚಿಸಿ, ಸದಸ್ಯರನ್ನೂ ನೇಮಿಸಿ ಕೊಂಡಿತ್ತು ಎಂದು ಗೊತ್ತಾಗಿದೆ.

ಆರೋಪಿಗಳಲ್ಲಿ ಒಬ್ಬನಾದ 28 ➡ಪುಟ ೪

ಒಪ್ಪಂದಗಳು ವಿಕಸಿತ ಭಾರತಕ್ಕೆ ಅಡಿಪಾಯ

ಚೈತನ್ಯಶೀಲರಾಗಲು ಖಾಸಗಿ ರಂಗಕ್ಕೆ ಪ್ರಧಾನಿ ಮೋದಿ ಕರೆ

• **ಹೊಸದಿಲ್ಲಿ:** ಕೇಂದ್ರದ ಹಣಕಾಸು ಸಚಿವರು ಈಚೆಗೆ ಮಂಡಿಸಿದ ಜನವರ ಬಜೆಟ್ ಮತ್ತು ತನ್ನ ನೇತೃತ್ವದ ಸರ್ಕಾರ ಸಹಿ ಹಾಕಿರುವ ಜಾಗತಿಕ ವ್ಯಾಪಾರ ಒಪ್ಪಂದಗಳು ವಿಕಸಿತ ಭಾರತಕ್ಕೆ ಭದ್ರ ಬುನಾದಿಗಳು, ವಿಕಸಿತ ಭಾರತ ದೃಗ್ಗೋಚರ ವಾಗುತ್ತಿದೆ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ, ಇನ್ನೀಗ ಹೆಚ್ಚು ಚೈತನ್ಯಶೀಲರಾಗಿ ಮತ್ತು ಧೈರ್ಯದಿಂದ ಮುನ್ನಡೆ ಸಾಧಿಸುವಂತೆ ಖಾಸಗಿ ರಂಗಕ್ಕೆ ಕರೆ ನೀಡಿದ್ದಾರೆ.



• ವಿವರ ಪುಟ ೭

ಸದ್ಭಾವ ಸಮಾವೇಶದಲ್ಲಿ ಡಾ.ಭಾಗ್ವತ್ ಅಭಿಮತ

ಸಾಮಾಜಿಕ ಸೌಹಾರ್ದಗಳ ಜಾಗತಿಕ ಕೇಂದ್ರ ಭಾರತ

• **ಗೋರಖ್‌ಪುರ:** ಭಾರತವು ಸದಾಶಯ ಹಾಗೂ ಸಾಮಾಜಿಕ ಸೌಹಾರ್ದತೆಗಳ ಜಾಗತಿಕ ಕೇಂದ್ರವಾಗಿದೆ. ವ್ಯಾವಹಾರಿಕ ಬಾಂಧವ್ಯಗಳಲ್ಲ, ಬದಲಾಗಿ ನಾವೆಲ್ಲರೂ ಒಂದೇ ತಾಯಿಯ ಮಕ್ಕಳು ಮತ್ತು ಪರಸ್ಪರ ಸಂಬಂಧಪಟ್ಟವರು ಎಂಬ ಆತ್ಮೀಯತೆ-ನಂಬಿಕೆಗಳೇ ರಾಷ್ಟ್ರದ ನಾಗರೀಕತೆಯ ಭದ್ರ ಬುನಾದಿಯೆಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಹೇಳಿದ್ದಾರೆ.

ಸಮಾಜವೆಂಬುದು ಪರಸ್ಪರ ಸಂಪರ್ಕಶೀಲ ವ್ಯವಸ್ಥೆಯೆಂದು ವ್ಯಾಖ್ಯಾನಿಸಲಾಗುತ್ತೆ ವಿನಾ ಸ್ವಹಿತಾಸಕ್ತಿ ಎಂದಲ್ಲ. ಹಲವು ದೇಶಗಳಲ್ಲಿ ಸಂಬಂಧಗಳು, ಬಾಂಧವ್ಯಗಳು ತೀರಾ ವ್ಯಾವಹಾರಿಕವಾಗಿವೆ. ಆದರೆ ನಮ್ಮಲ್ಲಿ ಬಾಂಧವ್ಯವೆಂಬುದು ಎಲ್ಲರೂ ನಮ್ಮವರೆಂಬ ಆತ್ಮೀಯ ಭಾವನೆಯನ್ನು ಆಧರಿಸಿದೆ ಎಂದು ಭಾಗ್ವತ್ ಹೇಳಿದರು. ಆರೆಸ್ಸೆಸ್ ಶತಮಾನೋತ್ಸವದಂಗ ಆರೆಸ್ಸೆಸ್ ಗೋರಕ್ಷ್ ಪ್ರಾಂತವು ಇಲ್ಲಿನ ತಾರಾಮಂಡಲದ ಬಾಬಾ ಗಾಂಭೀರನಾಥ್ ಆಡಿಟೋರಿಯಂನಲ್ಲಿ ಆಯೋಜಿಸಿದ ಸಾಮಾಜಿಕ ಸದ್ಭಾವ ಸಮಾವೇಶದಲ್ಲಿ ಭಾಗ್ವತ್ ಪಾಲ್ಗೊಂಡರು.



ಭಾರತಾಂಬೆ ನಮ್ಮೆಲ್ಲರ ಮಾತೆ: ಭಾರತದ ಅಪೂರ್ವ ವೈವಿಧ್ಯತೆಯತ್ತ ಗಮನ ಸೆಳೆದ ಭಾಗ್ವತ್, ನಮ್ಮಲ್ಲಿ ಸಂಪ್ರದಾಯಗಳು, ಧಿರಿಸುಗಳು, ಆಚಾರ ವಿಚಾರಗಳು ವಿಭಿನ್ನವಾಗಿದ್ದರೂ ಇವು ಭಿನ್ನತೆಗೆ ಎಡೆ ಮಾಡಲ್ಲ.

➡ಪುಟ ೪

ವಿದ್ಯಾರ್ಥಿ ಸಾಕೇತ್ ಶವವಾಗಿ ಪತ್ತೆ!



ಕ್ಯಾಲಿಫೋರ್ನಿಯಾದಲ್ಲಿ ನಾಪತ್ತೆಯಾಗಿದ್ದ ತುಮಕೂರು ಮೂಲದ ವಿದ್ಯಾರ್ಥಿ

• **ತುಮಕೂರು:** ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕಾಣೆಯಾಗಿದ್ದ ತುಮಕೂರು ಮೂಲದ ವಿದ್ಯಾರ್ಥಿ ಸಾಕೇತ್ ಶ್ರೀನಿವಾಸಯ್ಯ ಅವರ ಮೃತದೇಹ ಆರು ದಿನಗಳ ನಂತರ ಪತ್ತೆಯಾಗಿದೆ.

ಕ್ಯಾಲಿಫೋರ್ನಿಯಾದ ಬರ್ಕ್ಲಿ ವಿಶ್ವವಿದ್ಯಾಲಯದಲ್ಲಿ ರಾಸಾಯನಿಕ ಮತ್ತು ಜೈವಿಕ ಅಣು ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ಸಾಕೇತ್ ಫೆ.9ರಂದು ನಾಪತ್ತೆಯಾಗಿದ್ದ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಭಾರತೀಯ ದೂತಾವಾಸವು ಈ ಕುರಿತು ಮಾಹಿತಿ ನೀಡಿದೆ.

ಈ ತೀವ್ರ ಕಷ್ಟದ ಸಮಯದಲ್ಲಿ ಅವರ ಕುಟುಂಬ ಮತ್ತು ಪ್ರೀತಿಪಾತ್ರರಿಗೆ ನಾವು ನಮ್ಮ ಹೃದಯಾಂತರಾಳದ ಸಂತಾಪ ವ್ಯಕ್ತಪಡಿಸುತ್ತೇವೆ ಎಂದು ದೂತಾವಾಸ ಹೇಳಿಕೆಯಲ್ಲಿ ತಿಳಿಸಿದೆ. ಫೆ.9ರಂದು ನಾಪತ್ತೆಯಾಗಿದ್ದ ಸಾಕೇತ್, ಕೊನೆಯ ಬಾರಿಗೆ ಟಿಲ್ಡೆನ್ ರೀಜನಲ್ ಪಾರ್ಕ್‌ನ ಸರೋವರದ ಬಳಿ ಕಂಡುಬಂದಿದ್ದರು ಎಂಬ ಮಾಹಿತಿ ಇದೆ.

➡ಪುಟ ೪

ಕಿರುಸುದ್ದಿ

ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

ಕಾಸರಗೋಡು: ಕೃಷಿ ಕಾರ್ಮಿಕರ ಕಲ್ಯಾಣ ನಿಧಿಯ ಸದಸ್ಯರಾಗಿರುವ ಕಾರ್ಮಿಕರ ಮಕ್ಕಳಲ್ಲಿ 2025ರ ಉನ್ನತ ಶಿಕ್ಷಣ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪದವಿ, ವೃತ್ತಿಪರ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಸ್ನಾತಕೋತ್ತರ ಪದವಿ, ಟಿಟಿಸಿ, ಐಟಿಐ, ಪಾಲಿಟೆಕ್ನಿಕ್, ಬಿಎಡ್, ಜನರಲ್ ನರ್ಸಿಂಗ್, ವೈದ್ಯಕೀಯ ಡಿಪ್ಲೊಮಾ ಇತ್ಯಾದಿ ಕೋರ್ಸ್‌ಗಳಲ್ಲಿ ಮೊದಲ ಅವಕಾಶದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಆಧಾರವು 2025ನೇ ಜನವರಿ 1ರಿಂದ ಡಿಸೆಂಬರ್ 31ರ ವರೆಗೆ ಲಭ್ಯವಿರುವ ಫಲಿತಾಂಶಗಳಾಗಿವೆ. ಅರ್ಜಿ ನಮೂನೆಯ ಮಾದರಿ ಮತ್ತು ಮಾನದಂಡಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಅರ್ಜಿಗಳನ್ನು ಫೆ.16ರೊಳಗೆ ಸಲ್ಲಿಸಬಹುದು. ಫೆ.25ರ ವರೆಗೆ ಮುಖ್ಯ ಕಾರ್ಯನಿರ್ವಾಹಕ ಕಚೇರಿಯಲ್ಲಿ ಮೇಲ್ಮನವಿಗಳನ್ನು ಸ್ವೀಕರಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ 04672207731 ಸಂಪರ್ಕಿಸಬಹುದು.

ಕಾರಡ್ಕ ಬ್ಲಾಕ್ ಪಂಚಾಯತ್ ಗ್ರಾಮ ಸಭೆ

ಮುಳ್ಳೇರಿಯ: ಬೋವಿಕ್ಕಾನ ಸೌಪರ್ಣಿಕಾ ಸಭಾಂಗಣದಲ್ಲಿ ಕಾರಡ್ಕ ಬ್ಲಾಕ್ ಪಂಚಾಯತ್ ಗ್ರಾಮ ಸಭೆ ನಡೆಯಿತು. ಉಪಾಧ್ಯಕ್ಷೆ ಉಷಾ ವಿ. ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್ ಉದ್ಘಾಟಿಸಿ ಮಾತನಾಡಿದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ರಾಜೇಶ್ ಬಾಬು ವಿವಿಧ ಪ್ರಸ್ತಾವನೆಗಳನ್ನು ಮಂಡಿಸಿದರು. ಬೇಡಡ್ಕ ಪಂಚಾಯತ್ ಅಧ್ಯಕ್ಷ ಇ.ಕುಂಞಿರಾಮನ್, ಕುತ್ತಿಕೋಲು ಪಂಚಾಯತ್ ಅಧ್ಯಕ್ಷೆ ಶೋಭನಾಕುಮಾರಿ, ಮುಳಿಯಾರು ಪಂಚಾಯತ್ ಅಧ್ಯಕ್ಷ ಕೆ.ಬಿ.ಮುಹಮ್ಮದ್ ಕುಂಞಿ, ಕಾರಡ್ಕ ಪಂಚಾಯತ್ ಅಧ್ಯಕ್ಷೆ ಎಂ.ಜನನಿ, ಕುಂಬ್ಡಾಜೆ ಪಂಚಾಯತ್ ಅಧ್ಯಕ್ಷೆ ಯಶೋದಾ, ಬೆಳ್ಳೂರು ಪಂಚಾಯತ್ ಅಧ್ಯಕ್ಷೆ ಮಾಲತಿ ಮಾತನಾಡಿದರು. ಗ್ರೂಪ್ ಚರ್ಚೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾಸರಗೋಡು ತಾಲೂಕು ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ಕಾಸರಗೋಡು ತಾಲೂಕು ಅಭಿವೃದ್ಧಿ ಸಮಿತಿ ಸಭೆಯು ತಾಲೂಕು ಕಚೇರಿಯ ಸಮ್ಮೇಳನ ಸಭಾಂಗಣದಲ್ಲಿ ನಡೆಯಿತು. ಕುತ್ತಿಕೋಲು ಗ್ರಾಮ ಪಂಚಾಯತ್ ಅಧ್ಯಕ್ಷೆ ಶೋಭನಾಕುಮಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು, ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸುಜಾನಿ ಎಸ್.ಶ್ಯಾನುಭೋಗ್, ಡಿ.ಶಂಕರ, ಆಯಿಷಾ ಅಬೂಬಕ್ಕರ್, ವಸಂತ ಅಜಕ್ಕೋಡು, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಸಮಸ್ಯೆಗಳಿಗೆ ತಾಲೂಕು ಅಧಿಕಾರಿಗಳು ಸ್ಪಂದಿಸಿದರು. ಅಭಿವೃದ್ಧಿ ಸಮಿತಿಯ ಸಂಚಾಲಕರೂ ಆದ ತಹಶೀಲ್ದಾರ್ ಕೆ.ರಮೇಶ್ ಸ್ವಾಗತಿಸಿ, ಕಿರಿಯ ಮೇಲ್ವಿಚಾರಕಿ ವಿ.ಎಂ. ಸಗಿನರಾಣಿ ವಂದಿಸಿದರು.

ಆಯುರ್ವೇದ ಸಂಶೋಧನೆಗಾಗಿ ದೇಹದಾನ

ಉಡುಪಿ: ಕೋಟೇಶ್ವರದ ಬೇರೀಸ್ ಗ್ರೀನ್ ಅವೆನ್ಯೂ, ಜಿ–04 ರಲ್ಲಿ ಅನಂತಪದ್ಮನಾಭ (69) ಅವರ



ದೇಹವನ್ನು ಮೃತರ ಸ್ವ–ಇಚ್ಛೆಯಂತೆ ಶ್ರೀ ಧರ್ಮಸ್ಥಳ ಮ0ಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದ ಶರೀರ ರಚನಾ ವಿಭಾಗಕ್ಕೆ ದೇಹವನ್ನು ದಾನ ಮಾಡಿದ್ದಾರೆ. ಎಸ್.ಡಿ.ಎಮ್. ವಿದ್ಯಾಸಂಸ್ಥೆಗೆ ನೀಡಿರುವ ಈ ಶ್ರೇಷ್ಠ ಕೊಡುಗೆ ಇತರರಿಗೂ ಮಾದರಿಯಾಗಿದೆ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ಮಮತಾ ಕೆ.ವಿ.ಯವರು ಪ್ರಾರ್ಥಿಸಿ, ಶರೀರ ರಚನಾ ವಿಭಾಗ ಸಂಶೋಧನೆಗಾಗಿ ವಿಭಾಗದ ಮುಖ್ಯಸ್ಥರಾದ ಡಾ. ಕೃಷ್ಣಮೂರ್ತಿ ಎನ್. ಅವರಿಗೆ ದೇಹವನ್ನು ಹಸ್ತಾಂತರಿಸಿದರು.

ಯಕ್ಷ ಕಲಾವಿದ ಕೋಟ ಸುರೇಶ್ ಬಂಗೇರ ಸನ್ಮಾನ



ಕೋಟ: ಶ್ರೀ ಜಟ್ಟಿಗೇಶ್ವರ ಭಕ್ತ ವೃಂದ ಕುಂಜಿಗುಡಿ ಸಾಲಿಗ್ರಾಮ ಇದರ ನೇತೃತ್ವದಲ್ಲಿ 30ನೇ ವರ್ಷದ ಯಕ್ಷಗಾನ ಬಯಲಾಟವಾಗಿ ಅಮೃತೇಶ್ವರಿ ಮೇಳದ ವೇದಿಕೆಯಲ್ಲಿ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕೋಟ ಸುರೇಶ್ ಬಂಗೇರ ಇವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಸಾರ್ವಜನಿಕ ಅನ್ನ ಸಂತರ್ಪಣೆ ಸೇವಕರ್ತರಾದ ಮಂಜುನಾಥ ಹೊಳ್ಳ ದಂಪತಿಗೆ ಮತ್ತು ಗೆಳೆಯರ ಬಳಗದ ತಾರಾನಾಥ ಹೊಳ್ಳರಿಗೆ ವಿಶೇಷ ಗೌರವಾರ್ಪಣೆ ಸಲ್ಲಿಸಲಾಯಿತು. ಯಕ್ಷಗಾನಕ್ಕೆ ವಾರ್ಷಿಕ ನಿತ್ಯನಿಧಿ ಠೇವಣಿದಾರರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಆರೋಗ್ಯ ಸೇವೆ, ಸಮಾಜ ಸೇವೆ,ವಿದ್ಯಾ ಸೇವೆ, ಧಾರ್ಮಿಕ ಸೇವೆಗೆ ಸಹಾಯ ನಿಽ ವಿತರಿಸಲಾಯಿತು. ವೇದಿಕೆಯಲ್ಲಿ ಅತಿಥಿಗಳಾಗಿ ಉದ್ಯಮಿ ಕೃಷ್ಣಯ್ಯ ಪೂಜಾರಿ ಗದ್ದೆಮನೆ, ಶ್ರೀ ಜಟ್ಟಿಗೇಶ್ವರ ಭಕ್ತ ವೃಂದ ಅಧ್ಯಕ್ಷ ಗಣೇಶ್ ನಾಯರಿ, ಜಟ್ಟಿಗೇಶ್ವರ ಸಮಿತಿಯ ಕುಂಜುಗುಡಿ ಮಂಜುನಾಥ ನಾಯರಿ ,ಅಮೃತೇಶ್ವರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಸದಸ್ಯರಾದ ಗಣೇಶ್ ನೆಲ್ಲಿಬೆಟ್ಟು, ಶಿವಪೂಜಾರಿ ಉಪಸ್ಥಿತರಿದ್ದರು. ಸಮಿತಿಯ ಕೆ.ಮಂಜುನಾಥ ನಾಯರಿ ಕಾರ್ಯಕ್ರಮ ನಿರೂಪಿಸಿ ಸನ್ಮಾನ ಪತ್ರ ವಾಚಿಸಿ ಧನ್ಯವಾದ ಸಲ್ಲಿಸಿದರು.

ನುಡಿ ನಮನ

ಕುಂದಾಪುರ : ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕುಂದಾಪುರ ತಾಲೂಕಿನ ಯೋಜನಾ ಕಚೇರಿಯಲ್ಲಿ ಇತ್ತೀಚೆಗೆ ನಿಧನರಾದ ಬಿ.ಅಪ್ಪಣ್ಣ ಹೆಗ್ಡೆ ಅವರಿಗೆ ಶುಕ್ರವಾರ ನುಡಿ ನಮನ ಸಲ್ಲಿಸಲಾಯಿತು. ಕುಂದಪ್ರಭ ಸಂಪಾದಕ ಯು.ಎಸ್. ಶೆಣೈ, ಕುಂದಾಪುರ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ಸುಬ್ರಹ್ಮಣ್ಯ ಶೆಟ್ಟಿ, ಉಡುಪಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಉಮೇಶ ಶೆಟ್ಟಿ ಮತ್ತು ಮಂಜು ಬಿಲ್ಲವ, ಶಾನ್ಕಟ್ಟು, ಯೋಜನಾಧಿಕಾರಿ ಉಮೇಶ ಶೆಟ್ಟಿ ಎಚ್., ಯೋಜನಾ ಕಚೇರಿಯ ಸಿಬ್ಬಂದಿಗಳು, ಮೊದಲಾದವರು ಉಪಸ್ಥಿತರಿದ್ದರು.



ಪ್ರಾಚೀನ ಕಾಲದಲ್ಲಿ ಮಹಾಶಿವರಾತ್ರಿಯ ಶುಭ ಸಂದರ್ಭದಲ್ಲಿ ವಸಿಷ್ಠ ಮಹರ್ಷಿಗಳು ಗುರುಕುಲ ನಡೆಸುತಿದ್ದ ಅಯೋಧ್ಯೆಯ ಭರತಕುಂಡದಲ್ಲಿರುವ ಪುರಾತನ ಶಿವ ದೇವಾಲಯಕ್ಕೆ ಧರ್ಮಸ್ಥಳ ಶ್ರೀರಾಮ ಕ್ಷೇತ್ರದ 1008 ಮಹಾಮಂಡಲೇಶ್ವರ ಶ್ರೀ ಸದ್ಗುರು ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಭರತ್ ಕುಂಡದ ಗುರುಗಳಾದ ಶ್ರೀರಾಮ್ ನಾರಾಯಣ್ ದಾಸ್ ಉಪಸ್ಥಿತರಿದ್ದರು ಹಾಗೂ ರಾಮಕ್ಷೇತ್ರದ ಟ್ರಸ್ಟಿಗಳಾದ ತುಕಾರಾಮ್ ಸಾಲಿಯಾನ್, ರವೀಂದ್ರ ಪೂಜಾರಿ, ಇಂಜಿನಿಯರ್ ರಾಹುಲ್ ಹಾಗೂ ಸ್ವಾಮೀಜಿಯವರ ಅಯೋಧ್ಯೆಯ ಶಿಷ್ಯಂದಿರು ಭಕ್ತಾದಿಗಳು ಜೊತೆಗಿದ್ದರು.

ನೆಲ್ಯಾಡಿ ನಿವಾಸಿ ಕೆ.ಸಿ.ವರ್ಗೀಸ್ ಸಾವು: ಕೊಲೆ ಕೇಸು ದಾಖಲು

ಉಪ್ಪಿನಂಗಡಿ: ಆರು ದಿನದ ಹಿಂದೆ ನೆಲ್ಯಾಡಿ ಗ್ರಾಮದ ಕೊಪ್ಪಮಾದೇರಿ ನಿವಾಸಿ ಕೆ.ಸಿ.ವರ್ಗೀಸ್ (73) ಅಸಹಜ ಸಾವು ಪ್ರಕರಣದ ಬಗ್ಗೆ ನಡೆಸಲಾದ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ತಲೆ ಹಾಗೂ ದೇಹದ ಭಾಗಗಳಿಗೆ ಬಲವಾದ ಪೆಟ್ಟು ಬಿದ್ದಿರುವುದರಿಂದಲೇ ಸಾವು ಸಂಭವಿಸಿದೆ ಎಂದು ತಿಳಿಸಲಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಕೊಲೆ ಪ್ರಕರಣವೆಂದು ಪರಿವರ್ತಿಸಲಾಗಿದ್ದು, ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ.



ಘಟನೆ ಕುರಿತಂತೆ ಮೃತರ ಪುತ್ರ ಆಟೋರಿಕ್ಷಾ ಚಾಲಕ ಕೆ.ವಿ.ತೋಮಸ್ ಎಂಬವರು ಉಪ್ಪಿನಂಗಡಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಂದೆ ಕೆ.ಸಿ.ವರ್ಗೀಸ್ ಮತ್ತು ತಾಯಿ ಎಸ್ತೆರಾ ವರ್ಗೀಸ್ ಅವರು ಕೊಪ್ಪ ಮಾದೇರಿ ಎಂಬಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದರು. ಫೆ.8ರಂದು ನೆಲ್ಯಾಡಿ ಪೇಟೆಯಲ್ಲಿ ಆಟೋ ಬಾಡಿಗೆ ಮಾಡಿ ರಾತ್ರಿ 11 ಗಂಟೆಗೆ ಮನೆಯ ಬಾಗಿಲು ತೆರೆದುಕೊಂಡಿರುವುದನ್ನು ನೋಡಿ ಮನೆಯೊಳಗಡೆ ಹೋದಾಗ ತಂದೆ ಮಂಚದ ಕೆಳಗೆ ಬಿದ್ದುಕೊಂಡು ತಲೆಗೆ ಗಾಯವಾಗಿರುವುದನ್ನು ಕಂಡು ಪುತ್ತೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ವರ್ಗೀಸ್ ಮೃತಪಟ್ಟಿರುವುದಾಗಿ ತಿಳಿಸಿದ್ದರು.

ಶವದ ಮರಣೋತ್ತರ ಪರೀಕ್ಷೆಯಲ್ಲಿ ದೇಹಕ್ಕೆ ಹಲವೆಡೆ ಬಲವಾದ ಪೆಟ್ಟು ಬಿದ್ದ ಕಾರಣ ಸಾವು ಸಂಭವಿಸಿದೆ ಎಂಬ ವರದಿ ಬಂದ ಹಿನ್ನೆಲೆಯಲ್ಲಿ ತನಿಖೆ ನಡೆಸಿದಾಗ, ಘಟನೆಯ ದಿನ ಮೃತ ವ್ಯಕ್ತಿ ಆತನ ಪತ್ನಿಗೆ ಹೊಡೆದಿದ್ದು, ಈ ವಿಚಾರ ತಿಳಿದು ಆಕೆಯ ಸಹೋದರರಾದ ಸಿ. ಟಿ. ರಾಜು ಆಲಿಯಾಸ್ ವರ್ಗೀಸ್ (59) ಮತ್ತು ಚಾಕೋಚ್ಚ (51) ಎಂಬಿಬ್ಬರು ವರ್ಗೀಸ್‌ಗೆ ಕಟ್ಟಿಗೆಯಿಂದ ಹೊಡೆದಿದ್ದು, ಗಾಯಾಳುವನ್ನು ಕೆ. ವಿ. ತೋಮಸ್ (39) ಆಸ್ಪತ್ರೆಗೆ ಸೇರಿಸಿದ್ದ. ಈ ಹಿನ್ನೆಲೆಯಲ್ಲಿ ಮೂವರನ್ನು ಬಂಧಿಸಿದ ಪೊಲೀಸರು ತನಿಖೆಯನ್ನು ಮುಂದುವರೆಸಿದ್ದಾರೆ.

ಯಕ್ಷಗಾನ ಕಲಾರಂಗದ 88ನೇ ಯೋಜನೆ | ಡಾ.ಶಾರದಾ ಎಂ. ಪ್ರಾಯೋಜಕತ್ವದ ಎರಡನೇ ಮನೆ

ಪ್ರತಿಭಾವಂತನ ಪಾಲಿಗೆ ಛಂದೋಗತಿ

ಉಡುಪಿ: ಅಲ್ಲಿ ಗೌಜಿ ಗದ್ದಲವಿರಲಿಲ್ಲ. ಸೇರಿದ್ದ ಎಲ್ಲರ ಮೊಗದಲ್ಲಿ ತುಂಬು ನಗುವಿತ್ತು, ಬಂದವರಿಗೆ ನೀರು, ಬೆಲ್ಲದ ಸ್ವಾಗತವಿತ್ತು. ಸಾರ್ಥಕತೆಯ ನಗುವಿತ್ತು...ಬ್ಯಾನರ್ ಕಟ್ಟಿರಲಿಲ್ಲ. ಗಣ್ಯಾತಿಗಣ್ಯರಿದ್ದರೂ ಆಮಂತ್ರಣ ಅಚ್ಚಾಗಿರಲಿಲ್ಲ. ಪ್ರಚಾರದ ಹಂಗೂ ಅಲ್ಲಿರಲಿಲ್ಲ.

ಹೌದು, ಅದೊಂದು ಪುಟ್ಟ ಮತ್ತು ಸರಳತೆಯ ಮೂಲಕ ಸಮಾಜಕ್ಕೆ ಮಹತ್ತರವಾದ ಸಂದೇಶವೊಂದನ್ನು ರವಾನಿಸಿದ ಮಾದರಿ ಕಾರ್ಯಕ್ರಮ. ಬದ್ಧತೆ ಮತ್ತು ತನ್ನ ಕಾರ್ಯವೈಖರಿಯ ಮೂಲಕವೇ ಗಮನ ಸೆಳೆದಿರುವ ಉಡುಪಿಯ ಯಕ್ಷಗಾನ ಕಲಾರಂಗದ ಸಮಾಜಮುಖಿ ಯೋಜನೆಯ 'ವಿದ್ಯಾಪೋಷಕ್' ನಡಿ ನಿರ್ಮಾಣಗೊಂಡ 'ಛಂದೋಗತಿ'ಎಂಬ ಚಂದದ ಮನೆಯ ಹಸ್ತಾಂತರ ಕಾರ್ಯಕ್ರಮ ಇದಾಗಿತ್ತು. ಮುಸ್ಸಂಜೆಯ ವೇಳೆಗೆ ಯಾವುದೇ ಧಾರ್ಮಿಕ ವಿಧಿವಿಧಾನಗಳಿಲ್ಲದೆ ಕೇವಲ ಜ್ಯೋತಿ ಬೆಳಗುವ ಮೂಲಕ ಸರಳವಾಗಿ ಮನೆ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಪತಿಯ ಸ್ಮರಣೆಯಲ್ಲಿ ಮನೆ

ಉಡುಪಿ ಜಿಲ್ಲೆಯ ಶಿರ್ವ ಎಂಎಸ್‌ಆರ್‌ಎಸ್ ಕಾಲೇಜಿನ ನಿವೃತ್ತ ಉಪನ್ಯಾಸಕಿ ಡಾ.ಶಾರದಾ ಎಂ. ಅವರು ತಮ್ಮ ಪತಿ ಉಡುಪಿ ಪಿಪಿಸಿ ಕಾಲೇಜಿನಲ್ಲಿ ಆಂಗ್ಲ ಭಾಷಾ ಉಪನ್ಯಾಸಕರಾಗಿದ್ದ ಪ್ರೊ. ಕೃಷ್ಣಮೂರ್ತಿ ಅವರ ಸ್ಮರಣಾರ್ಥವಾಗಿ 7 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿಕೊಟ್ಟ ಮನೆಯಿದು. ಕಲಾರಂಗದ ನೇತೃತ್ವದಲ್ಲಿ ನಿರ್ಮಾಣಗೊಂಡ 88ನೆಯ ಮನೆ ಇದಾಗಿದ್ದು, ಶಾರದಾ ಎಂ. ಅವರ ಪ್ರಾಯೋಜಕತ್ವದ ಎರಡನೆಯ ಮನೆಯೂ ಹೌದು.

ಯಾರಿಗೆ ಈ ಮನೆ ?

ಉಡುಪಿಯಿಂದ ಸುಮಾರು 63 ಕಿಲೋಮೀಟರ್ ದೂರದಲ್ಲಿರುವ ಬೈಂದೂರು ತಾಲೂಕಿನ ಜಡ್ಕಲ್ ಸೆಲ್ಕೋಡ್ ಎಂಬ ಹಳ್ಳಿಯಲ್ಲಿ ಛಂದೋಗತಿಯ ನಿರ್ಮಾಣವಾಗಿದ್ದು, ಬಡ ಪ್ರತಿಭಾವಂತ ವಿದ್ಯಾರ್ಥಿ ಚಿಕ್ಕಮ್ಮ ಮತ್ತು ಶಂಕರ ನಾಯ್ಕ್ ಇವರ ಪುತ್ರ ಸ್ವಸ್ತಿಕ್ ಎಸ್. ನಾಯ್ಕ್ ಗೆ ನಿರ್ಮಿಸಿಕೊಡಲಾಗಿದೆ. ಸ್ವಸ್ತಿಕ್ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, ಎಸ್‌ಎಸ್‌ಎಲ್‌ಸಿಯಲ್ಲಿ ಶೇ.97ಅಂಕ ಪಡೆದಿದ್ದು, ವಿದ್ಯಾಪೋಷಕ್ ಅಡಿಯಲ್ಲಿ ಈತನನ್ನು ಆಯ್ಕೆ ಮಾಡಲಾಗಿತ್ತು. ಸದ್ಯ ಈತ ಪ್ರಥಮ ಪಿಯುಸಿ ವಿದ್ಯಾರ್ಥಿಯಾಗಿದ್ದಾನೆ.



ನೂತನ ಮನೆ ಛಂದೋಗತಿ ಉದ್ಘಾಟನೆ ವೇಳೆ ಹಲವು ಮಂದಿ ಗಣ್ಯರು ಪಾಲ್ಗೊಂಡಿದ್ದರು.



ಹೀಗಿತ್ತು ಸ್ವಸ್ತಿಕ್‌ನ ಹಳೆ ಮನೆ

ಕಲಾರಂಗ ವಿಸ್ಮಯ



ಯಕ್ಷಗಾನ ಕಲಾರಂಗ ನನಗೊಂದು ವಿಸ್ಮಯವೇ ಆಗಿದೆ. ಅವರ ಸಾಮಾಜಿಕ-ಶೈಕ್ಷಣಿಕ-ಕಲಾ ಸಂಬಂಧಿ ಕಾರ್ಯಕ್ರಮಗಳ ವಿಶ್ವರೂಪ ಅನ್ಯ ಸಂಘಟನೆಗಳಿಂದ ಅಸಾಧ್ಯ. ಅವರ ಕ್ಲಪ್ತತೆ, ಪರಿಶ್ರಮ, ಪಾರದರ್ಶಕತೆ, ಬದ್ಧತೆ, ಅಚ್ಚುಕಟ್ಟುತನಕ್ಕೆ ಶರಣಾಗಿದ್ದೇನೆ.
■ ಗುರುರಾಜ ಗಂಟಿಹೊಳೆ, ಶಾಸಕರು, ಬೈಂದೂರು

ಬದ್ಧತೆಗೆ ಹೆಸರಾದ ಕಲಾರಂಗ

ಉಡುಪಿಯ ಯಕ್ಷಗಾನ ಕಲಾರಂಗವೆಂದರೆ ಬದ್ಧತೆ ಹೆಸರಾದ ಸಂಘಟನೆ. ಇದು ಯಕ್ಷನಿಧಿ, ಯಕ್ಷ ಶಿಕ್ಷಣದ ಜೊತೆ ವಿದ್ಯಾಪೋಷಕ್ ಎಂಬ ಯೋಜನೆಯನ್ನೂ ನಿರಂತರವಾಗಿ ನಡೆಸುವ ಮೂಲಕ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಪಾಲಿಗೆ ಆಶಾಕಿರಣವಾಗಿ ಮೂಡಿಬಂದಿದೆ.

ಕಲಾರಂಗದಿಂದ ತ್ರಿವಿಧ ದಾನ



ಆಹಾರ, ಔಷಧ, ಶಿಕ್ಷಣ ವಿಕ್ರಯ ಮಾಡಬಾರದೆಂದು ನಮ್ಮ ಮೂಲ ಸಂಸ್ಕೃತಿಯಲ್ಲಿದೆ. ಈ ಮೂರೂ ವಿಧದ ದಾನಗಳು ಈ ಯಕ್ಷಗಾನ ಕಲಾರಂಗ ಸಂಸ್ಥೆಯಿಂದ ಆಗುತ್ತಿವೆ.
■ ನಾರಾಯಣ ಶೇವಿರೆ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ರಾಜ್ಯ ಸಂಘಟನಾ ಕಾರ್ಯದರ್ಶಿ

ಅವರಿಗೊಂದು ಕನಸಿತ್ತು



ನನ್ನ ಪತಿ ಕೃಷ್ಣಮೂರ್ತಿಯವರ ಹಲವು ಆಸಕ್ತಿಗಳಲ್ಲಿ ಛಂದಸ್ಸಿನ ಕುರಿತ ಆಳವಾದ ಅಧ್ಯಯನವೂ ಒಂದು. ಅವರಿಗೆ ಸೇಡಿಯಾಪು ಕೃಷ್ಣಭಟ್ಟರು ಬರೆದ 'ಛಂದೋಗತಿ'ಯಂತಹ ಮೇರು ಕೃತಿಯನ್ನು ಬರೆಯಬೇಕೆಂಬ ಕನಸಿತ್ತು. ಅದು ಈಡೇರಿರಲಿಲ್ಲ. ಹಾಗಾಗಿ ಅವರ ಸ್ಮೃತಿಯಲ್ಲಿ ನೀಡಿದ ಈ ಮನೆಗೆ ಅದೇ ಹೆಸರು ಸೂಚಿಸಿದ್ದೇನೆ.
■ ಡಾ.ಶಾರದಾ ಎಂ, 'ಛಂದೋಗತಿ'ಯ ದಾನಿ

ಯಾರೆಲ್ಲಾ ಇದ್ದರು?

ಮನೆ ಹಸ್ತಾಂತರ ಸಂದರ್ಭ ದಾನಿ ಡಾ.ಶಾರದಾ ಎಂ., ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ, ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ, ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ.ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್, ನಾರಾಯಣ ಎಂ. ಹೆಗಡೆ, ಶಿರ್ವ ಎಂಎಸ್‌ಆರ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಸುಬ್ರಹ್ಮಣ್ಯಭಟ್ ಕೆ., ಕೃಷ್ಣಮೂರ್ತಿಯವರ ಶಿಷ್ಯ ಡಾ.ವಿಷ್ಣುಮೂರ್ತಿ ಪ್ರಭು, ಪ್ರೀಮಿಯರ್ ಇನ್‌ವೆಸ್ಟ್‌ಮೆಂಟ್‌ನ ಹರೀಶ್ ಬಿ., ಖ್ಯಾತ ವಕೀಲ ಕೆ.ಆರ್.ರಾಮಚಂದ್ರ ಅಡಿಗ, ಅಮರೇಶ್ ಹೆಗ್ಡೆ, ಅಶೋಕ ಪೂಜಾರಿ, ಮಧುಕರ, ಶಾರದಾ ಎಂ ಅವರ ಸಹೋದರ ಕೃಷ್ಣ ಭಟ್ ಎಂ ಮತ್ತು ಅವರ ಪತ್ನಿ ಪರಮೇಶ್ವರೀ, ಸಹೋದರಿ ಸರೋಜಾ ಎಂ, ಸ್ನೇಹಿತೆ ಜೆಸಿಂತಾ ಮತ್ತಿತರರು ಉಪಸ್ಥಿತರಿದ್ದರು.

ಶಿವಪಾಡಿ ಉಮಾಮಹೇಶ್ವರ ದೇವಸ್ಥಾನದಲ್ಲಿ ಶಿವಪಾಡಿ ವೈಭವ | ಯಕ್ಷಗಾನ ಪ್ರದರ್ಶನ

ರುದ್ರ ದೇವ ಮನೋನಿಗ್ರಹಕಾರಕ: ಪೇಜಾವರ ಶ್ರೀ

ಉಡುಪಿ: ರುದ್ರ ದೇವರ ಅನುಗ್ರಹವಿದ್ದರೆ ಸರ್ವತೋಮುಖ ಅಭಿವೃದ್ಧಿ ಕಾಣಲು ಸಾಧ್ಯ. ರುದ್ರ ದೇವರು ಮನೋನಿಗ್ರಹಕರಾಗಿದ್ದು, ನಮ್ಮ ಮನಸ್ಸನ್ನು ಸರಿದಾರಿಯಲ್ಲಿ ನಡೆಯುವಂತೆ ಪ್ರೇರಣೆ ಕೊಡುತ್ತಾನೆ ಎಂದು ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಶಿವಪಾಡಿ ಉಮಾಮಹೇಶ್ವರ ದೇವಸ್ಥಾನದಲ್ಲಿ ನಡೆದ ಶಿವಪಾಡಿ ವೈಭವ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದ ಶ್ರೀಗಳು,

ನಾವೆಲ್ಲರೂ ಏಕ ಮನಸ್ಕರಾಗಿ ವ'ುು೦ದ'ುವ'ರ' ಯುಬ'ೇಕ'ು. ಪ್ರತಿಯೊಂದರಲ್ಲೂ ದೇವರನ್ನು ಮುಂದಿಟ್ಟುಕೊಂಡು ಮುನ್ನಡೆಯಬೇಕು ಎಂದರು. ಬಂಧನಕ್ಕೂ ಮೋಚನೆಗೂ ಮನಸ್ಸೇ ಕಾರಣವಾಗಿರುವುದರಿಂದ ಅದನ್ನು ನಿಗ್ರಹಿಸಬೇಕು ಎಂದು ತಿಳಿಸಿದರು.



ಸಮಾಜದ ವಿವಿಧ ಸ್ತರಗಳಲ್ಲಿ ಸೇವೆ ಸಲ್ಲಿಸಿದ ಡಾ. ಕೆ. ಕೃಷ್ಣಪ್ರಸಾದ್, ಶಿಕ್ಷಕ ವಿದ್ಯಾವಂತ ಆಚಾರ್ಯ, ಉದ್ಯಮಿ ರಂಜಿತ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಶಿವಪಾಡಿ ಉಮಾಮಹೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಡಾ. ಮಹೇಶ್ ಠಾಕೂರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಿವಪಾಡಿ ವೈಭವ ಆಚರಣೆ ಸಮಿತಿಯ ಅಧ್ಯಕ್ಷ ಕೆ. ರಘುಪತಿ ಭಟ್, ಮಾಹೆಯ ವೈಸ್ ಚಾನ್ಸಲರ್ ಡಾ. ಎಂಡಿ ವೆಂಕಟೇಶ್, ಮಾಜಿ ವಿಧಾನ ಸಭಾ ಸದಸ್ಯ ದಯಾನಂದ ರೆಡ್ಡಿ, ಪ್ರಮುಖರಾದ ಮುನಿಯಾಲು ಉದಯಕುಮಾರ್ ಶೆಟ್ಟಿ, ಪರ್ವತ್ ಶೆಟ್ಟಿ, ಸುಧಾಕರ ಶೆಟ್ಟಿ, ಬಾಬು ನಾಯ್ಕ, ಶಿವಾನಂದ ಪ್ರಭು, ದಯಾನಂದ ಪ್ರಭು, ದಿನೇಶ್ ಸಾಮಂತ, ದಿನೇಶ್ ಪ್ರಭು, ಸಂಜಯ್ ಪ್ರಭು, ಪ್ರಕಾಶ್ ಕುಕ್ಕೆಹಳ್ಳಿ, ಪುರುಷೋತ್ತಮ ಪ್ರಭು, ಸತೀಶ್ ಪಾಟೀಲ್, ಪ್ರಕಾಶ್ ಪ್ರಭು, ಅನಂತ ನಾಯಕ್ , ಶುಭಕರ ಸಾಮಂತ, ಗೋಪಾಲಕೃಷ್ಣ ಪ್ರಭು, ಕೃಷ್ಣರಾಯ ಪ್ರಭು ಸೇರಿ ಹಲವರು ಉಪಸ್ಥಿತರಿದ್ದರು.

ಸಾಮೂಹಿಕ ಯೋಗ

ಫೆ.15 ರಂದು ಮುಂಜಾನೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಸಾಮೂಹಿಕ ಯೋಗ ಶಿಬಿರ ನಡೆಯಿತು. ಬಳಿಕ ರತ್ನ ಸಂಜೀವ ಕಲಾ ಮಂಡಲದಲ್ಲಿ ಪ್ರಸಾದ್ ನೇತ್ರಾಲಯದ ವತಿಯಿಂದ ಆರೋಗ್ಯ ಶಿಬಿರ ನಡೆಯಿತು. ಈ ವೇಳೆ ಉಚಿತ ಕಣ್ಣಿನ ಪರೀಕ್ಷೆ ಹಾಗೂ ಕನ್ನಡಕ ವಿತರಣೆ ನಡೆಯಿತು. 10 ಗಂಟೆ ಬಳಿಕ ನೃತ್ಯ ವೈಭವ ನಡೆಯಿತು. ಹಲವಾರು ಸ್ಥಳೀಯ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಮಧ್ಯಾಹ್ನ 3 ಗಂಟೆ ಬಳಿಕ ವಿದೂಷಿ ಉಷಾ ಹೆಬ್ಬಾರ್ ನೇತೃತ್ವದಲ್ಲಿ ರತ್ನ ಸಂಜೀವ ಕಲಾಮಂಡಲದ ಸಂಯೋಜನೆಯಲ್ಲಿ ಶಿವ ಸಹಸ್ರಗಾಯನ ನಡೆಯಿತು. ರಾತ್ರಿ 7 ಗಂಟೆ ಬಳಿಕ ಜೀ ಕನ್ನಡ ಸರಿಗಮಪ ತಂಡದಿಂದ ಗಾನ ಶರಧಿ ಗಾಯನ ನಡೆಯಿತು. ಬಳಿಕ ತೆಂಕುತಿಟ್ಟಿನ ಕಲಾವಿದರಿಂದ ಅಹೋರಾತ್ರಿ ಶಿವ ಪಂಚಾಕ್ಷರಿ ಮಹಿಮೆ ಯಕ್ಷಗಾನ ನಡೆಯಿತು.

ಬಿ.ಸಿ.ರೋಡಿನಲ್ಲಿ ಹುಲ್ಲಿಗೆ ಬೆಂಕಿ



ಬಂಟ್ವಾಳ: ಬಿ.ಸಿ.ರೊಡಿನ ಕೈಕಂಬದಲ್ಲಿರುವ ಖಾಸಗಿ ಖಾಲಿ ಜಾಗವೊಂದರಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿದ್ದು, ಸಮೀಪದ ಸಂಚಯಗಿರಿಯವರೆಗೂ ವ್ಯಾಪಿಸಿತು.

ಹುಲ್ಲಿನಿಂದ ತುಂಬಿದ್ದ ಜಾಗದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಹೇಗೆ ಆಯಿತು ಎಂಬ ಕುರಿತು ತಿಳಿದು ಬಂದಿಲ್ಲ, ಮಾಹಿತಿ ದೊರೆತ ಕೂಡಲೇ ಸ್ಥಳೀಯರು ಬಂಟ್ವಾಳದ ಅಗ್ನಿಶಾಮಕದಳಕ್ಕೆ ಕರೆ ಮಾಡಿದ್ದು, ಈ ವೇಳೆ ಬಂಟ್ವಾಳದಲ್ಲಿದ್ದ ಏಕೈಕ ಅಗ್ನಿನಂದಕ ವಾಹನ ಮಂಚಿಯಲ್ಲಿ ಕರೆಯೊಂದರ ಮೇಲೆ ತೆರಳಿತ್ತು. ಈ ಹಿನ್ನೆಲೆಯಲ್ಲಿ ಮಂಗಳೂರಿನಿಂದ ವಾಹನ ಆಗಮಿಸಿದ್ದು, ಅಷ್ಟರಲ್ಲಾಗಲೇ ಸ್ಥಳೀಯರು ನಂದಿಸುವ ಕಾರ್ಯ ಆರಂಭಿಸಿದರು. ಈ ಜಾಗದ ಹಿಂಭಾಗ ಸಂಚಯಗಿರಿ ಬಡಾವಣೆ ಇದ್ದು, ಇಲ್ಲಿಯೂ ಕೆಲ ಭಾಗಕ್ಕೆ ಬೆಂಕಿ ವ್ಯಾಪಿಸಿತು. ಗ್ರಾಮ ಆಡಳಿತಾಽಕಾರಿ ಯಶ್ವಿತಾ, ಸಿಬ್ಬಂದಿ ಸದಾಶಿವ ಕೈಕಂಬ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಸ್ಥಳೀಯರಾದ ಸಮದ್ ಕೈಕಂಬ,ಸಂಚಯಗಿರಿ ನಾಗರಿಕ ಕ್ರಿಯಾ ಸಮಿತಿಸಿ ಅಧ್ಯಕ್ಷ ಸುರೇಶ್ ಕುಲಾಲ್ ಮತ್ತಿತರು ಆಗಮಿಸಿ ಬೆಂಕಿ ನಂದಿಸುವಲ್ಲಿ ಸಹಕರಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ ಕಿಫ್‌ಬಿ ನೇತೃತ್ವದಲ್ಲಿ ರಸ್ತೆಗಳು ಮತ್ತು ಸೇತುವೆಗಳ ವಿಭಾಗ

166 ಕೋಟಿ ರೂ.ಗಳ 5 ಯೋಜನೆಗಳು ಉದ್ಘಾಟನೆಗೆ ಸಿದ್ಧ

ಕಾಸರಗೋಡು: ರಾಜ್ಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಸ್ಥಾಪಿಸಲಾದ ಕೇರಳ ಮೂಲಭೂತ ಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕಿಫ್‌ಬಿ) ನೇತೃತ್ವದಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ರಸ್ತೆ ಮತ್ತು ಸೇತುವೆ ವಿಭಾಗದ ಮೂಲಕ 543 ಕೋಟಿ ರೂಪಾಯಿ ಮೌಲ್ಯದ 13 ಯೋಜನೆಗಳು ಪ್ರಗತಿಯಲ್ಲಿವೆ. ಇವುಗಳಲ್ಲಿ ಮಲೆನಾಡು ಹೆದ್ದಾರಿ ಸೇರಿದಂತೆ 166 ಕೋಟಿ ರೂಪಾಯಿ ಮೌಲ್ಯದ 5 ವಿವಿಧ ಯೋಜನೆಗಳು ಪೂರ್ಣಗೊಂಡಿವೆ ಮತ್ತು ಉದ್ಘಾಟನೆಗೆ ಸಿದ್ಧವಾಗಿವೆ.



ಪೂರ್ಣಗೊಂಡ ಮತ್ತು ಉದ್ಘಾಟನೆಗೆ ಸಿದ್ಧವಾಗಿರುವ ಯೋಜನೆಗಳೆಂದರೆ 83.85 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಮಂಜೇಶ್ವರ, ಕಾಸರಗೋಡು, ಉದುಮ ವಿಧಾನಸಭಾ ಕ್ಷೇತ್ರಗಳ ಮೂಲಕ ಹಾದುಹೋಗುವ ಚೇವಾರು – ಎಡಪರಂಬ ಮಲೆನಾಡು ಹೆದ್ದಾರಿ, 45.58 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡ ಕಾಸರಗೋಡು ವಿಧಾನಸಭಾ ಕ್ಷೇತ್ರದ ಬದಿಯಡ್ಕ – ಏತಡ್ಕ – ಸುಳ್ಯಪದವು ರಸ್ತೆ, 18.3 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡ ಉದುಮ ವಿಧಾನಸಭಾ ಕ್ಷೇತ್ರದ ಚೊಟ್ಟೆ ಸೇತುವೆ, 14.72 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ರಾಮಂಚಿರ ಸೇತುವೆ, 3.77 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಭೀಮನಡಿ – ಕಾಲಿಕ್ಕಡವು ಸೇತುವೆ ಸೇರಿದೆ.

ಇದರೊಂದಿಗೆ 53 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಕಿಲಿಯಾಲ – ವರಂಜೂರು ರಸ್ತೆ ಮತ್ತು ಕಿಲಿಯಾಲ ಸೇತುವೆಯನ್ನು ಉದ್ಘಾಟಿಸಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಯಿತು. ಇದರ ಜೊತೆಗೆ, 324 ಕೋಟಿ ರೂ. ಗಳಿಗೂ ಹೆಚ್ಚು ಮೊತ್ತವನ್ನು ವಿನಿಯೋಗಿಸಿ ಪ್ರಾರಂಭಿಸಲಾದ ಆರು ಯೋಜನೆಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ.

ಟೆಂಡರ್ ಪ್ರಕ್ರಿಯೆ

ಕಿಫ್‌ಬಿ ನೇತೃತ್ವದಲ್ಲಿ ರಸ್ತೆಗಳು ಮತ್ತು ಸೇತುವೆಗಳ ವಿಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಗಳಲ್ಲಿ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಚೆರುವತ್ತೂರು – ಚೀಮೇನಿ ಐಟಿ ಪಾರ್ಕ್, ಪಾಲವಯಲ್ – ಭೀಮನಡಿ – ಮೂಕ್ಕಡ ರಸ್ತೆ, ಕೋಳಿಚ್ಚಾಲು – ಚೆರುಪುಳ ರಸ್ತೆ ಮತ್ತು ಕರಿಚ್ಚೇರಿಕಡವು ಸೇತುವೆ, ಕಾಞಂಗಾಡು ವಿಧಾನಸಭಾ ಕ್ಷೇತ್ರದ ಹೊಸದುರ್ಗ – ಪಾಣತ್ತೂರು ರಸ್ತೆ ಮತ್ತು ಪಡನ್ನಕ್ಕಾಡ್ ಸೇತುವೆ ಒಳಗೊಂಡಿದೆ. ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ವಲಿಯ ಪರಂಬ ಸೇತುವೆಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 16 ಫೆಬ್ರವರಿ 2026
ಮಂಗಳೂರು

ಸಾರ್ಥಕ ಸರ್ಕಾರ



ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ

ನುಡಿದಂತೆ ನಡೆಯುವ ಸರ್ಕಾರ ಎಂದು ಜನರಿಂದ ಪ್ರಶಂಸೆ ಪಡೆದಿರುವ ರಾಜ್ಯ ಸರ್ಕಾರವು ಸಾರ್ಥಕ 1000 ದಿನಗಳನ್ನು ಯಶಸ್ವಿಯಾಗಿ ಪೂರೈಸಿ ದಿಟ್ಟ ಹೆಜ್ಜೆಯ ಮೂಲಕ ನಾಡಿನ ಸಮಗ್ರ ಅಭಿವೃದ್ಧಿಯ ಧ್ಯೇಯದಲ್ಲಿ ಮಗ್ನವಾಗಿದೆ. ಸಂವಿಧಾನದ ಆಶಯಗಳಂತೆ ಆಡಳಿತ ನಡೆಸುತ್ತಿದೆ. ಸಾವಿರ ದಿನಗಳ ಸಾರ್ಥಕ ಆಡಳಿತವು ಜನಕೇಂದ್ರಿತ ಆಡಳಿತದ ಮಾದರಿಗಳನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸುವ ಬಲ ತಂದಿದೆ. ಈಗಾಗಲೇ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಅನುಷ್ಠಾನಕ್ಕೆ ಬಂದಿದೆ.

ಸಾವಿರ ದಿನಗಳ ಸಾರ್ಥಕ ಸರ್ಕಾರ

ನುಡಿದಂತೆ ನಡೆದ ಗ್ಯಾರಂಟಿ ಆಡಳಿತ


1.37 ಕೋಟಿ ಕುಟುಂಬಗಳು. ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು

1.16 ಲಕ್ಷ ಕೋಟಿ ರೂ. ಅನುದಾನ ಬಳಕೆ

ಗ್ಯಾರಂಟಿ ಯೋಜನೆಗಳಿಗಾಗಿ ನಮ್ಮ ಸರ್ಕಾರವು ಕಳೆದ ಸಾವಿರ ದಿನಗಳಲ್ಲಿ 1.16 ಲಕ್ಷ ಕೋಟಿ ರೂ. ಅನುದಾನ ಬಳಕೆ ಮಾಡಿದ್ದು, ರಾಜ್ಯದ 1.37 ಕೋಟಿ ಕುಟುಂಬಗಳನ್ನು ಸರ್ಕಾರದ ಯಾವುದಾದರೊಂದು ಕಲ್ಯಾಣ ಕಾರ್ಯಕ್ರಮದ ಫಲಾನುಭವಿಯಾಗಿಸಿದ ಇತಿಹಾಸ ಸೃಷ್ಟಿಸಿದೆ. ಸಾವಿರ ದಿನಗಳ ಈ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ನಾಡಿನ ಜನತೆಗೆ ಅರ್ಪಿಸುತ್ತಿದ್ದೇವೆ. ನಿಮ್ಮ ಪ್ರೀತಿ, ಸಹಕಾರ ಮುಂದೆಯೂ ನಮ್ಮೊಂದಿಗಿರಲಿ.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಇತಿಹಾಸ ಸೃಷ್ಟಿಸಿದ ಸರ್ಕಾರ





ಸಾರ್ಥಕತೆಯ ಪಂಚ ಯೋಜನೆಗಳು

ಗೃಹಲಕ್ಷ್ಮೀ
ಫಲಾನುಭವಿಗಳು 1.24 ಕೋಟಿ
ವಿನಿಯೋಗಿಸಿದ ಹಣ 59,863 ಕೋಟಿ ರೂ.
(ಅಕ್ಟೋಬರ್ 2025 ರವರೆಗೆ)

ಗೃಹಜ್ಯೋತಿ
ಫಲಾನುಭವಿಗಳು 1.65 ಕೋಟಿ
ವಿನಿಯೋಗಿಸಿದ ಹಣ 22,839 ಕೋಟಿ ರೂ.
(ಜನವರಿ 2025 ರವರೆಗೆ)

ಯುವನಿಧಿ
ಫಲಾನುಭವಿಗಳು 3.08 ಲಕ್ಷ
ವಿನಿಯೋಗಿಸಿದ ಹಣ 912 ಕೋಟಿ ರೂ.
(ನವೆಂಬರ್ 2025ರವರೆಗೆ)

ಶಕ್ತಿ
ಫಲಾನುಭವಿಗಳು 668 ಕೋಟಿ
ವಿನಿಯೋಗಿಸಿದ ಹಣ 17,303 ಕೋಟಿ ರೂ.
(ಫೆಬ್ರವರಿ 2026ರವರೆಗೆ)

ಅನ್ನಭಾಗ್ಯ
ಫಲಾನುಭವಿಗಳು 72.02 ಕೋಟಿ ರೂ.
ವಿನಿಯೋಗಿಸಿದ ಹಣ 11,821 ಕೋಟಿ ರೂ.
(ಫೆಬ್ರವರಿ 2026ರವರೆಗೆ)

ನುಡಿದಂತೆ ನಡೆದ ಸರ್ಕಾರ

2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅಸಮಾನತೆ ನಿವಾರಿಸುವ ಉದ್ದೇಶದಿಂದ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಪ್ರತಿ ಕುಟುಂಬಕ್ಕೆ ವಾರ್ಷಿಕವಾಗಿ ಸುಮಾರು 60 ಸಾವಿರ ರೂ.ಗಳ ಆರ್ಥಿಕ ಬಲವನ್ನು ತುಂಬುತ್ತಿದೆ. ಗ್ಯಾರಂಟಿ ಯೋಜನೆಗಳು ಜನರಿಗೆ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತಿವೆ.ಸರ್ಕಾರ ಅನೇಕ ಭಾಗ್ಯ ಯೋಜನೆಗಳನ್ನು ನೀಡಿದ್ದು, ಜನರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತರಾಗಿಸಲು ನೆರವಾಗಿದೆ. ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಜನರ ಆರ್ಥಿಕ ಸಬಲೀಕರಣಕ್ಕೆ ನೆರವಾಗಿವೆ. ಬಡತನ, ಹಸಿವು ನಿವಾರಣೆ ಮಾಡುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು.

ಆರ್ಥಿಕ ಸ್ವಾವಲಂಬನೆ

ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಮೇಲೆತ್ತುವುದು ಹಾಗೂ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮಾಡಲು ಶಕ್ತಿ, ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಶಕ್ತಿ ಯೋಜನೆಯಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡುತ್ತಿದ್ದು, ಗೃಹಲಕ್ಷ್ಮೀ ಯೋಜನೆಯು ಮಹಿಳೆಯರು ಆರ್ಥಿಕವಾಗಿ ಬೆಳೆಯಲು ಸಹಕಾರಿಯಾಗಿದೆ. ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯನ್ನು ಅಧಿಕಾರಕ್ಕೆ ಬಂದ ಕೂಡಲೇ ಈಡೇರಿಸುವ ಮೂಲಕ ಸರ್ಕಾರ ಜನರಿಗೆ ಕೊಟ್ಟ ಮಾತು ಉಳಿಸಿಕೊಂಡಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಜನರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನರ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಿ, ಜನರಿಂದಲೇ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡಿದೆ. ಇಡೀ ದೇಶವೇ ರಾಜ್ಯದ ಕಡೆ ತಿರುಗಿ ನೋಡುವಂತಹ ಕರ್ನಾಟಕ ಮಾದರಿಯನ್ನು ಹುಟ್ಟು ಹಾಕಿದ್ದು ಸರ್ಕಾರದ ಹೆಗ್ಗಳಿಕೆ. ಗ್ಯಾರಂಟಿಗಳ ಅನುಷ್ಠಾನಕ್ಕೆ ಬಂದ ಟೀಕೆಗಳು ಇಂದು ಇಲ್ಲದಂತಾಗಿವೆ. ಗ್ಯಾರಂಟಿಗಳು ಜನರ ಬದುಕನ್ನು ಹಸನಾಗಿಸಿವೆ ಎಂಬುದನ್ನು ಸಾಬೀತುಪಡಿಸಿವೆ. ಪ್ರಗತಿಪರ ಮತ್ತು ಅಭಿವೃದ್ಧಿಶೀಲ ರಾಜ್ಯಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಮತ್ತು ಸರ್ವರನ್ನು ಒಳಗೊಂಡು ಆಡಳಿತ ನಡೆಸುವ ಮೂಲಕ ಸರ್ವೋದಯ ಮತ್ತು ಸಮನ್ವಯ ಮಾದರಿಯ ಆಡಳಿತವನ್ನು ರಾಜ್ಯ ಸರ್ಕಾರವು ನೀಡುತ್ತಿದೆ. ಸಮಗ್ರ, ಸುಸ್ಥಿರ ಮತ್ತು ತಂತ್ರಜ್ಞಾನಾಧಾರಿತ ಆಡಳಿತ ವ್ಯವಸ್ಥೆಯ ಮೂಲಕ ಅಭಿವೃದ್ಧಿಯ ವಿವಿಧ ಮಜಲುಗಳನ್ನು ನಿರ್ಮಿಸುತ್ತಿದೆ.



ಸರ್ಕಾರದ 6ನೇ ಗ್ಯಾರಂಟಿ ಭೂ ಗ್ಯಾರಂಟಿ

ಪಂಚ ಗ್ಯಾರಂಟಿಗಳ ಮೂಲಕ ಜನರ ಬದುಕು ಹಸನಾಗಿಸಿದ ಕಾಂಗ್ರೆಸ್ ಸರ್ಕಾರ 3ನೇ ವರ್ಷದ ಹೊಸ್ತಿಲಲ್ಲಿ 6ನೇ ಗ್ಯಾರಂಟಿಯನ್ನು ಜನತೆ ನೀಡಿದ್ದು ಅದುವೇ ಭೂ ಗ್ಯಾರಂಟಿ ಯೋಜನೆಯಾಗಿದೆ. ಇದುವರೆಗೆ ರಾಜ್ಯದಲ್ಲಿ ಕೆಲವರಿಗೆ ಊರು ಊರಾಗಿದ್ದರೂ ದಾಖಲೆಗಳಲ್ಲಿ ಗ್ರಾಮ ಆಗಿರಲಿಲ್ಲ. ದಾಖಲೆಗಳಲ್ಲಿ ಇದರ ಉಲ್ಲೇಖವೇ ಇರಲಿಲ್ಲ. ಇವರೆಲ್ಲರೂ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದರು. ಅವರ ಬದುಕು ಅತಂತ್ರವಾಗಿತ್ತು. ಈಗ ಭೂ ಗ್ಯಾರಂಟಿ ಯೋಜನೆ ಮೂಲಕ ಅವರಿಗೆ ಹಕ್ಕುಪತ್ರ ನೀಡಿ, ಕ್ರಯ ಪತ್ರ ಮಾಡಿ, ನೋಂದಣಿ ಮಾಡಿಸಿ, ಸಂಪೂರ್ಣ ಹಕ್ಕನ್ನು ಅವರ ಕೈಗೆ ನೀಡಲಾಗುತ್ತಿದೆ. ಜತೆಗೆ ಸರ್ಕಾರವೇ ಇ-ಸ್ವತ್ತು ಮಾಡಿಸಿ, ನೂರಕ್ಕೆ ನೂರರಷ್ಟು ಪರಿಪೂರ್ಣವಾದ ದಾಖಲೆ ಒದಗಿಸಲಿದೆ.

ಶಕ್ತಿ ಯೋಜನೆ

ಜೂನ್ 2023ರಲ್ಲಿ ಕರ್ನಾಟಕ ಸರ್ಕಾರ ಶಕ್ತಿ ಯೋಜನೆ ಎಂಬ ಹೊಸ ಕಾರ್ಯಕ್ರಮ ಆರಂಭಿಸಿತು. ಇದರಲ್ಲಿ ಸಾಮಾನ್ಯ ವರ್ಗದ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಒದಗಿಸಲಾಗಿದೆ. ಈ ಯೋಜನೆಯ ಉದ್ದೇಶವೆಂದರೆ, ಮಹಿಳೆಯರ ಶಿಕ್ಷಣ, ಉದ್ಯೋಗ ಅವರು ಸಾಮಾಜಿಕ ಜೀವನದಲ್ಲಿ ಹೆಚ್ಚು ಚಟುವಟಿಕೆಯಿಂದ ಭಾಗವಹಿಸುವಂತೆ ಮಾಡುವ ಉದ್ದೇಶ ಹೊಂದಿದೆ. ಕರ್ನಾಟಕ ಸರ್ಕಾರದ ಶಕ್ತಿ ಯೋಜನೆ ಮಹಿಳೆಯರಿಗೆ ರಾಜ್ಯಾದ್ಯಂತ ಉಚಿತ ಪ್ರಯಾಣದ ಸೌಲಭ್ಯ ಒದಗಿಸುತ್ತದೆ. ಇದು ಆರ್ಥಿಕ ಉಳಿತಾಯ, ಉದ್ಯೋಗಾವಕಾಶ ಹೆಚ್ಚಳ, ಸುರಕ್ಷಿತ ಸಂಚಾರ ಮತ್ತು ಮಹಿಳಾ ಸಬಲೀಕರಣಕ್ಕೆ ಪ್ರಮುಖ ಕೊಡುಗೆ ನೀಡಿದೆ. ದಿನಗೂಲಿ ನೌಕರರು, ವಿದ್ಯಾರ್ಥಿನಿಯರು ಮತ್ತು ಗಾರ್ಮೆಂಟ್ಸ್ ನೌಕರರಿಗೆ ಇದು ವರದಾನವಾಗಿದೆ. ದೈನಂದಿನ ಪ್ರಯಾಣದ ವೆಚ್ಚ ಉಳಿತಾಯವಾಗುವುದರಿಂದ ಕುಟುಂಬದ ಆದಾಯ ವೃದ್ಧಿಯಾಗುತ್ತದೆ. ಕೆಲಸಕ್ಕೆ ಹೋಗುವ ಮಹಿಳೆಯರು ದೂರದ ಸ್ಥಳಗಳಿಗೆ ಪ್ರಯಾಣಿಸಲು ಸುಲಭವಾಗಿದ್ದು, ಹೊಸ ಉದ್ಯೋಗಾವಕಾಶಗಳು ಲಭ್ಯವಾಗಿವೆ. ಈವರೆಗೆ ಈ ಯೋಜನೆಯಲ್ಲಿ ಮಹಿಳೆಯರು 564 ಕೋಟಿಗೂ ಅಧಿಕ ಪ್ರಯಾಣ (ಟಿಕೆಟ್)ದ ಲಾಭ ಪಡೆದಿದ್ದು, ಇದು ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಮುಂದಿನ ದಿನಗಳಲ್ಲಿ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ನೀಡಲು ಸರ್ಕಾರ ನಿರ್ಧರಿಸಿದೆ.

ಗೃಹ ಜ್ಯೋತಿ

ಗೃಹಜ್ಯೋತಿ ಯೋಜನೆ ಮೂಲಕ ರಾಜ್ಯದ ಎಲ್ಲಾ ಗೃಹ ಬಳಕೆ ವಿದ್ಯುತ್ ಗ್ರಾಹಕರು ಮಾಸಿಕ ಸರಾಸರಿ 200 ಯೂನಿಟ್ ಉಚಿತ ವಿದ್ಯುತ್ ಪಡೆಯುವ ಈ ಯೋಜನೆ ರಾಜ್ಯ ಸರ್ಕಾರದ ಜನಪ್ರಿಯತೆ ಹೆಚ್ಚಿಸಿದೆ. ಇದೀಗ ಈ ಯೋಜನೆ ದೇಶದ ಗಮನ ಸೆಳೆದಿದೆ. ಇದಕ್ಕೆ ಪ್ರಮುಖ ಕಾರಣ ಉಚಿತವಾಗಿ ವಿದ್ಯುತ್ ನೀಡಿಯೂ ಇಲಾಖೆಯನ್ನು ಲಾಭದಾಯಕ ಮಾಡಬಹುದು ಎಂಬುದನ್ನು ತೋರಿಸಿದೆ. ಕರ್ನಾಟಕ ಸರ್ಕಾರದ ಗೃಹಜ್ಯೋತಿ ಯೋಜನೆಯು ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಜನಪ್ರಿಯ ಗ್ಯಾರಂಟಿ ಯೋಜನೆಯಾಗಿದೆ. 2023ರ ಜುಲೈ 1ರಿಂದ ಗೃಹಜ್ಯೋತಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದ್ದು, 2023ರ ಆಗಸ್ಟ್ 1ರಿಂದ ಯೋಜನೆಯ ಲಾಭ ಪ್ರತಿ ಗ್ರಾಹಕರಿಗೂ ಸಿಗುತ್ತಿದೆ. 2026ರ ಜನವರಿ ವರೆಗೆ 1.65 ಕೋಟಿಗೂ ಹೆಚ್ಚು ಗೃಹ ಬಳಕೆದಾರರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇದು ಮಧ್ಯಮ ಕುಟುಂಬಗಳಿಗೆ ಬಹಳಷ್ಟು ನೆರವಾಗಿದೆ. ಕೊಟ್ಟ ಮಾತಿನಂತೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತವಾಗಿ ನೀಡುವ ಗೃಹಜ್ಯೋತಿ ಯೋಜನೆಯನ್ನು ಸಾಕಾರಗೊಳಿಸಿ, ಮನೆಯ ಮನೆಯ ದೀಪ ಬೆಳಗಲಾಗಿದೆ. ಈ ಯೋಜನೆಯಲ್ಲಿ ಜನರು ಯೋಜನೆ ಜಾರಿಗೆ ಮುನ್ನ ಬಳಸುತ್ತಿದ್ದ ವಾರ್ಷಿಕ ಸರಾಸರಿ (200 ಯೂನಿಟ್ ಒಳಗಿದ್ದರೆ) ಅಥವಾ ಅದಕ್ಕಿಂತ 10 ಯೂನಿಟ್ ಹೆಚ್ಚುವರಿ ವಿದ್ಯುತ್ ಬಳಕೆ ಮಾಡಿದರೆ ಅಂಥವರು ವಿದ್ಯುತ್ ಬಿಲ್ ಪಾವತಿಸಬೇಕಿಲ್ಲ.

ಅನ್ನಭಾಗ್ಯ

ಬಡತನ ಮತ್ತು ಹಸಿವನ್ನು ನಿವಾರಿಸುವ ಧ್ಯೇಯದೊಂದಿಗೆ 2013ರಲ್ಲಿ ಜಾರಿಗೆ ತಂದ ಅನ್ನಭಾಗ್ಯ ಯೋಜನೆಯನ್ನು ಮತ್ತಷ್ಟು ಪ್ರಯೋಜನಕಾರಿಯಾಗಿ ಜನತೆಗೆ ನೀಡಲು 10 ಕೆ.ಜಿ ಅಕ್ಕಿಯನ್ನು ವಿತರಿಸುವ ಐತಿಹಾಸಿಕ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಗೊಂಡಿದ್ದು, ಯಾವುದೇ ಕುಟುಂಬವು ಹಸಿವಿನಿಂದ ಬಳಲಬಾರದು ಎಂಬ ಗುರಿಯನ್ನು ಹೊಂದಿದೆ. 2023ರ ಜುಲೈನಿಂದ ಬಿಪಿಎಲ್ ಕುಟುಂಬದ ಕುಟುಂಬ ಸದಸ್ಯರಿಗೆ ಪ್ರತಿ ಕುಟುಂಬ ಸದಸ್ಯರಿಗೆ ತಿಂಗಳಿಗೆ ತಲಾ 10 ಕೆ.ಜಿ. ಅಕ್ಕಿ ಉಚಿತವಾಗಿ ಸಿಗುತ್ತದೆ. ಸುಮಾರು 4 ಕೋಟಿಗೂ ಅಧಿಕ ಕುಟುಂಬದ ಫಲಾನುಭವಿಗಳನ್ನು ತಲುಪುತ್ತದೆ. ಪಡಿತರ ವ್ಯವಸ್ಥೆಯಿಂದ ತಲಾ 10 ಕೆ.ಜಿ. ಮೌಲ್ಯದ ಅಕ್ಕಿಯನ್ನು ಪಡೆಯುತ್ತಾರೆ. ಇದು ಒಂದು ನಿರ್ಣಾಯಕ ಹೆಜ್ಜೆಯಾಗಿದೆ. ಮುಂದಿನ ದಿನ ಗಳಲ್ಲಿ ಪ್ರತಿ ಪಡಿತರ ಚೀಟಿದಾರರಿಗೆ 5 ಕೆ.ಜಿ. ಅಕ್ಕಿಯ ಬದಲಿ ಆಹಾರ ಕಿಟ್ ನೀಡಲು ಸರ್ಕಾರ ನಿರ್ಧಾರ ಕೈಗೊಂಡಿದ್ದು, ಈ ಕಿಟ್‌ನಲ್ಲಿ ಬೇಳೆ, ಉಪ್ಪು, ಎಣ್ಣೆ ಸೇರಿ ವಿವಿಧ ಆಹಾರ ಸಾಮಗ್ರಿಗಳನ್ನು ಸರ್ಕಾರ ಒದಗಿಸಲಿದೆ.

ಗೃಹಲಕ್ಷ್ಮೀ



ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪೈಕಿ ಗೃಹಲಕ್ಷ್ಮೀ ಯೋಜನೆಯು ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ರಾಜ್ಯದ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಗೃಹಲಕ್ಷ್ಮೀ ಯೋಜನೆಯಿಂದ ಪ್ರತಿ ತಿಂಗಳು ಕುಟುಂಬದ ಆರ್ಥಿಕತೆಗೆ ನೆರವಾಗಿವೆ. ನೇರ ನಗದು ವರ್ಗಾವಣೆ (ಡಿಬಿಟಿ) ವಿಧಾನದ ಮೂಲಕ ಗೃಹಿಣಿಯರು, ಭೂರಹಿತ ಮಹಿಳೆಯರು ಮತ್ತು ಕೃಷಿ ಮಹಿಳಾ ಕಾರ್ಮಿಕರಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರನ್ನು ಸಬಲೀಕರಣಗೊಳಿಸುವ ಗುರಿಯನ್ನು ಇದು ಹೊಂದಿದೆ. 1.25 ಕೋಟಿಗೂ ಅಧಿಕ ಮಹಿಳೆಯರು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ.

ಯುವನಿಧಿ

ರಾಜ್ಯ ಸರ್ಕಾರದ ಮಹತ್ವದ ಪಂಚ ಗ್ಯಾರಂಟಿಗಳ ಪೈಕಿ ಒಂದಾದ ಯುವ ನಿಧಿ ಯೋಜನೆಯಲ್ಲಿ 3.62 ಲಕ್ಷ ಮಂದಿ ನಿರುದ್ಯೋಗಿ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇವರ ಪೈಕಿ 2,326 ಮಂದಿ ಉದ್ಯೋಗ ಪಡೆದುಕೊಂಡಿದ್ದಾರೆ. ರಾಜ್ಯದ 31 ಜಿಲ್ಲೆಗಳಲ್ಲಿ 2025 ಡಿ.1ರ ಅಂತ್ಯದವರೆಗೆ 3.55 ಲಕ್ಷ ಪದವೀಧರರು ಮತ್ತು 6,804 ಡಿಪ್ಲೊಮಾ ಪದವೀಧರರು ಸೇರಿ ಒಟ್ಟು 3.62 ಲಕ್ಷ ನಿರುದ್ಯೋಗಿಗಳು ಯುವ ನಿಧಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಯುವ ನಿಧಿ ಯೋಜನೆಗೆ ಪೂರಕವಾಗಿ ಉದ್ಯೋಗಾವಕಾಶ ಹೆಚ್ಚಿಸಲು ರಾಜ್ಯ ಸರ್ಕಾರ ಆರಂಭಿಸಿದ ನಿರುದ್ಯೋಗ ಭತ್ಯೆ ಜತೆ ಉಚಿತ ಕೌಶಲ ತರಬೇತಿ ಕಲ್ಪಿಸುವ ಯುವ ನಿಧಿ ಪ್ಲಸ್ ಕಾರ್ಯಕ್ರಮದಲ್ಲಿ 17,715 ಮಂದಿ ಕೌಶಲ ತರಬೇತಿ ಪಡೆದುಕೊಂಡಿದ್ದಾರೆ. ಈ ಪೈಕಿ 2,326 ಮಂದಿ ಉದ್ಯೋಗ ಪಡೆದುಕೊಳ್ಳಲು ಸಫಲರಾಗಿದ್ದಾರೆ.

ಕರ್ನಾಟಕವು ದೇಶದ ಮುಂದಿಟ್ಟ ತನ್ನದೇ ಆದ ಹಲವು ಅಭಿವೃದ್ಧಿ ಮಾದರಿಗಳು

- ಖಚಿತ ಆರ್ಥಿಕತೆ
- ಗಿಗ್ ಆರ್ಥಿಕತೆ
- ಹಸಿರು ಆರ್ಥಿಕತೆ
- ಬೆಳೆಯುತ್ತಿರುವ ಆರ್ಥಿಕತೆ
- ಸಂಪನ್ಮೂಲ/ತೆರಿಗೆ ಸಂಗ್ರಹ
- ಅತ್ಯುತ್ತಮ ಆಡಳಿತ
- ಸರ್ಕಾರಿ ಶಿಕ್ಷಣ
- ಲಿಂಗ ಸಮಾನತೆ
- ಗುಡ್ ಹೆಲ್ತ್ ಆಫ್ ಕರ್ನಾಟಕ
- ಪ್ರವಾಸೋದ್ಯಮಕ್ಕೆ ಆದ್ಯತೆ
- ಪ್ರಾದೇಶಿಕ ಅಸಮಾನತೆ ನಿವಾರಣೆ
- ಕೈಗಾರಿಕಾಭಿವೃದ್ಧಿ



ರಾಜ್ಯದ ಅಭಿವೃದ್ಧಿ ಮಾದರಿಗೆ ಪುರಸ್ಕಾರ

ಅಭಿವೃದ್ಧಿಯ ಪ್ರಯಾಣವು ಆರ್ಥಿಕ ಸಬಲತೆ, ಸಾಮಾಜಿಕ ಸಮಾನತೆ, ಡಿಜಿಟಲ್ ನಾವೀನ್ಯತೆ, ಮಾನವ ಅಭಿವೃದ್ಧಿ, ಆಡಳಿತದಲ್ಲಿ ವಿಕೇಂದ್ರೀಕರಣ ಹಾಗೂ ಸದೃಢ ನಾಯಕತ್ವವನ್ನು ನೀಡುವುದರಲ್ಲಿ ದೇಶದಲ್ಲಿಯೇ ಹಲವು ಮಾದರಿಗಳನ್ನು ನಿರ್ಮಿಸಿದೆ. ದೇಶದ ವಿವಿಧ ರಾಜ್ಯಗಳು ಕರ್ನಾಟಕ ಅಭಿವೃದ್ಧಿ ಮಾದರಿ ಎಂದು ಹೊಗಳುತ್ತಿವೆ. ರಾಜ್ಯದ ಅಭಿವೃದ್ಧಿ ಮಾದರಿಯು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನವಾಗಿದೆ. ಪೊಲೀಸ್ ವ್ಯವಸ್ಥೆ, ನ್ಯಾಯ ವ್ಯವಸ್ಥೆಗಳಲ್ಲಿ ದಕ್ಷತೆ, ಪಾರದರ್ಶಕತೆ ಮತ್ತು ಸುಧಾರಣೆಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇದರ ಜೊತೆಗೆ ಪಂಚಾಯತ್‌ಗಳಿಗೆ ಸಂಪನ್ಮೂಲಗಳನ್ನು ಹಾಗೂ ಅಧಿಕಾರವನ್ನು ಹಂಚಿಕೆ ಮಾಡಿದೆ. ಚುನಾವಣೆಗೂ ಮುನ್ನ ಹೇಳಿದ ಭರವಸೆಗಳು ಕರ್ತವ್ಯದಂತೆ ಅನುಷ್ಠಾನವಾಗಿವೆ. 2013ರಿಂದ 2018ರ ಅವಧಿಯಲ್ಲಿ ಜಾರಿಗೆ ತಂದ ಕ್ಷೀರ ಭಾಗ್ಯ, ಕ್ಷೀರಧಾರೆ, ಅನ್ನ ಭಾಗ್ಯ, ವಿದ್ಯಾಸಿರಿ, ಮನಸ್ವಿನಿ, ಮೈತ್ರಿ, ಇಂದಿರಾ ಕ್ಯಾಂಟೀನ್, ಮಾತೃ ಪೂರ್ಣ, ಅನುಗ್ರಹ, ಕೃಷಿಭಾಗ್ಯ, ಕೃಷಿ ಯಂತ್ರಧಾರೆ ಮುಂತಾದ ಮಹತ್ವದ ಕಾರ್ಯಕ್ರಮಗಳು ಹೇಗೆ ಜನರ ಕಲ್ಯಾಣಕ್ಕೆ ನೆರವಾಗಿದ್ದವೋ ಅದೇ ರೀತಿ ಈ ಅವಧಿಯಲ್ಲಿ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳು ಜನಪರ ಯೋಜನೆಗಳಾಗಿ ಹೆಸರುವಾಸಿಯಾಗಿವೆ.

2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲಿ ನೀಡಿದ 593 ಭರವಸೆಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಆಶ್ವಾಸನೆಗಳನ್ನು ಈಡೇರಿಸಿ ಅನುಷ್ಠಾನಗೊಳಿಸಿ ಮುನ್ನಡೆಯುತ್ತಿದೆ. ಅದೇ ರೀತಿ ಬಜೆಟ್‌ನಲ್ಲಿ ಘೋಷಿಸಿದ ಅಭಿವೃದ್ಧಿ ಕಾರ್ಯಗಳಿಗೆ ಭರಪೂರ ಅನುದಾನ ಕೂಡ ಸಿಕ್ಕಿದ್ದು, ಪ್ರತಿಪಕ್ಷಗಳಿಗೆ ಮುಖಭಂಗವಾಗಿದೆ.

ಸರ್ಕಾರದ ಪ್ರಮುಖ ಸಾಧನೆಗಳು

ರಾಜ್ಯವು ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ಉತ್ತಮವಾದ ಸಾಧನೆ ಮಾಡುತ್ತಿದೆ. ರಾಜ್ಯವು ಬಂಡವಾಳ ವೆಚ್ಚದಲ್ಲಿ ಹಿಂದೆ ಬಿದ್ದಿಲ್ಲ. ರಾಜ್ಯವು ಕಲ್ಯಾಣ ಕಾರ್ಯಕ್ರಮಗಳಿಗೆ 1 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚು ಸಂಪನ್ಮೂಲಗಳನ್ನು ವಿನಿಯೋಗಿಸುತ್ತಿದೆ. ಒಟ್ಟಾರೆ ಬಜೆಟ್‌ನಲ್ಲಿ ಶೇ.28ರಷ್ಟು ಅನುದಾನಗಳನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗವಾಗುತ್ತಿದೆ. ಇದು ಇಡೀ ದೇಶದಲ್ಲಿಯೇ ಅತಿ ಹೆಚ್ಚಿನ ಮೊತ್ತವಾಗಿದೆ.

2024-25ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ವಿವಿಧ ಯೋಜನೆಗಳಡಿ 2491 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 3103 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ, ನವೀಕರಣ ಮತ್ತು 190 ಸಂಖ್ಯೆ ಸೇತುವೆಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗಿದೆ. ಎಚ್.ಎಸ್.ಡಿ.ಪಿ. ಹಂತ-5 ಅಡಿಯಲ್ಲಿ ಒಟ್ಟು 9000 ಕೋಟಿ ರೂ. ಮೊತ್ತದಲ್ಲಿ 2500 ಕಿ.ಮೀ. ಹೆದ್ದಾರಿಗಳ ಅಭಿವೃದ್ಧಿಯನ್ನು 2 ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ. ರಾಜ್ಯ ವ್ಯಾಪಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ 4000 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಸಿಐಆರ್‌ಎಫ್ ಯೋಜನೆಯಡಿ 1385 ಕೋಟಿ ರೂ. ಮೊತ್ತದಲ್ಲಿ 2056 ಕಿ.ಮೀ. ರಾಜ್ಯದ 295 ರಸ್ತೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ. ರಾಜ್ಯದ 9 ರೈಲ್ವೆ ಯೋಜನೆಗಳಿಗಾಗಿ ಸರ್ಕಾರವು 600 ಕೋಟಿ ರೂ.ಗಳನ್ನು ಪ್ರಸ್ತುತ ಸಾಲಿನಲ್ಲಿ ಒದಗಿಸಿದೆ. ಈ ಯೋಜನೆಗಳಿಗೆ ಕಾಮಗಾರಿ ವೆಚ್ಚದ ಶೇ.50 ರಷ್ಟು ಮತ್ತು ಭೂಸ್ವಾಧೀನ ವೆಚ್ಚದಲ್ಲಿ ಶೇ.50 ರಿಂದ ಶೇ.100 ರಷ್ಟನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ. ರಾಜ್ಯದಲ್ಲಿನ 66 ಕಿ.ಮೀ. ರೈಲ್ವೇ ದ್ವಿಪಥ ಯೋಜನೆಗಾಗಿ 407 ಕೋಟಿ ರೂ. ಗಳನ್ನು ಸರ್ಕಾರವೇ ಒದಗಿಸುತ್ತಿದೆ. ರೈಲ್ವೇ ಇಲಾಖೆಗಳ ಸಹಭಾಗಿತ್ವದಲ್ಲಿ 148.17 ಕಿ.ಮೀ. ಉದ್ದದ ಬೆಂಗಳೂರು ಉಪನಗರ ರೈಲ್ವೇ ಯೋಜನೆಯ ಜಾಲವನ್ನು 15,767 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕೆಲಸ ನಡೆಯುತ್ತಿದೆ.



ಇದೇ ಸಂದರ್ಭದಲ್ಲಿ ರಾಜ್ಯವು ಬಂಡವಾಳ ವೆಚ್ಚಗಳಿಗೆ ಮಾಡುತ್ತಿರುವ ವೆಚ್ಚದಲ್ಲಿಯೂ ಮುಂಚೂಣಿಯಲ್ಲಿದೆ. 2024-25 ರಲ್ಲಿ ಶೇ.15.1 ರಷ್ಟು ವೆಚ್ಚ ಮಾಡುವ ಮೂಲಕ ಪ್ರಗತಿಶೀಲ ರಾಜ್ಯಗಳಲ್ಲಿ ಅತಿ ಹೆಚ್ಚಿನ ಬಂಡವಾಳ ವೆಚ್ಚ ಮಾಡುವ ರಾಜ್ಯ ಎನ್ನಿಸಿಕೊಂಡಿದೆ. 2025-26 ರಲ್ಲಿ ರೂ.83200 ಕೋಟಿ ಅಥವಾ ಶೇ.20.31 ರಷ್ಟು ಅನುದಾನಗಳನ್ನು ವೆಚ್ಚ ಮಾಡುವ ಸಂಕಲ್ಪ ಮಾಡುವ ಮೂಲಕ ಆಡಳಿತದಲ್ಲಿ ಕರ್ನಾಟಕ ಮಾದರಿ ಅಭಿವೃದ್ಧಿಯ ಅಧ್ಯಾಯಗಳನ್ನು ಆರಂಭಿಸಿದೆ.

ಯುಕೆಪಿ ಭೂಸ್ವಾಧೀನಕ್ಕೆ ಪರಿಹಾರ ಮೊತ್ತ ನಿಗದಿ

ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಹಂತ -3ರ ಭೂಸ್ವಾಧೀನ ಮತ್ತು ಪುನರ್ವಸತಿ ಕಾರ್ಯಕ್ಕೆ 75,000 ಕೋಟಿ ರೂ. ಪರಿಹಾರ ನೀಡಲು ರಾಜ್ಯ ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಈ ಮೂಲಕ ಹಲವು ವರ್ಷಗಳಿಂದ ಸೃಷ್ಟಿಯಾಗಿದ್ದ ಗೊಂದಲಕ್ಕೆ ಇತಿಶ್ರೀ ಹಾಡಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಈ ಸಂಬಂಧ ಆದೇಶವನ್ನು ಹೊರಡಿಸಲಾಗಿದೆ. ಮುಳುಗಡೆ ಪ್ರದೇಶ ಮತ್ತು ಕಾಲುವೆ ನಿರ್ಮಾಣಕ್ಕೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಎಕರೆವಾರು ಪರಿಹಾರ ಮೊತ್ತ ನಿಗದಿ ಮಾಡಲಾಗಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ವಾರ್ಷಿಕ 18,000 ಕೋಟಿ ರೂ. ಅನುದಾನ ಒದಗಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಶಾಲೆಗಳ ವಿಲೀನ ಅವೈಜ್ಞಾನಿಕ

• **ಬೆಂಗಳೂರು:** ಸರ್ಕಾರಿ ಶಾಲೆಗಳ ವಿಲೀನ ಪ್ರಕ್ರಿಯೆಯನ್ನು ಕೈ ಬಿಡಬೇಕು. ಶಾಲಾ ಶಿಕ್ಷಣದಲ್ಲಿ ಅವೈಜ್ಞಾನಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ರುವುದನ್ನು ರದ್ದುಗೊಳಿಸಬೇಕು, ಖಾಯಂ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಮತ್ತು ಶಿಕ್ಷಣಕ್ಕೆ ಬಜೆಟ್ ಅನುದಾನ ಹೆಚ್ಚಿಸಬೇಕು ಎಂದು ಶಿಕ್ಷಣದ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ (ಪಾಫ್ರೆ) ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ.

ಮುಂದಿನ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟುಗಳಿಗೆ ಪರಿಹಾರ ಕಲ್ಪಿಸುವ ದಿಸೆಯಲ್ಲಿ ಮುಖ್ಯಮಂತ್ರಿಗಳು ಕೆಲ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಹಾಗೆಯೇ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಬೇಕು ಎಂದು ಪತ್ರದಲ್ಲಿ ಕೋರಲಾಗಿದೆ. ರಾಜ್ಯದಾದ್ಯಂತ ಶಾಲೆಗಳ ಮುಚ್ಚುವ/ವಿಲೀನ ಮಾಡುವ ಯೋಜನೆ ಯಡಿ ಈಗಾಗಲೇ ಸಾವಿರಾರು ಶಾಲೆಗ ಳನ್ನು ಮುಚ್ಚಲಾಗಿದೆ. ಈ ವಿಲೀನ ಪ್ರಕ್ರಿಯೆಯಿಂದ ಮಕ್ಕಳು ಶಾಲೆ ತೊರೆಯುವ ಸಾಧ್ಯತೆ ಹೆಚ್ಚಾಗುತ್ತದೆ ಎಂದು ಪತ್ರದಲ್ಲಿ ಕೋರಲಾಗಿದೆ. ಕರ್ನಾಟಕದಲ್ಲಿ ಪ್ರಸ್ತುತ ನಾಲ್ವರಲ್ಲಿ ಒಬ್ಬರು ಅತಿಥಿ ಶಿಕ್ಷಕರಿದ್ದಾರೆ. ಅತಿಥಿ ಶಿಕ್ಷಕರು ಯಾವುದೇ ಸೇವಾಭದ್ರತೆ ಇಲ್ಲದೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದು ಗುಣಮಟ್ಟದ ಶಿಕ್ಷಣದ ಮೇಲೆ ಕೆಟ್ಟ ಪ್ರಭಾವ ಬೀರಿದೆ.

ಶಿಕ್ಷಣ ನೀತಿ ಜಾರಿಗೆ ತನ್ನಿ

ಶಿಕ್ಷಣ ಇಲಾಖೆಯಲ್ಲಿ ನಿರ್ಧಾರ ಪ್ರಕ್ರಿಯೆ ಅತಿಯಾದ ಕೇಂದ್ರಿಕರಣಗೊಳ್ಳುತ್ತಿರುವುದು ಗಂಭೀರ ಚಿಂತೆಯ ವಿಷಯವಾಗಿದೆ. ಇದರಿಂದ ದೀರ್ಘಾವಧಿಯಲ್ಲಿ ಶಿಕ್ಷಣ ಸಂಸ್ಥೆಗಳು ದುರ್ಬಲ ಗೊಳ್ಳುತ್ತವೆ ಮತ್ತು ಸರ್ಕಾರಿ ಶಾಲಾ ವ್ಯವಸ್ಥೆಯ ಕುಸಿತಕ್ಕೆ ಕಾರಣವಾಗುತ್ತದೆ ಎಂದು ದೂರಲಾಗಿದೆ. ಪತ್ರಕ್ಕೆ ಪ್ರೊ.ನಿರಂಜನಾರಾಧ್ಯ ವಿ.ಪಿ., ಎಐಟಿಯುಸಿ ಅಧ್ಯಕ್ಷ ಪ್ರೊ. ಬಾಬು ಮಾಥ್ಯು, ಎಐಪಿಟಿಎಫ್ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ ಸಹಿ ಹಾಕಿದ್ದಾರೆ.



ವಿಜಯನಗರ ಹಂಪಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಕಲಾವಿದರಿಂದ ನೃತ್ಯಪ್ರದರ್ಶನ ನಡೆಯಿತು.

ಶಿವಲಿಂಗ, ನಂದಿ ವಿಗ್ರಹ ಭಗ್ನ

• **ಮುಂಡರಗಿ:** ತಾಲೂಕಿನ ಸಿಂಗಟಾಲೂರ ಗ್ರಾಮದ ತುಂಗಭದ್ರಾ ನದಿ ತೀರದಲ್ಲಿರುವ ಐತಿಹಾಸಿಕ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ದುಷ್ಕರ್ಮಿಗಳು ಭಾನುವಾರ ಬೆಳಗಿನ ಸಮಯ ದಲ್ಲಿ ಶಿವಲಿಂಗ ಹಾಗೂ ನಂದಿ ಮೂರ್ತಿಗಳನ್ನು ಭಗ್ನಗೊಳಿಸಿರುವ ಘಟನೆ ನಡೆದಿದೆ.

ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಶಿವಲಿಂಗ ಹಾಗೂ ನಂದಿ ಮೂರ್ತಿಗಳನ್ನು ದುಷ್ಕರ್ಮಿಗಳು ಒಡೆದು ಹಾಕಿರುವುದು ಗ್ರಾಮಸ್ಥರನ್ನು ಆತಂಕಕ್ಕೀಡುಮಾಡಿದೆ. ಈ ದೇವಸ್ಥಾನದ ಸಮೀಪದಲ್ಲಿರುವ ಹೊನ್ನತ್ತೆಮ್ಮನ ಮೂರ್ತಿಗಳನ್ನೂ ದುಷ್ಕರ್ಮಿಗಳು ಹಾನಿಗೊ ಳಿಸಿದ್ದಾರೆ. ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ರಾಮಲಿಂಗೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸುವುದಕ್ಕಾಗಿ ಸಿಂಗಟಾಲೂರು ಗ್ರಾಮಸ್ಥರು ಶನಿವಾರ ದೇವಸ್ಥಾನಕ್ಕೆ ತೆರಳಿ ಸುಣ್ಣ ಬಳಿದು ಸಿದ್ಧತೆ ಮಾಡಿಕೊಂಡಿದ್ದರು. ಬೆಳಗ್ಗೆ ಪೂಜೆಗಾಗಿ ತೆರಳಿದಾಗ ಮೂರ್ತಿಗಳು ಭಗ್ನಗೊಂಡಿರುವುದು ಭಕ್ತರನ್ನು ಆತಂಕಕ್ಕೀಡು ಮಾಡಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರು ತಂಡೋಪ ತಂಡವಾಗಿ ದೇವಸ್ಥಾನದ ಬಳಿಗೆ ಆಗಮಿಸಿ ಈ ಘಟನೆಗೆ ಕಾರಣರಾದ ದುಷ್ಕರ್ಮಿಗಳ ವಿರುದ್ಧ ಆಕ್ರೋಶ ಹೊರಹಾಕಿದರು. ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ಈ ಘಟನೆಗೆ ಕಾರಣರಾದವರನ್ನು ಕೂಡಲೇ ಬಂಧಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸಬೇಕೆಂದು ಸುನಿಲರಡ್ಡಿ ನೀರಲಗಿ, ಕೊಟ್ರೇಶ ಬಳ್ಳೊಳ್ಳಿ, ಬಸವರಾಜ ಬಿಳಿಮಗ್ಗದ, ಬಸವೇಶ್ವರಕುಮಾರ ಸದಾಶಿವಪ್ಪ ನವರ, ಗುಡದೀರಯ್ಯ ಹಿರೇಮಠ, ಕಾಶಪ್ಪ ಬಾಗೇವಾಡಿ, ಮರಡ್ಡಿ ಮುದುಕನಗೌಡ್ರ ಸೇರಿದಂತೆ ಅನೇಕ ಭಕ್ತರು ಒತ್ತಾಯಿಸಿದ್ದಾರೆ.

ಸ್ಥಳಕ್ಕೆ ಗದಗ ಎಸ್‌ಪಿ ರೋಹನ್ ಜಗದೀಶ, ಡಿಎಸ್‌ಪಿ ಪ್ರಭುಗೌಡ ಕಿರೇದಳ್ಳಿ, ಸಿಪಿಐ ಯಶವಂತ ಬಿಸನಳ್ಳಿ, ಭೇಟಿ ನೀಡಿ ಪರಿಶೀಲಿಸಿದರು. ಇದೇ ವೇಳೆ ಗ್ರಾಮಸ್ಥರು ದೂರು ಸಲ್ಲಿಸಿದರು. ತನಿಖೆ ಕೈಗೊಂಡು ಆದಷ್ಟು ಬೇಗ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಗದಗ ಎಸ್‌ಪಿ ರೋಹನ್ ಜಗದೀಶ ತಿಳಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಿಂದೂ ಸಂಗಮ ಕಾರ್ಯಕ್ರಮ ನಡೆಯುತ್ತಿರುವುದು ಯಾರ ವಿರುದ್ಧವೂ ಅಲ್ಲ -ಕೇಶವ ಬಂಗೇರ

-ಹಿಂದೆ ಪೈಲ್ವಾನನೊಬ್ಬ ದಿನಾ ವ್ಯಾಯಾಮ ಮಾಡುತ್ತಿರುವುದನ್ನು ಕಂಡು ಆಚೆ ಮನೆಯಾತನಿಗೆ ಇದು ನನ್ನ ವಿರುದ್ಧ ತಯಾರಿ ಅಂತ ಅನಿಸಿತಂತೆ!

ದಿನ ಭವಿಷ್ಯ

ಮೇಷ ಉದ್ದೇಶಿಸಿದ ಕಾರ್ಯ ಸಫಲ. ಮಾನಸಿಕ ಗೊಂದಲ ನಿವಾರಣೆ. ಆರೋಗ್ಯದ ಕುರಿತಾದ ಚಿಂತೆ ಪರಿಹಾರ. ಬಂಧು ವಿರಸ ಶಮನ. ನಿರಾಳತೆ.

ವೃಷಭ ನಿಮ್ಮ ದೈನಂದಿನ ಕಾರ್ಯ ಪೂರೈಸಲು ಗಮನ ಕೊಡಿ. ನಿಮಗೆ ಸಂಬಂಧಿಸದ ವಿಚಾರಕ್ಕೆ ತಲೆ ಕೆಡಿಸಿಕೊಳ್ಳಬೇಡಿ. ಸಂಘರ್ಷಕ್ಕೆ ಇಳಿಯದಿರಿ.

ಮಿಥುನ ದಿನದ ಆರಂಭ ಉತ್ಸಾಹಕ್ಕೆ ಭಂಗ. ನಿರಾಶೆ. ಬಳಿಕ ಉತ್ಸಾಹ ತುಂಬುವ ಬೆಳವಣಿಗೆ. ಕೆಲ ವ್ಯಕ್ತಿಗಳ ಕಿರಿಕಿರಿ ನಿವಾರಣೆಯಾಗಲಿದೆ.

ಕಟಕ ಆಹಾರದ ವಿಷಯದಲ್ಲಿ ಜಾಗ್ರತೆ ಇರಲಿ. ಆರೋಗ್ಯ ಕೆಡಿಸಿಕೊಳ್ಳಬೇಡಿ. ಕುಟುಂಬದಲ್ಲಿ ಸಣ್ಣಪುಟ್ಟ ಮನಸ್ತಾಪ ಸಂಭವ.

ಸಿಂಹ ಕೌಟುಂಬಿಕ ಸಮಸ್ಯೆ. ಅದನ್ನು ಪರಿಹರಿಸಲು ಸಂಯಮದ ಹೆಜ್ಜೆಯಿಡಿ. ವೃತ್ತಿ ವ್ಯವಹಾರದಲ್ಲಿ ಹಿನ್ನಡೆ ಉಂಟಾದೀತು. ಸಹಕಾರ ಪಡೆಯಿರಿ.

ಕನ್ಯಾ ದುಸ್ಸಾಹಸಕ್ಕೆ ಮುಂದಾಗಬೇಡಿ. ಎಚ್ಚರ ವಹಿಸಿ. ಉದ್ಯೋಗ ದಲ್ಲಿ ಕಿರಿಕಿರಿ. ಕೆಲವರ ಅಸಹಕಾರ. ಮನೆಯಲ್ಲಿ ಸೌಹಾರ್ದ ಪರಿಸರ.

ತುಲಾ ಯಾವುದೇ ಕೆಲಸ ಯೋಚಿಸಿ ನಡೆಸಿ. ಗೊಂದಲಕ್ಕೆ ಆಸ್ಪದ ನೀಡದಿರಿ. ಕೌಟುಂಬಿಕ ಹೊರೆ ಹೆಚ್ಚಲಿದೆ. ಬಂಧು ಜತೆ ವಿರಸವಾದೀತು.

ವೃಶ್ಚಿಕ ನಿಮ್ಮ ಕಾಳಜಿಯ ವಿಷಯಕ್ಕೆ ಗಮನ ಹರಿಸಿ. ಉಳಿದೆಲ್ಲ ವಿಚಾರ ಬಿಡಿ. ನಿಮ್ಮ ವರ್ತನೆಯಲ್ಲಿ ಬದಲಾವಣೆ ತರಬೇಕಾದ ಪ್ರಸಂಗ ಬಂದೀತು.

ಧನು ವಿವಿಧ ವಿಷಯದಲ್ಲಿ ಒತ್ತಡ ಎದುರಿಸುವಿರಿ. ಇದರಿಂದ ಖಾಸಗಿ ಬದುಕಿನ ಮೇಲೆ ಪರಿಣಾಮ. ಎಚ್ಚರಿಕೆಯ ಹೆಜ್ಜೆಯಿಡಿ. ಸಿಟ್ಟು ಬೇಡ.

ಮಕರ ಭವಿಷ್ಯದ ದೊಡ್ಡ ಯೋಜನೆ ಕಾರ್ಯಗತ ಮಾಡಲು ಹಿಂಜರಿಕೆ ಬೇಡ. ನಿಧಾನ ಯಶಸ್ಸು ಸಿಗಲಿದೆ. ಚಾಡಿ ಮಾತು ನಂಬಲು ಹೋಗಬೇಡಿ.

ಕುಂಭ ಏಕಕಾಲದಲ್ಲಿ ವಿವಿಧ ಬಗೆಯ ಚಿಂತೆ ಕಾಡಬಹುದು. ವಿಭಿನ್ನ ಪರಿಸ್ಥಿತಿಗಳಿಗೆ ಹೊಂದಿ ಕೊಂಡು ನಡೆಯುವುದೇ ಸೂಕ್ತ. ಧನವ್ಯಯ.

ಮೀನ ಮನಸ್ಸು ವಿಚಲಿತ ಆಗುವ ಬೆಳವಣಿಗೆ ನಡೆದೀತು. ಎಚ್ಚರಿಕೆಯ ಹೆಜ್ಜೆಯಿಡಿ. ಆರ್ಥಿಕವಾಗಿ ಸಣ್ಣ ಹಿನ್ನಡೆ. ಬಂಧುಗಳ ಜತೆ ವಿರಸವಾದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 8,2,7,4

ಬಂಜಾರ ಸಮುದಾಯಕ್ಕೆ ಸಚಿವ ಶಿವರಾಜ್ ತಂಗಡಗಿ ಕರೆ
ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿರಿ

• **ಬೆಂಗಳೂರು:** ಬಂಜಾರ ಸಮುದಾಯದವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಕರೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಯನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಅವರು, ಅಂದಿನ ಕಾಲದಲ್ಲೇ ಸಮುದಾಯದ ಏಳಿಗೆಗಾಗಿ ದುಡಿದ ಸೇವಾಲಾಲ್ ಅವರು ಜನತೆಗೆ ವ್ಯಸನ ಮುಕ್ತರಾಗಿ ಎಂದು ಬೋಧಿಸುತ್ತಾ ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿ ಮಾತುಗಳನ್ನು ಹೇಳಿದ್ದರು. ಹಿಂದುಳಿದ ಸಮುದಾಯಗಳು ಶಿಕ್ಷಣ, ಹೋರಾಟ ಮತ್ತು ಸಂಘಟನೆಯಾಗಬೇಕು ಎಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದಾರೆ. ಯಾವುದೇ ಸಮುದಾಯದ ಅಭಿವೃದ್ಧಿಗೆ ಶಿಕ್ಷಣ ಬಹಳ ಮುಖ್ಯ. ಪ್ರತಿಯೊಂದು ಮನೆಯಲ್ಲಿ ಶಿಕ್ಷಣವಂತರಿರಬೇಕು ಎಂದರು.

ಒಳಮೀಸಲಾತಿಯಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ

ಒಳಮೀಸಲಾತಿ ವಿಚಾರದಲ್ಲಿ ನಮ್ಮ ಸರ್ಕಾರ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ. ಸಿಎಂ ಸಿದ್ದರಾಮಯ್ಯ ಅವರಿಗೆ ಸಣ್ಣ ಸಮುದಾಯಗಳ ಬಗ್ಗೆ ಅಪಾರವಾದ ಕಾಳಜಿಯಿದೆ. ಮುಖ್ಯಮಂತ್ರಿ ಹಾಗೂ ಡಿಸಿಎಂ ಮಂತ್ರಿಗಳು ಸಮಿತಿಯೊಂದನ್ನು ರಚಿಸಿದ್ದು, ಸಮಿತಿಯು ಕಾರ್ಯೋನ್ಮುಖವಾಗಿದೆ. ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ. ಇದಕ್ಕೆ ಯಾರು ಹೆದುರುವ ಅಗತ್ಯವಿಲ್ಲ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಡಾ.ಮೋತಿಲಾಲ್ ಚವ್ಹಾಣ್, ಜಾನಪದ ವಿದ್ವಾಂಸ ಡಾ.ಯು.ಎಂ.ರವಿ, ವೃತ್ತಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ್ ಕರ್ಕೋಳ, ಸಮುದಾಯದ ಮುಖಂಡ ಅನಂತ್ ನಾಯಕ್, ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಮತ್ತಿತರರಿದ್ದರು.



ಅಕಾಡೆಮಿಯಿಂದ ವಿವಿಧ ಕಾರ್ಯಕ್ರಮ

ಸಂತ ಸೇವಾಲಾಲ್‌ಒಬ್ಬ ಮಹಾ ಯೋಗಿ, ಮಹಾಜ್ಞಾನಿ ಹಾಗೂ ಸಮಾಜ ಸುಧಾರಕರು. ಸಮಾಜ ಸುಧಾರಣೆಯ ಜೊತೆಗೆ ಧರ್ಮ ಬೋಧನೆ ಮಾಡಿ, ತಮ್ಮ ಆತ್ಮಶಕ್ತಿಯ ಮೂಲಕ ಅನೇಕ ಪವಾಡಗಳನ್ನು ಮಾಡಿ ಮಹನೀಯರಾದವರು. ಲೋಕ ಕಲ್ಯಾಣಕ್ಕಾಗಿ ಅನೇಕ ತ್ಯಾಗ - ಪವಾಡಗಳನ್ನು ಮಾಡಿದ ಅವರ ಕುರಿತು ಯುವ ಜನರಿಗೆ ತಿಳಿಸಲು ನಮ್ಮ ಅಕಾಡೆಮಿಯಿಂದ ಸರ್ಕಾರದ ಸಹಕಾರದೊಂದಿಗೆ ಸೇವಾಲಾಲ್ ವಿಚಾರ ಸಂಕಿರಣ, ಸೇವಾಲಾಲ್ ಅವರ ಸಂದೇಶ ಮತ್ತು ತತ್ತ್ವ ಆದರ್ಶಗಳ ಚಿಂತನ ಮಂಥನ, ಅಕಾಡೆಮಿ ನಡೆ ತಾಂಡ ಕಡೆ ಸೇರಿದಂತೆ ವಿವಿಧ ಕಾರ್ಯಕ್ರಗಳನ್ನು ನಡೆಸಿಕೊಡಲಾಗುತ್ತಿದೆ ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಡಾ.ಮೋತಿಲಾಲ್ ಚವ್ಹಾಣ್ ತಿಳಿಸಿದರು.

ಬಂಜಾರ ಭಾಷೆ: ಕೇಂದ್ರಕ್ಕೆ ಶಿಫಾರಸು

ಬಂಜಾರ ಭಾಷೆಯನ್ನು ದೇಶದ 8ನೇ ಅನುಚ್ಛೇದಕ್ಕೆ ಸೇರಿಸಬೇಕೆಂಬ ಸಮುದಾಯದ ಮುಖಂಡರ ಬೇಡಿಕೆಗೆ ಸ್ಪಂದಿಸಿದ ಸಚಿವ ಶಿವರಾಜ್ ತಂಗಡಗಿ, ಈ ಹಿಂದೆ ಎರಡು ಬಾರಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತಾದರೂ ಅದು ಶಿಫಾರಸ್ಸನ್ನು ತಿರಸ್ಕರಿಸಿದೆ. ಮತ್ತೊಮ್ಮೆ ಬಂಜಾರ ಭಾಷೆಯನ್ನು ಸಂವಿಧಾನದ 8ನೇ ಅನುಚ್ಛೇದಕ್ಕೆ ಸೇರಿಸಲು ಸರ್ಕಾರದಿಂದ ಶಿಫಾರಸ್ಸು ಮಾಡಲಾಗುವುದು ಎಂದು ಭರವಸೆ ನೀಡಿದರು.

ಕೆಎಸ್‌ಆರ್‌ಟಿಸಿ ಬಸ್‌ಗೆ ಕಾರು ಡಿಕ್ಕಿ
ರಸ್ತೆ ಅಪಘಾತ: ಐದು ಯುವಕರು ಸಾವು

• **ನೆಲಮಂಗಲ:** ರಾಷ್ಟ್ರೀಯ ಹೆದ್ದಾರಿ 48ರ ಜಿಂದಾಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಐದು ಯುವಕರು ಮೃತಪಟ್ಟಿರುವ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.



ದುರ್ಗಾಪ್ರಸಾದ್(20), ಕೇಶವ್(19), ಧನುಷ್(22), ಹರ್ಷಿತ್(20) ಹಾಗೂ ಲಲಿತ್(22) ಮೃತ ದುರ್ದೈವಿಗಳು. ಇವರು ದೊಡ್ಡಬಳ್ಳಾಪುರದ ನಿವಾಸಿಗಳಾಗಿದ್ದಾರೆ. ಕಾರಿನಲ್ಲಿ ತುಮಕೂರು ಕಡೆಯಿಂದ ಬರುತ್ತಿರುವಾಗ ಡಿವೈಡರ್ ಜಂಪ್ ಮಾಡಿ ಬೆಂಗಳೂರು ಕಡೆಯಿಂದ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿಯಾಗಿದ್ದು, ನೆಲಮಂಗಲ ಸರಕಾರಿ ಆಸ್ಪತ್ರೆಗೆ ಐವರ ಮೃತದೇಹ ರವಾನೆ ಮಾಡಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಮೃತ ಹರ್ಷಿತ್ ರಾಜನಕುಂಟೆ ಸಾಯಿ ವಿದ್ಯಾ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ದ್ವಿತೀಯ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದನು, ಲಲಿತ್ ಬಿಕಾಂ ಪದವಿ ಮಾಡುತ್ತಿದ್ದರೆ, ದುರ್ಗಾಪ್ರಸಾದ್ ಹಾಗೂ ಧನುಷ್ ಕೆಲಸ ಮಾಡುತ್ತಿದ್ದರು, ಕೇಶವ್ ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದನು. ಅಪಘಾತದ ರಭಸಕ್ಕೆ ಸ್ಥಳದಲ್ಲೇ ನಾಲ್ವರು ಮೃತಪಟ್ಟಿದ್ದರೆ, ಗಂಭೀರ ಗಾಯಗೊಂಡಿದ್ದ ಮತ್ತೋರ್ವನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತುಆದರೆ ಚಿಕಿತ್ಸೆ ಫಲಿಸದೆ ಆತನೂ ಪ್ರಾಣ ಬಿಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಚಾಲಕ ಕೆಂಪರಾಜು ಮಾಹಿತಿ

ಕಾರು ಅತಿ ವೇಗದಲ್ಲಿ ಡಿವೈಡರ್ ಹಾರಿ ಬಸ್‌ಗೆ ಡಿಕ್ಕಿ ಹೊಡೆದಾಗ ಜೋರಾದ ಸದ್ದು ಕೇಳಿಸಿತು. ಅಪಘಾತದ ತೀವ್ರತೆಗೆ ಬಸ್‌ನ ಗಾಜುಗಳು ಒಡೆದು ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಸ್‌ನಲ್ಲಿ 43 ಪ್ರಯಾಣಿಕರಿದ್ದು, ಯಾರಿಗೂ ಯಾವುದೇ ಗಂಭೀರ ಗಾಯಗಳಾಗಿಲ್ಲ. ಅಪಘಾತವಾದ ಕಾರಿನಲ್ಲಿ ಐವರು ಇದ್ದರು. ಆ ಪೈಕಿ ಎಲ್ಲರೂ ಮೃತಪಟ್ಟಿದ್ದಾರೆ. ಬಸ್ ಅಪಘಾತಕ್ಕೀಡಾದ ನಂತರ, ಪ್ರಯಾಣಿಕರನ್ನು ಹುಬ್ಬಳ್ಳಿಗೆ ತೆರಳುತ್ತಿದ್ದ ಸಂಸ್ಥೆಯ ಬೇರೆ ಬಸ್‌ಗಳಲ್ಲಿ ಕಳುಹಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಬಸ್ ಚಾಲಕ ಕೆಂಪರಾಜು ಮಾಹಿತಿಯನ್ನು ನೀಡಿದ್ದಾರೆ.

ಸಾಮಾಜಿಕ ಸೌಹಾರ್ದಗಳ ಜಾಗತಿಕ ಕೇಂದ್ರ ಭಾರತ

ಪುಟ ೧➡ ಯಾಕೆಂದರೆ ನಮ್ಮಲ್ಲಿ ಸಾಂಸ್ಕೃತಿಕ ಏಕತೆ ತುಂಬು ಬಲಿಷ್ಠವಾಗಿದೆ ಎಂದು ಗಮನ ಸೆಳೆದರು. ನಮಗೆ ಭಾರತವು ನಮ್ಮ ಪೂಜನೀಯ ಮಾತೆಯಾಗಿರುವಳು. ಪ್ರತಿಯೊಬ್ಬರಲ್ಲೂ ಇದೇ ದೈವೀಕ ಅಸ್ಮಿತೆ ದೃಢವಾಗಿದೆ. ತಾಯಿಯ ಮೇಲಿನ ಈ ಪ್ರೀತಿಯ ಕಾರಣದಿಂದಲೇ ಭಾಷೆ, ಸಂಪ್ರದಾಯಗಳು, ಧಿರಿಸುಗಳು ವಿಭಿನ್ನವಾಗಿರುವ ಹೊರತೂ ನಾವೆಲ್ಲ ಒಗ್ಗಟ್ಟಾಗಿದ್ದೇವೆ ಎಂದು ಭಾಗ್ವತ್ ಪ್ರತಿಪಾದಿಸಿದರು. ಸಾಮಾಜಿಕ ಸೌಹಾರ್ದತೆಯೆಂದರೆ ಕೇವಲ ಕಾನೂನು ಅನುಷ್ಠಾನವಲ್ಲ ಎಂದವರು ಹೇಳಿದರು.

ಆತ್ಮಾವಲೋಕನ ಮುಖ್ಯ: ಆರ್‌ಎಸ್‌ಎಸ್ ನೂರು ವರ್ಷ ಪೂರ್ತಿಗೊಳಿಸಿದ್ದನ್ನು ಹೆಮ್ಮೆಯಿಂದ ಉಲ್ಲೇಖಿಸಿದ ಭಾಗ್ವತ್ ಅವರು, ಈ ಮೈಲಿಗಲ್ಲು ಸಂಭ್ರಮಿಸಲು ಸೀಮಿತವಲ್ಲ, ಬದಲಾಗಿ ಆತ್ಮಾವಲೋಕನ ತೀರಾ ಮುಖ್ಯವೆಂದು ಕರೆ ನೀಡಿದರು. ಸಾಮಾಜಿಕ ಒಗ್ಗಟ್ಟಿನ ಬಲವರ್ಧನೆಗಾಗಿ ವರ್ಷಕ್ಕೆ ಎರಡು ಅಥವಾ ಮೂರು ಬಾರಿ ಬ್ಲಾಕ್ ಮಟ್ಟದ ಸಮಾವೇಶಗಳ ಆಯೋಜಿಸಬೇಕೆಂದು ಸಲಹೆ ನೀಡಿದ ಭಾಗ್ವತ್, ಜಾತಿ ಭೇದಗಳ ಮೀರಿ ಬೃಹತ್ ಹಿಂದು ಸಮಾಜ ನಿರ್ಮಾಣಕ್ಕೆ ಶ್ರಮಿಸುವಂತೆ ಹಿಂದು ಬಾಂಧವರಿಗೆ ಕರೆ ನೀಡಿದರು.

ಹೊಣೆಗಾರಿಕೆ ಸಮಾಜದ್ದು

ಸಮಾಜವು ಸ್ವಂತಿಕೆಯಿಂದ ಕಾರ್ಯ ನಿರ್ವಹಿಸಬೇಕು. ಈ ವಿಚಾರದಲ್ಲಿ ಸಂಘ ಅಗತ್ಯವಾಗಿ ಸಹಕಾರ ನೀಡುತ್ತೆ. ಆದರೆ ಜವಾಬ್ದಾರಿ ಮಾತ್ರ ಸಮಾಜದ್ದು ಎಂದು ಸಾರಿದ ಅವರು, ಇತರ ರಾಷ್ಟ್ರಗಳು ಸಂಕಷ್ಟಕ್ಕೀಡಾದಾಗಲೆಲ್ಲ ಭಾರತವು ನಿಸ್ವಾರ್ಥವಾಗಿ ಸಂತ್ರಸ್ತ ರಾಷ್ಟ್ರಗಳಿಗೆ ನೆರವು ನೀಡಿದೆ ಎಂದು ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಸಕ್ರಿಯ ಪಾಲ್ಗೊಂಡಿದ್ದ ವಿವಿಧ ಸಮುದಾಯಗಳ ಪ್ರತಿನಿಧಿಗಳು ಭಾಗ್ವತ್ ಅವರ ಜತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ನಂತರ ಈ ಪ್ರತಿನಿಧಿಗಳ ಜತೆ ಭಾಗ್ವತ್ ಅವರು ಸಹಭೋಜನದಲ್ಲಿ ಪಾಲ್ಗೊಂಡರು.

ಇಂದಿನಿಂದ ಎಐ ಶೃಂಗ

ಪುಟ ೧➡ 600ಕ್ಕೂ ಹೆಚ್ಚು ಉನ್ನತ ಮಟ್ಟದ ಸಂಭಾವ್ಯ ನವೋದ್ಯಮಗಳು ನೈಜ-ಪ್ರಪಂಚದ ವಾತಾವರಣದಲ್ಲಿ ಎಐ ಸಂಬಂಧಿತ ಸವಾಲುಗಳಿಗೆ ಪರಿಹಾರಗಳನ್ನು ಪ್ರದರ್ಶಿಸುತ್ತವೆ. ಜಾಗತಿಕ ತಂತ್ರಜ್ಞಾನ, ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳು, ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಅಂತಾರಾಷ್ಟ್ರೀಯ ಪಾಲುದಾರರು ಭಾಗವಹಿಸಲಿದ್ದಾರೆ.

ವೈದ್ಯರಿಂದ ವೈಟ್ ಕಾಲರ್ ಭಯೋತ್ಪಾದನೆ ಬಹಿರಂಗ

ಪುಟ ೧➡ ಆರೋಪಿಗಳಲ್ಲಿ ಒಬ್ಬನಾದ 28 ವರ್ಷದ ಡಾ.ಉಮರ್ ಉನ್ ನಬಿ, ಕಳೆದ ನವೆಂಬರ್‌ನಲ್ಲಿ ಹನ್ನೆರಡಕ್ಕೂ ಹೆಚ್ಚು ಜನರ ಬಲಿ ಪಡೆದ ಕೆಂಪುಕೋಟೆಯ ಬಳಿ ಸ್ಫೋಟಕ ತುಂಬಿದ ವಾಹನ ಸ್ಫೋಟ ಘಟನೆಯೊಂದಿಗೆ ಸಂಪರ್ಕ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಗುಂಪು ರಾಸಾಯನಿಕಗಳ ದಾಸ್ತಾನು ಪಡೆದಿದ್ದು, ಸುಧಾರಿತ ಸ್ಫೋಟಕ ಸಾಧನ ತಂತ್ರಗಳನ್ನು ಕಲಿತಿರುವುದಕ್ಕೆ ಪುರಾವೆಗಳನ್ನು ಪೊಲೀಸರು ಕಂಡುಕೊಂಡಿದ್ದಾರೆ. ರಾಷ್ಟ್ರ ರಾಜಧಾನಿಯ ಜನದಟ್ಟಣೆಯ ಸ್ಥಳದಲ್ಲಿ ಅಥವಾ ಧಾರ್ಮಿಕ ಸ್ಥಳದ ಬಳಿ ವಾಹನ ಬಾಂಬ್ ದಾಳಿಗೆ ಯೋಜನೆ ರೂಪಿಸಲಾಗಿತ್ತು. ಆದರೆ, ಅವರ ಯೋಜನೆ ವಿಫಲವಾಗಿತ್ತು ಎಂದು ಅಧಿಕಾರಿಗಳು ಸೂಚಿಸಿದ್ದಾರೆ.

ನಿಜವೆಂದು ಸಾಬೀತಾದ ಸುಳಿವು

ಅಂತಾರಾಜ್ಯ ಭಯೋತ್ಪಾದಕ ಜಾಲ ಮತ್ತು ಅದರ ಸಂಭಾವ್ಯ ಉದ್ದೇಶಗಳ ಬಗ್ಗೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಈ ಪ್ರಕರಣವನ್ನು ಕೈಗೆತ್ತಿಕೊಂಡಿದೆ. ಈ ಬೆಳವಣಿಗೆ, ಸುಶಿಕ್ಷಿತ ವೃತ್ತಿಪರರನ್ನು ಭಯೋತ್ಪಾದಕ ಜಾಲಗಳಿಗೆ ಸೆಳೆಯುವ ಅಪಾಯಕಾರಿ ಪ್ರವೃತ್ತಿಯ ಬಗ್ಗೆ ದೊರೆತಿದ್ದ ಸುಳಿವು ನಿಜವೆಂಬುದನ್ನು ಸಾಬೀತುಪಡಿಸಿದೆ.

ವಿದ್ಯಾರ್ಥಿ ಸಾಕೇತ್ ಶವವಾಗಿ ಪತ್ತೆ!

ಪುಟ ೧➡ ಅವರ ತಂದೆ ಶ್ರೀನಿವಾಸಯ್ಯನವರು ಫೆ.9ರಂದು ಕೊನೆಯ ಬಾರಿಗೆ ಪುತ್ರನೊಂದಿಗೆ ಮಾತನಾಡಿದ್ದಾಗಿ ಹೇಳಿದ್ದರು.

ನಮಗಿನ್ನೂ ಅವನನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ರೂಮ್‌ಮೇಟ್‌ಗಳು ಮತ್ತು ಇತರರೊಂದಿಗೆ ಸಂಪರ್ಕದಲ್ಲಿದ್ದೇವೆ. ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದು ಅವರು ತಿಳಿಸಿದ್ದರು. ಸಾಕೇತ್ ಕುಟುಂಬಸ್ಥರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದು ಸಹಾಯ ಕೋರಿದ್ದರು. ನಂತರ ಬರ್ಕ್ಲಿ ಪೊಲೀಸ್ ಇಲಾಖೆಯಲ್ಲಿ ಔಪಚಾರಿಕ ದೂರು ದಾಖಲಿಸಲಾಗಿತ್ತು. ಕರ್ನಾಟಕ ಸರ್ಕಾರವು ವಿದೇಶಾಂಗ ಸಚಿವಾಲಯಕ್ಕೆ ಸಹಾಯ ಮಾಡಲು ವಿನಂತಿಸಿತ್ತು. ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರಿಗೆ ಬರೆದ ಪತ್ರದಲ್ಲಿ ಸ್ಯಾನ್ ಫ್ರಾನ್ಸಿಸ್ಕೋದ ಭಾರತೀಯ ರಾಯಭಾರಿ ಮೂಲಕ ಸ್ಥಳೀಯ ಕಾನೂನು ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಕುಟುಂಬಕ್ಕೆ ಬೆಂಬಲ ನೀಡುವಂತೆ ಕೋರಲಾಗಿತ್ತು. ಸಾಕೇತ್ ಭಾನುವಾರದವರೆಗೂ ಎಲ್ಲರೊಂದಿಗೂ ಸಂಪರ್ಕದಲ್ಲಿದ್ದ. ಸೋಮವಾರ ರಾತ್ರಿ ತನ್ನ ತಾಯಿಗೆ ಕರೆ ಮಾಡಿದ್ದ. ಆದರೆ, ಈ ಕಡೆಯಿಂದ ತಾಯಿ ವಾಪಸ್ ಕರೆ ಮಾಡಿದಾಗ ಫೋನ್ ಸ್ವೀಕರಿಸಿರಲಿಲ್ಲ. ನಂತರ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು ಎನ್ನಲಾಗಿದೆ.

ಸಾಕೇತ್ ಅವರು ಬೆಂಗಳೂರಿನ ಶ್ರೀ ವಾಣಿ ಎಜುಕೇಶನ್ ಸೆಂಟರ್‌ನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಪೂರೈಸಿ, ನಂತರ ಪ್ರತಿಷ್ಠಿತ ಬೇಸ್ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು.

7 ದಿನ ಸಿಐಡಿ ವಶಕ್ಕೆ ಶಾಸಕ ಬೈರತಿ ಬಸವರಾಜ್

• **ಬೆಂಗಳೂರು:** ರೌಡಿಶೀಟರ್ ಬಿಕ್ಲು ಶಿವನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿರುವ ಶಾಸಕ ಬೈರತಿ ಬಸವರಾಜ್ ಅವರನ್ನು ಏಳು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಲು ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರು ಭಾನುವಾರ ಆದೇಶಿಸಿದ್ದಾರೆ. ಕೋರಮಂಗಲದಲ್ಲಿರುವ 42ನೇ ಎಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರ ನಿವಾಸಕ್ಕೆ ಭಾನುವಾರ ಶಾಸಕ ಬೈರತಿ ಬಸವರಾಜ್ ಅವರನ್ನು ಹಾಜರುಪಡಿಸಲಾಗಿತ್ತು. ಈ ವೇಳೆ ಪ್ರಕರಣದ ತನಿಖಾಧಿಕಾರಿ ಡಿವೈಎಸ್‌ಪಿ ಗೌತಮ್ ಶಾಸಕರ ವೈದ್ಯಕೀಯ ತಪಾಸಣೆ ವರದಿಯನ್ನು ನ್ಯಾಯಾಧೀಶರ ಮುಂದೆ ಸಲ್ಲಿಸಿದರು. ವರದಿ ಪರಿಶೀಲಿಸಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಬೈರತಿ ಬಸವರಾಜ್ ಅವರನ್ನು ಫೆ.15ರಿಂದ 21ರವರೆಗೆ ಸಿಐಡಿ ವಶಕ್ಕೆ ನೀಡಿ ಆದೇಶ ಹೊರಡಿಸಿದ್ದಾರೆ.

ಎಲ್ಲರಿಗೂ ಒಳಿತಾಗುತ್ತೆ: ಯತೀಂದ್ರ ಸಿದ್ದರಾಮಯ್ಯ

• **ಕೊಪ್ಪಳ:** ಮಹಾಶಿವರಾತ್ರಿ ಬಳಿಕ ಡಿಡಿಎಂ ಡಿ.ಕೆ.ಶಿವಕುಮಾರ ಅವರಿಗೆ ಮಾತ್ರವಲ್ಲ. ಇಡೀ ಕರ್ನಾಟಕ ರಾಜ್ಯದ ಜನರಿಗೆ ಒಳ್ಳೆಯದಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಮಾರ್ಮಿಕವಾಗಿ ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ಮುಖ್ಯಮಂತ್ರಿ ಬದಲಾವಣೆ ವಿಚಾರ ಕುರಿತು ಹಿಂದೆ ಹಲವು ಬಾರಿ ಮಾತನಾಡಿದ್ದೇನೆ. ಮತ್ತೆ ಈಗ ಅದರ ಬಗ್ಗೆ ಮಾತನಾಡುವುದಿಲ್ಲ ಎಂದ ಅವರು, ಶಿವರಾತ್ರಿ ಬಳಿಕ ಒಳ್ಳೆಯದಾಗಲಿದೆ ಎಂಬ ಡಿ.ಕೆ. ಶಿವಕುಮಾರ ಹೇಳಿಕೆಗೆ ಪ್ರತಿಕ್ರಿಯಿಸಿ, ಇಡೀ ರಾಜ್ಯಕ್ಕೇ ಒಳ್ಳೆಯದಾಗಲಿದೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಡಿಕೆಶಿಗೆ ಟಾಂಗ್ ನೀಡಿದರು. ಸರ್ಕಾರದ ಮೇಲೆ ಆರೋಪ ಸೂಕ್ತ ಕಾರಣಗಳೇ ಇಲ್ಲ. ಈ ಕಾರಣಕ್ಕೆ ಪ್ರತಿಪಕ್ಷಗಳು ನನ್ನನ್ನು ಸೂಪರ್ ಸಿಎಂ ಎಂದು ಟೀಕಿಸುತ್ತಿವೆ. ಆದರೆ, ನಾನು ಸರ್ಕಾರದ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ತಂದೆ ಹಾಗೂ ನನಗೆ ಹತ್ತಿರ ಇರುವ ಎಲ್ಲರಿಗೂ ಇದು ಗೊತ್ತಿದೆ ಎಂದರು. ಸಾಮಾಜಿಕ ನ್ಯಾಯದಲ್ಲಿ ನನ್ನ ತಂದೆ ಸಿದ್ದರಾಮಯ್ಯ ಬಲವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ನಾನೂ ಅದನ್ನೇ ನಂಬಿಕೊಂಡು ರಾಜಕಾರಣ ಮಾಡುತ್ತಿದ್ದೇನೆ. ಆಧಾರ ರಹಿತ ಟೀಕೆ ಮಾಡುತ್ತಿದ್ದಾರೆ. ಇದನ್ನು ಜನ ಗಮನಿಸುತ್ತಿದ್ದಾರೆ. ಜನ ದಡ್ಡರಲ್ಲ, ಅನಗತ್ಯ ಟೀಕೆ ಬಗ್ಗೆ ಜನ ಯೋಚನೆ ಮಾಡುವುದಿಲ್ಲ ಎಂದರು.

ಖಾಕಿ ಕಣ್ಗಾವಲಲ್ಲಿ ಶಿವಲಿಂಗಕ್ಕೆ ಪೂಜೆ

ಪುಟ ೧➡ ಎರಡನೇ ಅರ್ಜಿದಾರ ಗುರುಶಾಂತ ಟೆಂಗಳಿ ಸೇರಿದಂತೆ ಒಟ್ಟು 14 ಹಿಂದು ಮುಖಂಡರನ್ನು ಪೂಜೆಗೆ ತೆರಳುವ ಮುನ್ನ, ದರ್ಗಾಗೆ ತೆರಳುವ ಮಾರ್ಗದಲ್ಲಿ ಎಲ್ಲಾ ರೀತಿಯ ಪರಿಶೀಲನೆ ನಡೆಸಿದ ಪೊಲೀಸರು, 14 ಜನರ ಹೆಸರು ಮತ್ತು ದಾಖಲೆಗಳನ್ನು ನೋಡಿದ ಬಳಿಕವೇ ದರ್ಗಾದ ಆವರಣದಲ್ಲಿರುವ ರಾಘವ ಚೈತನ್ಯರ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅನುವು ಮಾಡಿಕೊಡಲಾಯಿತು. ಮಧ್ಯಾಹ್ನ ಸರಿಯಾಗಿ 3 ಗಂಟೆಗೆ ದರ್ಗಾ ಆವರಣಕ್ಕೆ ತೆರಳಿದ 14 ಹಿಂದು ಮುಖಂಡರು ತಲೆಗೆ ಕೇಸರಿ ಪೇಟ ಧರಿಸಿ, ಕೇಸರಿ ಶಾಲು ಹಾಕಿಕೊಂಡು ಪೂಜೆಗೆ ಅಗತ್ಯವಿರುವ ಹೂವು, ಬಿಲ್ವಪತ್ರೆ, ತೆಂಗಿನಕಾಯಿ, ಕರ್ಪೂರ ಸೇರಿದಂತೆ ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಂಡು ಸುಮಾರು ಒಂದೂವರೆ ಗಂಟೆ ಅವಧಿಯಲ್ಲಿ 1001 ನಾಮಾವಳಿ, ಸಹಸ್ರ ಬಿಲ್ವಾರ್ಚನೆ, ರುದ್ರಾಭಿಷೇಕ ಹಾಗೂ ಶಿವನ ಸ್ವರೂಪವಾದ ಶಿವಲಿಂಗಕ್ಕೆ ಸಾವಿರಾರು ಬಿಲ್ವಪತ್ರೆ ಮುಡಿಗೇರಿಸುವ ಮೂಲಕ ಮಹಾಶಿವರಾತ್ರಿಯ ದಿನದಂದು ಪೂಜೆ ಸಲ್ಲಿಸಿದರು.

ಪೊಲೀಸ್ ಬಿಗಿ ಬಂದೋಬಸ್ತ್

ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ನಿಟ್ಟಿನಲ್ಲಿ ಕಳೆದ ಫೆ.14ರ ಮಧ್ಯರಾತ್ರಿಯಿಂದಲೇ ಪಟ್ಟಣದಾದ್ಯಂತ ನಿಷೇಧಾಜ್ಞೆ ಜಾರಿ ಮಾಡಿದ ಜಿಲ್ಲಾಡಳಿತ, 2022ರಲ್ಲಿ ಘಟಿಸಿದಂತೆ ಶಿವಲಿಂಗ ಪೂಜೆ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ಆಗಬಾರದು ಎಂಬ ನಿಟ್ಟಿನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜನೆ ಮಾಡಿ, 900ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜಿಸಲಾಗಿತ್ತು. ಸುಮಾರು 40 ಸಿಸಿಟಿವಿ ಕ್ಯಾಮೆರಾ, ವೈಮಾನಿಕ ನಿಗಾವಿಗಾಗಿ 4 ಡ್ರೋನ್ ಕ್ಯಾಮೆರಾ, ಪೂಜೆ ಆಳಂದ ಪಟ್ಟಣದ ಪ್ರವೇಶ ಮತ್ತು ನಿರ್ಗಮನ ಕೇಂದ್ರಗಳಲ್ಲಿ ತಪಾಸಣೆ ಚೌಕಿ ಸ್ಥಾಪನೆ ಮಾಡಿ ತೀವ್ರ ನಿಗಾ ವಹಿಸಿದೆ.

ಶಿವಲಿಂಗಕ್ಕೆ ಪೂಜೆ ಸಲ್ಲಿಸಿದ ಮುಖಂಡರು

ಹೈಕೋರ್ಟ್ ಆದೇಶದಂತೆ 14 ಹಿಂದು ಮುಖಂಡರಾದ ಸಿದ್ರಾಮಯ್ಯ ಹಿರೇಮಠ, ಗುರುಶಾಂತ ಟೆಂಗಳಿ, ಹರ್ಷಾನಂದ ಗುತ್ತೇದಾರ, ರಾಕೇಶ್ ರಾಜಶೇಖರ ಜಮಾದಾರ್, ಶಿವರಾಜ ಷಡಕ್ಷರಿ ಬಾಳಿ, ಅಶೋಕ್ ಬಗಲಿ, ಮಲ್ಲಿಕಾರ್ಜುನ ಸಾವಳಗಿ, ಶಿವಪುತ್ರ ನಡಿಗೇರಿ, ಮಲ್ಲಿಕಾರ್ಜುನ ಕಂದಗೋಳ, ವೀರಣ್ಣ ಹತ್ತರಗಿ, ರಾಜು ಚೌಹಾಣ್, ಹಣಮಂತರಾವ್ ಪಾಟೀಲ್, ರವಿ ಮದನಕರ್, ಮಲಕಣ್ಣಾ ಹಿರೇಪೂಜಾರಿ ಪೂಜೆ ಸಲ್ಲಿಸಿದರು.

ಹೈಕೋರ್ಟ್ ಆದೇಶದಂತೆ ಶ್ರೀ ರಾಘವ ಚೈತನ್ಯರ ಶಿವಲಿಂಗಕ್ಕೆ ಪೂಜೆ ಸಲ್ಲಿಸಲಾಗಿದೆ. ಶಿವರಾತ್ರಿಯ ಪವಿತ್ರ ದಿನದಂದು ದೇಶದ ಗಡಿ ಕಾಯುವ ಸೈನಿಕರಿಗೆ, ಅನ್ನ ಕೊಡುವ ರೈತರಿಗೆ ಹಾಗೂ ದೇಶದ ಒಳಿತಿಗಾಗಿ ಸಂಕಲ್ಪ ತೊಡಲಾಗಿದೆ.

■ ಸಿದ್ರಾಮಯ್ಯ ಹಿರೇಮಠ, ಹಿಂದು ಮುಖಂಡ

ಎಂದಿಗೂ ಹೋಲಿಕೆ ಸಲ್ಲದು ಕ್ಷಮೆ ಯಾಚಿಸಲಿ: ಫಡ್ನವಿಸ್

• **ಮುಂಬೈ:** ಛತ್ರಪತಿ ಶಿವಾಜಿ ಮಹಾರಾಜರನ್ನು ಟಿಪ್ಪು ಸುಲ್ತಾನನೊಂದಿಗೆ ಹೋಲಿಕೆ ಮಾಡಿದ್ದಕ್ಕಾಗಿ ಕಾಂಗ್ರೆಸ್ ಮುಖ್ಯಸ್ಥ ಹರ್ಷವರ್ಧನ್ ಸಪ್ಕಾಲ್ ಬೇಷರತ್ ಕ್ಷಮೆಯಾಚಿಸಬೇಕು, ಮಹಾರಾಷ್ಟ್ರ ಎಂದಿಗೂ ಸಹಿಸದು ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಖಂಡಿಸಿದ್ದಾರೆ.



ನಾಗ್ಪುರದಲ್ಲಿ ಮಾತನಾಡಿದ ಮುಖ್ಯಮಂತ್ರಿ ಫಡ್ನವಿಸ್, ಮಹಾರಾಷ್ಟ್ರ ಛತ್ರಪತಿ ಶಿವಾಜಿ ಮಹಾರಾಜರನ್ನು ಅತ್ಯಂತ ಶ್ರದ್ಧೆ-ಭಕ್ತಿ ಮತ್ತು ಗೌರವದಿಂದ ಆರಾಧಿಸುವ ರಾಜ್ಯವಾಗಿದೆ. ಶಿವಾಜಿ ನಮ್ಮ ದೇವರಿದ್ದಂತೆ.

ನಾವು ಶಿವಾಜಿ ಮಹಾರಾಜರನ್ನು ಭಕ್ತಿಯಿಂದ ಪೂಜಿಸುತ್ತೇವೆ. ಶಿವಾಜಿ ಮಹಾರಾಜರನ್ನು ಅಗೌರವಿಸಲು ಯಾರೇ ಧೈರ್ಯ ತೋರಿಸಿದರೂ ನಾವು ಅಂತಹವರಿಗೆ ತಕ್ಕ ಪ್ರತ್ಯುತ್ತರ ನೀಡುತ್ತೇವೆ ಎಂದು ವಿರೋಧ ವ್ಯಕ್ತಪಡಿಸಿದರು. ಮಾಲೇಗಾಂವ್ ಉಪಮೇಯರ್ ಶಾನ್-ಎ-ಹಿಂದ್ ನಿಹಾಲ್ ಅಹಮದ್ ತಮ್ಮ ಕಚೇರಿ ಗೋಡೆಯಲ್ಲಿ ಮತಾಂಧ ಟಿಪ್ಪು ಸುಲ್ತಾನನ ಭಾವಚಿತ್ರ ತೂಗುಹಾಕುವ ಮೂಲಕ ಹೊಸ ವಿವಾದ ಸೃಷ್ಟಿಸಿದ್ದರು. ಛತ್ರಪತಿ ಶಿವಾಜಿ, ಮಹಾತ್ಮ ಗಾಂಧಿ, ಡಾ.ಅಂಬೇಡ್ಕರ್ ಅವರಂತಹ ಮಹಾನ್ ನಾಯಕರ ಭಾವಚಿತ್ರಗಳನ್ನು ಬದಿ ಗಿಟ್ಟು, ಉಪಮೇಯರ್ ಮತಾಂಧ ಟಿಪ್ಪುವಿಗೆ ಸ್ಥಾನ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಉಪಮೇಯರ್ ವಿರುದ್ಧ ಬಿಜೆಪಿ, ಶಿವಸೇನೆ ಮತ್ತು ಹಿಂದು ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಮಹಾ ಕಾಂಗ್ರೆಸ್ ಮುಖ್ಯಸ್ಥ ಸಪ್ಕಲ್, ಶಿವಾಜಿ ಮಹಾರಾಜರು ಸ್ವರಾಜ್ಯದ ಕಲ್ಪನೆ ನೀಡಿದ್ದರು. ಅದೇ ರೀತಿ ಟಿಪ್ಪು ಸುಲ್ತಾನನೂ ಭಾರತದ ಭೂಮಿಪುತ್ರ ಮತ್ತು ವೀರಸೇನಾನಿ. ಟಿಪ್ಪು ಶೌರ್ಯದ ಸಂಕೇತವೆಂದು ಹೋಲಿಕೆ ಮಾಡಿದ್ದರು.


ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಚಾಮರಾಜನಗರದ ಮಲೆಮಹದೇಶ್ವರ ದೇಗುಲದಲ್ಲಿ ದೇವರ ದರ್ಶನಕ್ಕಾಗಿ ಸೇರಿರುವ ಲಕ್ಷಾಂತರ ಭಕ್ತ ಸಮೂಹ.


ಬೆಂಗಳೂರಿನ ಜೆ.ಪಿ ನಗರದಲ್ಲಿರುವ ತಿರುಮಲ ಗಿರಿ ದೇವಸ್ಥಾನದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪೂಜೆ ಸಲ್ಲಿಸಿದರು.


ಧರ್ಮಸ್ಥಳದಲ್ಲಿ ನಡೆದ ಅಹೋರಾತ್ರಿ ಶಿವಪಂಚಾಕ್ಷರಿ ಪಠಣಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ದೀಪಬೆಳಗಿಸುವ ಮೂಲಕ ಚಾಲನೆ ನೀಡಿದರು.

ಕಿರುಸುದ್ದಿ

ಔಷಧ ಪೂರೈಕೆಯಲ್ಲಿ ವಿಫಲ: ಅಶೋಕ



ಬೆಂಗಳೂರು: ಸರ್ಕಾರಿ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನೌಕರರು ತಾವು ಕೈಗೊಳ್ಳಲಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಕಾಂಗ್ರೆಸ್ ಸರ್ಕಾರ ಔಷಧಿ ಪೂರೈಕೆಯಲ್ಲಿ ವಿಫಲವಾಗಿರುವ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧಿ ಸಿಗುತ್ತಿಲ್ಲ ಎಂದು ಪ್ರತಿಪಕ್ಷಗಳು ಟೀಕೆ ಮಾಡಿದರೆ ಎಲ್ಲವೂ ಸರಿ ಇದೆ ಎಂದು ತಿಪ್ಪೆ ಸಾರಿಸುವ ಮಾತಾಡುತ್ತೀರಿ. ಮಾಧ್ಯಮಗಳು ವರದಿ ಮಾಡಿದರೂ ಕ್ಯಾರೆ ಎನ್ನುವುದಿಲ್ಲ ಎಂದಿದ್ದಾರೆ. ಆದರೆ, ದಿನನಿತ್ಯ ರೋಗಿಗಳಿಗೆ ಆರೋಗ್ಯ ಸೇವೆ ನೀಡುವ, ಆಸ್ಪತ್ರೆಗಳ ನಿರ್ವಹಣೆ ಮಾಡುವ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳ ಅಧಿಕಾರಿಗಳು ಮತ್ತು ನೌಕರರು ಸ್ವತಃ ತಾವೇ ಲಿಖಿತ ರೂಪದಲ್ಲಿ ಔಷಧಿ ಪೂರೈಕೆಯಲ್ಲಿ ಆಗುತ್ತಿರುವ ವ್ಯತ್ಯಯದ ಬಗ್ಗೆ ಬಹಿರಂಗ ಮಾಡಿದ್ದಾರಲ್ಲ, ಈಗ ಏನು ಹೇಳುತ್ತೀರಿ? ಎಂದು ಪ್ರಶ್ನಿಸಿದ್ದಾರೆ. ನಿಮ್ಮ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಂತೂ ಆರೋಗ್ಯ ಇಲಾಖೆಯನ್ನೇ ಸಂಪೂರ್ಣವಾಗಿ ಅನಾರೋಗ್ಯ ಪೀಡಿತಗೊಳಿಸಿದ್ದಾರೆ. ನಿಮ್ಮ ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತಾದರೂ ನಾಚಿಕೆ, ಮಾನ ಮರ್ಯಾದೆ ಇದ್ದರೆ ಈ ಕೂಡಲೇ ವಿಧಾನಸಭೆ ವಿಸರ್ಜನೆ ಮಾಡಿ ಚುನಾವಣೆಗೆ ಹೋಗಬೇಕು ಎಂದು ಅಶೋಕ ಸವಾಲು ಹಾಕಿದ್ದಾರೆ.

ಗುಂಡಾಲ್ ಜಲಾಶಯದಲ್ಲಿ ಹುಲಿ ಕಳೇಬರ ಪತ್ತೆ

ಕೊಳ್ಳೇಗಾಲ: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗುಂಡಾಲ್ ಜಲಾಶಯದಲ್ಲಿ ಹುಲಿಯೊಂದು ಮೃತಪಟ್ಟಿರುವ ಘಟನೆ ಭಾನುವಾರ ಮಧ್ಯಾಹ್ನ ಬೆಳಕಿಗೆ ಬಂದಿದೆ. ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವಿಭಾಗ ವ್ಯಾಪ್ತಿಯ ಕೊಳ್ಳೇಗಾಲ ವನ್ಯಜೀವಿ ವಲಯದ ಗುಂಡಾಲ್ ಶಾಖೆಯ ಗಸ್ತಿನ ಗುಂಡಲ್ ಜಲಾಶಯದ ಬಳಿ ಬೃಹತ್ ಗಾತ್ರದ ಹುಲಿಯೊಂದು ಬೇಟೆಗಾರರ ಉರುಳಿಗೆ ಸಿಲುಕಿ ಮೃತಪಟ್ಟಿದೆ ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಬೇಟೆಗಾರರು ಜಲಾಶಯದ ನೀರು ಕುಡಿಯಲು ಬರುವ ಪ್ರಾಣಿಗಳನ್ನು ಸೆರೆ ಹಿಡಿಯಲು ಉರುಳು ಹಾಕಿದ್ದಾರೆ. ಈ ಉರುಳಿಗೆ ಹುಲಿ ಸಿಲುಕಿ ಮೃತಪಟ್ಟಿದೆ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಬಿಆರ್‌ಟಿ ಹುಲಿ ಸಂರಕ್ಷಿತ ಆರಣ್ಯ ಪ್ರದೇಶ ವ್ಯಾಪ್ತಿಯ ಡಿಸಿಎಫ್ ಶ್ರೀಪತಿ ವಲಯ ಆರಣ್ಯ ಅಽಕಾರಿ ವಾಸು ಸೇರಿದಂತೆ ಆರಣ್ಯ ಇಲಾಖೆ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಈಗಾಗಲೇ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದು ಪ್ರತಿನಿಽ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಽಕಾರಿಗಳು ಮತ್ತು ವನ್ಯಜೀವಿ ಪರಿಪಾಲಕರು ಬೆಂಗಳೂರು ರವರ ನಾಮ ನಿರ್ದೇಶಕ ಪ್ರತಿನಿಽ ಸ್ಥಳೀಯ ಪ್ರತಿನಿಧಿಗಳು ಸ್ಥಳೀಯ ವೈದ್ಯಾಽಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಇದಲ್ಲದೆ ಶ್ವಾನದಳದ ಸಿಬ್ಬಂದಿ ಘಟನಾ ಸ್ಥಳದಲ್ಲಿದ್ದು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ. ಘಟನೆಯ ಸಂಬಂಧ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಸಮಗ್ರ ಮಾಹಿತಿ ನೀಡುವುದಾಗಿ ಡಿಸಿಎಫ್ ಶ್ರೀಪತಿ ಪತ್ರಿಕೆಗೆ.ತಿಳಿಸಿದ್ದಾರೆ.

ಪ್ರವಾಸಿಗರ ಅನುಕೂಲಕ್ಕಾಗಿ ಟ್ರಾವೆಲ್ ನೂಕ್: ಗವಿಯಪ್ಪ

ಹಂಪಿ ಉತ್ಸವಕ್ಕೆ ತೆರೆ

ವಿಜಯನಗರ: ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಂಪಿ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದ್ದು, 20 ಕೋಟಿ ರೂ. ವೆಚ್ಚದಲ್ಲಿ ಟ್ರಾವೆಲ್ ನೂಕ್ ಯೋಜನೆ ಮೂಲಕ ಪ್ರವಾಸಿಗರಿಗೆ ಮೂಲ ಸೌಕರ್ಯ ಒದಗಿಸಲಾಗುವುದು ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು.

ಹಂಪಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಮಾತನಾಡಿದ ಅವರು, ಸರ್ಕಾರಗಳು, ಹಂಪಿ ಅಭಿವೃದ್ಧಿಗೆ ಒತ್ತು ನೀಡಿದ್ದು, ಐತಿಹಾಸಿಕ ಹಂಪಿ ವಿಶ್ವದ ಗಮನ ಸೆಳೆದಿದ್ದು, ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ದೇಶ, ವಿದೇಶಿ ಪ್ರವಾಸಿಗರು ಹಂಪಿಗೆ ಭೇಟಿ ನೀಡುತ್ತಾರೆ. ಅವರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಕಮಲಾಪುರದಲ್ಲಿ ಫುಡ್ ಕೋರ್ಟ್, ಕಮಲಾಪುರ ಕೆರೆಯನ್ನು ಸೌಂದರ್ಯೀಕರಣಗೊಳಿಸಲಾಗುತ್ತಿದೆ ಎಂದರು.

ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ ಮಾತನಾಡಿ, ಹಂಪಿ ಉತ್ಸವದ ರೂವಾರಿ ನಮ್ಮ ಪೂಜ್ಯ ತಂದೆಯವರಾದ ದಿವಂಗತ ಎಂ.ಪಿ.ಪ್ರಕಾಶ್ ಅವರನ್ನು ಸರ್ಕಾರ ಸೇರಿದಂತೆ ನಾಡಿನ ಜನರು ನೆನೆಯು ತ್ತಾರೆ. ಹಂಪಿ ಉತ್ಸವವನ್ನು ಜನೋತ್ಸವವಾಗಿ ಮಾಡಬೇಕು ಎಂಬುದು ಅವರ ದೃಢ ಸಂಕಲ್ಪವಾಗಿತ್ತು. ಅದನ್ನು ಸಾಧ್ಯವಾಗಿಸಿದರು. ಅವರ ಹಾದಿಯಲ್ಲಿ ಹಂಪಿ ಉತ್ಸವವನ್ನು ಸರ್ಕಾರಗಳು ಆಯೋಜಿಸುತ್ತಿವೆ. ಈ ವರ್ಷ ಉತ್ಸವದ ಮುಖ್ಯ ವೇದಿಕೆಗೆ ಎಂ.ಪಿ.ಪ್ರಕಾಶ ವೇದಿಕೆಯನ್ನು ನಾಮಾಕರಣ ಮಾಡಿರುವುದಕ್ಕೆ ಸರ್ಕಾರಕ್ಕೆ ಆಭಾರಿಯಾಗಿದ್ದೇವೆ ಎಂದರು.

ಡಿಸಿ ಕವಿತಾ ಮನ್ನಿಕೇರಿ ಕೃತಜ್ಞತಾ ನುಡಿಗಳನ್ನಾಡಿದರು. ಅಪರ ಡಿಸಿ ಬಾಲಕೃಷ್ಣ ಬಾಲಕೃಷ್ಣ ಸ್ವಾಗತಿಸಿದರು. ಜಿಪಂ ಸಿಇಒ ಅಕ್ರಮ ಅಲಿ ಷಾ, ಎಸ್ಪಿ ಜಾಹ್ನವಿ, ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಹುಡಾ ಅಧ್ಯಕ್ಷ ಎಚ್.ಎನ್.ಎಫ್. ಮೊಹಮದ್ ಇತರರಿದ್ದರು.



ಹಂಪಿಯಲ್ಲಿ 2 ಗಂಟೆ ಸಂಚಾರ ದಟ್ಟಣೆ

ವಿಜಯನಗರ: ಹಂಪಿ ಉತ್ಸವದ ಎರಡನೇ ದಿನವಾದ ಶನಿವಾರ ಹಂಪಿಗೆ ಜನ ಸಾಗರವೇ ಹರಿದು ಬಂದಿತ್ತು. ಹಂಪಿ ಉತ್ಸವದ ಎರಡನೇ ದಿನವಾದ ಶನಿವಾರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರಿಂದ ಬಡವಲಿಂಗ, ಉಗ್ರ ನರಸಿಂಹ ಪಾರ್ಕಿಂಗ್‌ನಿಂದ ಹಾದು ಹೋಗುವ ಹಾದಿಯಲ್ಲಿ ಶನಿ ವಾರ ತಡ ರಾತ್ರಿ ಟ್ರಾಫಿಕ್ ಜಾಮ್ ಉಂಟಾಗಿದ್ದರಿಂದ ಸುಮಾರು 2 ಗಂಟೆಗೂ ಹೆಚ್ಚು ಕಾಲ ವಾಹನ ಸವಾರರು ಪರದಾಡಿದರು. ಉತ್ಸವದ ಪ್ರಧಾನ ವೇದಿಕೆ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆ, ಶ್ರೀ ಕೃಷ್ಣದೇವರಾಯ ವೇದಿಕೆ, ವಿದ್ಯಾರಣ್ಯ ವೇದಿಕೆ, ಶ್ರೀ ವಿರೂಪಾಕ್ಷೇಶ್ವರ ವೇದಿಕೆ, ಸಾಸಿವೆಕಾಳು ಗಣೇಶ ವೇದಿಕೆಗಳಲ್ಲಿ ಕಾರ್ಯಕ್ರಮ ವೀಕಿಸಿದ ಜನರು ರಾತ್ರಿ 10 ಗಂಟೆ ಸುಮಾರಿಗೆ ಮನೆಗೆ ಮರಳು ಆರಂಭಿಸಿದರು. ಕ್ರಮೇಣ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿದಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು. ಇದೇ ವೇಳೆ ಕಮಲಾಪುರದಿಂದ ಹಂಪಿಯತ್ತ ಒಂದು ಟೂರಿಸ್ಟ್ ವೋಲ್ವೋ ಬಸ್ ಬಂದಿದ್ದರಿಂದ 11 ಗಂಟೆ ವೇಳೆಗೆ ಟ್ರಾಫಿಕ್ ಜಾಮ್ ಉಂಟಾಯಿತು. ಬಸ್‌ಗಳಲ್ಲಿ ಕಿಕ್ಕಿರಿದು ತುಂಬಿದ್ದ ಜನರು ಇತ್ತ ಕೂರಲೂ, ನಿಲ್ಲಲೂ ಆಗದೇ, ಅತ್ತ ಇಳಿದೂ ಹೋಗಲಾಗದೇ ಸಂಕಷ್ಟದ ಸ್ಥಿತಿಗೆ ಸಿಲುಕಿದರೆ, ಅನೇಕರು ಮಕ್ಕಳು, ಮೊಮ್ಮಕ್ಕಳೊಂದಿಗೆ ಕಮಲಾಪುರದವರೆಗೆ ಕಾಲ್ನಡಿಗೆಯಲ್ಲೇ ಹೆಜ್ಜೆ ಹಾಕಿದರು.

ಶ್ರೀ ಮಲೆ ಮಹದೇಶ್ವರ ದೇವಾಲಯಕ್ಕೆ ಸಿಎಂ ಭೇಟಿ | ದೇವರಿಗೆ ವಿಶೇಷ ಪೂಜೆ

ನಾಯಕರ ಶಿವನ ಸ್ಮರಣೆ

ಬೆಂಗಳೂರು: ಪ್ರತಿದಿನ ರಾಜಕೀಯ ಚಟುವಟಿಕೆಗಳಲ್ಲಿ ಮಗ್ನರಾಗಿರುತ್ತಿದ್ದ ರಾಜಕೀಯ ನಾಯಕರು ಭಾನುವಾರ ರಾಜಕೀಯ ಚಟುವಟಿಕೆಗಳಿಗೆ ಅಲ್ಪ ವಿರಾಮ ಹಾಕಿ ಶಿವರಾತ್ರಿ ದಿನದಂದು ಶಿವನ ಸ್ಮರಣೆ ಮಾಡಿದರು.

ಶಿವರಾತ್ರಿ ಪ್ರಯುಕ್ತ ಶಿವನ ದೇವಸ್ಥಾನಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡಿದ ವಿವಿಧ ನಾಯಕರು, ಶಿವನ ಪೂಜೆ ಕೈಂಕರ್ಯದಲ್ಲಿ ಪಾಲ್ಗೊಂಡರು. ಇನ್ನು ಕೆಲವು ನಾಯಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಿವ ಸ್ಮರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾ ಶಿವರಾತ್ರಿ ಅಂಗವಾಗಿ ಚಾಮರಾಜಪೇಟೆಯ ಶ್ರೀ ಮಲೆ ಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಅವರ ಜೊತೆಯಲ್ಲಿ ಸಚಿವ ವೆಂಕಟೇಶ್ ಅವರು ಉಪಸ್ಥಿತರಿದ್ದರು. ನಾಡಿನ ಜನತೆಗೆ ಶಿವರಾತ್ರಿ ಹಬ್ಬದ ಶುಭಾಶಯ ಕೋರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಡಿನ ಜನತೆಗೆ ಮಹಾ ಶಿವರಾತ್ರಿಯ ಹಾರ್ದಿಕ ಶುಭಾಶಯಗಳು. ಅಜ್ಞಾನ - ಅಂಧಕಾರ ಕಳೆದು ಜ್ಞಾನದ ಬೆಳಕು ಲೋಕವನ್ನು ಬೆಳಗಿದ ಈ ಶುಭ ದಿನದಂದು ತಮ್ಮೆಲ್ಲರ ಮೇಲೆ ಭಗವಂತನ ಆಶೀರ್ವಾದವಿರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ.

ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೆಂಗಳೂರಿನ ಜೆ.ಪಿ ನಗರದಲ್ಲಿರುವ ತಿರುಮಲ ಗಿರಿ ದೇವಾಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಡಿಸಿಎಂ ಡಿ.ಕೆ ಶಿವಕುಮಾರ್, ಪ್ರತಿಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಸಚಿವರು ಸೇರಿದಂತೆ ಹಲವು ನಾಯಕರು ರಾಜ್ಯದ ಜನತೆಗೆ ಶಿವರಾತ್ರಿ ಹಬ್ಬದ ಶುಭಾಯ ಕೋರಿದ್ದಾರೆ.



ಎಚ್‌ಡಿಕೆ ಹೋರಾಟ ಮುಂದುವರಿಸಲಿ

ಸುಂಟಿಕೊಪ್ಪ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಸರಕಾರವನ್ನು ಕಿತ್ತೊಗೆಯುವ ಹೋರಾಟವನ್ನು ಮುಂದುವರೆಸಲಿ, ಅವರನ್ನು ತಡೆದವರಾರು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ತಿರುಗೇಟು ನೀಡಿದ್ದಾರೆ.

ಇಲ್ಲಿನ ಪೊಲೀಸ್ ವಸತಿ ಗೃಹ ಉದ್ಘಾಟನೆಗೆ ಆಗಮಿಸಿದ್ದ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರು ಕರ್ನಾಟಕ ಸರಕಾರವನ್ನು ಭ್ರಷ್ಟ ಸರಕಾರ ಎಂದು ಹೇಳಿದ್ದಲ್ಲದೆ, ಇದನ್ನು ಕಿತ್ತೊಗೆಯುವುದೇ ನನ್ನ ಗುರಿ ಎಂದಿರುವ ಬಗ್ಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯಾವಳಿಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಭಾರತ ಗೆಲ್ಲಬೇಕೆಂದು ಎಲ್ಲರೂ ಬಯಸುವಂತೆ ನಾನೂ ಬಯ ಸುತ್ತೇನೆ. ಭಾರತ ಗೆಲ್ಲಬೇಕು ಮತ್ತು ಗೆಲ್ಲುತ್ತದೆ ಎಂದು ಭವಿಷ್ಯ ನುಡಿದರು. ವಂದೇ ಮಾತರಂ ಹಾಡನ್ನು ಕಡ್ಡಾಯಗೊಳಿಸಿ ರುವುದರ ಬಗ್ಗೆ ವಿರೋಧ ವ್ಯಕ್ತವಾಗಿರುವ ಬಗ್ಗೆ ಪ್ರಶ್ನಿಸಿದಾಗ ಉತ್ತರಿಸಿದ ಪರಮೇಶ್ವರ್, ಇದು ರಾಷ್ಟ್ರೀಯ ವಿಷಯವಾಗಿದ್ದು, ಈ ಬಗ್ಗೆ ನಾನು ಮಾತನಾಡುವುದಿಲ್ಲ ಎಂದರು.

ರಾಜ್ಯದಲ್ಲಿ ಪೊಲೀಸ್ ಇಲಾಖೆ ವೈಫಲ್ಯತೆ ಬಗ್ಗೆ ವಿರೋಧ ಪಕ್ಷದ ಆರೋಪದ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, ಆರೋಪ ಮಾಡುತ್ತಿರುವವರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮಾತನಾಡಬೇಕು ಎಂದಷ್ಟೇ ನುಡಿದರು.

ಕೊಡಗಿನಲ್ಲಿ 2018 ರ ದುರಂತದ ನಂತರ ಮನೆ ನಿರ್ಮಾಣ, ಪರಿಹಾರ ವಿಳಂಬವಾಗಿರುವ ಬಗ್ಗೆ ಪ್ರಶ್ನಿಸಿದಾಗ, ಈ ಬಾರಿಯ ಬಜೆಟ್‌ನಲ್ಲಿ ಇದಕ್ಕೆ ಸೂಕ್ತ ಅನುದಾನ ಲಭ್ಯವಾಗುವ ವಿಶ್ವಾಸವನ್ನು ಪರಮೇಶ್ವರ್ ವ್ಯಕ್ತಪಡಿಸಿದರು.

ಭರವಸೆ ಈಡೇರಿಸಿದ್ದೇವೆ

ನಮ್ಮ ಸರಕಾರ ಸಾವಿರ ದಿನಗಳನ್ನು ಪೂರೈಸಿದ್ದು, ತಮ್ಮ ನೇತೃತ್ವದಲ್ಲೇ ಪ್ರಣಾಳಿಕೆ ರಚಿಸಿ 593 ಭರವಸೆಗಳ ಪೈಕಿ ಶೇ.50ಕ್ಕೂ ಹೆಚ್ಚು ಭರವಸೆಗಳನ್ನು ಈಡೇರಿಸಲಾಗಿದೆ. 5 ಗ್ಯಾರಂಟಿಗಳ ಒಟ್ಟು ಮೊತ್ತ 1.36 ಲಕ್ಷ ಕೋಟಿ ಆಗಿದ್ದು, ಈ ಪೈಕಿ ಗೃಹಲಕ್ಷ್ಮಿಗೆ 70 ಸಾವಿರ ಕೋಟಿ ಖರ್ಚು ಮಾಡುತ್ತಿದ್ದೇವೆ. ನಮ್ಮ ಸರಕಾರ ನುಡಿದಂತೆ ನಡೆಯುತ್ತಿದೆ. ವಿರೋಧ ಪಕ್ಷಗಳು ಅನಾವಶ್ಯಕವಾಗಿ ಆರೋಪಗಳನ್ನು ಮಾಡುತ್ತಿದ್ದು, ಅವರ ಅವಧಿಯ ಪೊಲೀಸ್ ವೈಫಲ್ಯತೆಗಳನ್ನು ಬಹಿರಂಗಗೊಳಿಸಿದರೆ ಏನಾದೀತು ಎಂದು ಪ್ರಶ್ನಿಸಿದರಲ್ಲದೆ, ನಾನು ಅಂತಹ ವ್ಯಕ್ತಿತ್ವದವನಲ್ಲ ಎಂದು ದೃಢವಾಗಿ ನುಡಿದರು. ಕರ್ನಾಟಕ ಪೊಲೀಸ್ ದೇಶದಲ್ಲೇ ನಂಬರ್ ವನ್ ಆಗಿದ್ದು, ಬೆಂಗಳೂರು ಅತ್ಯಂತ ಸುರಕ್ಷಿತ ಎಂದು ಹೆಸರು ಪಡೆದಿದೆ. ಇಲ್ಲದಿದ್ದಲ್ಲಿ ರೂ 10 ಲಕ್ಷ ಕೋಟಿ ಬಡಾವಳ ಹೂಡಿಕೆ ಸಾಧ್ಯವಾಗುತ್ತಿತ್ತೇ ಎಂದು ಡಾ. ಪರಮೇಶ್ವರ್ ಪ್ರಶ್ನಿಸಿದರು.

» ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿರುಗೇಟು

ಅಧಿಕಾರಿಗಳೊಂದಿಗೆ ಪ್ರಿಯಾಂಕ್ ಸಭೆ

ಬೆಂಗಳೂರು: ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದ ಕೈಗಾರಿಕೆಗಳ ಬೇಡಿಕೆಗಳನ್ನು ಈಡೇರಿಸಲು ಮತ್ತು ಕರ್ನಾಟಕದ ಯುವಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಐಟಿಬಿಟಿ ಇಲಾಖೆಯಿಂದ ಜಾರಿಗೆ ತಂದಿರುವ ನಿಪುಣ ಕರ್ನಾಟಕ ಯೋಜನೆ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.



ಮೊದಲ ಹಂತದಲ್ಲಿ, ಸಾವಿರಾರು ಯುವಕರಿಗೆ ಪ್ರಸ್ತುತ ವಿಶ್ವಾಸಾರ್ಹ ಕೌಶಲ ಸಂಸ್ಥೆಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಉದ್ಯಮ ಪರೀಕ್ಷಿತ ಪಠ್ಯಕ್ರಮದೊಂದಿಗೆ ಅವರು ಪೂರ್ಣಗೊಂಡ ನಂತರ ಉದ್ಯೋಗ ಸಿದ್ಧ ಕೌಶಲಗಳನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬಹುದು ಎಂದರು. ಎರಡನೇ ಹಂತದಲ್ಲಿ ಸುಮಾರು 11 ತರಬೇತಿ ಪಾಲುದಾರರು ಮತ್ತು 15 ಸಾವಿರಕ್ಕೂ ಹೆಚ್ಚು ಯುವಕರಿಗೆ ರಾಜ್ಯಾದ್ಯಂತ ತರಬೇತಿ ನೀಡಲಾಗುವುದು. ನೈಪುಣ್ಯದೊಂದಿಗೆ ನಾವು ರಾಜ್ಯದ 2ನೇ ಮತ್ತು 3ನೇ ನಗರಗಳ ಯುವಕರನ್ನು ಸಕ್ರಿಯಗೊಳಿಸಲು ಮತ್ತು ಕರ್ನಾಟಕದಾದ್ಯಂತ ಗುಣಮಟ್ಟದ ತಾಂತ್ರಿಕ ವೃತ್ತಿಗಳಿಗೆ ಪ್ರವೇಶವನ್ನು ವಿಸ್ತರಿಸಲು ಬಲವಾದ ಒತ್ತು ನೀಡುತ್ತಿದ್ದೇವೆ ಎಂದು ಹೇಳಿದರು.

ಜಾಗತಿಕ ಟೆಕ್ ದೈತ್ಯ ಸಂಸ್ಥೆಗಳು ಕರ್ನಾಟಕ ಸರ್ಕಾರದ ನಿಪುಣ ಯೋಜನೆಗೆ ಕೈಜೋಡಿಸಿವೆ. ಬೆಂಗಳೂರು ಟೆಕ್ ಸಮಿಟ್ ವೇಳೆ ಟೆಕ್ ಕಂಪನಿಗಳ ಜೊತೆ ಕರ್ನಾಟಕ ಸರ್ಕಾರ ಒಪ್ಪಂದ ಮಾಡಿಕೊಂಡಿತ್ತು ಎಂದರು.

ಭಾರತ- ಅಮೆರಿಕ ಮುಕ್ತ ವ್ಯಾಪಾರ ಒಪ್ಪಂದಕ್ಕೆ ವಿರೋಧ

ಮೈಸೂರು: ತೋಳಿಗೆ ಕಪ್ಪುಪಟ್ಟಿ ಕಟ್ಟಿ ಭಾರತ ಅಮೆರಿಕ ಮುಕ್ತ ವ್ಯಾಪಾರ ಒಪ್ಪಂದ ಕರಡು ಪ್ರತಿ ಸುಡುವ ಮೂಲಕ ರೈತರು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಕುವೆಂಪು ಪಾರ್ಕ್‌ನಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷರಾದ ಕುರುಬೂರ್ ಶಾಂತಕುಮಾರ್ ನೇತೃತ್ವದಲ್ಲಿ ತೋಳಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು, ಕೇಂದ್ರ ಸರ್ಕಾರಕ್ಕೆ ದಿಕ್ಕಾರ. ದೇಶದ ರೈತರ ಮರಣ ಶಾಸನ ಬರೆದಿರುವ ಒಪ್ಪಂದಕ್ಕೆ ಧಿಕ್ಕಾರ. ಅಮೆರಿಕ ದೇಶದ ಕೃಷಿ ಉತ್ಪನ್ನಗಳಿಗೆ ಆಮದು ಸುಂಕ ವಿನಾಯಿತಿ, ದೇಶದ ರೈತರ ಸರ್ವನಾಶ ತಪ್ಪಿಸಲಿ ಎಂದು ಘೋಷಣೆ ಕೂಗಿದರು. ಕೈ ತೋಳಿಗೆ ಕಪ್ಪು ಪಟ್ಟಿ ಧರಿಸಿ ಒಪ್ಪಂದ ಪತ್ರ ಸುಡುವ ಚಳವಳಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಜಿಲ್ಲಾ ಸಂಘಟನೆ ಕಾರ್ಯದರ್ಶಿ ವರಕೂಡು ನಾಗೇಶ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ದೊಡ್ಡ ಕಾಟೂರು ಮಹದೇವಸ್ವಾಮಿ ಇದ್ದರು.

ಜಪಯಜ್ಞ.ಭಜನೆ, ಉಪವಾಸ

ಪುಟ ೧➡ ಉಜ್ಜೈನಿಯ ಶ್ರೀಮಹಾಕಾಳೇಶ್ವರ ದೇವಾಲಯ, ಕಾಶಿ ಶ್ರೀವಿಶ್ವನಾಥ ,ಕೇದಾರನಾಥ, ವಾರಾಣಸಿ ಸೇರಿದಂತೆ ದೇಶಾದ್ಯಂತ ಇರುವ ಶಿವ-ಪಾರ್ವತಿ ದೇಗುಲಗಳಲ್ಲಿ ರಾತ್ರಿಯಿಡೀ ಧಾರ್ಮಿಕ ಆಚರಣೆಗಳು ನಡೆದವು.


ಹಿಂದೆಂದಿಗಿಂತಲೂ ಈ ವರ್ಷ ಮಹಾಶಿವರಾತ್ರಿ ಉತ್ಸವಗಳು ವ್ಯಾಪಕವಾಗಿ ನಡೆದಿದ್ದು, ಲಕ್ಷಾಂತರ ಭಕ್ತರು ದೇವಾಲಯ, ಮಂದಿರಗಳಲ್ಲಿ ಸೇರಿ ಶಿವಪಂಚಾಕ್ಷರಿ ಮಂತ್ರ ಜಪ ಸೇರಿದಂತೆ ಪೂಜೆ, ಧ್ಯಾನಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪುನೀತರಾದರು.

ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಸಂಯೋಜಕ ಜೆ.ನಂದಕುಮಾರ್ ಕಿವಿಮಾತು

ಯಾವುದು ನಮಗೆ ಮುಕ್ತಿ ನೀಡುತ್ತೋ ಅದೇ ನಿಜವಾದ ಶಿಕ್ಷಣ

ಬೆಂಗಳೂರು: ಯಾವುದು ನಮಗೆ ಮುಕ್ತಿ ನೀಡುತ್ತದೆಯೋ ಅದೇ ನಿಜವಾದ ಶಿಕ್ಷಣ. ಜ್ಞಾನವು ಇತರರನ್ನು ಆಳಲು ಅಸ್ತ್ರವಾಗಬಾರದು. ಬದಲಿಗೆ ಅದು ಎಲ್ಲರ ಕಲ್ಯಾಣಕ್ಕೆ ಬಳಕೆಯಾಗಬೇಕು ಎಂಬುದು ಭಾರತೀಯ ವಿಜ್ಞಾನದ ತತ್ತ್ವ ಎಂದು ಪ್ರಜ್ಞಾ ಪ್ರವಾಹದ ಅಖಿಲ ಭಾರತ ಸಂಯೋಜಕ ಜೆ.ನಂದಕುಮಾರ್ ಹೇಳಿದರು.

ಜಯನಗರದ ರಾಷ್ಟ್ರೋತ್ಥಾನ ಯೋಗ ಕೇಂದ್ರದಲ್ಲಿ ಮಂಥನ ಬೆಂಗಳೂರು ವತಿಯಿಂದ ನಡೆದ ನ್ಯಾಷನಲ್ ಸೆಲ್ಫ್‌ಹುಡ್ ಇನ್ ಸೈನ್ಸ್ ಎಂಬ ತಮ್ಮ ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ನೀಡಿದ ಭಾಷಣದಿಂದ ಪ್ರೇರಿತರಾಗಿ ಈ ಪುಸ್ತಕ ಬರೆಯಲಾಗಿದೆ. ಭಾರತದ ಸಮಸ್ಯೆಗಳಿಗೆ ಶಿಕ್ಷಣ, ರಾಜಕೀಯ ಅಥವಾ ವಿಜ್ಞಾನ ಯಾವುದೇ ಇರಲಿ, ನಮ್ಮದೇ ಆದ ಭಾರತೀಯ ದೃಷ್ಟಿಕೋನದಿಂದ ಪರಿಹಾರ ಕಂಡುಕೊಳ್ಳಬೇಕು ಎಂಬುದು ಈ ಪುಸ್ತಕದ ಮೂಲ ಆಶಯವಾಗಿದೆ ಎಂದು ತಿಳಿಸಿದರು.



ಹಿಂದೆ ಭಾರತೀಯ ಶಿಕ್ಷಣ ಮತ್ತು ವಿಜ್ಞಾನವನ್ನು ತುಳಿಯಲು ವಿದೇಶಿ ಆಕ್ರಮಣಕಾರರು ಜ್ಞಾನವನ್ನೇ ಒಂದು ಆಯುಧವನ್ನಾಗಿ ಬಳಸಿಕೊಂಡರು. ಮುಸ್ಲಿಂ ಆಕ್ರಮಣಕಾರರು ಜ್ಞಾನ ಕೇಂದ್ರಗಳನ್ನು ನಾಶಪಡಿಸಿದರೆ, ಬ್ರಿಟಿಷರು ಭಾರತದ ಸ್ಥಳೀಯ ಶಿಕ್ಷಣ ಪದ್ಧತಿ ಮತ್ತು ವೈಜ್ಞಾನಿಕ ಮನೋಭಾವವನ್ನು ನಾಶಮಾಡಿದರು. ಭಾರತದ ಬಹುತೇಕ ವೈಜ್ಞಾನಿಕ ಸಂಶೋಧನೆಗಳು ಮತ್ತು ಪ್ರಯೋಗಗಳು ಸಂಸ್ಕೃತ ಭಾಷೆಯಲ್ಲಿದ್ದವು. ಬ್ರಿಟಿಷರು ಸಂಸ್ಕೃತ ಪಾಠ ಶಾಲೆಗಳನ್ನು ಮುಚ್ಚುವ ಮೂಲಕ ಭಾರತೀಯ ವಿಜ್ಞಾನದ ಮೂಲವನ್ನೇ ಕತ್ತರಿಸಿದರು ಎಂದು ಹೇಳಿದರು.

ಜಗದೀಶ್ ಚಂದ್ರಬೋಸ್ ವಿದೇಶದಲ್ಲಿ ಓದಿ ಚಿನ್ನದ ಪದಕ ಗೆದ್ದರೂ ಅವರಿಗೆ ಗೌರವ ಸಿಗಲಿಲ್ಲ. ಹಿಮಾಲಯದ ಶಿಖರದ ನಿಖರವಾದ ಎತ್ತರವನ್ನು ತಿಳಿಸಿದ ರಾಧಾನಾಥ್, ಮಲೇರಿಯಾ ಪರಾವಲಂಬಿ ಕ್ರಿಮಿಯನ್ನು ಕಂಡುಹಿಡಿದ ಕಿಶೋರಿ ಮೋಹನ್ ತರಹದ ಅನೇಕ ಸಾಧಕರನ್ನು ಮರೆತಿದ್ದೇವೆ. ಬ್ರಿಟಿಷ್ ಆಡಳಿತವು ಭಾರತದ ವೈಜ್ಞಾನಿಕ ಪರಂಪರೆಯನ್ನು ಹೇಗೆ ನಾಶ ಮಾಡಿತು ಮತ್ತು ಭಾರತೀಯ ವಿಜ್ಞಾನಿಗಳು ಅದರ ವಿರುದ್ಧ ಹೇಗೆ ಹೋರಾಡಿದರು ಎಂದು ಪುಸ್ತಕದಲ್ಲಿ ವಿವರಿಸಲಾಗಿದೆ. 1947ರ ನಂತರ ನಾವು ನಿರೀಕ್ಷಿತ ಮಟ್ಟದಲ್ಲಿ ವೈಜ್ಞಾನಿಕವಾಗಿ ಯಾಕೆ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ ಎಂಬ ಆತ್ಮಾವಲೋಕನವೂ ಪುಸ್ತಕದಲ್ಲಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ದಕ್ಷಿಣ ಮಧ್ಯ ಕ್ಷೇತ್ರದ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ವಿಜ್ಞಾನಿಗಳ ಪಾತ್ರ

ಮೇಘನಾದ್ ಸಾಹಾ, ಪ್ರಫುಲ್ಲಚಂದ್ರ ರೇ ಅವರಂತಹ ವಿಜ್ಞಾನಿಗಳು ಕೇವಲ ಪ್ರಯೋಗಾಲಯಕ್ಕೆ ಸೀಮಿತವಾಗಲಿಲ್ಲ. ಕ್ರಾಂತಿಕಾರಿಗಳೊಂದಿಗೆ ಸೇರಿ ಸ್ವಾತಂತ್ರ್ಯ ಹೋರಾಟಕ್ಕೆ ನೆರವು ನೀಡಿದರು. ಭಾರತೀಯ ವಿಜ್ಞಾನದ ಇತಿಹಾಸವನ್ನು ಬರೆಯುವ ಮೂಲಕ ನಾವು ಯಾರಿಗೂ ಕಡಿಮೆಯಿಲ್ಲ ಎಂದು ಸಾಬೀತುಪಡಿಸಿದರು. ಭಾರತೀಯ ವಿಜ್ಞಾನವು ಕೇವಲ ಬೌದ್ಧಿಕ ಪ್ರಯೋಗವಲ್ಲ, ಅದು ನಮ್ಮ ಅಸ್ಮಿತೆಯ ಹೋರಾಟವಾಗಿದೆ. ನಮ್ಮ ದೇಶದ ವಿಜ್ಞಾನಿಗಳು ಅನುಭವಿಸಿದ ಅವಮಾನ ಮತ್ತು ಅವರ ಸಾಧನೆಗಳನ್ನು ಇಂದಿನ ಪೀಳಿಗೆಗೆ ತಿಳಿಸಬೇಕೆಂದು ನಂದಕುಮಾರ್ ಹೇಳಿದರು.

ಮಂಡ್ಯದಲ್ಲಿ ಟ್ಯಾಂಕ್ ಸ್ಫೋಟ: ಇಬ್ಬರು ಕಾರ್ಮಿಕರ ಸಾವು

ಮಂಡ್ಯ: ತಾಲೂಕಿನ ಬಸರಾಳು ಸಮೀಪದ ಕಾರೆಕಟ್ಟೆಯಿಂದ ಬೇರೆ ಕಡೆಗೆ ರಾಸಾಯನಿಕ ಕಾರ್ಖಾನೆಯೊಂದನ್ನು ಸ್ಥಳಾಂತರ ಮಾಡುವ ಸಮಯದಲ್ಲಿ ರಾಸಾಯನಿಕ ಟ್ಯಾಂಕ್‌ವೊಂದು ಸ್ಫೋಟಗೊಂಡ ಪರಿಣಾಮ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟು ಮತ್ತಿಬ್ಬರು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿರುವ ಧಾರುಣ ಘಟನೆ ನಡೆದಿದೆ.

ಬಿಹಾರ ಮೂಲದ ಖಲೂಖಾನ್ (30), ಆಕಾಶ್ (25) ಮೃತ ಕಾರ್ಮಿಕರು. ಖಾಸಿಮ್, ಸಂತೋಷ್ ಮತ್ತು ರಾಜೀವ್‌ಕುಮಾರ್ ಅವರು ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರು ಮೂಲದ ಎಲ್.ಎನ್. ಮುನಿರತ್ನಶೆಟ್ಟಿ ಎಂಬುವರು ರಾಸಾಯನಿಕ ಗೊಬ್ಬರಕ್ಕೆ ಮಿಶ್ರಣ ಮಾಡುವ ಸಲ್ಫರನ್ನು ಉತ್ಪಾದನೆ ಮಾಡುವ ಸಲುವಾಗಿ ಕಾರೇಕಟ್ಟೆ ಬಳಿ ನಾಲ್ಕು ವರ್ಷದ ಹಿಂದೆ ರಾಸಾಯನಿಕ ಘಟಕವನ್ನು ಸ್ಥಾಪಿಸಿದ್ದರು. ಕಾರ್ಖಾನೆಯನ್ನು ಪ್ರಾಯೋಗಿಕವಾಗಿ ಆರಂಭ ಮಾಡುವ ಸಮಯದಲ್ಲೇ ರಾಸಾಯನಿಕ ಸೋರಿಕೆಯಾಗಿ ನೂರಾರು ಎಕರೆ ಬೆಳೆ ಹಾನಿಯಾಗಿತ್ತು. ಎರಡು ನಾಯಿಗಳು ಮೃತಪಟ್ಟಿದ್ದವು. ಆ ವೇಳೆ ಅದೃಷ್ಟವಶಾತ್ ಜನರಿಗೆ ಯಾವುದೇ ಪ್ರಾಣ ಹಾನಿಯಾಗಿರಲ್ಲ. ಬಳಿಕ ಕಾರ್ಖಾನೆ ಆರಂಭಕ್ಕೆ ಸ್ಥಳೀಯರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಆ ಸಮಯದಲ್ಲಿ ಹಾನಿಯಾದ ಬೆಳೆಗೆ ಮಂಡ್ಯ ಜಿಲ್ಲಾಡಳಿತ ಕಾರ್ಖಾನೆ ಮಾಲೀಕರಿಂದ ಪರಿಹಾರ ಕೊಡಿಸಿತ್ತು. ಅಲ್ಲಿಂದ ಇಲ್ಲಿಯವರೆಗೂ ಕಾರ್ಖಾನೆ ಆರಂಭವೇ ಆಗಿರಲಿಲ್ಲ. ಸ್ಥಳೀಯರ ವಿರೋಧದ ಹಿನ್ನೆಲೆಯಲ್ಲಿ ಕಾರ್ಖಾನೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಮುಂದಾಗಿದ್ದರು. ಬಿಹಾರ ಮೂಲದ ಕಾರ್ಮಿಕರಿಂದ ಕಾರ್ಖಾನೆ ಸ್ಥಳಾಂತರ ಕಾರ್ಯ ಕಳೆದ ಒಂದ ತಿಂಗಳಿಂದಲೂ ನಡೆಯುತ್ತಿತ್ತು.

ಸಂಪಾದಕೀಯ

ಸಾವಿರದ ದಿನಗಳೇ ಸಂಭ್ರಮಕ್ಕೆ ಕಾರಣ!?

ಸಂಭ್ರಮಿಸಲು ನೂರಾರು ಕಾರಣಗಳಿರುತ್ತವೆ! ಅಂಕೆ-ಸಂಖ್ಯೆಯ ಆಟಗಳು ದಿನವೂ ಸಂಭ್ರಮಿಸಲು ಕಾರಣಗಳನ್ನು ನೀಡುತ್ತಿರುತ್ತವೆ. ಕ್ರಿಕೆಟಿನಲ್ಲಿ ಶತಕ, ಸಾವಿರ ರನ್‌ಗಳು, ನೂರು ವಿಕೇಟ್‌ಗಳು ಎಂದು ನಡೆಯುವ ದಾಖಲೆಗಳ ಸಂಭ್ರಮ ಸಮಾಜಕ್ಕೇನೋ ಚೇತೋಹಾರಿ ಅನುಭವಗಳನ್ನು ನೀಡಬಲ್ಲದು. ಅಂದರೆ ಅಂಕೆಸಂಖ್ಯೆಗಳ ಆಟ ಇಂದು ಕೇವಲ ಕ್ರೀಡೆಗೆ ಸಂಬಂಧಿಸಿದ ಸಂಗತಿಯಾಗಿ ಉಳಿದಿಲ್ಲ. ಆಯಸ್ಸು ನೂರು ಮುಟ್ಟಿದಾಗಲೂ ವ್ಯಕ್ತಿಗೆ-ಮನೆಗೆ ಸಂಭ್ರಮ! ಎಲ್ಲರಿಗೂ ಹೇಗಾದರೂ ನೂರು ಮುಟ್ಟಬೇಕೆಂಬ ತುಡಿತ. ಏನೇ ಆದರೂ ಈ ಸಡಗರ-ಸಂಭ್ರಮಗಳು ಆಯಸ್ಸನ್ನಂತೂ ಹೆಚ್ಚಿಸಲು ಸಹಾಯ ಮಾಡುವುದಿಲ್ಲ. ಸಂಭ್ರಮಿಸಲು ಇವು ಕೇವಲ ಒಂದು ಕಾರಣಗಳು ಮಾತ್ರ. ಆ ಸಂಭ್ರಮ ಕಣ್ಣುಕುಕ್ಕಬೇಕೆಂಬ ಆಸೆಯೊಂದೇ ಸಂಭ್ರಮಿಸುವವನಿಗೆ ದಕ್ಕುವ ಲಾಭ.


ಈಗ ರಾಜ್ಯ ಸರ್ಕಾರವೂ ಟಿಸಾವಿರದ ದಿನಬಿಗಳನ್ನು ಸಂಭ್ರಮಿಸುತ್ತಿದೆ. ದೇಶದ ರಾಜಕೀಯ ರಂಗದಲ್ಲಿ ಇವು ಈಗ ಒಂದು ಶೋಕಿಯ ಆಚರಣೆಯಾಗಿ ಆಚರಿಸಲ್ಪಡುತ್ತಿರುವುದು ಕಳೆದ ಕೆಲವು ದಶಕಗಳಿಂದ ನಡೆದುಬಂದಿರುವ ಆಚರಣೆ. ಒಂದು ಸರ್ಕಾರ ನೂರು ದಿನಗಳನ್ನು ತಲುಪಿತು, ಸಾವಿರದ ದಿನಗಳನ್ನು ದಾಟಿತು ಎಂಬುದರಲ್ಲಿ ಆ ಸರ್ಕಾರದ ಹೆಗ್ಗಳಿಕೆಯೇನಿರುವುದಿಲ್ಲ. ಅಷ್ಟಕ್ಕೂ ಸರ್ಕಾರಗಳು ಜನರಿಂದ ಆರಿಸಲ್ಪಡುವುದು ಐದು ವರ್ಷ ಜನಸೇವೆಯಲ್ಲಿರುತ್ತೇವೆ ಎಂಬ ವಾಗ್ದಾನವನ್ನು ನೀಡುವ ಮೂಲಕ. ಆದರೆ ಸರ್ಕಾರಗಳು ತಾವು ನೂರು, ಸಾವಿರ ದಿನಗಳನ್ನು ಮುಟ್ಟಿದ್ದೇ ಸಂಭ್ರಮವೆಂಬಂತೆ ಆಚರಿಸಲ್ಪಡುವುದು ಪ್ರಜಾಪ್ರಭುತ್ವದ ವ್ಯಂಗ್ಯ ಎಂದರೆ ತಪ್ಪಿಲ್ಲ.

ಎಲ್ಲಾ ಸರ್ಕಾರಗಳಿಗೂ ತಮ್ಮ ಸರ್ಕಾರ ನೂರು ದಿನಗಳಲ್ಲಿ, ಸಾವಿರ ದಿನಗಳಲ್ಲಿ ಇಂತಿಂಥ ಸಾಧನೆಗಳನ್ನು ಮಾಡಿದೆ ಎನ್ನುವುದನ್ನು ಜನರಿಗೆ ತಿಳಿಸುವ ಆತುರ. ಹಾಗೆ ನೋಡಬೇಕೆಂದರೆ ಜನರಿಗೇನೂ ಆರಿಸಿ ಬಂದ ನೂರು ಅಥವಾ ಸಾವಿರ ದಿನಗಳಲ್ಲಿ ಪವಾಡ ನಡೆಯಬೇಕು ಎಂಬ ನಿರೀಕ್ಷೆಗಳಿರುವುದಿಲ್ಲ. ಆದರೆ ಸರ್ಕಾರ ಯಾವಾಗಲೂ ಸಂದರ್ಭವೊಂದನ್ನು ಕಾಯುತ್ತಿರುತ್ತದೆ. ಈ ಸಂದರ್ಭಗಳು ಸಮಾಜಕ್ಕೆ ಬೇಕಾಗಿರಲಿ, ಬೇಡವಿರಲಿ ರಾಜಾಕಾರಣಕ್ಕಂತೂ ಬೇಕಿರುತ್ತವೆ. ಸದಾ ಚಾಲ್ತಿಯಲ್ಲಿರಲು, ಸದಾ ಜನಸೇವೆಯಲ್ಲಿ ನಿರತರಾಗಿದ್ದೇವೆ ಎಂದು ಪ್ರಚಾರದಲ್ಲಿರಲು ಇಂಥ ದಿನಗಳು ಸರ್ಕಾರಕ್ಕೆ ಬೇಕಿವೆ. ಅದರಲ್ಲೂ ಒಂದು ಸರ್ಕಾರದ ಮೇಲೆ ನಿರಂತರ ಆರೋಪ ಮತ್ತು ಒಳಜಗಳಗಳು ತುಂಬಿಕೊಂಡಿದ್ದರೆ, ತಮ್ಮ ವೈಫಲ್ಯಗಳನ್ನು ಮುಚ್ಚಿಡಬೇಕೆಂಬ ಸಂದರ್ಭಗಳು ಸೃಷ್ಟಿಯಾದರೆ ಇಂಥ ಆಚರಣೆಗಳು ರಾಜಕಾರಣಕ್ಕೆ ಮತ್ತು ಸರ್ಕಾರಕ್ಕೆ ಅಲ್ಪಾವಧಿಯ ನಿರಾಳತೆಯನ್ನು ಒದಗಿಸುತ್ತವೆ. ತೋರಿಕೆಯ ಒಗ್ಗಟ್ಟನ್ನು ಪ್ರದರ್ಶಿಸಲು, ತಮ್ಮ ನಡುವೆ ಭಿನ್ನಾಭಿಪ್ರಾಯಗಳಿಲ್ಲ ಎಂದು ತೋರಿಸಲು, ತಮ್ಮ ಸರ್ಕಾರ ಸದಾ ಅಭಿವೃದ್ಧಿಯನ್ನು ಮಾತ್ರ ಚಿಂತಿಸಿದೆ ಎಂಬುದನ್ನು ಬಿಂಬಿಸಲು ಮತ್ತು ನಾನಾ ಪಂಗಡಗಳಾಗಿ ಹಂಚಿಹೋಗಿರುವ ಪಕ್ಷದಲ್ಲಿ ಎಲ್ಲವೂ ಸರಿಯಿದೆ ಎನ್ನುವುದನ್ನು ತೋರಿಸಲು ಇಂತಹ ಕಾರ್ಯಕ್ರಮಗಳು ಸಹಾಯವಾಗಬಹುದೇ ಹೊರತು ಇದೇನು ಸರ್ಕಾರ ಮತ್ತು ರಾಜ್ಯದ ಮೈಲುಗಲ್ಲು ಆಗುವ ಸಂದರ್ಭವಲ್ಲ. ಅದರಲ್ಲೂ ತಮ್ಮ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರವನ್ನು ಆರೋಪಿಸುವ ಉತ್ಸವ ಯಾರ ಬದುಕನ್ನು ಉದ್ಧಾರ ಮಾಡುತ್ತವೆ? ಒಟ್ಟಿನಲ್ಲಿ ಸಂವಿಧಾನದಲ್ಲಾಗಲಿ, ಪಕ್ಷಗಳ ಪ್ರಣಾಳಿಕೆಗಳಲ್ಲಾಗಲೀ ಶತಕ ಸಂಭ್ರಮಕ್ಕೆ ಬೆಲೆ ಇಲ್ಲ ಮತ್ತು ನೆಲೆಯಿಲ್ಲ ಎಂಬುದು ಸತ್ಯ.

ಸಮಾಜೋತ್ಸವ: ಆಗಲಿ ನಿತ್ಯೋತ್ಸವ

ನೇರ ನೋಟ

• ದು.ಗು. ಲಕ್ಷ್ಮಣ
dugulakshman@yahoo.com



'Hindu- a dying race' (ಹಿಂದು – ನಶಿಸುತ್ತಿರುವ ಒಂದು ಜನಾಂಗ). ಇಂತಹುದೊಂದು ಪುಟ್ಟ ಪುಸ್ತಕವನ್ನು ಬರೆದಿರುವವರು ಮಿಲಿಟರಿಯಲ್ಲಿ ವೈದ್ಯಾಧಿಕಾರಿಯಾಗಿದ್ದ ಲೆಫ್ಟಿನೆಂಟ್ ಕರ್ನಲ್ ಉಪೇಂದ್ರೋನಾಥ್ ಮುಖರ್ಜಿ (ಯು.ಎನ್.ಮುಖರ್ಜಿ). ಅವರು ಆ ಪುಸ್ತಕವನ್ನು ಬರೆದಿದ್ದು 1914ರಲ್ಲಿ, ಈಗ್ಗೆ ಬರೋಬ್ಬರಿ 112 ವರ್ಷ ಗಳ ಹಿಂದೆ. ಅಷ್ಟು ವರ್ಷಕ್ಕೂ ಹಿಂದೆಯೇ ಅವರಿಗೆ ಹಿಂದು ಸಮುದಾಯದ ಹಣೆಬರಹ ಗೊತ್ತಾಗಿತ್ತು. ಅಖಂಡ ಭಾರತ ಹೋಳಾಗಿ ಪಾಕಿಸ್ತಾನವೆಂಬ ಪ್ರತ್ಯೇಕ ದೇಶ ನಿರ್ಮಾಣವಾಗಬಹುದೆಂಬ ಅಂದಾಜೂ ಅವರಿಗಿತ್ತು. ಅವರ ಈ ನಿಖರ ಭವಿಷ್ಯವಾಣಿಗೆ, ಆಧಾರವಾಗಿದ್ದದ್ದು 1911ರ ಜನಗಣತಿ ದಾಖಲೆ.

ಆ ಸಮಯದಲ್ಲಿ ಆರೆಸ್ಸೆಸ್ ಇರಲಿಲ್ಲ. ಸಾವರ್ಕರ್ ಇನ್ನೂ ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿದ್ದರು. ಹಿಂದು ಮಹಾಸಭಾ ಅಸ್ತಿತ್ವಕ್ಕೇ ಬಂದಿರಲಿಲ್ಲ. ಹಾಗಿದ್ದರೂ ಮುಖರ್ಜಿಯವರಿಗೆ, ಕಳೆದ ನೂರು ವರ್ಷಗಳಲ್ಲಿ ನಡೆದ ಹಿಂದು ನರಮೇಧ ಮತ್ತು ದೇಶದ ಮೂರನೇ ಒಂದು ಭಾಗ ಪ್ರದೇಶದಿಂದ ಹಿಂದುಗಳನ್ನು ನಿರ್ವಸಿತರನ್ನಾಗಿಸಿದ್ದು, ಇದನ್ನೆಲ್ಲ ಕಣ್ಣಾರೆ ಕಂಡರೂ ಸೆಕ್ಯುಲರ್ ಹಿಂದುಗಳೆಂಬ ಹಣೆಪಟ್ಟಿ ತೊಟ್ಟ ರಾಜಕೀಯ ಮುಖಂಡರು ಮೌನಕ್ಕೆ ಮೊರೆಹೋಗಿದ್ದು – ಇವೆಲ್ಲದರ ಅರಿವು ಚೆನ್ನಾಗಿಯೇ ಇತ್ತು.

ಈ ಪುಸ್ತಕ ಪ್ರಕಟವಾಗುತ್ತಿದ್ದಂತೆಯೇ ಕೆಲವು ಪ್ರಾಮಾಣಿಕ, ದೇಶಪ್ರೇಮಿ ಹಿಂದುಗಳು ನಿದ್ದೆ ಬಿಟ್ಟೆದ್ದರು. ಹೊದ್ದಿದ್ದ ಹಚ್ಚಡವನ್ನು ಕಿತ್ತೆಸೆದರು. ದೇಶಪ್ರೇಮಿ ಪಂಡಿತ್ ಮದನಮೋಹನ ಮಾಲವೀಯರ ನಾಯಕತ್ವದಲ್ಲಿ ಅದೇ ವರ್ಷ (1915) ಹಿಂದು ಮಹಾಸಭಾ ಸಂಘಟನೆ ಪ್ರಾರಂಭವಾಯಿತು. ಅನಂತರ ಆರ್ಯ ಸಮಾಜವೂ ಹಿಂದು ಸಮುದಾಯದ ಜನಸಂಖ್ಯೆ ಕುಸಿತವಾಗದಂತೆ ಇತರೆ ಮತಗಳಿಗೆ ಮತಾಂತರಗೊಂಡವರನ್ನು ಮರಳಿ ಹಿಂದು ಧರ್ಮಕ್ಕೆ ಕರೆ ತರುವ 'ಶುದ್ಧೀಕರಣ ಚಳವಳಿ'ಗೆ ಚಾಲನೆ ಕೊಟ್ಟಿತು. ಆರ್ಯ ಸಮಾಜದ ಈ ಮಹತ್ವದ ಕಾರ್ಯಕ್ಕೆ ಮುಸ್ಲಿಂ ಪಾತಕಿಯೊಬ್ಬ ಸ್ವಾಮಿ ಶ್ರದ್ಧಾನಂದರನ್ನು ಹತ್ಯೆಗೈಯುವ ಮೂಲಕ ತಾತ್ಕಾಲಿಕ ತಡೆಗೋಡೆ ನಿರ್ಮಿಸಿಬಿಟ್ಟ.

ಅನಂತರ 1925ರ ವಿಜಯದಶಮಿಯಂದು ಆರಂಭಗೊಂಡಿದ್ದೇ 'ಆರೆಸ್ಸೆಸ್' ಎಂದು ಈಗ ಜನಪ್ರಿಯವಾಗಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇಡೀ ಹಿಂದು ಸಮಾಜವನ್ನು ಸಂಘಟಿಸಿ, ಅದನ್ನು ಸಶಕ್ತಗೊಳಿಸಲು ಡಾ. ಹೆಡಗೇವಾರ್ ತಮ್ಮ ಬದುಕನ್ನೇ ಮುಡುಪಾಗಿಟ್ಟರು. ಅದೆಲ್ಲ ಈಗ ಇತಿಹಾಸ. ಹಿಂದುತ್ವ, ಹಿಂದು ಅಸ್ಮಿತೆಯನ್ನು ಜನರೆದೆಯಲ್ಲಿ, ಭಾವನೆಗಳಲ್ಲಿ ಪ್ರಜ್ವಲಿಸಲು ಪ್ರಯತ್ನಿಸಿದ ಲಾಲಾ ಲಜಪತರಾಯ್, ಬಿ.ಎಸ್. ಮೂಂಜೆ, ಅನಂತರ ವಿನಾಯಕ ದಾಮೋದರ ಸಾವರ್ಕರ್ ಮೊದಲಾದ ಪ್ರಾತಃ ಸ್ಮರಣೀಯರ ಕೊಡುಗೆ ಸ್ಮರಣಾರ್ಹ. ಆದರೆ ಇವರೆಲ್ಲರ ಅಹರ್ನಿಶಿ ಪ್ರಯತ್ನ, ಹೋರಾಟದ ಹೊರತಾಗಿಯೂ ಮುಖರ್ಜಿಯವರ ''ಹಿಂದು –ನಶಿಸುತ್ತಿರುವ ಒಂದು ಜನಾಂಗ'' ಎಂಬ ಮಾತನ್ನು ಹುಸಿಗೊಳಿಸಲಾಗಲಿಲ್ಲ.

ಗಾಂಧೀಜಿಯವರ ಅಹಿಂಸೆ, ಜೊತೆಗೆ ಮುಸ್ಲಿಂ ಮೂಲಭೂತವಾದದ ಭೂತದ ಆರ್ಭಟ ಮಾನವ ಇತಿಹಾಸದಲ್ಲೇ ಕಂಡು ಕೇಳರಿಯದಷ್ಟು ಹಿಂದುಗಳ ಸಾಮೂಹಿಕ ಹತ್ಯೆಗೆ ಕಾರಣವಾಯಿತು. ಕಾಬೂಲ್‌ನಿಂದ ಢಾಕಾದವರೆಗೆ ಶರಿಯಾ ಕಾನೂನು ಹಿಂದುಗಳ ಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸಿತು. ಈಗ ಹಿಂದುಗಳದ್ದೇ, ಹಿಂದುಗಳಿಗಾಗಿಯೇ ಇರುವ ಈ ಭಾರತವೆಂಬ ಭಾರತದಲ್ಲಿ ಹೊಸ ಸಂವಿಧಾನವು ಹಿಂದುಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಹಿಂದುಗಳದ್ದೇ ಆದ ಈ ದೇಶದಲ್ಲಿ ಮುಸ್ಲಿಮರಿಗೆ ಶರಿಯಾ ಕಾನೂನು ಪಾಲನೆಗೆ ಅನುಮತಿ, ಧಾರ್ಮಿಕ ಮತಾಂತರಕ್ಕೆ ಅನುಮತಿ, ವೈಯಕ್ತಿಕ ಪ್ರತ್ಯೇಕ ಕಾನೂನುಗಳಿಗೆ ಅವಕಾಶ, ಹಿಂದು ಯಾತ್ರಾ ಸ್ಥಳಗಳ ಮೇಲೆ ನಿಯಂತ್ರಣಕ್ಕೂ ಮುಸ್ಲಿಮರಿಗೆ ಅವಕಾಶ – ಇವೆಲ್ಲ ಈಗಲೂ ಬದಲಾಗಿಲ್ಲ. ಹಿಂದು ಕುಟುಂಬಗಳು ಕೇವಲ ಒಂದು ಮಗುವಿಗೆ ಸೀಮಿತಗೊಳಿಸಿ ತಾವಾಗಿಯೇ ಸಂತಾನ ನಿಯಂತ್ರಣಕ್ಕೆ ಜೋತು ಬಿದ್ದಿದ್ದಾರೆ. 'ಮಕ್ಕಳಿರಲವ್ವ ಮನೆ ತುಂಬ' ಎಂಬ ಹಳೆಯ ಗಾದೆ ಮಾತು ಹೇಳಿದರೆ 'ಇವನಿಗೆಲ್ಲೋ ಭ್ರಾಂತು' ಎಂದು ಮೂಗು ಮುರಿಯುವವರೇ ಹೆಚ್ಚು. ಹಿಂದು ಸಮಾಜದ ಬಲವರ್ಧನೆ, ಸಂಖ್ಯಾವರ್ಧನೆ ದೃಷ್ಟಿಯಿಂದ ಆರೆಸ್ಸೆಸ್ ಮುಖ್ಯಸ್ಥ ಡಾ. ಮೋಹನ್ ಭಾಗವತರು 'ಪ್ರತಿಯೊಂದು ಹಿಂದು ಕುಟುಂಬವೂ ಮೂರು ಮಕ್ಕಳಿರುವಂತೆ ನೋಡಿಕೊಳ್ಳಬೇಕು' ಎಂಬ ಕಳಕಳಿಯ ಕರೆ ನೀಡಿದರೆ, 'ಹಾಗಿದ್ದರೆ ಮೋಹನ್ ಭಾಗವತರೇಕೆ ಮದುವೆ ಮಾಡಿಕೊಂಡಿಲ್ಲ?' ಎಂದು ಉಡಾಫೆ ಪ್ರಶ್ನೆ ಕೇಳುವ ಹಿಂದುಗಳಿಗೇನೂ ಕೊರತೆಯಿಲ್ಲ. ಹಿಂದು ಸಮಾಜದ ಬಲವರ್ಧನೆ ಬಗ್ಗೆ ಅಂಥವರಿಗೆ ಯಾವ ಕಾಳಜಿಯೂ ಇರುವುದಿಲ್ಲವೆನ್ನುವುದು ಸ್ಪಷ್ಟ. 1991ರಲ್ಲಿ ಶೇ. 9.8ರಷ್ಟಿದ್ದ ಭಾರತದ ಮುಸ್ಲಿಂ ಜನಸಂಖ್ಯೆ 2011ರಲ್ಲಿ ಶೇ. 14.2ಕ್ಕೆ ಏರಿಕೆ. ಹಿಂದು ಜನಸಂಖ್ಯೆ ಇದೇ ಅವಧಿಯಲ್ಲಿ ಶೇ. 84.1ರಿಂದ ಶೇ. 79.8ಕ್ಕೆ ಇಳಿಕೆ. ಈಗ ಜನಗಣತಿಯಾದರೆ, ಮುಸ್ಲಿಂ ಜನಸಂಖ್ಯೆಯ ಪ್ರಮಾಣ 20 ಕೋಟಿ ದಾಟಿದರೆ ಅಚ್ಚರಿಯೇನೂ ಇಲ್ಲ.

ಇಡೀ ದೇಶದ್ದು ಹಾಗಿರಲಿ, ಕರ್ನಾಟಕ ರಾಜ್ಯದ ಅಂಕಿಸಂಖ್ಯೆಯನ್ನೇ ಪರಿಗಣಿಸಿ. ಈಚಿನ ಅಧ್ಯಯನ ವರದಿಯೊಂದರ ಪ್ರಕಾರ, ಮುಸ್ಲಿಂ ಜನಸಂಖ್ಯೆಯ ಪ್ರಮಾಣ – ಬೀದರ್ ಶೇ. 35, ಗುಲಬರ್ಗಾ ಶೇ. 22.5, ರಾಯಚೂರು ಶೇ. 30, ಕೊಪ್ಪಳ ಶೇ. 32, ಬಳ್ಳಾರಿ ಶೇ. 30, ಬಿಜಾಪುರ ಶೇ. 36, ಧಾರವಾಡ ಶೇ. 22, ದ.ಕನ್ನಡ ಶೇ. 22, ಕೋಲಾರನಗರ ಶೇ. 46.... ಹೀಗೆ ಎಲ್ಲ ಜಿಲ್ಲೆಗಳಲ್ಲೂ ಮುಸ್ಲಿಂ ಜನಸಂಖ್ಯೆ ವ್ಯವಸ್ಥಿತವಾಗಿ ಏರಿಕೆಯಾಗುತ್ತಲೇ ಇದೆ. ಈ ಪರಿಯಲ್ಲಿ ಬೆಳೆಯುತ್ತಿರುವ ಮುಸ್ಲಿಂ ಮತದಾರರೇನಾದರೂ ಒಂದಾಗಿ ಒಂದೇ ಪಕ್ಷಕ್ಕೆ (ಬಿಜೆಪಿ–ಜೆಡಿಎಸ್‌ಗೆ ಖಂಡಿತ ಅವರು ತಮ್ಮ ಮುದ್ರೆ ಒತ್ತುವುದಿಲ್ಲ) ಮತ ಚಲಾಯಿಸಿದಲ್ಲಿ ರಾಜ್ಯದಲ್ಲಿ ಮುಸ್ಲಿಂ ಬಾಹುಳ್ಯದ ಸರ್ಕಾರ ಅಧಿಕಾರಕ್ಕೇರಿ ಹಿಂದುಗಳ ಉಸಿರಾಟ ಸ್ತಬ್ಧಗೊಂಡರೆ ಅದೇನೂ ಉತ್ಪ್ರೇಕ್ಷೆಯಲ್ಲ.

ಇಷ್ಟೆಲ್ಲ ಸಂಭಾವ್ಯ ಅಪಾಯಗಳು ಕಾಲಕೆಳಗೇ ಇದ್ದರೂ ನಮ್ಮ ಹಿಂದು ಕುಟುಂಬದ ಪೋಷಕರು ನಿಶ್ಚಿಂತರಾಗಿ ತಮ್ಮ ಮಕ್ಕಳನ್ನು ಅಮೆರಿಕಾ, ಆಸ್ಟ್ರೇಲಿಯಾ, ಕೆನಡಾ, ಇಂಗ್ಲೆಂಡ್, ಜರ್ಮನಿ, ಅರಬ್ ರಾಷ್ಟ್ರಗಳಿಗೆ ಉದ್ಯೋಗಕ್ಕಾಗಿ ಮುಗಿಬಿದ್ದು ಅಟ್ಟುತ್ತಿದ್ದಾರೆ. ಏಕೆಂದರೆ ಅಲ್ಲೆಲ್ಲ ಭಾರತಕ್ಕಿಂತ ದುಪ್ಪಟ್ಟು, ಮೂರು ಪಟ್ಟು ವೇತನ, ಐಷಾರಾಮಿ ಜೀವನ. ಅಲ್ಲಿಗೆ ಹಾರಿದ ಹಲವರು ಅಲ್ಲೇ ಮದುವೆಯಾಗಿ, ಆಯಾ ದೇಶದ ನಾಗರಿಕತ್ವ ಪಡೆಯುವ ಸಂಖ್ಯೆಯೂ ಹೆಚ್ಚುತ್ತಿದೆ. ಇನ್ನು ವಿದೇಶಗಳಿಗೆ ಹೋಗಲಾಗದ ಹಲವು ಹೆಣ್ಣು ಮಕ್ಕಳು 'ಲವ್ ಜಿಹಾದ್'ಗೆ ಬಲಿಯಾಗಿ ತಮ್ಮ ಬದುಕನ್ನು ನರಕಮಯ ಗೊಳಿಸಿಕೊಳ್ಳುತ್ತಿರುವುದಕ್ಕೆ ನಿದರ್ಶನಗಳು ನೂರಾರು. ನೂಪುರ್ ಶರ್ಮಾ ಎಂಬ ಗಟ್ಟಿಗಿತ್ತಿ ಮಹಿಳೆ ಇಸ್ಲಾಂ ಅನ್ನು ಟೀಕಿಸಿದ್ದಕ್ಕೆ ಆಕೆಯ ವಿರುದ್ಧ ಫತ್ವಾ, ಹತ್ಯೆಗೆ ಯತ್ನ, ಅತ್ಯಾಚಾರ ಬೆದರಿಕೆ ಒಂದೇ? ಎರಡೇ? ಕಳೆದೆರಡು ವರ್ಷಗಳಿಂದ ಆಕೆಯ ವೈಯಕ್ತಿಕ ಬದುಕನ್ನೇ ಬರ್ಬಾದ್ ಮಾಡಲಾಗಿದೆ. ಮನೆ ಬಿಟ್ಟು ಹೊರಗೆಲ್ಲೂ ಆಕೆ ಹೋಗುವಂತಿಲ್ಲ. (ಬಿಜೆಪಿ ಕೂಡ ಆಕೆಯ ರಕ್ಷಣೆಗೆ ಮುಂದಾಗಲಿಲ್ಲ!) ಹಿಂದುಗಳು ಬಹುಸಂಖ್ಯಾತ ಸಮುದಾಯವೆನಿಸಿಕೊಂಡಿದ್ದರೂ ಹಿಂದು ಮಹಿಳೆಯರಿಗೆ ಅಪಮಾನ, ಅತ್ಯಾಚಾರದ ಬೆದರಿಕೆಗಳು ಬರುತ್ತಲೇ ಇವೆ. ಭಾರತದ ಬಹುತೇಕ ಮುಸ್ಲಿಂ ಬಾಹುಳ್ಯ ಪ್ರದೇಶಗಳಲ್ಲಿ ಹಿಂದು ಮಹಿಳೆಯರು ಸಂಜೆಯಾದೊಡನೆ ಒಬ್ಬಂಟಿಯಾಗಿ ಓಡಾಡಲಾರದ ಭಯಾನಕ ಪರಿಸ್ಥಿತಿ.

ದೇಶದ ಪ್ರಮುಖ ನಗರಗಳಿಂದ ಹಿಡಿದು ತಾಲೂಕು ಮಟ್ಟದ ನಗರಗಳವರೆಗೆ ವ್ಯಾಪಾರ-ವ್ಯವಹಾರಗಳಲ್ಲಿ 'ಬಾಂಧವರದ್ದೇ' ಅಧಿಪತ್ಯ. ಅದು ಗುಜರಾತಿನ ಜಾಮ್ ನಗರ ಇರಲಿ, ಲಕ್ನೋದ ಹಜರತ್‌ಗಂಜ್ ಇರಲಿ, ಮುಂಬಯಿಯ ಹಾಜಿ ಅಲಿ, ಗೋರಖ್‌ಪುರದ ಹಿಂದಿ ಬಜಾರ್, ದೆಹಲಿಯ ಕರೋಲ್‌ಭಾಗ್, ಬೆಂಗಳೂರಿನ ಕೆ.ಆರ್.ಮಾರ್ಕೆಟ್, ಕಲಾಸಿಪಾಳ್ಯ, ಶಿವಾಜಿ ನಗರ, ಕೊನೆಗೆ ಅಪ್ಪಟ್ಟ ಮಲೆನಾಡಿನ ಸಾಂಸ್ಕೃತಿಕ ಕೇಂದ್ರಗಳೆನಿಸಿರುವ ತೀರ್ಥಹಳ್ಳಿ, ಸಾಗರ... ಇಲ್ಲೆಲ್ಲ ವ್ಯಾಪಾರ ವ್ಯವಹಾರಗಳ ಮೇಲೆ ಬಿಗಿ ನಿಯಂತ್ರಣ ಅವರದ್ದೇ.

ಹೀಗೇಕಾಯ್ತು? ಕೆಲ ಹಿಂದುಗಳು ತಮ್ಮ ಮನೆತನದ ಕುಲಕಸಬುಗಳಾದ ದರ್ಜಿ, ಬಟ್ಟೆ ವ್ಯಾಪಾರ, ನೇಕಾರಿಕೆ, ಕಾಳುಕಡ್ಡಿ ವ್ಯಾಪಾರ, ಕೃಷಿ, ಹೈನುಗಾರಿಕೆ ಮೊದಲಾದ ವೃತ್ತಿಗಳಿಗೆ ಎಳ್ಳುನೀರು ಬಿಟ್ಟು, ತಮ್ಮ ಮಕ್ಕಳು ಯಾವುದೋ ದೇಶದಲ್ಲಿ ಯಾವುದೋ ಕಂಪನಿಯ ಕೂಲಿಯಾಳಾಗಿ ಹಣ ಗಳಿಸುವುದೇ ಶ್ರೇಷ್ಠ ಎಂದು ಭ್ರಮಿಸಿದರು. ದೇಶಕ್ಕೆ ನನ್ನ ಕುಟುಂಬದ ಕೊಡುಗೆಯೇನು ಎಂಬ ಬಗ್ಗೆ ಬಹಳಷ್ಟು ಹಿಂದುಗಳು ತಲೆಕೆಡಿಸಿಕೊಳ್ಳಲೇ ಇಲ್ಲ. ಈಗಲೂ ಅಷ್ಟೆ. ತಮ್ಮ ಮಕ್ಕಳು ವಿದೇಶಿ ಕಂಪನಿಗಳ ಗುಲಾಮರಾಗಿದ್ದರೂ ಪರವಾಗಿಲ್ಲ. ಹಣವಂತರಾದರೆ ಸಾಕು. ವಿಲಾಸಿ ಕಾರುಗಳಲ್ಲಿ ಓಡಾಡಿದರೆ ಅದಕ್ಕಿಂತ ಸೌಭಾಗ್ಯದ ಸಂಗತಿಯಿಲ್ಲ ಎಂದು ಚಿಂತಿಸಿದವರೇ ಜಾಸ್ತಿ. ಕೆಲವರಂತೂ ತಮ್ಮ ಜಾತಿಯೇ ಮೇಲು, ಉಳಿದವರೆಲ್ಲ ಕೀಳು ಎಂಬ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದಾರೆ.

ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಇದೀಗ ದೇಶದಾದ್ಯಂತ, ರಾಜ್ಯದಲ್ಲೂ ಹಿಂದು ಸಮಾಜೋತ್ಸವಗಳು ಸಡಗರ, ಸಂಭ್ರಮದಿಂದ ನಡೆಯುತ್ತಿವೆ. ಹಿಂದು ಸಮಾಜದಲ್ಲಿ ಸಾಮರಸ್ಯ ಮೂಡಿಸುವ, ಹಿಂದುಗಳಲ್ಲಿ ಸ್ವಾಭಿಮಾನ, ದೇಶಪ್ರೇಮವನ್ನು ಬಡಿದೆಬ್ಬಿಸುವ ಸ್ವಾಗತಾರ್ಹ ಪ್ರಯತ್ನ ನಡೆದಿದೆ. ಕೇಸರಿ ಬಾವುಟವೆಂದರೇನೇ ಹೆದರುತ್ತಿದ್ದವರು ಇಂದು ಅದೇ ಬಾವುಟ ಹಿಡಿದು,ಕೇಸರಿಶಾಲು ಹೊದ್ದು ಮೆರವಣಿಗೆಯಲ್ಲಿಪಾಲ್ಗೊಳ್ಳುತ್ತಿದ್ದಾರೆ. ಮಹಿಳೆಯರಂತೂ ದುರ್ಗಾಮಾತೆಯಂತೆ ಹೊರಹೊಮ್ಮಿದ್ದಾರೆ. ಬಿಜೆಪಿಯೇತರ ರಾಜಕೀಯ ಪಕ್ಷಗಳ ಮುಖಂಡರೂ ಧೈರ್ಯ ವಹಿಸಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ರಾಜ್ಯದ ಮೂರು ಸಾವಿರಕ್ಕೂ ಹೆಚ್ಚು ಕಡೆ, ದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪ್ರದೇಶಗಳಲ್ಲಿ ಹಿಂದು ಸಮಾಜೋತ್ಸವ ನಡೆಯಲಿದೆ ಎಂದು ಆರೆಸ್ಸೆಸ್ ಅಂಬೋಣ.

ಆದರೆ ಇಷ್ಟಾದರೆ ಸಾಕೆ? ಒಂದು ದಿನ ಕೇಸರಿ ಬಾವುಟ ಹಿಡಿದು, ಕೇಸರಿ ಶಾಲು ಹೆಗಲಿಗೇರಿಸಿ 'ಭಾರತ್ ಮಾತಾಕೀ ಜೈ', 'ವಂದೇ ಮಾತರಂ' ಘೋಷಣೆಗಳನ್ನು ಮುಗಿಲೆತ್ತರ ಮುಟ್ಟಿಸಿದರೆ ಸಾಕೆ? ಹಿಂದು ಸಮಾಜದ ಸ್ಥಿತಿ ಈಗ ಹೇಗಿದೆಯೆಂದರೆ ಚದುರಂಗದಾಟದಲ್ಲಿ ಕಾಯಿಗಳು ರಾಜನನ್ನು ಸುತ್ತಲೂ ಸುತ್ತುವರಿದಂತೆ, ಕಾಡಿನಲ್ಲಿ ಕಾಡಿನ ರಾಜ ಸಿಂಹವನ್ನು ತೋಳಗಳು ಮುತ್ತಿಗೆ ಹಾಕಿದಂತೆ, ಕೌರವರು ಅಭಿಮನ್ಯುವನ್ನು ಚಕ್ರವ್ಯೂಹದಲ್ಲಿ ಸಿಲುಕಿಸಿದಂತೆ ಆಗಿದೆ. ಚದುರಂಗದಾಟದಲ್ಲಿ ಗೆಲ್ಲುವುದು ಬೇಡವೆ? ಸಿಂಹ ಎಂದಿನಂತೆ ವನರಾಜನಾಗುವುದು ಬೇಡವೆ? ಚಕ್ರವ್ಯೂಹದಿಂದ ಅಭಿಮನ್ಯುವನ್ನು ರಕ್ಷಿಸುವುದು ಬೇಡವೆ?

ಎಚ್.ಎಸ್. ವೆಂಕಟೇಶ ಮೂರ್ತಿ ಅವರ ಈ ಜನಪ್ರಿಯ ಕವನವನ್ನು ಮತ್ತೆ ಮತ್ತೆ ಮನನ ಮಾಡಿ : ಇರುಳ ವಿರುದ್ಧ ಬೆಳಕಿನ ಯುದ್ಧ/ ಕೊನೆಯಿಲ್ಲದ ಕಾದಾಟ/ ತಡೆಯೇ ಇಲ್ಲದೆ ನಡೆಯಲೇಬೇಕು/ ಸೋಲಿಲ್ಲದ ಹೋರಾಟ/

ಈಗ ನಡೆದಿದ್ದು ಸಾಂಕೇತಿಕ ಹಿಂದು ಸಮಾಜೋತ್ಸವ. ಆದರೆ ಅದು ನಿತ್ಯೋತ್ಸವ ಆಗಬೇಕು. ಹಿಂದು ಅಸ್ಮಿತೆ, ಹಿಂದು ಸ್ವಾಭಿಮಾನ ಜಾಗೃತಿಗೆ ಇದು ಅನಿವಾರ್ಯ, ಅತ್ಯಗತ್ಯ. ಇರುಳ ವಿರುದ್ಧ ಬೆಳಕಿನ ಯುದ್ಧ ನಿರಂತರವಾಗಿರಲಿ.

'ವಂದೇಮಾತರಂ'ನ ಮಾರ್ಗದರ್ಶಿ ಸೂತ್ರಗಳ ಬಗ್ಗೆ ಗೊಂದಲ ಸಲ್ಲ

▸ ಅನಗವಾಡಿ ನಬಿ



ಭಾರತದ ರಾಷ್ಟ್ರೀಯ ಗೀತೆಯಾದ ವಂದೇ ಮಾತರಂ ಬಗ್ಗೆ ಇತ್ತೀಚೆಗೆ ಕೇಂದ್ರ ಸರ್ಕಾರವು ಒಂದು ಮಾರ್ಗದರ್ಶೀ ಸೂತ್ರಗಳನ್ನು ಪ್ರಕಟಿಸಿತು. ಅದರಲ್ಲಿ ವಂದೇಮಾತರಂನ ಪೂರ್ಣ ಪಾಠವಾದ ಆರೂ ಚರಣಗಳನ್ನೂ ಹಾಡಬೇಕೆಂಬ ಸೂಚನೆ ಇದೆ. ಇಲ್ಲಿಯವರೆಗೆ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿತ್ತು. ಇದಕ್ಕೆ ಕಾರಣ ಸ್ವಾತಂತ್ರ್ಯ ಪೂರ್ವದಲ್ಲಿ ಮತೀಯ ನೆಲೆಯಲ್ಲಿ ವಂದೇಮಾತರಂ ಗೀತೆಯ ಕೆಲಭಾಗಗಳ ಬಗ್ಗೆ ಪ್ರತ್ಯೇಕತಾವಾದಿಗಳ ಗೊಂದಲ-ಆಕ್ಷೇಪಗಳೇ ಆಗಿದ್ದವು. ಭಾರತ ಸ್ವಾತಂತ್ರ್ಯವಾದನಂತರವೂ ಈ ಆಕ್ಷೇಪಗಳನ್ನು ನಿವಾರಿಸಿಕೊಂಡು ಸರಿಯಾದ ಕ್ರಮ ಕೈಗೊಳ್ಳಲು ಇಷ್ಟು ವರ್ಷ ಬೇಕಾಯಿತೆಂಬ ಭಾವನೆ ನಮ್ಮೆಲ್ಲರ ಮನಸ್ಸಿನಲ್ಲಿ ಮೂಡಿತು.

ಆದರೆ, ಕಳೆದ ಒಂದೆರಡು ದಿನಗಳ ಮಾಧ್ಯಮಗಳ ಕೆಲ ವರದಿಗಳನ್ನು ನೋಡಿ ಆಶ್ಚರ್ಯವೆನಿಸಿತು. ಮೌಲಾನಾ ಇಮ್ರಾನ್ ಮಖ್ಸೂದ್ (ಕರ್ನಾಟಕದ ಮಜ್ಲಿಸ್-ಇ-ಇಮಾರತ್ ಶರಿಯಾ) ಅವರು ವಂದೇ ಮಾತರಂ ಗೀತೆಯ ಭಾಗಗಳು ಹಿಂದೂ ದೇವದೇವತೆಗಳಿಗೆ ಮೀಸಲಾಗಿರುವುದರಿಂದ ಅದನ್ನು ಹೇಳಲಾಗದು ಎಂದಿದ್ದಾರೆ. ಜೊತೆಗೆ ''ನಾವು ರಾಷ್ಟ್ರಗೀತೆಯನ್ನು ದೇಶಭಕ್ತಿ ಸಹಿತವಾಗಿ ಯಾವುದೇ ಹಿಂಜರಿಕೆ ಇಲ್ಲದೇ ಹಾಡುತ್ತೇವೆ'' ಎಂಬ ಮಾತನ್ನೂ ಹೇಳಿದ್ದಾರೆ. ಜಮಾಯತ್ ಉಲೇಮಾ ಇ-ಹಿಂದ್ ನ ಅಧ್ಯಕ್ಷ ಮೌಲಾನಾ ಅರ್ಷದ್ ಮದಾನಿ ಅವರು ''ಗೀತೆಯ ಕೆಲವು ಸಾಲುಗಳು ಬಹುದೇವತೆಗಳಲ್ಲಿ ನಂಬಿಕೆ ವ್ಯಕ್ತಪಡಿಸುತ್ತಾ ತಾಯ್ನಾಡನ್ನು ದೇವತೆಯೆಂದು ಹೇಳಿರುವುದರಿಂದ ಅದು ಏಕದೇವಾರಾಧನೆಗೆ ವಿರುದ್ಧವಾಗಿದೆ'' ಎಂದಿದ್ದಾರೆ. ಮುಂದುವರೆದು ''ನಾವು ಎಲ್ಲವನ್ನೂ ಸಹಿಸುತ್ತೇವೆ. ಆದರೆ, ಅಲ್ಲಾನ ಜೊತೆ ಏನನ್ನೇ ಆದರೂ ಜೋಡಿಸುವುದನ್ನು ಒಪ್ಪಲಾರೆವು'' ಎಂದಿದ್ದಾರೆ. ಮುಸ್ಲಿಮ್ ರಾಜಕಾರಣಿಗಳು ಕೆಲವರು ''ತಾಯ್ನಾಡನ್ನು ದೇವೀ ಭವಾನಿ ಎಂದು ಚಿತ್ರಿಸಿರುವ ವಂದೇಮಾತರಂ ಇಸ್ಲಾಂ ನಂಬಿಕೆಗಳಿಗೆ ವಿರುದ್ಧ'' ಎಂದಿದ್ದಾರೆ.

ಈ ವರದಿಗಳು ನನ್ನಲ್ಲಿ ಚಿಂತನಾ ಸರಣಿಯನ್ನು ಹುಟ್ಟುಹಾಕಿತು. ಸ್ವಾತಂತ್ರ್ಯಪೂರ್ವದ ಪ್ರತ್ಯೇಕತಾ ಮನೋಭಾವನೆ ಪುನಃ ಕಾಣುತ್ತಿರುವುದಕ್ಕೆ ಖೇದವಾಯಿತು. ಮತ ಮತ್ತು ದೇಶದ ಬಗೆಗಿನ ಪರಿಕಲ್ಪನೆಗಳನ್ನು ವಿರೂಪಗೊಳಿಸುತ್ತಿರುವುದರ ಬಗ್ಗೆ ದನಿ ಎತ್ತುವುದರ ಅನಿವಾರ್ಯತೆಯ ಬಗ್ಗೆ ಖಚಿತತೆ ಉಂಟಾಯಿತು. ಅದಕ್ಕಾಗಿಯೇ ಈ ಲೇಖನ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಂದೇ ಮಾತರಂ ಗೀತೆಯು ಅತ್ಯಂತ ಹೆಚ್ಚಿನ ಪ್ರಭಾವವನ್ನು ಉಂಟುಮಾಡಿತು. 1896ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ರವೀಂದ್ರನಾಥ ಟಾಗೋರ್ ಅವರು ಮೊಟ್ಟಮೊದಲ ಬಾರಿಗೆ ಈ ಹಾಡನ್ನು ರಾಜಕೀಯ ವೇದಿಕೆಯಲ್ಲಿ ಹಾಡಿದರು. ಅಂದಿನಿಂದ ಇದು ಕಾಂಗ್ರೆಸ್ ಅಧಿವೇಶನಗಳ ಕಡ್ಡಾಯ ಭಾಗವಾಯಿತು. ಕ್ರಾಂತಿಕಾರಿಗಳಿಗೂ ಸಹ ಈ ಗೀತೆ ಅಚ್ಚುಮೆಚ್ಚಿನದಾಗಿತ್ತು. ಇದರ ಪ್ರಭಾವ ಎಷ್ಟಿತ್ತೆಂದರೆ ಬ್ರಿಟಿಷರು ಈ ಹಾಡನ್ನು ಹಾಡುವುದನ್ನು ನಿಷೇಧಿಸಬೇಕಾಯಿತು. 'ವಂದೇ ಮಾತರಂ' ಭಾರತೀಯರಲ್ಲಿ ಸುಪ್ತವಾಗಿದ್ದ ದೇಶಭಕ್ತಿಯನ್ನು ಬಡಿದೆಬ್ಬಿಸಿದ ಆಯುಧವಾಯಿತು. ಇದರ ತೀವ್ರತೆಯನ್ನು ಅರಿತೇ, ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಡಾ. ರಾಜೇಂದ್ರ ಪ್ರಸಾದ್ ಅವರು ಜನವರಿ 24, 1950 ರಂದು ಇದನ್ನು 'ರಾಷ್ಟ್ರೀಯ ಗೀತೆ' (National Song) ಎಂದು ಘೋಷಿಸಿದರು. ನಂತರ ಜನವರಿ 26, 1950 ರಂದು ಭಾರತ ಗಣರಾಜ್ಯವಾದಾಗ ಇದು ಅಧಿಕೃತವಾಗಿ ಜಾರಿಗೆ ಬಂದಿತು.

ಆದರೆ ಸ್ವಾತಂತ್ರ್ಯ ಪಡೆಯಲು ಚಳುವಳಿಯು ನಡೆಯುತ್ತಿರುವಾಗ ವಂದೇ ಮಾತರಂ ಬಗ್ಗೆ ಪ್ರತ್ಯೇಕತೆಯ ಮಾನಸಿಕತೆ ಇದ್ದ ದೇಶ ವಿಭಜನೆ ಮಾಡಲು ಉದ್ದೇಶಿಸಿದ್ದ ಮತೀಯವಾದೀ ಮುಸ್ಲಿಮರು ಹಲವಾರು ಆಕ್ಷೇಪಗಳನ್ನು ತೆಗೆದಿದ್ದರು. ಇಸ್ಲಾಂ ಧರ್ಮದ ಪ್ರಕಾರ ಆರಾಧನೆ ಮತ್ತು ಪ್ರಾರ್ಥನೆ ಸಲ್ಲಬೇಕಿರುವುದು ಕೇವಲ ಅಲ್ಲಾಹನಿಗೆ ಮಾತ್ರ. ವಂದೇ ಮಾತರಂ ಎಂದರೆ 'ತಾಯಿಗೆ ನಮಸ್ಕರಿಸುತ್ತೇನೆ/ವಂದಿಸುತ್ತೇನೆ' ಎಂದರ್ಥ. ದೇಶವನ್ನು ದೇವತೆಯ ರೂಪದಲ್ಲಿ ನೋಡುವುದು ಮತ್ತು ಪ್ರಾರ್ಥಿಸುವುದು ಇಸ್ಲಾಂನ ಏಕದೇವಾರಾಧನೆಯ ತತ್ವಕ್ಕೆ ವಿರುದ್ಧವಾಗಿದೆ ಎಂಬುದು ಪ್ರಮುಖ ಆಕ್ಷೇಪವಾಗಿತ್ತು. ಏಕದೇವಾರಾಧನೆ (ತೌಹೀದ್) ಎಂಬ ಇಸ್ಲಾಮೀ ತತ್ವವನ್ನು ಇಲ್ಲಿ ದುರುಪಯೋಗ ಪಡಿಸಿಕೊಳ್ಳಲಾಗಿತ್ತು. ಗೀತೆಯ ನಂತರದ ಚರಣಗಳಲ್ಲಿ ಭಾರತವನ್ನು ಮಾತೆಯ ರೂಪದಲ್ಲಿ ನೋಡುತ್ತಾ ಶಕ್ತಿ, ಸಂಪತ್ತು ಮತ್ತು ವಿದ್ಯೆಯ ಪ್ರತಿನಿಧಿಗಳಾದ ದುರ್ಗಾ, ಲಕ್ಷ್ಮಿ ಮತ್ತು ಸರಸ್ವತಿಯರಿಗೆ ಹೋಲಿಸಲಾಗಿದರುವುದೂ ಕೂಡ ಒಂದು ಆಕ್ಷೇಪವಾಗಿತ್ತು. ಇದು ಹಿಂದೂಗಳು ಪೂಜಿಸುವ ದೇವತೆಯಾಗಿರುವುದರಿಂದ ಇಲ್ಲಿ ವಿಗ್ರಹಾರಾಧನೆಯ ಛಾಯೆ ಇದೆಯೆಂದೂ, ಆದ್ದರಿಂದ ಮುಸ್ಲಿಮರು ಇದನ್ನು ಹಾಡುವುದು ನಿಷಿದ್ಧ ಎಂದೂ ಎಂದು ಪ್ರತ್ಯೇಕವಾದಿಗಳು ವಾದಮಾಡುತ್ತಾ ಗೊಂದಲ ಉಂಟುಮಾಡುತ್ತಿದ್ದರು. ಈ ಗೀತೆಯನ್ನು ಹೊಂದಿದ ಬಂಕಿಮಚಂದ್ರ ಚಟರ್ಜಿಯವರ 'ಆನಂದಮಠ' ಕಾದಂಬರಿಯು ದಮನಕಾರೀ ಆಡಳಿತದ ವಿರುದ್ಧ ಸಂತರ ಹೋರಾಟದ ಹಿನ್ನೆಲೆಯನ್ನು ಹೊಂದಿದ್ದು ಆ ದಮನಕಾರೀ ಆಡಳಿತವು ನವಾಬರ ರಾಜ್ಯವಾಗಿದ್ದರಿಂದ ಈ ಗೀತೆಯು ಮುಸ್ಲಿಂ ವಿರೋಧಿ ಧೋರಣೆಯನ್ನು ಹೊಂದಿವೆ ಎಂಬುದು ಮುಸ್ಲಿಂ ಲೀಗ್‌ನಂತಹ ಸಂಘಟನೆಗಳ ಆಕ್ಷೇಪವಾಗಿತ್ತು. 1930ರ ದಶಕದಲ್ಲಿ ಮೊಹಮ್ಮದ್ ಅಲಿ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್, ಕಾಂಗ್ರೆಸ್ ಪಕ್ಷವು 'ಹಿಂದೂ ಸಂಸ್ಕೃತಿಯನ್ನು' ಎಲ್ಲರ ಮೇಲೆ ಹೇರುತ್ತಿದೆ ಎಂದು ಆರೋಪ ಮಾಡುತ್ತಿದ್ದರು. ಅದಕ್ಕೆ ಪುರಾವೆ ತೋರಿಸಲು ವಂದೇ ಮಾತರಂ ಗೀತೆಯನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡಿತು. ಕಾಂಗ್ರೆಸ್‌ನ ಹಿಂದೂ ನಾಯಕರು ಐಕ್ಯತೆಯನ್ನು ಸಾಧಿಸಲು 1937ರಲ್ಲಿ ನಡೆದ ಸಭೆಯಲ್ಲಿ ಈ ವಿವಾದವನ್ನು ಬಗೆಹರಿಸಲು ಕೇವಲ ಮೊದಲೆರಡು ಚರಣಗಳನ್ನು ಮಾತ್ರ ಅಧಿಕೃತಗೊಳಿಸಿತು. ಆ ಎರಡು ಚರಣಗಳಲ್ಲಿ ಪ್ರಕೃತಿಯ ವಿವರಣೆ ಇದೆ ಎಂಬ ಸಮರ್ಥನೆಯೊಂದಿಗೆ ಈ ನಿರ್ಧಾರ ಮಾಡಲಾಗಿತ್ತು. ಆದರೆ ಆ ನಿರ್ಧಾರ ತಪ್ಪು ನೆಲೆಯಲ್ಲಿ ತೆಗೆದುಕೊಳ್ಳಲಾಗಿತ್ತು.



ಏಕೆಂದರೆ ಈ ಕುತರ್ಕಗಳಿಗೆ ರಾಷ್ಟ್ರೀಯ ಮನೋಭಾವ ಹೊಂದಿದ ಏಕತೆಯನ್ನು ಬಯಸುತ್ತಿದ್ದ ಮುಸ್ಲಿಮರ ಅನುಮೋದನೆ ಇರಲಿಲ್ಲ. ಇಸ್ಲಾಂ ನಲ್ಲಿ ತಾಯ್ನಾಡಿನ ಬಗ್ಗೆ ಪ್ರೀತಿ ಶ್ರದ್ಧೆಯನ್ನು ಬೋಧಿಸಿದೆ. ಪ್ರವಾದಿ ಮುಹಮ್ಮದ್ ಅವರೇ ಇದಕ್ಕೆ ಮಾದರಿ. ಪ್ರವಾದಿ ಮುಹಮ್ಮದ್ (ಸ) ಅವರು ತಮ್ಮ ತಾಯ್ನಾಡಾದ ಮೆಕ್ಕಾದ ಮೇಲೆ ಅಪಾರ ಪ್ರೀತಿ ಹೊಂದಿದ್ದರು. ಮೆಕ್ಕಾದಿಂದ ಮದೀನಾಕ್ಕೆ ವಲಸೆ ಹೋಗುವ ಸಂದರ್ಭದಲ್ಲಿ ಅವರು ಮೆಕ್ಕಾವನ್ನು ಉದ್ದೇಶಿಸಿ, 'ನೀನು ನನಗೆ ಜಗತ್ತಿನಲ್ಲೇ ಅತ್ಯಂತ ಪ್ರಿಯವಾದ ಸ್ಥಳ, ನಿನ್ನ ಜನರು ನನ್ನನ್ನು ಇಲ್ಲಿಂದ ಹೊರಹಾಕದಿದ್ದರೆ ನಾನು ಎಂದಿಗೂ ನಿನ್ನನ್ನು ತೊರೆಯುತ್ತಿರಲಿಲ್ಲ' ಎಂದು ಭಾವನಾತ್ಮಕವಾಗಿ ಹೇಳಿದ್ದರು. ತಿರ್ಮಿದಿ ಹದಿಸ್ ತಿಳಿಸುವಂತೆ ಮಾತೆ ಎನ್ನುವ ಪರಿಕಲ್ಪನೆಗೆ ಪ್ರವಾದಿಯವರ ಪೂರ್ಣ ಸಮರ್ಥನೆ ಇತ್ತು. ತಮ್ಮ ಮೂಲ ವಾಸಸ್ಥಳದಿಂದ ವಲಸೆ ಹೋದ ಜನರಿಗೆ ಮಾರ್ಗದರ್ಶನವನ್ನೂ ಸಹ ಪ್ರವಾದಿಯವರೇ ಮಾಡಿದ್ದಾರೆ. ಮಕ್ಕಾ ಬಿಟ್ಟು ಮದೀನಾಗೆ ಹೋದ ನಂತರ ಅವರು ಮೆಕ್ಕಾಗಿಂತ ಮದೀನಾವನ್ನು ಪ್ರೀತಿಸುವ ಸಂಕಲ್ಪ ಹೊಂದಿದ್ದರು. ಸಹೀಹ್ ಬುಖಾರಿಯ ಹದಿಸ್ ಇದನ್ನು ತಿಳಿಸಿಕೊಡುತ್ತದೆ. ದೇಶನಿಷ್ಠೆಯನ್ನು ಹೊಂದಿರಬೇಕೆಂಬ ಆದೇಶ ಕುರಾನ್ ನಲ್ಲಿ ಹಲವಾರು ವಿಧದಲ್ಲಿ ಹೇಳಿದೆ. ಮುಸ್ಲಿಮರು ದೇಶದ ಸಂವಿಧಾನ ಮತ್ತು ಕಾನೂನುಗಳಿಗೆ, ಅಲ್ಲಿನ ಆಡಳಿತಕ್ಕೆ ವಿಧೇಯವಾಗಿಯೂ, ಸಮಾಜದ ಜೊತೆಗೆ ಸೌಹಾರ್ದಯುತವಾಗಿಯೂ ಇರಬೇಕೆಂಬ ನಿರ್ದೇಶನಗಳಿವೆ. ಅಶಾಂತಿ ಹರಡದೇ ಇರುವುದನ್ನೂ ಕೂಡ ಕುರಾನ್ ಮುಸ್ಲಿಮರಿಗೆ ವಿಧಿಸಿದೆ. ಈ ತತ್ವಗಳನ್ನು ಇಸ್ಲಾಂ ನಲ್ಲಿ ಈಮಾನ್ (ಶ್ರದ್ಧೆ) ಮತ್ತು ಅಹದ್ (ಒಪ್ಪಂದ) ಗಳ ನೆಲೆಯಲ್ಲಿ ವಿವರಿಸಲಾಗಿದೆ. ಇಸ್ಲಾಂನಲ್ಲಿ ಬೋಧಿಸುವ ಒಬ್ಬನೇ ದೇವನ ಆರಾಧನೆಯನ್ನು, ನೇರವಾಗಿಯೂ, ನಿಷ್ಕಲ್ಮಷವಾಗಿಯೂ ಮಾಡಬೇಕೆಂಬುದು ಸ್ಪಷ್ಟ ಆದೇಶ ಮತ್ತು ಆಗ್ರಹ. ಆದ್ದರಿಂದ ವಿಗ್ರಹಾರಾಧನೆಯನ್ನು ಶಿರ್ಕ್ ಎಂಬ ನೆಲೆಯಲ್ಲಿ ಗುರುತಿಸಲಾಗಿದೆ. ಆದರೆ, ಶಿರ್ಕ್ ಅನ್ನು ಜೀವನದಲ್ಲಿ ಎಲ್ಲಾ ರಂಗಗಳಲ್ಲಿನ ಪ್ರತೀಕಗಳಿಗೆ ಅನ್ವಯಿಸಲಾಗದು. ರಾಷ್ಟ್ರವನ್ನು ಪ್ರತಿನಿಧಿಸುವ ಧ್ವಜ, ಚಿಹ್ನೆ, ಗೀತೆ ಇತ್ಯಾದಿಗಳು ಪ್ರತೀಕಗಳೇ, ರಾಷ್ಟ್ರನಿಷ್ಠೆಯ ಪ್ರಕಟಣೆಯ ಸಂದರ್ಭದಲ್ಲಿ ಮುಸ್ಲಿಮರಿಗೆ ಈ ಎಲ್ಲಾ ಪ್ರತೀಕಗಳೂ ಮಾನ್ಯವೇ.

ಅನ್ಯಾಯವನ್ನು ಸರಿಮಾಡುವ, ದೇಶದಲ್ಲಿ ಶಾಂತಿಯನ್ನು ತರುವ ಉದ್ದೇಶವನ್ನು ಹೊಂದಿದ್ದ ಸಂತರ ಕಥಾವಸ್ತುವೇ ಆನಂದಮಠದ ತಿರುಳು. ಅದರ ಭಾಗವಾದ ವಂದೇಮಾತರಂ ದೇಶದ ಬಗ್ಗೆ ಶ್ರದ್ಧೆಯನ್ನು ಉದ್ದೀಪನಗೊಳಿಸುತ್ತದೆ. ಕೇವಲ ಕಾದಂಬರಿಯಲ್ಲಿ ಅಲ್ಲದೇ, ನಿಜ ಜೀವನದಲ್ಲೂ ಸಹ ಸ್ವಾತಂತ್ರ ಚಳುವಳಿಯಲ್ಲೂ ಸಹ ಈ ಗೀತೆ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿದೆ. ಆದ್ದರಿಂದಲೇ, ವಂದೇಮಾತರಂ ಗೀತೆಗೆ ರಾಷ್ಟ್ರೀಯ ಮಹತ್ವವಿದೆ. ಕೇವಲ ಇಂದಿನ ಭಾರತದಲ್ಲಿ ಅಷ್ಟೇ ಅಲ್ಲ, ಇಂದಿನ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಗೂ ಕೂಡ ವಂದೇಮಾತರಂ ಸ್ವಾತಂತ್ರ್ಯದ ದೃಷ್ಟಿಯಿಂದ ಅಷ್ಟೇ ಮಹತ್ವದ್ದಾಗಿದೆ. ವಂದೇಮಾತರಂ ನಲ್ಲಿ ಉಪಯೋಗಿಸಿರುವ ಪದಗಳನ್ನು ಸೀಮಿತ ಪರಿಧಿಯಲ್ಲಿ ಅರ್ಥೈಸುತ್ತಾ, ಮತೀಯ ನಿಲುವುಗಳಿಗೆ ಅವನ್ನು ಜೊತೆಯಾಗಿಸಿ ಆಕ್ಷೇಪಿಸುವ ಪ್ರವೃತ್ತಿಯ ಮೂಲದಲ್ಲಿ ಸ್ವಾತಂತ್ರ್ಯಪೂರ್ವದ ಪ್ರತ್ಯೇಕತಾವಾದಿಗಳನ್ನು ಕುರುಡಾಗಿ ಅನುಸರಿಸುವ ದಡ್ಡತನವಿದೆ. ತಾತ್ವಿಕವಾಗಿ ಯೋಚಿಸಲಾಗದ ಅಸಮರ್ಥತೆ ಇದೆ. ಸಂಕುಚಿತ, ಅಸಹಿಷ್ಣು ಭಾವಗಳಿಗೆ ಇಂಬು ಕೊಡುವ ಮತ್ತು ಸಾಮಾಜಿಕ ಸಾಮರಸ್ಯವನ್ನು ಹಾಳುಮಾಡುವ ಪ್ರವೃತ್ತಿಗೆ ಬೆಂಬಲಿಸುತ್ತಿದ್ದೇವೆ ಎಂಬ ಅರಿವು ಇವರಿಗೆ ಇದ್ದಂತಿಲ್ಲ. ವಂದಿಸುವೆ ಮತ್ತು ನಮಿಸುವೆ ಎಂಬುದನ್ನು ಇಸ್ಲಾಮಿನ 'ಅಲ್ಲಾನನ್ನು ಆರಾಧಿಸುವೆ' ಎಂಬಲ್ಲಿನ ಆರಾಧಿಸುವೆ ಎಂಬ ಅರ್ಥೈಸುವಿಕೆ ಮಾತ್ರ ಇರಬೇಕಾಗಿಲ್ಲ. ಕೃತಜ್ಞತೆ, ವಿನಯ ಮತ್ತು ಗೌರವ ಸೂಚಕವಾಗಿಯೂ ಈ ಪದಗಳ ಉಪಯೋಗವಿದೆ ಎಂದು ನಾನು ಖಚಿತಪಡಿಸಿಕೊಂಡಿದ್ದೇನೆ. ಭಾರತದ ನಾಗರೀಕರೆಲ್ಲರೂ ಒಂದೇ ಅರ್ಥದಲ್ಲೇ ಈ ಪದಗಳನ್ನು ಅರ್ಥೈಸಬೇಕೆಂಬ ಆಗ್ರಹವಿದ್ದರೆ ಅದು ಮೂರ್ಖತನವೇ ಸರಿ. ಅಥವಾ ಮೂಲದಲ್ಲಿ ಬಂಕಿಮ ಚಂದ್ರರೋ, ಅಥವಾ ಆ ಗೀತೆಯನ್ನು ಹಾಡುವ ಭವಾನಂದ ನ ಭಾವನೆಗಳ ಅನ್ವೇಷಣೆ ಅಥವಾ ವಿಶ್ಲೇಷಣೆಯೂ ಕೂಡ ಸಮಂಜಸವಾಗಲಾರದು.

ಏಕೆಂದರೆ, ಚಳುವಳಿಗೆ ವಂದೇಮಾತರಂನ ಕೊಡುಗೆ ಈ ರೀತಿಯ ವಾದಗಳನ್ನೂ ಸಹ ಅಪ್ರಸ್ತುತಗೊಳಿಸುತ್ತದೆ. ವಂದೇಮಾತರಂನಲ್ಲಿ ಭಾರತಮಾತೆಯನ್ನು ದುರ್ಗೆ, ಕಮಲೆ, ಸರಸ್ವತಿಯರಿಗೆ ಹೋಲಿಸಲಾಗಿದೆ. ದುರ್ಗೆ, ಕಮಲೆ, ಸರಸ್ವತಿಯರು ಶಕ್ತಿ, ಸಂಪತ್ತು ಮತ್ತು ವಿದ್ಯೆಗಳಿಗೆ ಪ್ರತಿನಿಧಿಗಳು ಎಂದು ಭಾರತೀಯ ಮೂಲದ ಮುಸ್ಲಿಮರಿಗೆ ತಿಳಿದಿದೆ. ಶಕ್ತಿ, ಸಂಪತ್ತು ಮತ್ತು ವಿದ್ಯೆಗಳನ್ನು ತನ್ನ ನಿವಾಸಿಗಳೆಲ್ಲರಿಗೂ ನೀಡುವ ದೇಶದ ಬಗ್ಗೆ ನಿಷ್ಠೆಯನ್ನು ಕಾವ್ಯಾತ್ಮಕವಾಗಿ ವ್ಯಕ್ತಪಡಿಸುವ ಬಗ್ಗೆ ಸದಭಿಪ್ರಾಯ ಉಳ್ಳ ಮುಸ್ಲಿಮರಿಗಾಗಲೀ, ಮುಸ್ಲಿಮೇತರರಿಗಾಗಲೀ ಆಕ್ಷೇಪವಿರುವುದಿಲ್ಲ. ವಂದೇಮಾತರಂ ಸಂದರ್ಭದಲ್ಲಿ ಭಾರತೀಯರೆಲ್ಲರಿಗೂ ಅವು ರಾಷ್ಟ್ರಸ್ವರೂಪವನ್ನು ಪ್ರತಿನಿಧಿಸುವ ಪ್ರತೀಕಗಳು. ಬಹುದೇವತಾರಾಧಕರಾದ ಹಿಂದೂಗಳು ದುರ್ಗೆ, ಕಮಲೆ, ಮತ್ತು ಸರಸ್ವತಿಯರನ್ನು ದೇವತೆಗಳೆಂದು ಪೂಜಿಸುತ್ತಾರೆ.. ಅವರಿಗೆ ದುರ್ಗೆ, ಕಮಲೆ, ಸರಸ್ವತಿಯರು ಕ್ರಮವಾಗಿ ಶಕ್ತಿ, ಸಂಪತ್ತು ಮತ್ತು ವಿದ್ಯೆಗಳಿಗೆ ಅಧಿದೇವತೆಗಳು. ಬಹುದೇವತಾರಾಧಕರಲ್ಲಿ ಕೆಲವರು ರಾಷ್ಟ್ರವನ್ನು ದೇವರೆಂದು ಪೂಜಿಸುವುದಾದರೆ ಅದು ಅವರಿಗೆ ಬಿಟ್ಟ ಸಂಗತಿ. ಸರಿಯಾದ ಯೋಚನೆಗಳುಳ್ಳ ಏಕದೇವಾರಾಧಕರು ತಮ್ಮ ರಾಷ್ಟ್ರನಿಷ್ಠೆಯನ್ನು ಪಾಲಿಸುವಾಗ ತಮ್ಮ ಮತೀಯ ನಿಲುವುಗಳಾದ ತೌಹೀದ್, ಶಿರ್ಕ್ ಗಳ ಜೊತೆಗೆ ವಂದೇಮಾತರಂ ಗೀತೆಯ ಭಾಗಗಳನ್ನು ಸಮೀಕರಿಸಲಾರರು. ಏಕೆಂದರೆ, ಇಸ್ಲಾಂ ಮತೀಯ ಮಾರ್ಗದರ್ಶನದ ಪ್ರಕಾರವೂ ಈ ಸಮೀಕರಣವು ದೋಷಪೂರ್ಣವಾಗಿದೆ.

ಆನಂದ ಮಠ

ಬಂಕಿಮಚಂದ್ರ ಚಟ್ಟೋಪಾಧ್ಯಾಯರು 'ಆನಂದಮಠ' ಕಾದಂಬರಿಯನ್ನು 1882 ರಲ್ಲಿ ರಚಿಸಿದರು. ಈ ಕಾದಂಬರಿಯ ಹತ್ತನೇ ಅಧ್ಯಾಯದಲ್ಲಿ 'ವಂದೇ ಮಾತರಂ' ಗೀತೆಯು ಕಂಡುಬರುತ್ತದೆ. ಕಾದಂಬರಿಯು 1770ರ ದಶಕದ ಬಂಗಾಳದ ಕ್ಷಾಮ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ನಡೆದ 'ಸನ್ಯಾಸಿ ದಂಗೆ'ಯ ಸುತ್ತ ಹೆಣೆಯಲ್ಪಟ್ಟಿದೆ. ಇಲ್ಲಿನ ದಂಗೆ ನಡೆಸಿದ ಸನ್ಯಾಸಿಗಳು ಪುಂಡರಲ್ಲ. ಕೇವಲ ದೈವ ಭಕ್ತರಷ್ಟೇ ಅಲ್ಲ, ಅವರು ದೇಶಪ್ರೇಮಿ ಹೋರಾಟಗಾರರು ಸಹ ಆಗಿದ್ದರು. ಅವರು ತಮ್ಮನ್ನು 'ಸಂತಾನಗಳು' (ಮಕ್ಕಳು) ಎಂದು ಕರೆದುಕೊಳ್ಳುತ್ತಾರೆ ಮತ್ತು ಭಾರತವನ್ನು ತಾಯಿಯೆಂದು (ಭಾರತದಲ್ಲಿ ತಾಯಿಯನ್ನೂ) ನೋಡುತ್ತಾರೆ. ಕಾದಂಬರಿಯ ಮುಖ್ಯ ಪಾತ್ರಗಳಲ್ಲಿ ಒಬ್ಬನಾದ ಭವಾನಂದ ಎಂಬ ಸನ್ಯಾಸಿಯು, ಬ್ರಿಟಿಷರ ಆಳ್ವಿಕೆಯಿಂದ ದೇಶವನ್ನು ಮುಕ್ತಗೊಳಿಸುವ ಗುರಿಯನ್ನು ಹೊಂದಿರುತ್ತಾನೆ. ಕ್ಷಾಮದಿಂದ ತತ್ತರಿಸಿದ ಮಹೇಂದ್ರ ಸಿಂಗ್ ಎಂಬುವವನನ್ನು ಭವಾನಂದನು ಕಾಡಿನ ಮೂಲಕ ಕರೆದೊಯ್ಯುವಾಗ 'ವಂದೇ ಮಾತರಂ' ಗೀತೆಯನ್ನು ಹಾಡುತ್ತಾನೆ. ಮಹೇಂದ್ರನಿಗೆ ಈ ಹಾಡಿನ ಅರ್ಥ ಪೂರ್ಣವಾಗಿ ತಿಳಿಯುವುದಿಲ್ಲ. ಅವನು ಭವಾನಂದನನ್ನು ಕೇಳುತ್ತಾನೆ: 'ಯಾರನ್ನೋ ಉದ್ದೇಶಿಸಿ ನೀನು 'ತಾಯಿಯೇ ನಿನಗೆ ವಂದನೆ' ಎನ್ನುತ್ತಿದ್ದೀಯಲ್ಲ, ಇವಳು ಯಾರು?' ಅದಕ್ಕೆ ಭವಾನಂದನು 'ನಮಗೆ ಹೆತ್ತ ತಾಯಿ ಇಲ್ಲ, ತಂದೆಯೂ ಇಲ್ಲ. ಈ ಸುಜಲಾಂ, ಸುಫಲಾಂ ಭೂಮಿಯೇ ನಮ್ಮ ತಾಯಿ.' ಎಂದು ಉತ್ತರಿಸುತ್ತಾನೆ. ಈ ಹಾಡು ಸನ್ಯಾಸಿಗಳಿಗೆ ಕೇವಲ ಪ್ರಾರ್ಥನೆಯಲ್ಲ, ಅದು ಯುದ್ಧದ ಘೋಷಣೆ (War cry). ಬ್ರಿಟಿಷರ ವಿರುದ್ಧ ಹೋರಾಡಲು ಸನ್ಯಾಸಿಗಳಲ್ಲಿ ಶಕ್ತಿ ಮತ್ತು ದೇಶಪ್ರೇಮವನ್ನು ತುಂಬಲು ಈ ಗೀತೆಯನ್ನು ಕಾದಂಬರಿಯಲ್ಲಿ ಬಳಸಲಾಗುತ್ತದೆ.

ಹೆಸರು ಬದಲಾವಣೆ VS ಹಕ್ಕಿನ ಬದಲಾವಣೆ

ಪತ್ರ ಮಿತ್ರ

ಗ್ರಾಮೀಣ ಬಡವರಿಗೆ ವರ್ಷಕ್ಕೆ 100 ದಿನಗಳ ಉದ್ಯೋಗ ಖಾತರಿ, ಉದ್ಯೋಗ ಕೊಡದಿದ್ದರೆ ನಿರುದ್ಯೋಗ ಭತ್ಯೆ, ಗ್ರಾಮೀಣ ಆಸ್ತಿ ನಿರ್ಮಾಣ, ಬಡತನ ನಿವಾರಣೆ, ವಲಸೆ ತಡೆ, ಮಹಿಳಾ ಸಬಲೀಕರಣ ಮುಂತಾದ ಉದ್ದೇಶಗಳೊಂದಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ (NREGA) 2005ರಲ್ಲಿ ಕಾನೂನಾಗಿ ಅಂಗೀಕರಿಸಿ 2006ರಿಂದ ಹಂತ ಹಂತವಾಗಿ ಜಾರಿಗೊಂಡಿತು. 2009ರಲ್ಲಿ ಯೋಜನೆಯ ಮೂಲ ಸ್ವರೂಪಕ್ಕೆ ಕೈಹಾಕದೆ, ಮಹಾತ್ಮ ಗಾಂಧಿ ಅವರ ಗೌರವಕ್ಕಾಗಿ ಅದನ್ನು MGNREGA ಎಂದು ಮರುನಾಮಕರಣ ಮಾಡಲಾಗಿತ್ತು.

ಇದೀಗ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ MGNREGAಗೆ ಬದಲಾಗಿ Viksit Bharat - Guarantee for Rozgar and Ajeevika Mission (Gramin) ಎಂಬ ಹೆಸರಿನ VB–G RAM G ಕಾಯ್ದೆ/ಚೌಕಟ್ಟನ್ನು ಜಾರಿಗೆ ತಂದಿದೆ. ಈ ಬದಲಾವಣೆಯಡಿ ಉದ್ಯೋಗ ದಿನಗಳ ಹೆಚ್ಚಳ (125 ದಿನಗಳವರೆಗೆ), ಯೋಜನೆಗಳ ಸಮನ್ವಯ, ಹೊಸ ನಿರ್ವಹಣಾ ವಿಧಾನಗಳು ಮುಂತಾದ ಅಂಶಗಳು ಸೇರಿವೆ.

ಈ ವಿವಾದದಲ್ಲಿ Indian National Congress (ಕಾಂಗ್ರೆಸ್) ಎತ್ತುತ್ತಿರುವ ಮುಖ್ಯ ಪ್ರಶ್ನೆ 'ಗಾಂಧಿ ಹೆಸರನ್ನು ಕೈಬಿಟ್ಟದ್ದು' ಕೇವಲ ನಾಮ ಬದಲಾವಣೆ ಅಲ್ಲ; ಅದು ರಾಜಕೀಯ –ಮೌಲ್ಯಾತ್ಮಕ ಸಂಕೇತ ಎಂದು. ಇಂತಹ ಆಕ್ಷೇಪ ರಾಜಕೀಯವಾಗಿ ಸಹಜವೂ ಹೌದು. ವಿಶೇಷವಾಗಿ 'ಮಹಾತ್ಮ ಗಾಂಧಿ' ಹೆಸರಿನ ಸಾಮಾಜಿಕ-ಸ್ಮೃತಿ ದೇಶದ ದೊಡ್ಡ ಕಲ್ಯಾಣ ಕಾನೂನಿನೊಂದಿಗೆ ಜೋಡಿಸಲ್ಪಟ್ಟಿದೆ. ಈ ಕುರಿತು ಪ್ರತಿಕ್ರಿಯೆಗಳೂ, ಪ್ರತಿಭಟನೆಗಳೂ ನಡೆಯುತ್ತಿವೆ.

ಆದರೆ ಮತ್ತೊಂದು ಕಡೆ, ಕೇಂದ್ರ ಸರ್ಕಾರದ ವಾದ ''ಹೊಸ ಗುರಿ/ದಿನಗಳು/ನಿರ್ವಹಣೆ/ಹಣಕಾಸು ವಿನ್ಯಾಸ'' ಇದ್ದರೆ ಹೊಸ ಚೌಕಟ್ಟಿಗೆ ಹೊಸ ಹೆಸರು ಕೊಡುವುದು ಆಡಳಿತಾತ್ಮಕವಾಗಿ ಸರಿ ಎಂಬುದಾಗಿರಬಹುದು. ಅಂದರೆ, ''ಕಾಂಗ್ರೆಸ್ ಯೋಜನೆಯ ವಿನ್ಯಾಸ ಬದಲಾಯಿಸದೇ ಹೆಸರನ್ನು ಬದಲಾಯಿಸಿದ್ದರೆ, ಈಗ ಯೋಜನೆಯ ಸ್ವರೂಪ ಬದಲಾಗಿರುವಾಗ ಹೆಸರು ಬದಲಾಗುವುದು ತಪ್ಪೇ?'' ಎಂಬ ಪ್ರಶ್ನೆಗೆ, ತತ್ತ್ವತಃ ''ಹೆಸರು ಹೊಸದಾಗುವುದು ಅಸಹಜವಲ್ಲ'' ಎಂದು ಉತ್ತರ ಕೊಡಬಹುದು.

ವಿವಾದದ ಮತ್ತೊಂದು ಆಯಾಮ RAMಎಂಬ ಸಂಕ್ಷಿಪ್ತ ಪದ. ಇದು Rural employment & livelihood guarantee ಸಂಬಂಧಿತ ಸಂಕ್ಷಿಪ್ತ ರೂಪ/ಹೊಂದಾಣಿಕೆ ಆಗಿರಬಹುದು. ಆದರೆ ಸಾರ್ವಜನಿಕ ವಲಯದಲ್ಲಿ RAM ಪದವು ಧಾರ್ಮಿಕ ಅರ್ಥದಲ್ಲಿಯೂ ವ್ಯಾಪಕ ಬಳಕೆಯಿರುವುದರಿಂದ, ಭಾವನಾತ್ಮಕ ವ್ಯಾಖ್ಯಾನಗಳು ಹುಟ್ಟುವುದು ಅಚ್ಚರಿಯಲ್ಲ.

ಇಲ್ಲಿ ಎರಡು ಸಂಗತಿಗಳು ಸ್ಪಷ್ಟ: ಸಂಕ್ಷಿಪ್ತ ರೂಪಗಳು (acronyms) ಬಹುಅರ್ಥಗಳಾಗಿರಬಹುದು–ಒಂದೇ ಪದ ವಿಭಿನ್ನ ಕ್ಷೇತ್ರಗಳಲ್ಲಿ ವಿಭಿನ್ನ ಅರ್ಥ ಕೊಡುತ್ತದೆ. ಉದಾಹರಣೆಗೆ ಕಂಪ್ಯೂಟರ್‌ನ RAM (Random Access Memory) ಅನ್ನು ನಾವು 'ರ್‍ಯಾಮ್' ಎಂದೇ ಕರೆಯುತ್ತೇವೆ; ಅದು ದೇವನಾಮ ಅರ್ಥದಲ್ಲಿಲ್ಲ. ಆದರೂ, ಸರ್ಕಾರ ಸಾರ್ವಜನಿಕ ಯೋಜನೆಗಳಿಗೆ ಹೆಸರಿಡುವಾಗ ಅರ್ಥ– ಭಾವನೆ– ಸಾಮಾಜಿಕ ಗ್ರಹಿಕೆ ಎಂಬ ಮೂರು ಆಯಾಮಗಳನ್ನು ಪರಿಶೀಲಿಸಬೇಕಿತ್ತೇನೋ.

'ಹೆಸರು'ಗಿಂತ ಮುಖ್ಯ 'ಹಕ್ಕು' ಎಂಬ ದೃಷ್ಟಿಯಲ್ಲಿ ನೋಡುವುದಾದರೆ: ಹೊಸ VB–G RAM G ಚೌಕಟ್ಟು ಗ್ರಾಮೀಣ ಬಡವರ 'ಹಕ್ಕು–ಆಧಾರಿತ ಉದ್ಯೋಗ ಖಾತರಿ'ಯನ್ನು ಬಲಪಡಿಸುತ್ತಿದೆಯೇ, ಇಲ್ಲವೇ ದುರ್ಬಲಗೊಳಿಸುತ್ತಿದೆಯೇ? 125 ದಿನಗಳ ಉದ್ಯೋಗ ಖಾತ್ರಿ, ಹಣಕಾಸು ಹಂಚಿಕೆ, ಕಾರ್ಯಗತಗೊಳಿಸುವ ಸ್ವರೂಪ, ಬೇಡಿಕೆ ಮುಂತಾದ ವಿಷಯಗಳು ನೆಲಮಟ್ಟದಲ್ಲಿ ಹೇಗೆ ಜಾರಿಯಾಗುತ್ತವೆ ಎಂಬುದೇ ನಿರ್ಣಾಯಕ ಪಾತ್ರ ವಹಿಸುತ್ತವೆ.

ಹೀಗಾಗಿ, ಕಾಂಗ್ರೆಸ್‌ನ ಆಕ್ಷೇಪವನ್ನು 'ಹೆಸರು ಬದಲಾವಣೆ ಮಾತ್ರ' ಎಂದು ತಳ್ಳಿ ಹಾಕುವುದೂ ಸರಿಯಲ್ಲ; ಹಾಗೆಯೇ ಸರ್ಕಾರದ 'ಹೊಸ ಚೌಕಟ್ಟು–ಹೊಸ ಹೆಸರು' ಎಂಬ ವಾದವನ್ನೂ ತಾತ್ಸಾರವಾಗಿ ನಿರಾಕರಿಸುವುದೂ ಸರಿಯಲ್ಲ. ಎರಡನ್ನೂ ಮೀರಿಸಿ, ಗ್ರಾಮೀಣ ಜನರಿಗೆ ಕೆಲಸ ಸಿಗುವುದು, ಕೂಲಿ ಕ್ಲಪ್ತ ಸಮಯಕ್ಕೆ ಪಾವತಿ, ಗ್ರಾಮಸಭೆಯ ಪಾತ್ರ, ಪಾರದರ್ಶಕತೆ, ಮತ್ತು ನಿರುದ್ಯೋಗ ಭತ್ಯೆ ಜಾರಿಗೆ ಬರುವಿಕೆ... ಇವೇ ಸಾರ್ವಜನಿಕ ಚರ್ಚೆಯ ಕೇಂದ್ರವಾಗಬೇಕು.

–ಜಿ.ನಾಗೇಂದ್ರ ಕಾವೂರು, ಸಂಡೂರು

ಚೈತನ್ಯಶೀಲರಾಗಿ: ಖಾಸಗಿ ರಂಗಕ್ಕೆ ಮೋದಿ ಕರೆ

ಒಪ್ಪಂದಗಳು ವಿಕಸಿತ ಭಾರತಕ್ಕೆ ಅಡಿಪಾಯ

ಹೊಸದಿಲ್ಲಿ: ಕೇಂದ್ರದ ಹಣಕಾಸು ಸಚಿವರು ಈಚೆಗೆ ಮಂಡಿಸಿದ ಜನಪರ ಬಜೆಟ್ ಮತ್ತು ತನ್ನ ನೇತೃತ್ವದ ಸರ್ಕಾರ ಸಹಿ ಹಾಕಿರುವ ಜಾಗತಿಕ ವ್ಯಾಪಾರ ಒಪ್ಪಂದಗಳು ವಿಕಸಿತ ಭಾರತಕ್ಕೆ ಭದ್ರ ಬುನಾದಿಗಳು, ವಿಕಸಿತ ಭಾರತ ದೃಗ್ಗೋಚರವಾಗುತ್ತಿದೆ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ, ಇನ್ನೀಗ ಹೆಚ್ಚು ಚೈತನ್ಯಶೀಲರಾಗಿ ಮತ್ತು ಧೈರ್ಯದಿಂದ ಮುನ್ನಡೆ ಸಾಧಿಸುವಂತೆ ಖಾಸಗಿ ರಂಗಕ್ಕೆ ಕರೆ ನೀಡಿದ್ದಾರೆ.

ವಿಕಸಿತ ಭಾರತದಲ್ಲಿ ದೇಶದ ಮಾತೃಶಕ್ತಿ ತುಂಬು ಮಹತ್ತ್ವದ ಪಾತ್ರ ವಹಿಸಲಿದೆ ಎಂದು ಪಿಟಿಐ ಸಂದರ್ಶನದಲ್ಲಿ ನುಡಿದ ಪ್ರಧಾನಿ ನರೇಂದ್ರ ಮೋದಿ, ಗಣನೀಯ ವ್ಯಾಪಾರ ಒಪ್ಪಂದಗಳ ಮಾಡಿಕೊಳ್ಳಲು ವಿಫಲವಾದ ಯುಪಿಎ ಸರ್ಕಾರವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ.

ರಾಜಕೀಯ ಸ್ಥಿರತೆ ಜತೆ ಧನಾತ್ಮಕ ನಿರೀಕ್ಷೆಗಳ ಪರಿಣಾಮ, ಹೂಡಿಕೆದಾರರು ಭಾರತದಲ್ಲಿ ದೃಢ ವಿಶ್ವಾಸ ಕಾಯ್ದುಕೊಂಡಿದ್ದಾರೆ. ದೇಶದ ಬಲಿಷ್ಠ ಉತ್ಪಾದನಾ ರಂಗ, ಸೇವೆಗಳು ಮತ್ತು ಎಂಎಸ್‌ಎಂಇಗಳಿಂದಾಗಿ ಅತ್ಯಂತ ಪ್ರಬಲ ಮನೋಸ್ಥಿತಿಯಲ್ಲಿ 38 ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳ ಹೊಂದಲು ಸಾಧ್ಯವಾಗಿದೆ.

ಪೂರ್ಣ ತೃಪ್ತಿ ಆಗಿಲ್ಲ:

ಮುಂದಿನ ಮೂರು ದಶಕಗಳಿಗೆ ಅನ್ವಯಿಸುವಂತೆ ಮೂರು ಉನ್ನತ ಪ್ರಾಧಾನ್ಯತೆಗಳ ಹೊಂದಿದ್ದೇನೆ. ಹೆಚ್ಚು ರಚನಾತ್ಮಕ ಸುಧಾರಣೆಗಳು, ತಂತ್ರಜ್ಞಾನಕ್ಕೆ ಸಂಬಂಧಿಸಿ ಆವಿಷ್ಕಾರಗಳಲ್ಲಿ ಮತ್ತಷ್ಟು ಗಹನತೆ, ಉತ್ಪಾದನೆ ಮತ್ತು ಸೇವೆಗಳು, ಸರಳ ಆಡಳಿತ ಇತ್ಯಾದಿಗಳಿಂದ ಜನರು ಮತ್ತು ವ್ಯಾಪಾರ ವ್ಯವಹಾರಗಳು ಹೆಚ್ಚು ಸುಗಮ ಮತ್ತು ವಿಶ್ವಾಸಾರ್ಹವಾಗಲಿವೆ ಎಂದು ಮೋದಿ ಹೇಳಿದರು. ಸುಧಾರಣಾ ಎಕ್ಸ್‌ಪ್ರೆಸ್‌ನಿಂದಾದ ಪ್ರಗತಿಗಳು ಸಂತೃಪ್ತಿ ನೀಡಿವೆಯೇ ಎಂದಾಗ, ತನ್ನ ಮನೋಧರ್ಮಕ್ಕನುಗುಣವಾಗಿ ತಾನು ಖಂಡಿತ ಪೂರ್ಣ ಸಂತೃಪ್ತನಾಗಿಲ್ಲ ಎಂದು ಪ್ರಧಾನಿ ಮೋದಿ ಉತ್ತರಿಸಿದರು.

ಸಂಪನ್ನ ಭಾರತದ ಸಾಕಾರ ಬಜೆಟ್ ಧ್ಯೇಯ

ಇಲ್ಲಿ ವಿಸ್ತೃತವಾದ ನಿರ್ವಹಣಾ ಚಾತುರ್ಯವಿದೆ, ಕ್ರಿಯಾ ಯೋಜನೆಯಿದೆ ಮತ್ತು ಪರಿಣಾಮಕಾರಿ ಅನುಷ್ಠಾನ ಬದ್ಧತೆಯಿದೆ. ಇದು ಇಡೀ ದೇಶದ ಚಿಂತನೆ, ಧ್ಯೇಯದ ನಿರಂತರತೆ ಮತ್ತು ದೀರ್ಘಾವಧಿಯ ವಿಷನ್‌ಗಳು ವರ್ಷದಿಂದ ವರ್ಷಕ್ಕೆ ಹಂತಹಂತವಾಗಿ ಪ್ರಗತಿಪರವಾಗಿ ಸಾಕಾರಗೊಳ್ಳುತ್ತಿರುವುದನ್ನು ಪ್ರತಿಫಲಿಸಿವೆ. ಹಾಗಾಗಿ ಇಲ್ಲಿ ಒತ್ತಡದಿಂದ ಸೃಜನೆಯಾದ, ಯಾವತ್ತೂ ಎದುರಾಗಿರದ ಕ್ಷಣದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಭಾರತವು ಸಂಪನ್ನ ರಾಷ್ಟ್ರವಾಗಬೇಕು ಎಂಬುದೇ ನಮ್ಮ ಧ್ಯೇಯವೆಂಬುದನ್ನು 2026–27ನೇ ಬಜೆಟ್ ಪ್ರತಿಫಲಿಸಿದೆ ಎಂದು ಉತ್ತರಿಸಿದರು.

ಹಿಂದಿನ ಸರ್ಕಾರಗಳ ಲೋಪ ನಿವಾರಣೆಗೆ ಶ್ರಮ

ಹಿಂದಿನ ಸರಕಾರಗಳ ಆಡಳಿತಗಾರರು ಎಸಗಿದ್ದ ವ್ಯೂಹಾತ್ಮಕ ಲೋಪಗಳನ್ನು ತನ್ನ ನೇತೃತ್ವದ ಸರಕಾರ ವರ್ಷಗಳಿಂದ ಶ್ರಮಿಸಿ ನಿವಾರಿಸಿದೆ. ಏಕಕಾಲಕ್ಕೆ ದಿಟ್ಟ ಸುಧಾರಣೆಗಳ ಅನುಷ್ಠಾನ ಮುಖೇನ ಸಂಪನ್ನ ಭಾರತ ನಿರ್ಮಾಣಕ್ಕೆ ಬುನಾದಿ ಹಾಕಿದೆ. ಅತ್ಯಂತ ಗಮನಾರ್ಹವೆಂಬಂತೆ ಯುರೋಪ್ ಒಕ್ಕೂಟ, ಇಂಗ್ಲೆಂಡ್‌ಗಳ ಜತೆ ಮೈಲಿಗಲ್ಲಿನ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮುಖೇನ, ತೆರಿಗೆ ಪ್ರಮಾಣಗಳಲ್ಲಿ ತುಂಬು ಕಡಿತದ ಪ್ರಯೋಜನ ಪಡೆದಿದ್ದೇವೆ, ನಮ್ಮ ವಸ್ತುಗಳು ಮತ್ತು ಸೇವೆಗಳ ಮಾರುಕಟ್ಟೆ ವ್ಯಾಪ್ತಿಯನ್ನು ತನ್ಮೂಲಕ ವಿಸ್ತರಿಸಿದ್ದೇವೆ. ತೆರಿಗೆ ಗೊಂದಲಗಳ ನಿವಾರಣೆ ಮತ್ತು ವ್ಯಾಪಾರ ವ್ಯವಹಾರಗಳ ವಿಸ್ತೃತಗೊಳಿಸುವ ನಿಟ್ಟಿನಲ್ಲಿ ಅಮೆರಿಕ ಜತೆ ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಇವೆಲ್ಲ ಉಪಕ್ರಮಗಳು ವಿದೇಶಿ ಮಾರುಕಟ್ಟೆಗಳಲ್ಲಿ ಭಾರತೀಯ ರಫ್ತುಗಾರರ ಪಾಲಿಗೆ ಮಹತ್ತ್ವದ ಸುಧಾರಣಾ ಅವಕಾಶವಾಗಲಿದೆ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಗೆ ಸಮಗ್ರವಾಗಿ ಹೆಚ್ಚು ನಿಕಟವಾಗುವಲ್ಲಿ ಭಾರತಕ್ಕೆ ಬಲ ನೀಡಲಿದೆ ಎಂದು ಪ್ರಧಾನಿ ಮೋದಿ ಲಿಖಿತ ಸಂದರ್ಶನದಲ್ಲಿ ವಿವರಿಸಿದ್ದಾರೆ.



ಅಭೂತಪೂರ್ವ ಮೈಲಿಗಲ್ಲು


ಭಾರತವೀಗ ಬರೋಬ್ಬರಿ 38 ಪಾಲುದಾರ ರಾಷ್ಟ್ರಗಳೊಂದಿಗೆ ಎಫ್‌ಟಿಎಗಳನ್ನು ಹೊಂದಿರುವುದು ಭಾರತದ ವ್ಯಾಪಾರ ಚರಿತ್ರೆಯಲ್ಲೇ ಅಭೂತಪೂರ್ವ ಮೈಲಿಗಲ್ಲು. ಅನ್ಯಾನ್ಯ ತೆರನಾದ ಆರ್ಥಿಕ ಬಲವಿರುವ ಖಂಡಗಳು, ರಾಷ್ಟ್ರಗಳೂ ವ್ಯಾಪಾರ ಒಪ್ಪಂದಗಳಿಗೆ ಸಹಿಹಾಕಿರುವುದು ವಿಶೇಷ. ನಮ್ಮ ರಾಷ್ಟ್ರದಲ್ಲೀಗ ನವ ವಿಶ್ವಾಸ ಮೂಡಿದೆ. ವಿಭಿನ್ನ ತೆರನಾದ ಸವಾಲುಗಳ ಸಂದರ್ಭಗಳಲ್ಲಿ ನಮ್ಮ ರಾಷ್ಟ್ರೀಯ ಸನ್ನಡತೆ ಸ್ಪಷ್ಟ ವೇದ್ಯವಾಗಿದೆ. ಸಂಕ್ಲಿಷ್ಟ ಜಾಗತಿಕ ಸನ್ನಿವೇಶಗಳ ಹೊರತೂ ಭಾರತ ಪ್ರಗತಿಯ, ನಿರಂತರ ಬೆಳವಣಿಗೆಯ ಜ್ವಾಜಲ್ಯಮಾನ ಕೇಂದ್ರವಾಗಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಉಪಯುಕ್ತ ವ್ಯಯ

ಉಪಯುಕ್ತ ವ್ಯಯ ತನ್ನ ಸರಕಾರದ ವಿಶಿಷ್ಟತೆ. ಕೇಂದ್ರ ಬಜೆಟ್ ಅಲ್ಪಾವಧಿಯ ಪ್ರಚಾರಗಳಿಗೆ ಅವಕಾಶ ಕೊಡದೆ, ಉದ್ಯೋಗಾವಕಾಶ ಮತ್ತು ಸಹ್ಯ ಪ್ರಗತಿಗೆ ಅವಕಾಶವೀವ ಮೂಲಸೌಕರ್ಯ ರಂಗದಲ್ಲಿ ದಾಖಲೆಯ ಬಂಡವಾಳ ಹೂಡಿಕೆಗೆ ಉತ್ತೇಜನವಿತ್ತಿದೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ.



ಮಧ್ಯಪ್ರದೇಶದ ಉಜ್ಜೈನಿಯಲ್ಲಿ ಶ್ರೀ ಮಹಾಕಾಲೇಶ್ವರನಿಗೆ ಪಂಚಾಮೃತ ಅಭಿಷೇಕ



ಉತ್ತರಾಖಂಡದ ಹಿಮಾವೃತ ಶ್ರೀಕೇದಾರನಾಥ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಸಂದರ್ಭ ಶಿವನಿಗೆ ನಮಿಸಿದ ಭದ್ರತಾ ಸಿಬ್ಬಂದಿ. ಏ.22ರಂದು ದೇವಸ್ಥಾನವನ್ನು ಭಕ್ತರಿಗಾಗಿ ತೆರೆಯಲಾಗುವುದು.

ಗುಜರಾತ್‌ನ ಶ್ರೀಸೋಮನಾಥದಲ್ಲಿ ವಿಶೇಷ ಅಲಂಕಾರದೊಂದಿಗೆ ಜ್ಯೋತಿರ್ಲಿಂಗ ದರ್ಶನ.





ಉತ್ತರಪ್ರದೇಶದ ಪ್ರಯಾಗರಾಜ್ ತ್ರಿವೇಣಿ ಸಂಗಮದಲ್ಲಿ ಮಾಘ ಮೇಳ ಹಿನ್ನೆಲೆ ಮಹಾಶಿವರಾತ್ರಿಯ ದಿನ 10 ಲಕ್ಷಕ್ಕೂ ಹೆಚ್ಚು ಭಕ್ತರಿಂದ ಪುಣ್ಯಸ್ನಾನ.

ಶಿವನಾಮ ಸ್ಮರಣೆ ಧ್ಯಾನ, ಜಾಗರಣೆ

ಶಿವ ಪೂರ್ಣ ನಿಶ್ಚಲತೆಯನ್ನು ಪ್ರತಿನಿಧಿಸುತ್ತಾನೆ. ಅವನು ನಿರಾಕಾರ, ಶಿವನಿಗೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಆದಿಯೂ ಇಲ್ಲ ಅಂತ್ಯವೂ ಇಲ್ಲದವ ಶಿವ. ಧ್ಯಾನ ಭಂಗಗೊಳಿಸಿದ ಮನ್ಮಥನನ್ನು ಮೂರನೇ ಕಣ್ಣು ತೆರೆದು ಸುಟ್ಟವನು. ಸ್ಮಶಾನದ ಭಸ್ಮ ಲೇಪಿತ ಅಘೋರಿ. ದೇವತೆ, ಅಸುರ, ಪಿಶಾಚಿ, ಭೂತ-ಪ್ರೇತ ಗಣಗಳಿಂದ ಪೂಜಿಸಲ್ಪಡುವ ಒಬ್ಬನೇ ದೇವರು, ದೇವರುಗಳಿಗೂ ದೇವ ಮಹಾದೇವ. ಮಹಾಶಿವರಾತ್ರಿ, ಸನಾತನ ಧರ್ಮದಲ್ಲಿ ಪ್ರಮುಖ ಹಬ್ಬಗಳಲ್ಲೊಂದು. ಕೇದಾರನಾಥದಲ್ಲಿ ಶಿವ ಮತ್ತು ಪಾರ್ವತಿ ಪ್ರೇಮ ವಿವಾಹವಾದ ಹಾಗೂ ರುದ್ರ ತಾಂಡವ ನೃತ್ಯವನ್ನಾಡಿದ ನೆನಪಿಗಾಗಿ ಮಹಾಶಿವರಾತ್ರಿ (ಶಿವನ ಮಹಾರಾತ್ರಿ)ಯನ್ನು ಆಚರಿಸಲಾಗುತ್ತದೆ. ಇದು ಆಧ್ಯಾತ್ಮಿಕವಾಗಿ ಜಾಗರಣೆಯ ರಾತ್ರಿಯಾಗಿದೆ. ಈ ರಾತ್ರಿ ಉತ್ತರ ಗೋಳಾರ್ಧದಲ್ಲಿ ಗ್ರಹಗಳು ಸಮಾನಾಂತರ ರೇಖೆಯಲ್ಲಿ ಒಂದುಗೂಡುವುದರಿಂದ ಮಾನವ ಶರೀರದಲ್ಲಿ ಶಕ್ತಿಯ ಚಲನೆ ಮೇಲ್ಮುಖ ಆಗಿರುತ್ತದೆ. ಇದರಿಂದ ಈ ದಿನ ಮಲಗಬಾರದು, ಜಾಗೃತ ಸ್ಥಿತಿಯಲ್ಲಿ ಇರಬೇಕು. ಉಪವಾಸ, ಧ್ಯಾನ ಮಾಡಬೇಕು ಎಂಬ ನಂಬಿಕೆ ಜನರಲ್ಲಿ ಮನೆಮಾಡಿದೆ.



ಬೆಂಗಳೂರಿನ ಶಿವೋಹಂ ದೇವಸ್ಥಾನದಲ್ಲಿ ಕಂಗೊಳಿಸಿದ ಧ್ಯಾನಮಗ್ನ ಶಿವ.



ಅಸ್ಸಾಂನ ಶ್ರೀಮೃತ್ಯುಂಜಯ ಶಿವಲಿಂಗ



ಉತ್ತರಾಖಂಡದ ಶ್ರೀ ನೀಲಕಂಠ ಮಹಾದೇವ



ಜಮ್ಮು ಕಾಶ್ಮೀರದ ಶ್ರೀನಗರದಲ್ಲಿನ ಶಂಕರಾಚಾರ್ಯ ದೇವಸ್ಥಾನದಲ್ಲಿ ಬಿಗಿಭದ್ರತೆಯೊಂದಿಗೆ ಮಹಾಶಿವರಾತ್ರಿ ದರ್ಶನ ಪಡೆದ ಭಕ್ತರು.

ಮೃತ್ಯು ಭಯ ಓಡಿಸುವ ಮಹಾ ಮೃತ್ಯುಂಜಯ

ಮಹಾ ಮೃತ್ಯುಂಜಯ ಮಂತ್ರವು ಅತ್ಯಂತ ಶಕ್ತಿಶಾಲಿ ಶಿವ ಮಂತ್ರಗಳಲ್ಲೊಂದಾಗಿದ್ದು, ಋಗ್ವೇದದಲ್ಲಿ ಇದರ ಉಲ್ಲೇಖವಿದೆ. ಈ ಮಂತ್ರವನ್ನು ಪಠಿಸುವುದರಿಂದ ಮನುಷ್ಯ ಮೃತ್ಯು ಭಯದಿಂದ ಮುಕ್ತನಾಗುತ್ತಾನೆ. ಇಲ್ಲಿ ಮಹಾ ಎಂದರೆ ಶ್ರೇಷ್ಠ, ಮೃತ್ಯು ಎಂದರೆ ಸಾವು ಮತ್ತು ಜಯ ಎಂದರೆ ಗೆಲುವು ಎಂದರ್ಥ.

ಓಂ ತ್ರಯಂಬಕಂ ಯಜಾಮಹೆ,
ಸುಗಂಧಿಮ್ ಪುಷ್ಟಿ ವರ್ಧನಂ,
ಉರ್ವಾರುಕಮಿವ ಬಂಧನಾತ್,
ಮೃತ್ಯೋರ್ ಮುಕ್ಷೀಯ ಮಾಮೃತಾತ್.

ಪ್ರಯೋಜನಗಳು

- ಮೃತ್ಯು ಭಯದಿಂದ ಮುಕ್ತಿ
- ಅಕಾಲಿಕ ಮರಣದಿಂದ ಪ್ರಾಣ ರಕ್ಷಣೆ
- ಕಾಳ ಸರ್ಪ ದೋಷ ಕಳೆಯಲು ನೆರವು
- ಏಕಾಗ್ರತೆ ಹೆಚ್ಚಿಸುವ ಮಂತ್ರ
- ರೋಗ ಮುಕ್ತಗೊಳಿಸುವ ಶಕ್ತಿ
- ಅಪಘಾತ ಸಾಧ್ಯತೆಯಿಂದ ರಕ್ಷಣೆ

ಕಾಶಿಯಲ್ಲಿ ವಿಶ್ವನಾಥನಿಗೆ ಮಹಾಶಿವರಾತ್ರಿಯ ವಿಶೇಷ ಅಲಂಕಾರ ಮತ್ತು ಅಭಿಷೇಕ.



- ದೇಶದೆಲ್ಲೆಡೆ ಸಂಭ್ರಮದ ಮಹಾಶಿವರಾತ್ರಿ ಆಚರಣೆ
- ಅಸಂಖ್ಯಾತ ಭಕ್ತರಿಂದ ಜ್ಯೋತಿರ್ಲಿಂಗಗಳ ದರ್ಶನ
- ಶಿವನಾಮ ಸ್ಮರಣೆಯಲ್ಲಿ ಮಿಂದೆದ್ದ ಸನಾತನ ಭಾರತ

ಕಿರುಸುದ್ದಿ

ಎಪ್ಸ್ಟೀನ್ ನೆರವಿನ ಪ್ರಶಸ್ತಿ ಪಡೆದಿದ್ದ ಸಿಬಲ್ ಕುರಿತು ಕಾಂಗ್ರೆಸ್ ಉತ್ತರಿಸಲಿ

ಹೊಸದಿಲ್ಲಿ: ಭಾರೀ ಸುದ್ದಿಯಲ್ಲಿರುವ ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್ಸ್ಟೀನ್‌ನ ಧನಸಹಾಯದಿಂದ ಸ್ಥಾಪಿಸಿದ್ದ ಪ್ರಶಸ್ತಿಯನ್ನು ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಸಚಿವರಾಗಿದ್ದ ಕಪಿಲ್ ಸಿಬಲ್ ಅವರಿಗೆ ನೀಡಲಾಗಿದ್ದು, ಈ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೇಶದ ಜನತೆಗೆ ಉತ್ತರಿಸಬೇಕೆಂದು ಬಿಜೆಪಿ ಆಗ್ರಹಿಸಿದೆ. ಈ ಬಗ್ಗೆ ಬಿಜೆಪಿಯ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ 'ಎಕ್ಸ್'ನಲ್ಲಿ ಮಾಡಿದ ಪೋಸ್ಟ್ ಒಂದರಲ್ಲಿ, ಎಪ್ಸ್ಟೀನ್ ಧನಸಹಾಯದಿಂದ ಸ್ಥಾಪಿಸಲಾಗಿತ್ತೆನ್ನಲಾದ ಸ್ಟೀಫನ್ ಪಿ.ದುಗ್ಗಾನ್ ಪ್ರಶಸ್ತಿಯನ್ನು ಗಾಂಧಿ ಕುಟುಂಬದ ಆಪ್ತರಾದ ಕಪಿಲ್ ಸಿಬಲ್ ಅವರಿಗೆ, 2010ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಸಮಾರಂಭದಲ್ಲಿ ನೀಡಲಾಗಿತ್ತು.ಅಷ್ಟೇ ಅಲ್ಲದೆ ಈ ಪ್ರಶಸ್ತಿ ಪುರಸ್ಕೃತರ ಪಟ್ಟಿಯೊಂದನ್ನು ಕೂಡ ಭಂಡಾರಿ ಅವರು ಹಂಚಿಕೊಂಡಿದ್ದು, ಇದರಲ್ಲಿ ಸಿಬಲ್ ಅಲ್ಲದೆ ಇನ್ನೋರ್ವ ಗಾಂಧಿ ಕುಟುಂಬದ ಆಪ್ತ ಸ್ಯಾಮ್ ಪಿತ್ರೋಡಾ ಹೆಸರು ಕೂಡ ಇದೆ ಎನ್ನಲಾಗಿದೆ.

ಆದರೆ ಕಾಂಗ್ರೆಸ್ ಇದನ್ನು ನಿರಾಕರಿಸಿದ್ದು, ಅದು ಪ್ರಮುಖ ಕಾರ್ಯಕ್ರಮಗಳು, ಉದ್ಘಾಟನೆಗಳು, ನಿಧಿ ಎತ್ತುವಿಕೆಗೆ ಸಂಬಂಧಿಸಿದ ಕ್ಯಾಲೆಂಡರ್‌ಪಟ್ಟಿಯಲ್ಲಿ ನೀಡಲಾದ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಜುಕೇಷನ್ ಕಾರ್ಯಕ್ರಮ ಕುರಿತಾದ್ದು,ಇದಕ್ಕೂ ಎಪ್‌ಸ್ಟೈನ್‌ಗೂ ಸಂಬಂಧ ಇಲ್ಲ ಎಂದು ಹೇಳಿಕೊಂಡಿದೆ. ಆದರೆ ಕೇಂದ್ರ ಸಚಿವ ಹರ್ದೀಪ್‌ಸಿಂಗ್ ಪುರಿ ಕುರಿತಾದ ಎಪ್ಸ್ಟೀನ್ ಫೈಲ್‌ನಲ್ಲೂ ಇಂತಹುದೇ ಉಲ್ಲೇಖ ಇದ್ದರೂ ಹರ್ದೀಪ್ ಸಿಂಗ್ ಪುರಿಯ ರಾಜೀನಾಮೆ ಕೇಳುವ ಕಾಂಗ್ರೆಸ್, ತನ್ನ ನಾಯಕರ ಹೆಸರು ಬಂದಾಗ ಇಂತಹ ಸಮಜಾಯಿಷಿ ನೀಡುತ್ತಿರುವುದಕ್ಕೆ ಬಿಜೆಪಿ ತರಾಟೆಗೆತ್ತಿಕೊಂಡಿದೆ.

ಪ್ರಯಾಣಿಕ ರೈಲಿನ ಖಾಲಿ ಬೋಗಿಗೆ ಬೆಂಕಿ, ಆತಂಕ

ಕೋಲ್ಕತ: ಪಶ್ಚಿಮ ಬಂಗಾಳದ ಕತ್ವಾ ರೈಲ್ವೆ ನಿಲ್ದಾಣದಲ್ಲಿ ಖಾಲಿಯಿದ್ದ ಪ್ರಯಾಣಿಕ ರೈಲಿನ ಬೋಗಿ ಭಾನುವಾರ ಬೆಳಗ್ಗೆ ಅಗ್ನಿ ಅವಘಡಕ್ಕೆ ಒಳಗಾಗಿದ್ದು, ಯಾವುದೇ ರೀತಿಯ ಗಾಯವಾಗಿಲ್ಲ ಎಂದು ಈಶಾನ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಬಂಗಾಳದ ಪೂರ್ವ ವರ್ಧಮಾನ್ ಜಿಲ್ಲೆಯ ಕತ್ವಾ ರೈಲ್ವೆ ನಿಲ್ದಾಣದಲ್ಲಿ ದುರ್ಘಟನೆ ಸಂಭವಿಸಿದೆ. ಮುಂಜಾನೆ 4.30ರ ವೇಳೆಗೆ ಪ್ಲಾಟ್‌ಫಾರಂ 2ರಲ್ಲಿ ನಿಂತಿದ್ದ ಕತ್ವಾ–ಅಜೀಮ್‌ಗಂಜ್ ಪ್ರಯಾಣಿಕ ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ನಿಯಂತ್ರಿಸಲು ಅಗ್ನಿಶಾಮಕ ದಳ ಸಿಬ್ಬಂದಿ 30 ನಿಮಿಷ ಶ್ರಮಿಸಿದರು.

ಪಾಕ್ ಫೀಲ್ಡ್ ಮಾರ್ಷಲ್ ಮುನೀರ್‌ಗೆ ಮುಖಭಂಗ

ಮ್ಯೂನಿಚ್: ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಅಸೀಮ್ ಮುನೀರ್ ಅವರನ್ನು ಜರ್ಮನಿಯ ಮ್ಯೂನಿಚ್‌ನಲ್ಲಿ ನಡೆಯುತ್ತಿರುವ ಭದ್ರತಾ ಸಮಾವೇಶದಲ್ಲಿ ಭದ್ರತಾ ಸಿಬ್ಬಂದಿ ತಡೆದು, ಗುರುತಿನ ಚೀಟಿ ತೋರಿಸುವಂತೆ ಕೇಳಿದ್ದಾರೆ. ಇದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಪಾಕಿಸ್ತಾನ ಭಾರೀ ಮುಜುಗರ ಅನುಭವಿಸಿದೆ. ವಿಡಿಯೋ ದೃಶ್ಯಾವಳಿಯಲ್ಲಿ, ಸಮಾವೇಶದ ಸ್ಥಳದಲ್ಲಿ ಮಹಿಳಾ ಭದ್ರತಾ ಅಧಿಕಾರಿಯೊಬ್ಬರು ತಡೆದು ಮುನೀರ್‌ಗೆ ತಮ್ಮ ಗುರುತಿನ ಚೀಟಿಯನ್ನು ತಿರುಗಿಸಿ ತೋರಿಸುವಂತೆ ಸೂಚಿಸುತ್ತಿರುವುದು ಕಂಡುಬಂದಿದೆ. ಪ್ರಮುಖ ಅಂತಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಇಂತಹ ಪರಿಶೀಲನೆ ವಾಡಿಕೆಯಾಗಿದ್ದರೂ, ಈ ಘಟನೆ ಆನ್‌ಲೈನ್‌ನಲ್ಲಿ ವೈರಲ್ ಆಗಿದ್ದು, ಪಾಕಿಸ್ತಾನದ ಜಾಗತಿಕ ಸ್ಥಾನಮಾನದ ಬಗ್ಗೆ ಚರ್ಚೆಗೆ ಕಾರಣವಾಗಿದೆ. ಪಾಕಿಸ್ತಾನದ ಮಾಜಿ ಮಿಲಿಟರಿ ಅಧಿಕಾರಿ ಆದಿಲ್ ರಾಜಾ, ಸೇನಾ ಮುಖ್ಯಸ್ಥರಿಗೆ ಅಂತಾರಾಷ್ಟ್ರೀಯ ಮನ್ನಣೆ ಇಲ್ಲ ಎಂದು ಟೀಕಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಮುನೀರ್, ಕೇಳಿದಾಗ ದ್ವಾರಪಾಲಕರಿಗೂ ಸಹ ವಿಧೇಯತೆಯಿಂದ ತನ್ನನ್ನು ಪೂಚಯಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಜರ್ಮನಿ ಮೂಲದ ಸಿಂಧಿ ರಾಷ್ಟ್ರೀಯವಾದಿ ಗುಂಪು ಜೀ ಸಿಂಧ್ ಮುತ್ತಾಹಿದಾ ಮಹಜ್, ಮುನೀರ್ ಭಾಗವಹಿಸುವಿಕೆ ವಿರೋಧಿಸಿ ಪ್ರತಿಭಟನೆ ನಡೆಸಿತು. ಅವರನ್ನು ಆಹ್ವಾನಿಸಿರುವ ಬಗ್ಗೆ ಆಘಾತ ವ್ಯಕ್ತಪಡಿಸಿ ವಿಶ್ವಸಂಸ್ಥೆ, ಯುರೋಪಿಯನ್ ಯೂನಿಯನ್ ಮತ್ತು ಜರ್ಮನ್ ಸರ್ಕಾರಕ್ಕೆ ಹೇಳಿಕೆಗಳನ್ನು ಕಳುಹಿಸಿದೆ.

ಫೆ.17ಕ್ಕೆ ಬಾಂಗ್ಲಾ ಪ್ರಧಾನಿ ಪ್ರಮಾಣ, ಬಿರ್ಲಾ ಭಾಗಿ

ಹೊಸದಿಲ್ಲಿ: ಬಾಂಗ್ಲಾದೇಶದ ಪ್ರಧಾನಿಯಾಗಿ ತಾರಿಕ್ ರೆಹಮಾನ್ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಲಿದ್ದು, ಈ ಸಮಾರಂಭದಲ್ಲಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಲಾಗಿತ್ತಾದರೂ, ಮುಂಬೈನಲ್ಲಿ ಮೊದಲೇ ನಿಗದಿಯಾಗಿದ್ದ ಕಾರ್ಯಕ್ರಮದಿಂದಾಗಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎನ್ನಲಾಗಿದೆ. ಬಾಂಗ್ಲಾ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್ ಭಾರತ, ಚೀನಾ, ಸೌದಿ ಅರೇಬಿಯಾ, ಪಾಕಿಸ್ತಾನ, ಟರ್ಕಿ ಮತ್ತು ನೆರೆಯ ರಾಷ್ಟ್ರಗಳು ಸೇರಿದಂತೆ 13 ದೇಶಗಳ ಸರ್ಕಾರದ ಮುಖ್ಯಸ್ಥರನ್ನು ಆಹ್ವಾನಿಸಿದ್ದಾರೆ. ಬಿರ್ಲಾ ಅವರ ಭಾಗವಹಿಸುವಿಕೆ, ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಆಳವಾದ ಸ್ನೇಹವನ್ನು ಒತ್ತಿಹೇಳುತ್ತದೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಭಾರತದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಮುಖ್ಯ ಚುನಾವಣಾ ಆಯುಕ್ತ ಎ.ಎಂ.ಎಂ. ನಾಸಿರ್ ಉದ್ದೀನ್, ಬಾಂಗ್ಲಾದೇಶ ಸಂಸತ್ ಭವನದ ದಕ್ಷಿಣ ಪ್ಲಾಜಾದಲ್ಲಿ ಪ್ರಮಾಣ ವಚನ ಬೋಧಿಸಲಿದ್ದಾರೆ. ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ ಅಧ್ಯಕ್ಷರಾದ ರೆಹಮಾನ್, ಆಗಸ್ಟ್ 2024ರಲ್ಲಿ ಶೇಖ್ ಹಸೀನಾ ಆಡಳಿತವನ್ನು ಕೊನೆಗೊಳಿಸಿದಾಗಿನಿಂದ ಇರುವ ಮಧ್ಯಂತರ ಸರ್ಕಾರದಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಬ್ರಿಟನ್‌ನಲ್ಲಿ 17 ವರ್ಷಗಳ ವನವಾಸದ ನಂತರ ಡಿಸೆಂಬರ್‌ನಲ್ಲಿ ಬಾಂಗ್ಲಾದೇಶಕ್ಕೆ ಮರಳಿದ ಬಿಎನ್‌ಪಿ ಮುಖ್ಯಸ್ಥ ರೆಹಮಾನ್ ಅವರ ಗೆಲುವು ಬಾಂಗ್ಲಾದೇಶದಲ್ಲಿ ನಾಟಕೀಯ ಬದಲಾವಣೆಗೆ ಮುನ್ನುಡಿಯಾಗಿದೆ. ಚುನಾವಣೆಯಲ್ಲಿ ಅವರ ಮೈತ್ರಿಕೂಟ 212 ಸ್ಥಾನಗಳನ್ನು ಗೆದ್ದರೆ, ಜಮಾತ್–ಎ–ಇಸ್ಲಾಮಿ ನೇತೃತ್ವದ ಮೈತ್ರಿಕೂಟ 77 ಸ್ಥಾನಗಳನ್ನು ಗಳಿಸಿತ್ತು.

ಭಾರತ ಅತ್ಯಂತ ಯಶಸ್ವಿ ಉದಯೋನ್ಮುಖ ರಾಷ್ಟ್ರ

ಹೊಸದಿಲ್ಲಿ: ಬೆಳೆಯುತ್ತಿರುವ ಜಾಗತಿಕ ಪ್ರಭಾವದೊಂದಿಗೆ, ಭಾರತ ಅತ್ಯಂತ ಯಶಸ್ವಿ ಉದಯೋನ್ಮುಖ ಆರ್ಥಿಕತೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಬಣ್ಣಿಸಿದ್ದಾರೆ. ಅಲ್ಲದೆ, ಇಂಡಿಯಾ–ಎಐ ಇಂಪ್ಯಾಕ್ಟ್ ಶೃಂಗಸಭೆ 2026 ಅನ್ನು ಆಯೋಜಿಸಲು ಇದು ಸರಿಯಾದ ಸ್ಥಳ ಎಂದಿದ್ದಾರೆ. ಇಂದಿನಿಂದ ಫೆಬ್ರವರಿ 20 ರವರೆಗೆ ನಡೆಯುವ ಶೃಂಗಸಭೆಗೆ ಮುಂಚಿತವಾಗಿ ಸಂದರ್ಶನವೊಂದರಲ್ಲಿ ಅವರು, ಗ್ಲೋಬಲ್ ಸೌತ್‌ನಲ್ಲಿ ಮೊದಲ ಪ್ರಮುಖ ಎಐ ಶೃಂಗಸಭೆಯನ್ನು ಆಯೋಜಿಸಿದ್ದಕ್ಕಾಗಿ ಭಾರತವನ್ನು ಅಭಿನಂದಿಸಿದರು. ಕೃತಕ ಬುದ್ಧಿಮತ್ತೆ ಎಲ್ಲಾ ದೇಶಗಳಿಗೆ ಪ್ರಯೋಜನವಾಗಬೇಕು, ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಥವಾ ಎರಡು ಮಹಾಶಕ್ತಿಗಳ(ಯುಎಸ್ ಮತ್ತು ಚೀನಾ) ಸವಲತ್ತುಗಳಾಗಿ ಉಳಿಯಬಾರದು ಎಂದು ಹೇಳಿದರು.



ಕೃತಕ ಬುದ್ಧಿಮತ್ತೆ ಮಾನವಕುಲಕ್ಕೆ ಸಾರ್ವತ್ರಿಕ ಸಾಧನವಾಗಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳು ಕೃತಕ ಬುದ್ಧಿಮತ್ತೆಯ ಲಾಭವನ್ನು ಹಂಚಿಕೊಳ್ಳಲು ಮತ್ತು ಅದರ ಅಪಾಯಗಳನ್ನು ನಿರ್ವಹಿಸಲು ಸಮಗ್ರ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲು ಅವರು ಕರೆ ನೀಡಿದರು. ಶೃಂಗಸಭೆಯಲ್ಲಿ ವಿಶ್ವ ನಾಯಕರಾದ ಎಮ್ಯಾನುಯೆಲ್ ಮ್ಯಾಕ್ರೋನ್ ಮತ್ತು ಲೂಯಿಜ್ ಇನಾಸಿಯೋ ಅವರೊಂದಿಗೆ ಸುಂದರ್ ಪಿಚೈ, ಶಾಂತನು ನಾರಾಯಣ್ ಸೇರಿದಂತೆ ಟೆಕ್ ದಿಗ್ಗಜರು ಭಾಗವಹಿಸಲಿದ್ದಾರೆ.

ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ: ಮಾ.9ಕ್ಕೆ ಮತದಾನ

ತವಾಂಗ್: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧ ವಿಪಕ್ಷ ಸದಸ್ಯರು ಸಲ್ಲಿಸಿದ ಅವಿಶ್ವಾಸ ನಿರ್ಣಯದ ಚರ್ಚೆ ಮತ್ತು ಮತದಾನ ಮಾ.9ರಂದು ನಡೆಸಲಾಗುತ್ತದೆ. ವಿರಾಮದ ಬಳಿಕ ಸಂಸತ್ತಿನ ಅಧಿವೇಶನ ಪುನರಾರಂಭಗೊಂಡ ಕೂಡಲೇ ಈ ವಿಚಾರವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ತಿಳಿಸಿದ್ದಾರೆ. ಬಜೆಟ್ ಅಧಿವೇಶನದ ಎರಡನೇ ಭಾಗವನ್ನು ಮಾ.9ರಿಂದ ಏ.2ರವರೆಗೆ ನಡೆಸಲಾಗುವುದು. ಕೆಲವು ಆಸಕ್ತಿದಾಯಕ, ಪ್ರಾಮುಖ್ಯ ಮತ್ತು ನಿರ್ಣಾಯಕ ಮಸೂದೆಗಳನ್ನು ಸಂಸತ್ತಿನ ಅಧಿವೇಶನದಲ್ಲಿ ಮಂಡಿಸಲಾಗುವುದು. ಬಜೆಟ್ ಅಧಿವೇಶನದ ಮೊದಲ ಭಾಗದಲ್ಲಿ ವಿಪಕ್ಷಗಳು ಗದ್ದಲ ನಡೆಸಿದ್ದು, ಮುಂದಿನ ಭಾಗದಲ್ಲಿ ಇದೇ ರೀತಿ ಮುಂದುವರಿದರೆ ಅದು ವಿಪಕ್ಷಗಳಿಗೇ ಹಾನಿಯಾಗಲಿದೆ ಎಂದು ರಿಜಿಜು ಎಚ್ಚರಿಸಿದ್ದಾರೆ. ಮಾ.9ರಂದು ಮೊದಲ ದಿನವೇ ಸ್ಪೀಕರ್ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯದ ಚರ್ಚೆ ನಡೆಯಲಿದ್ದು, ಚರ್ಚೆಯ ಬಳಿಕ ಮತದಾನ ನಡೆಸಲಾಗುವುದು ಎಂದು ರಿಜಿಜು ಹೇಳಿದ್ದಾರೆ. ತಮ್ಮ ಲೋಕಸಭಾ ಕ್ಷೇತ್ರ ಅರುಣಾಚಲ ಪಶ್ಚಿಮಕ್ಕೆ ಭೇಟಿ ನೀಡಿದ್ದ ವೇಳೆ ರಿಜಿಜು ಸುದ್ದಿಗಾರರೊಂದಿಗೆ ಮಾತನಾಡಿದರು.

ಕೃಷಿ, ಹೈನುಗಾರಿಕೆ ಕ್ಷೇತ್ರ ರಕ್ಷಣೆಗೆ ಒತ್ತು: ಕೇಂದ್ರ ಸಚಿವ ಗೋಯಲ್

ಸ್ಪರ್ಧಾತ್ಮಕ ದರದಲ್ಲಿ ಸಿಗಲಿದೆ ಕಚ್ಚಾತೈಲ

ಹೊಸದಿಲ್ಲಿ: ಭಾರತ ಮತ್ತು ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದದಲ್ಲಿ ಭಾರತದ ಹೆಚ್ಚುತ್ತಿರುವ ಇಂಧನ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು, ಭಾರತಕ್ಕೆ ಹೆಚ್ಚು ಸ್ಪರ್ಧಾತ್ಮಕ ಬೆಲೆಗಳಲ್ಲಿ ಕಚ್ಚಾತೈಲವನ್ನು ಖಾತ್ರಿಪಡಿಸುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೊಯಲ್ ಹೇಳಿದ್ದಾರೆ. ಈ ಮೂಲಕ ಈ ವ್ಯಾಪಾರ ಒಪ್ಪಂದವನ್ನು ದೇಶದ ಸಮಗ್ರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿಕೊಳ್ಳಲಾಗಿದೆ ಎಂಬುದನ್ನು ಅವರು ಒತ್ತಿ ಹೇಳಿದರು. ಈ ಒಪ್ಪಂದದ ಮೂಲಕ, ಭಾರತ ಮತ್ತು ಅಮೆರಿಕಗಳು ತಮ್ಮ ನಡುವಣ ದ್ವಿಪಕ್ಷೀಯ ವ್ಯಾಪಾರವನ್ನು 2030ರೊಳಗೆ 500 ಬಿ.ಡಾ.ಗೆ ಏರಿಸಿಕೊಳ್ಳಲು ಒಪ್ಪಿಕೊಂಡಿವೆ. ಈ ಗುರಿ ಸಾಧಿಸುವತ್ತ ಕೇಂದ್ರ ಸರ್ಕಾರವು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಈ 500 ಬಿ.ಡಾ. ವ್ಯಾಪಾರ ಗುರಿಯಲ್ಲಿ, ಭಾರತದ ಇಂಧನ ಅಗತ್ಯಗಳಾದ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿಗಳಂತಹ ಇಂಧನ ಆಮದು ಪ್ರಮುಖ ಭಾಗವಾಗಿದೆ ಎಂದು ಅವರು ಸಂದರ್ಶನವೊಂದರಲ್ಲಿ ತಿಳಿಸಿದರು.

ಭಾರತವು ವಿಶ್ವದ ಅತ್ಯಂತ ವೇಗದಲ್ಲಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ದೇಶದ ಇಂಧನ ಬೇಡಿಕೆ ವಾರ್ಷಿಕವಾಗಿ ಶೇ.7ರಷ್ಟು ಹೆಚ್ಚುತ್ತಿದೆ. ಹೆಚ್ಚುತ್ತಿರುವ ಆಮದುಗಳ ನಡುವೆ ಹೆಚ್ಚು ಪೂರೈಕೆದಾರರನ್ನು ಹೊಂದುವುದರಿಂದ ಭಾರತವು ಕಚ್ಚಾತೈಲವನ್ನು ಹೆಚ್ಚು ಸ್ಪರ್ಧಾತ್ಮಕ ಬೆಲೆಗಳಲ್ಲಿ ಪಡೆಯುವುದನ್ನು ಖಾತ್ರಿಗೊಳಿಸುತ್ತದೆ ಎಂದರು. ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆಗಳ ನಡುವೆ ಭಾರತ ವ್ಯೂಹಾತ್ಮಕವಾಗಿ ಚಿಂತನೆ ನಡೆಸಿ ತನ್ನ ಅಗತ್ಯಗಳನ್ನು ಬಹುಪೂರೈಕೆದಾರರ ಮೂಲಕ ಪೂರೈಸಿಕೊಳ್ಳುವುದಕ್ಕೆ ಒತ್ತು ನೀಡಿರುವುದು ಗಮನಾರ್ಹವೆನಿಸಿದೆ.



ದೇಶದ ಕೈಗಾರಿಕಾ ರಂಗಕ್ಕೆ ಶಕ್ತಿ: ಭಾರತದ ಹೆಚ್ಚುತ್ತಿರುವ ಕೈಗಾರಿಕಾ ಅಗತ್ಯಗಳನ್ನು ಎತ್ತಿತೋರಿದ ಅವರು, ಈಗ ದೇಶದ ಉತ್ಪಾದಕರು ವಾರ್ಷಿಕವಾಗಿ 140 ಮಿ.ಟನ್ ಉಕ್ಕನ್ನು ಉತ್ಪಾದಿಸುತ್ತಿದ್ದು, ಇದು ಮುಂಬರುವ ವರ್ಷಗಳಲ್ಲಿ ದುಪ್ಪಟ್ಟಾಗುವ ನಿರೀಕ್ಷೆಯಿದೆ.ಇದೇ ರೀತಿ, ಭಾರತವು ದೊಡ್ಡ ಪ್ರಮಾಣದ ಕೋಕಿಂಗ್ ಕಲ್ಲಿದ್ದಲಿನ ಅಗತ್ಯ ಹೊಂದಿದ್ದು, ಪ್ರಸಕ್ತ 1.50 ಲ.ಕೋ.ರೂ.ಗಳ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದ್ದು, ಇದು 3 ಲ.ಕೋ.ರೂ.ಗಳಿಗೇರುವ ನಿರೀಕ್ಷೆಯಿದೆ ಎಂದರು.

ಐಟಿ ರಫ್ತು 3ಪಟ್ಟು ಹೆಚ್ಚಿಸಲು ನೆರವು: ಮೂಲಸೌಕರ್ಯ, ಸಂಪರ್ಕ ಮತ್ತು ವಿತರಣೆಗೆ ಸಂಬಂಧಿಸಿದ ಉತ್ಪನ್ನಗಳಲ್ಲಿ ಅಮೆರಿಕವು ಬಲವನ್ನು ಹೊಂದಿದೆ ಮತ್ತು ಡೇಟಾ ಕೇಂದ್ರಗಳಂತಹ ವಲಯಗಳನ್ನು ವಿಸ್ತರಿಸಲು ಭಾರತ ಇವುಗಳಿಗೆ ಹೆಚ್ಚಿನ ಪ್ರವೇಶವನ್ನು ಬಯಸುತ್ತದೆ. ಭಾರತದ ಮಾಹಿತಿ ತಂತ್ರಜ್ಞಾನ ರಫ್ತು ಪ್ರಸ್ತುತ ಸುಮಾರು 200 ಬಿ. (ರೂ. 18 ಲ.ಕೋ.)ಡಾ.ಗಳಷ್ಟಿದೆ. ಆದರೆ ಅಮೆರಿಕದ ಉಪಕರಣಗಳ ಪ್ರವೇಶವು ಐಟಿ ರಫ್ತುಗಳನ್ನು ಸುಮಾರು 45 ಲಕ್ಷ ಕೋ.ರೂ.ಗಳಿಗೆ ಅಂದರೆ ಸರಿಸುಮಾರು 3ಪಟ್ಟು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಅವರು ಉಲ್ಲೇಖಿಸಿದರು.

ಯುಎಸ್ ಜತೆ ಒಪ್ಪಂದದಿಂದ ಕೃಷಿಗಿಲ್ಲ ನಷ್ಟ: ಶಾ

ರೈತರ ದಿಕ್ಕು ತಪ್ಪಿಸುತ್ತಿರುವ ರಾಗಾ

ಗಾಂಧೀನಗರ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಕೃಷಿ ಮತ್ತು ಡೇರಿ ರಂಗಗಳನ್ನು ಸಂಪೂರ್ಣ ಸಂರಕ್ಷಿಸಿದೆ ಎಂದು ಘೋಷಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಭಾರತವು ಅಮೆರಿಕ, ಲಂಡನ್ ಮತ್ತು ಯುರೋಪ್ ಒಕ್ಕೂಟ ಜತೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದಗಳ ಬಗ್ಗೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಸುಳ್ಳು ಹರಡುವ ಮುಖೇನ, ರೈತಾಪಿ ಸಂಕುಲದ ದಿಕ್ಕು ತಪ್ಪಿಸುತ್ತಿದ್ದಾರೆಂದು ಆರೋಪಿಸಿದ್ದಾರೆ.

ತೀರಾ ಹಾಸ್ಯಾಸ್ಪದ: ವ್ಯಾಪಾರ ಒಪ್ಪಂದಗಳು ಭಾರತೀಯ ರೈತರಿಗೆ ತೊಂದರೆ ಮಾಡಲಿವೆ ಎಂಬ ಕಾಂಗ್ರೆಸ್ ಆರೋಪಗಳು ತೀರಾ ಹಾಸ್ಯಾಸ್ಪದವೆಂದು ಸಚಿವರು ಟೀಕಿಸಿದರು. ಕಾಂಗ್ರೆಸ್‌ನ ಶಹಜಾದಾ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಎದ್ದು ನಿಂತು ರೈತರ ರಕ್ಷಣೆ ಬಗ್ಗೆ ಮಾತನಾಡುವಾಗ ತನಗೆ ನಗು ಉಕ್ಕಿ ಬಂತು. ದೇಶವನ್ನು ದಿಕ್ಕುತಪ್ಪಿಸಿದ ಸುದೀರ್ಘ ಚರಿತ್ರೆ ಕಾಂಗ್ರೆಸ್‌ನದ್ದು. ಇದೀಗ ಅವರು ವ್ಯಾಪಾರ ಒಪ್ಪಂದಗಳ ಬಗ್ಗೆ ಸುಳ್ಳು ಹೇಳತೊಡಗಿರುವುದು ತೀರಾ ನಾಚಿಕೆಗೇಡು ಎಂದು ಸಚಿವ ಶಾ ಟೀಕಿಸಿದರು. ಗಾಂಧಿನಗರದಲ್ಲಿ ಭಾರತದ ಪ್ರಥಮ ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ ಆಧಾರಿತ (ಸಿಬಿಡಿಸಿ) ಪಡಿತರ ವ್ಯವಸ್ಥೆಗೆ ಚಾಲನೆ ನೀಡಿ



ಸಚಿವ ಶಾ ಮಾತನಾಡಿದರು.

ರಾಹುಲ್‌ಗೆ ಸವಾಲು: ನಾವು ದೇಶದ ಡೇರಿ ರಂಗವನ್ನು ವಿಸ್ತರಿಸಿದವರು ವಿನಾ ದುರ್ಬಲಗೊಳಿಸಿದವರಲ್ಲ. ಎಲ್ಲಾ ಒಪ್ಪಂದಗಳಲ್ಲೂ ಡೇರಿ ರಂಗಕ್ಕೆ ಪೂರ್ಣ ಸುರಕ್ಷೆ ಒದಗಿಸಲಾಗಿದೆ ಮತ್ತು ಈ ವಿಚಾರದಲ್ಲಿ ರಾಹುಲ್ ಸಲ್ಲದ ಮಿಥ್ಯಾ ಪ್ರಚಾರ ಮಾಡುತ್ತಿದ್ದಾರೆ ಎಂದು ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಶಾ, ಈ ಬಗ್ಗೆ ಸಾರ್ವಜನಿಕ ಚರ್ಚೆಗೆ ಮುಂದಾಗುವಂತೆ ರಾಹುಲ್‌ಗೆ ನೇರಾನೇರ ಸವಾಲು ಹಾಕಿದರು. ರಾಹುಲ್ ಗಾಂಧಿಯವರೇ, ಚರ್ಚೆಗೆ ಯಾವುದಾದರು ವೇದಿಕೆಯನ್ನು ನಿರ್ಧರಿಸಿ ಎಂದು ಸವಾಲೆಸೆದರು.

ವಿಕಸಿತ ಭಾರತ-ಉದ್ಯೋಗ ಯೋಜನೆ ಜಾರಿಗೆ ಕಾಂಗ್ರೆಸ್ ವಿರೋಧ ಯಾಕೆ: ಉಮನಾಥ ಕೋಟ್ಯಾನ್

◆ **ಕಿನ್ನಿಗೋಳಿ :** ನರೇಗಾ ಯೋಜನೆಯಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದುಲ್ಲದೆ ಹೆಚ್ಚಿನ ಕೂಲಿ ಆದಕ್ಕೆ ಹೆಚ್ಚು ದಿನ ಕೆಲಸ ಎಲ್ಲಾ ಮಾಡಿ ಬದಲಾವಣೆ ತರುವುದು ತಪ್ಪ ಇದಕ್ಕೆ ಕಾಂಗ್ರೆಸ್ ಪಕ್ಷದ ವಿರೋಧ ಯಾಕೆ, ಈ ಹಿಂದೆ ನರೇಗಾ ಯೋಜೆನಯಲ್ಲಿ ಬೇಕಾ ಬಿಟ್ಟಿಭ್ರಷ್ಟಾಚಾರ ಆಗುತ್ತಿತ್ತು ಇದನ್ನು ನಿಲ್ಲಿಸುವ ಸಲುವಾಗಿ ಈ ಯೋಜನೆಯನ್ನು ಅನುಷ್ಟಾನ ಆಗಬೇಕಾಗಿದೆ ಜನರು ಜಾಗೃತರಾಗಬೇಕು ಕೇಂದ್ರ ಸರಕಾರವು ವಿಕಸಿತ ಭಾರತ-ಉದ್ಯೋಗ ಮತ್ತು ಜಿವನೋಪಾಯ ಮಿಷನ್ ಗ್ಯಾರಂಟಿ ಅಡಿಯಲ್ಲಿ ನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ ತೊಡೆದು ಹಾಕುವ ನಿಟ್ಟಿನಲ್ಲಿ ಮುಕ್ತ ಆಡಳಿತ ನೀಡುವ ಸಲುವಾಗಿ ನರೇಗಾ ಯೋಜನೆಯಲ್ಲಿ ಸಾಕಷ್ಟು ಬದಲಾವಣೆ ಗ್ರಾಮೀಣ ರೈತವರ್ಗಕ್ಕೆ ಗ್ರಾಮೀಣ ಭಾಗದ ಜನರಿಗೆ ಒಂದಷ್ಟು ಪ್ರಯೋಜನ ದೊರೆಯಲ್ಲಿ ಎಂಬ ಉದ್ದೇಶದಿಂದ (ವಿಬಿಜಿ ರಾಮ ಜಿ) ಯನ್ನು



ಜಾರಿಗೆ ತರಲು ಯೋಜನೆ ರೂಪಿತವಾಗಿದೆ ಇದಕ್ಕೆ ವಿರೋಧ ಯಾಕೇ ಎಂದು ಶಾಸಕ ಉಮನಾಥ ಕೋಟ್ಯಾನ್ ಹೇಳಿದರು.

ಅವರು ಕಿನ್ನಿಗೋಳಿ ಬಸ್ಸು ನಿಲ್ದಾಣದ ಸಮೀಪ ಭಾರತೀಯ ಜನತಾ ಪಾರ್ಟಿ ಮೂಲ್ಕಿ - ಮೂಡಬಿದಿರೆ ಮಂಡಲದ ಆಶ್ರಯದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯುತ್‌ನಿಂದ ಕಿನ್ನಿಗೋಳಿ ಬಸ್ ನಿಲ್ದಾಣದ ತನಕ ನಡೆದ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಂಡಲದ ಅಧ್ಯಕ್ಷ ದಿನೇಶ್ ಪುತ್ರನ್, ಜಿಲ್ಲಾ ಉಪಾಧ್ಯಕ್ಷ ಸುನಿಲ್ ಆಳ್ವ ಮೂಲ್ಕಿ , ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಜೀತಾ ಪೂಜಾರಿ, ಹರಿಪ್ರಸಾದ್ ಶೆಟ್ಟಿ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಉಪಾಧ್ಯಕ್ಷ ಪದ್ಮಲತಾ ರಾವ್, ಬಜಪೆ ಪಟ್ಟಣ ಪಂಚಾಯತ್ ಅಧ್ಯಕ್ಷ ಲೋಕೇಶ್ ಪುಜಾರಿ , ಉಪಾಧ್ಯಕ್ಷೆ ಶರ್ಮಿಳಾ ಶೆಟ್ಟಿ, ಬಿಜೆಪಿ ಮುಂಖಂಡರಾದ ರಮನಾಥ ಅತ್ತಾರ್, ಈಶ್ವರ್ ಕಟೀಲ್, ರಂಜಿತ್ ಪೂಜಾರಿ ತೋಡಾರ್, ಭುವನಭಿರಾಮ ಉಡುಪ, ನಾಗರಾಜ ಪೂಜಾರಿ, ಲಕ್ಷಣ್ ಶೆಟ್ಟಿಗಾರ್, ಅಭಿಲಾಷ್ ಶೆಟ್ಟಿ, ರಂಗನಾಥ ಶೆಟ್ಟಿ ಮೂಲ್ಕಿ , ಆಶಾ ಸುವರ್ಣ, ಮಮತಾ ಪೂಂಜಾ, ಕುಶಲ್ ಡಿಸೋಜ, ರುಬೇನ್ ಕಿನ್ನಿಗೋಳಿ, ಭಾಸ್ಕರ ಶೆಟ್ಟಿಗಾರ್ ಕೆಂಚನಕೆರೆ, ಸ್ಟೇನಿ ಪಿಂಟೋ, ವಜ್ರಾಕ್ಷಿ ಶೆಟ್ಟಿ, ಜೈಸನ್ ನಿರುಡೆ, ಗ್ಲೆನ್, ಭಾಸ್ಕರ ಪೂಜಾರಿ ಉಲ್ಲಂಜೆ, ಪಟ್ಟಣ ಪಂಚಾಯತ್ ಸದಸ್ಯರಾದ ಲೋಕಯ್ಯ ಸಾಲ್ಯಾನ್, ಶೈಲೇಶ್ ಅಂಚನ್, ಗೋಪಾಲಕೃಷ್ಣ ಪುನರೂರು, ಧನುಷ್ ಶೆಟ್ಟಿಗಾರ್, ದಾಮೋದರ ಶೆಟ್ಟಿ, ಮಲ್ಲಿಕಾ ಪ್ರಕಾಶ್, ಮಲ್ಲಿಕಾ ಸಾಲ್ಯಾನ್ ಗುತ್ತಕಾಡು, ಪ್ರಣೀಕ್ ಕಿನ್ನಿಗೋಳಿ ಹಾಗೂ ಅನಿತಾ ಡಿಸೋಜ, ಜೀವನ್ ಶೆಟ್ಟಿ ಉಪಸ್ಥಿತರಿದ್ದರು.



ಕಾರ್ಕಳ ತಾಲೂಕಿನ ಈದು ಗ್ರಾಮದ ಬೊಲ್ಲೊಟ್ಟು ಭಾಗದ ನಾಗರಿಕರ ಹಲವಾರು ವರ್ಷಗಳ ಬೇಡಿಕೆಯಾದ ಬೊಲ್ಲೊಟ್ಟು-ಈದು-ನಾರಾವಿಗೆ ಸಂಪರ್ಕ ಕಲ್ಪಿಸುವ ಈದು ಗ್ರಾಮದ ಖಂಡಿಗ ಎಂಬಲ್ಲಿ ಹೊಳೆಗೆ ಸುಮಾರು 4.5 ಕೋಟಿ ರೂ. ವೆಚ್ಚದಲ್ಲಿ ಸೇತುವೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ಭಾನುವಾರ ಶಾಸಕ ವಿ. ಸುನಿಲ್ ಕುಮಾರ್ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದಿನ ಮಕ್ಕಳಿಗೆ ಭಜನೆಯತ್ತ ಒಲವು ಬೆಳೆಸುವ ಅಗತ್ಯವಿದೆ : ಡಾ. ತಲ್ಲೂರು ಶಿವರಾಮ ಶೆಟ್ಟಿ



◆ **ಉಡುಪಿ:** ಸಾಮಾಜಿಕ ಜಾಲತಾಗಳಲ್ಲಿ ಕಳೆದು ಹೋಗಿ ನಮ್ಮ ಸಂಸ್ಕ ತಿಯನ್ನು ಮರೆಯುತ್ತಿರುವ ಮಕ್ಕಳನ್ನು ಆಧ್ಯಾತ್ಮಿಕತೆಯತ್ತ ಸೆಳೆಯುವ ಜವಾಬ್ದಾರಿ ಇಂದಿನ ಹೆತ್ತವರ ಕರ್ತವ್ಯವಾಗಿದೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಕರೆಯಿತ್ತರು.

ಅವರು ಕಲ್ಮಾಡಿ ಶ್ರೀ ಭಗವತಿ ಮಾರಿಕಾಂಬ ಸನ್ನಿ಼ಯ ಸಹಕಾರದೊಂದಿಗೆ ಶ್ರೀ ಬೈರವನಾಥೇಶ್ವರ ಸೇವಾ ಸಮಿತಿ, ಪೆರ್ಡೂರು ಹಾಗೂ ಮತ್ಸ್ಯರಾಜ್ ಗ್ರೂಪ್, ಮಲ್ಪೆ ಇವರ ಸಹಯೋಗದೊಂದಿಗೆ ಶ್ರೀಮನ್ಮಹಾಶಿವರಾತ್ರಿ ಪ್ರಯುಕ್ತ ಹಮ್ಮಿಕೊಂಡಿದ್ದ 'ಶಿವಗಾನಾಮೃತ' ಭಜನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮೊಬೈಲ್ ವ್ಯಸನದಿಂದ ಮುಕ್ತರಾಗಿ ಭಗವಂತನ ಆರಾಧನೆಯಲ್ಲಿ ಸುಲಭ ಸಾಧನವಾದ ಭಜನೆಯಲ್ಲಿ ತೊಡಗಿಸಿದರೆ ಮಕ್ಕಳು ಮಾನಸಿಕವಾಗಿ ಸಧೃಢರಾಗಿ ಜೀವನದಲ್ಲಿ ಮುಂದುವರಿಯುತ್ತಾರೆ. ದಾನಧರ್ಮಗಳತ್ತ ಅವರನ್ನು ಪ್ರೇರೇಪಿಸಿ ಭಗವಂತನ ಅನುಗ್ರಹದಿಂದ ಜೀವನ ಸಾರ್ಥಕಗೊಳಿಸುವತ್ತ ಚಿತ್ತ ಹರಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ನಗರಸಭೆ ಸದಸ್ಯ ಸುಂದರ ಕಲ್ಮಾಡಿ ಮಾತನಾಡಿ, ಎರಡೂ ಸಮಿತಿಗಳು ಪರಿಸರದಲ್ಲಿ ನಡೆಸುವ ಧಾರ್ಮಿಕ ಕಾರ್ಯಕ್ರಮಗಳು ಇಂದಿನ ಜನಾಂಗಕ್ಕೆ ಪ್ರೇರಕವಾಗಿವೆ ಎಂದು ಶ್ಲಾಘಿಸಿದರು.

ಶ್ರೀ ಬೈರವನಾಥೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಸತೀಶ ಕೋಟ್ಯಾನ್ ಅವರು ಸನ್ನಿ಼ಯ ವೈಶಿಷ್ಟ್ಯವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉದ್ಯಮಿಗಳಾದ ನಾಗರಾಜ ಸುವರ್ಣ, ಪ್ರಸಾದ್‌ರಾಜ್ ಕಾಂಚನ್, ಹರಿಯಪ್ಪ ಕೋಟ್ಯಾನ್ , ಸಾಧು ಸಾಲ್ಯಾನ್, ಮತ್ಸ್ಯರಾಜ್ ಗ್ರೂಪ್‌ನ ಕೇಶವ ಎಂ. ಕೋಟ್ಯಾನ್, ಅಭಿನಂದನ್ ಕೋಟ್ಯಾನ್, ಶ್ರೀ ಭಗವತಿ ಮಾರಿಕಾಂಬ ಸನ್ನಿ಼ಯ ಅಧ್ಯಕ್ಷ ಟಿ. ಚಂದ್ರಶೇಖರ್, ಶ್ರೀದೇವಿ ಜ್ಞಾನೋದಯ ಪಾಂಡುರಂಗ ಭಜನಾ ಮಂದಿರ, ಕಾನಂಗಿ ಅಧ್ಯಕ್ಷ ದಾಮೋದರ ಬಂಗೇರ ಉಪಸ್ಥಿತರಿದ್ದರು.

ರವೀಂದ್ರ ನಾಡಿಗ್ ಸ್ವಾಗತಿಸಿ, ಉಪೇಂದ್ರ ಆಚಾರ್ಯ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

100 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ



◆ **ಮಡಿಕೇರಿ:** ಮಡಿಕೇರಿ ತಾಲೂಕಿನ ಮದೆನಾಡು ಗ್ರಾ.ಪಂ.ವ್ಯಾಪ್ತಿಯಲ್ಲಿ ಸುಮಾರು 100 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರು ಶುಕ್ರವಾರ ಚಾಲನೆ ನೀಡಿದರು.

ಕಾಟಕೇರಿ ಬಳಿಯ ಕಾಸ್ಪಾಡಿ ರಸ್ತೆ, ಭಗವತಿ ದೇವಸ್ಥಾನ ರಸ್ತೆ ಕಾಮಗಾರಿಗೆ ಭೂಮಿ ಪೂಜೆ, ಅಪ್ಪೇಂದ್ರೀಯಪ್ಪ ದೇವಸ್ಥಾನ ರಸ್ತೆ ಉದ್ಘಾಟನೆ, ಕಾಟಕೇರಿ ಗೋಳಿಕಟ್ಟೆ ಮುಖ್ಯ ರಸ್ತೆ, ಮದೆನಾಡು ಬೈರೆಟ್ಟಿರ ಜಂಕ್ಷನ್ ರಸ್ತೆ ಮತ್ತು ಮದೆನಾಡು ಮಠದ ಮನೆ ರಸ್ತೆಯನ್ನು ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಉದ್ಘಾಟಿಸಿದರು.

ಬಳಿಕ ಗೋಳಿಕಟ್ಟೆ ಸರ್ಕಾರಿ ಶಾಲೆ ಪರಿಶೀಲಿಸಿದ ಅವರು ಕೋಲ್ಟೆ ದೈವಸ್ಥಾನ ರಸ್ತೆ ಉದ್ಘಾಟಿಸಿದರು. ಹಾಗೆಯೇ ದೇಶ್ ಕೋಡಿ, ಸಾಲಾಪು ರಸ್ತೆಗೆ ಭೂಮಿ ಪೂಜೆ ನೆರವೇರಿಸಿದರು. ನಂತರ ಕೋಲ್ಚಾರು ರಸ್ತೆ ಉದ್ಘಾಟನೆ, ಕೆಮ್ಮಾರನ ಶಿರಾಜ್ ರಸ್ತೆ ಉದ್ಘಾಟಿಸಿದರು. ಬಳಿಕ ನೆರಿಯನ ಐನ್‌ಮನೆಗೆ ಭೇಟಿ ನೀಡಿದ ಅವರು, ಹಾಗೆಯೇ ಈಶ್ವರಪ್ಪ ಮಾದೂರಪ್ಪ ರಸ್ತೆ ಉದ್ಘಾಟಿಸಿದರು.

ಜೋಡುಪಾಲ ಕಿರಿಕಿಲ್ ರಸ್ತೆ ಭೂಮಿಪೂಜೆ, ಅಬ್ಬಿಕೊಲ್ಲಿ ರಸ್ತೆ ಉದ್ಘಾಟಿಸಿದರು. ಕುಡಿಯರ ಕಾಲೋನಿಯಲ್ಲಿ ಕುಂದುಕೊರತೆ ಸಭೆ ನಡೆಸಿದರು. ಕಾಟಕೇರಿ ಕೂರನ ಬಾಣೆ ರಸ್ತೆ, ತಾಳತ್ತಮನೆ, ಮಂಗಳೂರು-ಭಾಗಮಂಡಲ ಲಿಂಕ್ ರಸ್ತೆ ಉದ್ಘಾಟಿಸಿದರು. ತಾಳತ್ತಮನೆ ದುರ್ಗಾ ಭಗವತಿ ದೇವಸ್ಥಾನ ರಸ್ತೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎ.ಎಸ್.ಪೊನ್ನಣ್ಣ ಅವರು, ಮದೆನಾಡು ಗ್ರಾ.ಪಂ.ವ್ಯಾಪ್ತಿಯಲ್ಲಿ ಸುಮಾರು 100 ಕೋಟಿ ರೂ. ವೆಚ್ಚದ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಉದ್ಘಾಟನೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿ ಜೊತೆಗೆ ಕುಡಿಯುವ ನೀರು, ವಿದ್ಯುತ್ ಹಾಗೂ ಸಾರಿಗೆ ಸಂಪರ್ಕಕ್ಕೆ ಸಾಕಷ್ಟು ಬೇಡಿಕೆಗಳಿದ್ದು, ಹಂತ ಹಂತವಾಗಿ ಮೂಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಶಾಸಕರು ವಿವರಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ಕೊಡಗು ಜಿಲ್ಲೆಗೆ ಇನ್ನೂ ಅನುದಾನ ಬರಬೇಕಿದೆ. ಕುಡಿಯುವ ನೀರಿನ ಯೋಜನೆಗಾಗಿ 58 ಕೋಟಿ ರೂ. ವಿನಿಯೋಗಿಸಲಾಗುತ್ತಿದೆ ಎಂದು ಹೇಳಿದರು.

'ಜಮ್ಮಾ ಬಾಣೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕರು, ಪಟ್ಟೆದಾರರ ಭೂಮಿ ಸಂಬಂಧ ಸಮಸ್ಯೆ ಪರಿಹರಿಸಲು ಶ್ರಮಿಸಲಾಗಿದೆ. ಹಿಂದಿನ ಶಾಸಕದ್ವಯರು ಸಹ ಜಮ್ಮಬಾಣೆ ಭೂಮಿ ಸಮಸ್ಯೆ ಪರಿಹರಿಸಲು ತಮ್ಮದೇ ಆದ ಪ್ರಯತ್ನ ಮಾಡಿದ್ದಾರೆ ಎಂದು ನುಡಿದರು.

ಆನೆ-ಮಾನವ ಸಂಘರ್ಷ: ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಬಲವರ್ಧನೆಗೆ ಕ್ರಮವಹಿಸಲಾಗಿದೆ. ಆನೆ ಮತ್ತು ಮಾನವ ಸಂಘರ್ಷ ತಡೆಯಲು 22 ಕಿ.ಮೀ. ಉದ್ದದ ಕಂದಕ/ ಬೇಲಿ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದರು.

ಕಳೆದ ಬಾರಿ ಬಜೆಟಿನಲ್ಲಿ ಕೊಡಗು ಜಿಲ್ಲೆಗೆ ಘೋಷಣೆ ಮಾಡಿದ್ದ ಯೋಜನೆಗಳಿಗೆ ಚಾಲನೆ ನೀಡಲಾಗುತ್ತಿದೆ. ಇವು ಪೂರ್ಣಗೊಳ್ಳಬೇಕು. ಮುಂದಿನ ಬಜೆಟಿನಲ್ಲಿ ಕೊಡಗು ಜಿಲ್ಲೆಗೆ ವಿಶೇಷ ಪ್ರಾಧಾನ್ಯತೆ ದೊರೆಯುವ ಸಾಧ್ಯತೆ ಇದೆ ಎಂದು ಎ.ಎಸ್.ಪೊನ್ನಣ್ಣ ಅವರು ನುಡಿದರು.

ನದಿ ಸ್ವಚ್ಛತೆ: ಕಾವೇರಿ ನದಿ ಪಾತ್ರದಲ್ಲಿನ ತಗ್ಗು ಪ್ರದೇಶದಲ್ಲಿ ತಡೆಗೋಡೆ ನಿರ್ಮಾಣ ಹಾಗೂ ಸ್ವಚ್ಛತೆಗೆ ಸುಮಾರು 50 ಕೋಟಿ ರೂ ವಿನಿಯೋಗಿಸಲಾಗುತ್ತಿದೆ. ಹಾಗೆಯೇ ಲಕ್ಷ್ಮ ಣ ತೀರ್ಥ ನದಿ ದಂಡೆಯಲ್ಲಿ ವಾಸಿಸುವ ಕುಟುಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ, ಪುನರ್ ವಸತಿ ಕಲ್ಪಿಸಲು 20 ಕೋಟಿ ರೂ ವೆಚ್ಚ ಮಾಡಲಾಗುತ್ತಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಗ್ರಾ.ಪಂ ಅಧ್ಯಕ್ಷೆ ವಿಮಲಾಕ್ಷಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಪ್ರಮುಖರಾದ ಕೊಲ್ಯದ ಗಿರೀಶ್, ತಹಶೀಲ್ದಾರ್ ಶ್ರೀಧರ, ತಾ.ಪಂ.ಇಒ ಶೇಖರ್, ಗ್ರಾ.ಪಂ.ಸದಸ್ಯರಾದ ಆಗಸ್ಟಿನ್ ಜಯರಾಜ್, ಸೈಯದ್ ಅಲಿ, ಸೂರಜ್ ಹೊಸೂರು, ಇಸ್ಮಾಯಿಲ್, ಮಜ್ಜಿಗೆಮನೆ ದೀಪಕ್, ಸ್ಥಳೀಯ ಪ್ರಮುಖರು ಹಾಗೂ ಗ್ರಾ.ಪಂ.ಸದಸ್ಯರು, ಅ಼ಕಾರಿಗಳು ಇತರರು ಇದ್ದರು.

ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯಲ್ಲಿ ಲಿಟಲ್ ಗೊನ್ಜಾಗಾಯ್ಟ್ಸ್ ಫನ್ ಫಿಯೆಸ್ಟಾ - ಗೊನ್ಜಾಗಾ ಕಿಡ್ಸ್ ಮೂವಿ ಫೆಸ್ಟ್ 2026



◆ **ಮಂಗಳೂರು:** ನಗರದ ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯಲ್ಲಿ ಗೊನ್ಝಾಗ ಕಿಡ್ಸ್ ಮೂವಿ ಫೆಸ್ಟ್ ಎಂಬ ವಿಷಯದೊಂದಿಗೆ ಲಿಟಲ್ ಗೊನ್ಜಾಗಾಯ್ಟ್ಸ್ ಫನ್ ಫಿಯೆಸ್ಟಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಶಾಲಾ ಪ್ರಾಂಶುಪಾಲ ವಂ.ಫಾ. ರೋಹನ್ ಡಿ ಅಲ್ಮೇಡಾ ಎಸ್.ಜೆ ಹಾಗೂ ಉಪ-ಪ್ರಾಂಶುಪಾಲೆ ಲಾರೆಲ್ ಡಿಸೋಜ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಂ.ಫಾ. ರೋಹನ್ ಡಿಅಲ್ಮೇಡಾ, ಪ್ರತಿಯೊಂದು ಚಲನಚಿತ್ರವು ತನ್ನ ಪಾತ್ರಗಳ ಮೂಲಕ ನೈತಿಕತೆಯನ್ನು ತಿಳಿಸುತ್ತದೆ. ಹಾಗಾಗಿ ಮಕ್ಕಳು ತಮ್ಮ ಮನೆಯವರೊಂದಿಗೆ ಉತ್ತಮ ಗುಣಮಟ್ಟದ ಚಲನಚಿತ್ರಗಳನ್ನು ವೀಕ್ಷಿಸಬೇಕು ಎಂದರು.

ಜವಾಬ್ದಾರಿ, ಗೌರವ, ಪೋಷಕರ ಮಾರ್ಗದರ್ಶನ, ಧೈರ್ಯ, ಸಹಾನುಭೂತಿ ಮತ್ತು ಸ್ವಯಂ ನಿಯಂತ್ರಣದಂತಹ ಪ್ರಮುಖ ಮೌಲ್ಯಗಳನ್ನು ತಿಳಿಸುವ 'ಮುಫಾಸಾ' ಎಂಬ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಪೂರ್ವ ಪ್ರಾಥಮಿಕ ತರಗತಿಯ ಶಿಕ್ಷಕಿಯರಾದ ಪೆಟ್ರಿಷಿಯಾ ಎಸ್. ಆರ್. ಡಿಸೋಜ, ಅಪ್ರಿಲ್ ರೆಬೆಲ್ಲೊ ಮತ್ತು ಅನಿತಾ ನಜರೆತ್ ಕಾರ್ಯಕ್ರಮ ಸಂಯೋಜಿಸಿದರು.

ಅಂತಾರಾಷ್ಟ್ರೀಯ ಆನ್‌ಲೈನ್ ಬ್ರೈನೋಬ್ರೈನ್ ಸ್ಪರ್ಧೆಯಲ್ಲಿ ಮಡಿಕೇರಿ ಮಕ್ಕಳ ಸಾಧನೆ



◆ **ಮಡಿಕೇರಿ:** ಬ್ರೈನೋಬ್ರೈನ್ ಇಂಟರ್ ನ್ಯಾಷನಲ್ ದುಬೈ ಸಂಸ್ಥೆಯ ವತಿಯಿಂದ ಇತ್ತೀಚೆಗೆ ನಡೆದ 16ನೇ ಅಂತಾರಾಷ್ಟ್ರೀಯ ಮಟ್ಟದ ಆನ್‌ಲೈನ್ ಬ್ರೈನೋಬ್ರೈನ್ ಸ್ಪರ್ಧೆ-2026 ರಲ್ಲಿ ಮಡಿಕೇರಿಯ ಬ್ರೈನೋಬ್ರೈನ್ ಕೇಂದ್ರದ 101 ವಿದ್ಯಾರ್ಥಿಗಳು ಕೇವಲ 4 ನಿಮಿಷಗಳಲ್ಲಿ ವಿವಿಧ ರೀತಿಯ ಲೆಕ್ಕಗಳನ್ನು ಅತಿ ಚುರುಕಾಗಿ ಮಾಡುವ ಮೂಲಕ ಅತ್ಯುತ್ತಮ ಸಾಧನೆ ಮಾಡಿ ಪದಕ ಗೆದ್ದಿದ್ದಾರೆ.

ಸ್ಪರ್ಧೆಯಲ್ಲಿ 30 ಚಾಂಪಿಯನ್ ಟ್ರೋಫಿ, 37 ಚಿನ್ನದ ಪದಕ ಮತ್ತು 34 ಬೆಳ್ಳಿಯ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಚಾಂಪಿಯನ್ ಟ್ರೋಫಿ ವಿಜೇತರು

ಸೋನ್ಸ್ ಸೋಮಣ್ಣ ಪಿ.ಸಿ, ಅನ್ವಿತ್ ಎಸ್, ಆರುಷಿ ಕೆ.ಸಿ, ದಿಯ ವೈ.ಬಿ, ಶ್ರೀಹಾನ್ ಸಂಜಯ್ ಜತ್ತಿ, ತನುಷ್ ಪೂವಣ್ಣ ಸಿ.ಪಿ, ರುಶಾಲಿ ಪಿ.ಜೆ, ತಪಸ್ಯ ಗೌರಿ ಎಂ, ವಿ. ಕೃಷ್ಣ ಸಾಹಿಲ್, ವಂಶಿ ಕೆ.ಎಂ, ಚಿನ್ಮಯಿ ಪಿ, ದೀಕ್ಷ ಭರತ್ ಎನ್, ಧ್ರುವತೇಜ್ ಪಿ, ದಿಗಂತ್ ಸಿ.ಪಿ, ಕನಿಷ್ಕ ಪಿ.ಸಿ, ಲಕ್ಷಿತ ಬಿ.ಆರ್., ನೇಹಲ್ ಡಿ.ವಿ, ನಿಲ್ಹಾ ಜೆ ತಾರಕನ್, ಹರ್ಷಿಣಿ ಎಂ.ಕೆ, ರೋನಿತ್ ಗಣಪತಿ ಎ.ಎಸ್, ಯಾನ್ವಿ ಬೋಜಮ್ಮ ಎಂ.ಪಿ, ಅಭಿನವ್ ಕೃಷ್ ಜಿ, ಆರಾಧ್ಯ ಕೆ.ಸಿ, ಏಡನ್ ಜೆ.ತಾರಕನ್, ದ್ರುಪದ್ ಪಿ ಮಣಿಕೋಥ್, ಮಯಾಂಕ್ ಎಂ, ಶೌರ್ಯ ಎಸ್.ವಿ ಕುಡ್ತೇಕರ್, ನಮನ್ ಎಂ.ಗೌಡ, ರೋನಿತ್ ತಮ್ಮಯ್ಯ ಪಿ.ಕೆ, ಸಮರ್ಥ್ ಆರ್.

ಚಿನ್ನದ ಪದಕ ವಿಜೇತರು

ವಿಹಾನ್ಯ ಹೆಚ್.ಎ, ಹರಿಪ್ರಿಯ ವಿ.ಹೆಚ್, ಇಸ್ರಾಯೇಲ್ ಸಾನ್ವಿಕ್ ಎಸ್, ಜೆಶ್ವಿತ ತಂಗಮ್ಮ ಎ.ಪಿ, ವಿ. ಕೃಷ್ಣ ಸಂಜಿತ್, ದಿರಣ್ ಕೆ.ಎಸ್, ಸುಹಾಸ್ ಎಂ.ಎಚ್, ಚಾರ್ವಿ ಬಿ.ಆರ್, ಮೋನಿಷ್ ಬಿ.ಎಸ್, ಹಿತ ಶೆಟ್ಟಿ ಬಿ.ವೈ, ಶ್ರೀ ದರ್ಶನ್ ಎಸ್., ಪ್ರಥಮ್ ಚಿನ್ನಪ್ಪ ಬಿ.ಎಲ್, ರಿಯಾಂಕ ಎಂ, ಭುವನ್ ಹೆಚ್. ಆರ್, ಧನ್ವಿ ಪೂವಮ್ಮ ಬಿ.ಎಂ., ಧನ್ವಿನ್ ಪೂವಣ್ಣ ಬಿ.ಎಂ, ಜೊಹನ್ನಾ ಮಡ್ತಾ, ನಿಧಿ ಆರ್. ಅಣ್ವೇಕರ್, ಪಾವನಿ ಕೆ. ಕುಂದರ್, ರಿಯಾನ್ ಪೊನ್ನಪ್ಪ ಬಿ.ಡಿ, ವರುಣಿಕ.ಜಿ, ಲಿವ್ಯ ಸುನಿತ್‌ಕುಮಾರ್, ಲಾಂಛನ್ ಕೆ.ಟಿ, ಯಶ್‌ರಾಜ್ ಆರ್ ಅನ್ವೇಕರ್, ಲಾಲಿತ್ಯ ಅಶೋಕ್ ಸಿ, ಜಾರ್ಜ್ ಮ್ಯಾಥೀವ್, ಕೋಸಿಗಿ ಸಾತ್ವಿಕ್ ಸಮರ್ಥ್, ಪ್ರಧಾನ್ ಶತಾಯುಷ್, ಕೋಸಿಗಿ ಸಮರ್ಥ್ ಸಾಮ್ರಾಟ್, ಲಿನಿತ್ ಬಿ.ಎಲ್, ಶಿವಕುಮಾರ್ ಯು.ಆರ್, ಬಿ.ಡಿ.ಕುಶಿ, ಲಿಖಿತ್ ಸೋಮಣ್ಣ ಕೆ.ಎಲ್, ಸೃಷ್ಟಿ ಎಂ.ಆರ್, ಯಜತ್ ಗಣಪತಿ ಪಿ.ಕೆ, ಲಲಿತ್ ಆದಿತ್ಯ.ಬಿ, ಆಥಿರಾ ದಿನೇಶ್ ಮೆನನ್.

ಬೆಳ್ಳಿ ಪದಕ ವಿಜೇತರು

ಭಾರ್ಗವ ಸಿ.ಎನ್, ಕನಿಷ್ಕ ಪಿ, ನಿಂಶಿ ಕೆ.ಎಂ. ಸಂಹಿತ ಶೆಟ್ಟಿ ಬಿ.ವೈ, ದಿವಿತ್ ಕೆ.ಎಸ್, ಕಿಶೋರ್ ಸಿ.ಎನ್, ಪೃಥ್ವಿಶ್ರೀ.ಪಿ, ಇಸ್ರಾಯೇಲ್ ಸಾತ್ವಿಕ್ ಎಸ್, ಪುನಿತ್ ರಾಜ್ ಕೆ.ಆರ್, ಶಾನ್ ಪ್ರಥಮ್ ಬಿ.ಆರ್, ದಿಶಾ ಎಸ್ ಶಿರೂರು, ಕನಿಷ ಸುನಿತ್‌ಕುಮಾರ್, ಆರಾಧ್ಯ ಎ ಅನ್ವೇಕರ್, ಹಂಸಿನಿ ಎಸ್ .ಪಿ, ವಿಕಾಸ್ ಎಚ್.ಎಚ್, ಆಧ್ಯ ಜಿ ವರ್ಣೇಕರ್, ಪೂಜನ್ ಗೌಡ ಎಂ.ಎ, ಭುವನ್ ಕೆ.ಟಿ, ಮಾನ್ವಿ ಜಿ ವರ್ಣೇಕರ್, ತನಿಷ್ಕ ಕೆ.ಎ, ಗಾನವಿ ಗಂಗಮ್ಮ ಸಿ.ವಿ, ಮನ್ವಿತ.ಎಸ್, ನಿಶ್ಚಲ್ ಆರ್, ಆದಿತ್ ಗೌತಮ್ ಕೆ, ಅನೀಸನ್ ಪಿ, ಭುವನ್ ತಿಮ್ಮಯ್ಯ ಎಂ, ಮಿಯಾ ಅರುಣ್, ಯಶಸ್ ಕೆ.ಯು, ಕಿಶಿ ಕಾವೇರಮ್ಮ ಎ.ಎಲ್, ಯಶಿಕ ಎಸ್, ಅಫಾನ್ ಅಹ್ಮದ್ ಟಿ.ಬಿ, ಐಶ್ವರ್ಯ ಎಸ್, ಧೃತಿ ಎ.ಎಂ, ಪ್ರಣತಿ ಎಸ್.ಪಿ.

ಸ್ಪರ್ಧೆಯು ಲ್ಯಾಪ್‌ಟಾಪ್ ಅಥವಾ ಡೆಸ್ಕ್ ಟಾಪ್ ಬಳಸಿ ಕಟ್ಟುನಿಟ್ಟಾದ 4 ನಿಮಿಷಗಳ ಕಾಲಮಿತಿಯೊಳಗೆ ಸಂಕೀರ್ಣವಾದ ಗಣಿತದ ಲೆಕ್ಕಗಳನ್ನು ಬಿಡಿಸುವುದನ್ನು ಒಳಗೊಂಡಿತ್ತು. 79 ರಾಷ್ಟ್ರಗಳ ಬ್ರೈನೋಬ್ರೈನ್ ಕೇಂದ್ರಗಳ ಒಟ್ಟು 23,912 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಕೊಡಗು ಜಿಲ್ಲೆಯ ಮಡಿಕೇರಿಯ ಬ್ರೈನೋಬ್ರೈನ್ ಕೇಂದ್ರದಿಂದ 101 ವಿದ್ಯಾರ್ಥಿಗಳು ತರಬೇತುದಾರರಾದ ಮಾಪಂಗಡ ಕವಿತಾ ಕರುಂಬಯ್ಯ ಅವರ ನೇತೃತ್ವದಲ್ಲಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿದ್ದರು. ಆನ್‌ಲೈನ್ ಸ್ಪರ್ಧೆಯಲ್ಲಿ 4 ನಿಮಿಷಗಳ ನಿಗದಿತ ಸಮಯ ಮಾತ್ರವಿದ್ದು, ಮಡಿಕೇರಿ ಗುಡ್ಡಗಾಡು ಪ್ರದೇಶದಲ್ಲಿ ಇಂಟರ್‌ನೆಟ್ ಕನೆಕ್ಷನ್ ಹಾಗೂ ನೆಟ್‌ವರ್ಕ್ ಸಮಸ್ಯೆಯೊಂದಿಗೆ ಮತ್ತು ಮಕ್ಕಳು ಯಾರ ಸಹಾಯವಿಲ್ಲದೆ ಏಕಾಂಗಿಯಾಗಿ ಕಂಪ್ಯೂಟರ್‌ನಲ್ಲಿ ಟೈಪ್ ಮಾಡಲು ಅಭ್ಯಾಸ ಹೊಂದಿರದಿದ್ದರೂ ನಿಗದಿತ ಸಮಯದಲ್ಲಿ ಸ್ಪರ್ಧೆಯನ್ನು ಸವಾಲಾಗಿ ಸ್ವೀಕರಿಸಿದರು.

ಕರ್ನಾಟಕದಿಂದ ಭಾಗವಹಿಸಿದ 'ಬ್ರೈನೋಬ್ರೈನ್' ಕೇಂದ್ರಗಳ ಪೈಕಿ ಮಡಿಕೇರಿ ಕೇಂದ್ರಕ್ಕೆ ಶೇ.100 ರಷ್ಟು ಫಲಿತಾಂಶ ಬಂದಿರುವುದು ಹೆಮ್ಮೆಯ ವಿಚಾರ. ಉತ್ತಮ ಪ್ರದರ್ಶನ ತೋರಿ ಭಾಗವಹಿಸಿದ ಎಲ್ಲಾ 101 ಮಕ್ಕಳು ವಿಜೇತರಾಗಿರುವುದು ಪ್ರಶಂಸನೀಯವೆಂದು ಮಾಪಂಗಡ ಕವಿತಾ ಕರುಂಬಯ್ಯ ಹರ್ಷ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್ ಸ್ಪರ್ಧೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಉಪನ್ಯಾಸಕಿ ಡಾ.ಸೌಮ್ಯ ಅವರು ಸಹಕಾರ ನೀಡಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-42) ಡ್ರಾ ಫೆಬ್ರವರಿ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MU 194330 (ERNAKULAM)
Consolation Prize Rs.5,000/-
MN 194330 MO 194330 MP 194330 MR 194330
MS 194330 MT 194330 MV 194330 MW 194330
MX 194330 MY 194330 MZ 194330
2nd Prize Rs.25,00,000/- [25 Lakhs]
MZ 275420 (IRINJALAKKUDA)
3rd Prize Rs.5,00,000/- [5 Lakhs]
MS 765389 (KANNUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0632 0854 0899 2032 2076 2099 2129 2845 2924 2980
4931 5833 6257 6378 6628 7225 7438 9257 9868
5th Prize Rs.2,000/-
0712 4019 4168 7900 8936 9187
6th Prize Rs.1,000/-
0221 0431 0676 0779 1119 1142 1314 1335 1545 2442
2633 3377 3894 5030 5617 5779 5807 6337 6919 7169
7252 7723 8978 9097 9524
7th Prize Rs.500/-
0032 0280 0286 0381 0466 0654 0906 0942 0989 1094
1108 1168 1297 1329 1379 1392 1723 1834 1912 1979
2284 2308 2749 2974 3175 3349 3388 3393 3791 4059
4125 4304 4610 4782 4820 5256 5283 5320 5373 5731
5945 6140 6153 6154 6472 6550 6694 6902 7012 7032
7195 7197 7377 7407 7493 7808 8013 8065 8128 8130
8251 8436 8484 8540 8718 8962 9115 9173 9334 9344
9719 9743 9747 9768 9792 9883
8th Prize Rs.200/-
0134 0163 0188 0225 0279 0366 0499 0556 0585 0592
0890 0987 1213 1229 1324 1349 1532 1547 1666 1845
2100 2167 2204 2346 2362 2408 2438 2507 2699 2727
2833 3117 3127 3512 3521 3546 3733 3757 3782 3792
4007 4077 4416 4584 4602 4622 4737 4828 4869 5200
5388 5404 5559 5560 5719 5761 5928 6198 6207 6260
6315 6509 6521 6751 6853 6929 6951 6992 7115 7186
7613 7919 7945 7999 8017 8164 8165 8177 8224 8307
8370 8469 8487 8519 8886 8997 9072 9096 9613 9823
9831 9874
9th Prize Rs.100/-
0122 0170 0217 0339 0445 0532 0534 0595 0615 0624
0670 0707 0763 0866 0870 0878 0882 0886 0961 1122
1125 1212 1223 1299 1320 1378 1503 1552 1833 1858
1986 2019 2080 2128 2157 2166 2168 2469 2598 2643
3024 3076 3198 3223 3278 3394 3400 3559 3594 3607
3671 3710 3760 3840 3901 4039 4102 4119 4145 4214
4245 4280 4367 4542 4650 4676 4711 4746 4885 4976
5017 5021 5307 5353 5397 5400 5481 5483 5513 5613
5675 5693 5751 5758 5879 5909 5932 5956 6058 6283
6405 6426 6481 6538 6682 6728 6772 6815 6865 6927
6937 6944 6966 7100 7136 7214 7238 7278 7374 7507
7567 7604 7684 7687 7715 7741 7806 7860 8166 8199
8273 8485 8596 8618 8738 8792 8801 8806 8815 8912
9012 9056 9085 9247 9362 9439 9476 9481 9543 9566
9605 9609 9653 9723 9742 9767 9857 9904 9927 9936

ಕಿರುಸುದ್ದಿ

ದಕ್ಷಿಣ ಕನ್ನಡ ಇಂದಿನಿಂದ ಜಿಲ್ಲೆಗೆ ಮಾನವ ಹಕ್ಕುಗಳ ಆಯೋಗ ಭೇಟಿ

ಮಂಗಳೂರು: ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿನ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಫೆ. 16 ರಿಂದ 20ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಿಟ್ಟಿಂಗ್ಸ್ ನಡೆಸಲು ಉದ್ದೇಶಿಸಿರುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಆಯೋಗದಲ್ಲಿ ನೋಂದಣಿಯಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಿ, ವಿಲೇ ಮಾಡಿ ಕ್ರಮ ಜರುಗಿಸಲು ಉದ್ದೇಶಿಸಲಾಗಿದೆ.

ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಿಗಳು ಈ ಸೌಲಭ್ಯದ ಸದುಪಯೋಗ ಪಡಿಸಿಕೊಳ್ಳಬಹುದು. ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿಗದಿತ ದಿನಗಳಂದು ಸಾರ್ವಜನಿಕರಿಂದ ದೂರುಗಳು, ಅಹವಾಲುಗಳನ್ನು ಸಹ ಸ್ವೀಕರಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕರು ನಿಗದಿತ ದಿನಾಂಕಗಳಂದು ಆಯೋಗದ ಅಧ್ಯಕ್ಷರನ್ನು (ಹಂಗಾಮಿ) ಹಾಗೂ ಸದಸ್ಯರನ್ನು ಸಂಪರ್ಕಿಸಿ, ದೂರುಗಳನ್ನು ಸಲ್ಲಿಸಬಹುದು. ಫೆ. 18ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಫೆ. 19ರಂದು ಉಡುಪಿ ಜಿಲ್ಲೆಯಲ್ಲಿ ಸಿಟ್ಟಿಂಗ್ಸ್ ನಡೆಸುವುದಾಗಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೋಟ ರಾಜಶೇಖರ ದೇವಸ್ಥಾನದಲ್ಲಿ ಸಾಮೂಹಿಕ ಶಿವ ನಮಸ್ಕಾರ



ಕೋಟ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ಎಸ್‌ಪಿವೈಎಸ್‌ಎಸ್) ಕೋಟ ಶಾಖೆ ಇದರ ವತಿಯಿಂದ ಮಹಾಶಿವರಾತ್ರಿಯ ದಿವಸ ಕೋಟ ರಾಜಶೇಖರ ದೇವಸ್ಥಾನದಲ್ಲಿ ಲೋಕಕಲ್ಯಾಣಕ್ಕೋಸ್ಕರ ಸಾಮೂಹಿಕ ಶಿವ ನಮಸ್ಕಾರವನ್ನು ಮಾಡುವುದರ ಮೂಲಕ ಮಹಾಶಿವರಾತ್ರಿಯನ್ನು ಆಚರಣೆ ಮಾಡಲಾಯಿತು. ಕಾರ್ಯಕ್ರಮವನ್ನು ಪತಂಜಲಿ ಯೋಗ ಶಿಕ್ಷಣ ಸಮಿತಿಯ ಶಿಕ್ಷಣ ಪ್ರಮುಖರಾದ ಅರವಿಂದ ಶರ್ಮ ನಡೆಸಿಕೊಟ್ಟರು. ಸಮಿತಿಯ ವಿನಯ ಗಾಣಿಗ ಸ್ವಾಗತಿಸಿದರು. ರಮೇಶ್ ಪ್ರಭು ವಂದಿಸಿದರು. ಕಾರ್ಯಕ್ರಮವನ್ನು ಲೋಕಕಲ್ಯಾಣ ಮಂತ್ರ ದೊಂದಿಗೆ ಸಂಪನ್ನಗೊಳಿಸಲಾಯಿತು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶೀಲಾ ಕೃಷ್ಣ ಕುಲಾಲ್, 'ದುರ್ಗಾ ನಿವಾಸ', ಕೇಶವ ನಗರ, ಹೊಸ್ಮಾರು, ಕಾರ್ಕಳ (ತಾ).
2. ಕಮಲ ಟಿ. ಮೂಲ್ಯ, ಗಾಣದಬೆಟ್ಟು, ಕೊಳಂಬೆ, ಬಜಪೆ – ಸುಂಕದಕಟ್ಟೆ ದೇವಸ್ಥಾನದ ಬಳಿ.
3. ಶ್ರೀ ಮಹಮ್ಮಾಯಿ ಭಕ್ತ ವೃಂದ ಮೊಗರು ಕುಕ್ಕಟ್ಟೆ ವಯಾ ಗಂಜಿಮಠ.
4. ಶ್ರೀ ಭೂತ ರಾಜರ ದೇವಸ್ಥಾನ, ಬೆಳ್ಳಂಪಳ್ಳಿ ವಯಾ ಅತ್ರಾಡಿ, ಉಡುಪಿ (ತಾ).
5. ಶ್ರೀ ವಿಷ್ಣುಮೂರ್ತಿ ಬಯಲಾಟ ಸೇವಾ ಸಮಿತಿ, ಇರ್ದೆ ಉಪ್ಪಳಿಗೆ, ಪುತ್ತೂರು (ತಾ).
6. ವಿಖ್ಯಾತ್ ಶೆಟ್ಟಿ, 'ಸಾಧು ಕೃಪಾ', ಮುರಹೌಸ್, ಬಡಗ ಎಕ್ಕಾರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಶ್ರೀ ದೇವಿ ಸೇವಾ ಸಮಿತಿ, ಪಡು ಮೂಡು ಕೋಣಾಜೆ, ವಯಾ ಮೂಡುಬಿದ್ರೆ.

ಶ್ರೀ ಧರ್ಮಸ್ಥಳ ಮೇಳ
ಗುಡ್ಡೆಕೊಪ್ಲದಲ್ಲಿ
ಶ್ರೀ ರಾಜ್‌ಕಿರಣ್ ವಿ.ವಿ., ಶ್ರೀ ನಾರಾಯಣ ಪೂಜಾರಿ ಜಾಗಟೆಗಾರು, ಮರಗಳಲೆ

ಶ್ರೀ ಸಾಲಿಗ್ರಾಮ ಮೇಳ
ಮುಡುಬಾದಲ್ಲಿ-ಬಯಲಾಟ- ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ಅಂಕೋಲಾದಲ್ಲಿ- ಅಕ್ಷಯಾಂಬರ- ರತಿಕಲ್ಯಾಣ

ಶ್ರೀ ಹನುಮಗಿರಿ ಮೇಳ
ಐರಬೈಲು, ಹುಂಬಾಡಿಮನೆಯಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ನೀಲಕಂಠೇಶ್ವರ ದೇವಸ್ಥಾನ, ನೀಲಿ ವಾಮದಪದವು
ಛಾಯಾನಂದನ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇದರ ವತಿಯಿಂದ ರಾಮನಗರದ ಜಾನಪದ ಲೋಕದಲ್ಲಿ ನಡೆದ ಸಮಾರಂಭದಲ್ಲಿ ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರು 2026ನೇ ಸಾಲಿನ ಡಾ.ಜಿ.ಶಂ.ಪರಮಶಿವಯ್ಯ ಪ್ರಶಸ್ತಿಯನ್ನು ಪಡೆದುಕೊಂಡರು. ಇದೇ ಸಂದರ್ಭದಲ್ಲಿ ನಾಡೋಜ ಎಚ್ ಎಲ್ ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿಯನ್ನು ಜಾನಪದ ವಿದ್ವಾಂಸ ಹಿ.ಶಿ.ರಾಮೇಚಂದ್ರೇ ಗೌಡ, ನಾಡೋಜ ಡಾ.ಜಿ.ನಾರಾಯಣ ಜಾನಪದ ಲೋಕ ಪ್ರಶಸ್ತಿಯನ್ನು ವಾದನ ಕಲಾವಿದರಾದ ಚಿಕ್ಕಣ್ಣ ಅವರು ಸ್ವೀಕರಿಸಿದರು

'ನಮಾಮಿ ಶಕ್ತಿಚರಣಮ್' ಕಾರ್ಯಕ್ರಮದಲ್ಲಿ ದಾಮೋದರ ಶರ್ಮ

ಮಾತೃದೇವೋಭವ ಅರ್ಥ ತಿಳಿಯಿರಿ

ಕುಂದಾಪುರ : ಭಾರತ ದೇಶವನ್ನು ವೇದಗಳು ಮತ್ತು ಇತಿಹಾಸಗಳು ಕರ್ಮದ ನೆಲ, ಧರ್ಮದ ನೆಲ ಹಾಗೂ ಸಾಧನೆಯ ನೆಲವೆಂದು ಕೊಂಡಾಡಿವೆ. ನಮ್ಮ ದೇಶವು ಉತ್ತಮವಾಗಿ ಅಭಿವೃದ್ಧಿ ಹೊಂದಬೇಕಾದರೆ ವಿದ್ಯಾರ್ಥಿಗಳಲ್ಲಿ ಸತ್ಸಂಸ್ಕಾರ ಹಾಗೂ ಉತ್ತಮ ಗುಣಗಳನ್ನು ಬೆಳೆಸುವುದು ಅಗತ್ಯ. ಮಕ್ಕಳಿಗೆ ಭಾರತೀಯ ಸಂಸ್ಕೃ ತಿ ಮತ್ತು ಇತಿಹಾಸದ ಬಗ್ಗೆ ಸ್ಪಷ್ಟ ಜ್ಞಾನ ನೀಡಬೇಕು. ಇತಿಹಾಸವನ್ನು ಅರಿತ ವ್ಯಕ್ತಿಯು ಭವಿಷ್ಯವನ್ನು ದೃಢವಾಗಿ ನಿರ್ಮಿಸಬಹುದು. ಮಕ್ಕಳು 'ಮಾತೃದೇವೋ ಭವ' ಎಂಬ ಮಹತ್ವದ ಮಾತಿನ ಅರ್ಥವನ್ನು ತಿಳಿದುಕೊಳ್ಳಬೇಕು ಎಂದು ಬಾರ್ಕೂರಿನ ಖ್ಯಾತ ವಾಗ್ಮಿಗಳಾದ ಎನ್. ಆರ್. ದಾಮೋದರ ಶರ್ಮ ಹೇಳಿದರು.

ಹಟ್ಟಿಅಂಗಡಿ ಶ್ರೀ ವೇದಮೂರ್ತಿ ರಾಮಚಂದ್ರ ಭಟ್ಟರ ಸ್ಮರಣಾರ್ಥ ಆರಾಧನೆ ಕಾರ್ಯಕ್ರಮದ ಭಾಗವಾಗಿ ಹಟ್ಟಿಅಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಜರಗಿದ ಮಾತೃವಂದನಾ ಕಾರ್ಯಕ್ರಮ 'ನಮಾಮಿ ಶಕ್ತಿಚರಣಮ್'ದಲ್ಲಿ ಅವರು ಮಾತನಾಡಿದರು. ಯಾವ ಮಹತ್ತರ ಸಾಧನೆ ಮಾಡಿದರೂ ಮಗನು ತಾಯಿಗೆ ಮಗನೇ ಆಗಿರುತ್ತಾನೆ. ಮಕ್ಕಳ ಯಶಸ್ಸಿನ ಹಿಂದೆ ತಾಯಿಯ ಪ್ರೋತ್ಸಾಹ ಮತ್ತು ತ್ಯಾಗ ಸದಾ ಇರುತ್ತದೆ. ನಮಗಾಗಿ ತನ್ನ ಜೀವವನ್ನೇ ಪಣಕ್ಕಿಟ್ಟ ತಾಯಿ ದೇವಿಯಂತೆ ಪೂಜ್ಯಳು. ಬೀಸುವ ಗಾಳಿ, ನಿಂತಿರುವ ನೆಲ, ತಿನ್ನುವ ಅನ್ನ ಎಲ್ಲದಲ್ಲೂ ದೇವರನ್ನು ಕಾಣುವ ಸಂಸ್ಕೃ ತಿ ನಮ್ಮದು. ಆದ್ದರಿಂದ ಮಕ್ಕಳು ತಮ್ಮ ತಂದೆತಾಯಿಯಲ್ಲಿ ದೇವರನ್ನು ಕಾಣಬೇಕು. ಮಕ್ಕಳ ಸಂತೋಷದಲ್ಲೇ ಅಪ್ಪ–ಅಮ್ಮನ ಸಂತೋಷ ಅಡಗಿದೆ. ಅವರು ತಲೆತಗ್ಗಿಸುವ ಕಾರ್ಯಗಳನ್ನು ಮಾಡಬಾರದು ಎಂದರು.

ಕೆಟ್ಟ ಪ್ರಭಾವಗಳಿಗೆ ಒಳಗಾಗಿ ಜೀವನವನ್ನು ಹಾಳುಮಾಡಿಕೊಳ್ಳಬಾರದು. ಕ್ಷಣಿಕ ಸುಖಕ್ಕಾಗಿ ಶಾಶ್ವತ ಸುಖವನ್ನು ಕಳೆದುಕೊಳ್ಳಬಾರದು. ವಿದ್ಯೆ ನೀಡಿದ ಗುರುಗಳು ಮತ್ತು ಆಶ್ರಯ ನೀಡಿದ ಸಂಸ್ಥೆಯನ್ನು ಎಂದಿಗೂ ಮರೆಯಬಾರದು ಎಂದು ಅವರು ಕಿವಿಮಾತು ಹೇಳಿದರು. ಶ್ರೀ ಸಿದ್ಧಿಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಾಲಾ ಪ್ರಾಂಶುಪಾಲ ಶರಣ ಕುಮಾರ, ಶಾಲಾ ಆಡಳಿತಾಧಿಕಾರಿ ವೀಣಾ ರಶ್ಮಿ ಎಂ., ಶಾಲಾ ಉಪಪ್ರಾಂಶುಪಾಲ ರಾಮ ದೇವಾಡಿಗ, ಶಿಕ್ಷಕ ಮತ್ತು ಶಿಕ್ಷಕೇತರರು ಉಪಸ್ಥಿತರಿದ್ದರು.

ಸ್ವಚ್ಛೋತ್ಸವ, ನರೇಗಾ ಗ್ರಾಮೋತ್ಸವ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ -50 ವರ್ಷ ಸಂಭ್ರಮ ಕಾರ್ಯಕ್ರಮ

ಸರಕಾರಿ ಯೋಜನೆಗಳಿಂದ ಸ್ವಾವಲಂಬಿ ಬದುಕು

ಕೊಣಾಜೆ: ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ ಸರ್ಕಾರದ ಅನೇಕ ಮಹತ್ವಪೂರ್ಣವಾದ ಯೋಜನೆಗಳ ಸಮರ್ಪಕ ಸದ್ಬಳಕೆಯನ್ನು ಮಾಡುವ ಮೂಲಕ ಎಷ್ಟೋ ಜನರು ಸ್ವಾವಲಂಬಿ ಬದುಕನ್ನು ಕಂಡುಕೊಂಡಿದ್ದಾರೆ ಎಂದು ಕರ್ನಾಟಕ ಸರ್ಕಾರದ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಡಿ. ಎಸ್. ಗಟ್ಟಿ ಹೇಳಿದರು.

ಅವರು ಗುರುವಾರ ದ.ಕ.ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಉಳ್ಳಾಲ, ಬಾಳೆಪುಣಿ ಗ್ರಾಮ ಪಂಚಾಯತ್ ಇದರ ವತಿಯಿಂದ ಸ್ವಚ್ಛೋತ್ಸವ, ನರೇಗಾ ಗ್ರಾಮೋತ್ಸವ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ -50 ವರ್ಷ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸ್ವಚ್ಛ ಗ್ರಾಮವಾಗಿ ಬಾಳೆಪುಣಿ ಗ್ರಾಮ ಪಂಚಾಯತ್ ಮಾದರಿಯಾಗಿದೆ. ಅನೇಕ ಯೋಜನೆಗಳನ್ನು ಸಮರ್ಪಕವಾಗಿ ಬಳಸಿ ಕೊಳ್ಳುವ ಮೂಲಕ ಗಾಂಧಿ ಗ್ರಾಮ ಪುರಸ್ಕಾರ ಪಡೆದುಕೊಂಡಿದೆ. ಗ್ರಾಮ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯೂ ಸಾಧ್ಯ ಎಂದರು. ಉಳ್ಳಾಲ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಗುರುದತ್ ಅವರು ಮಾತನಾಡಿ, ಕಾರ್ಯಯೋಜನೆಗಳನ್ನು ಎಸಿ ರೂಮುನೊಳಗೆ ಕೂತು ನಿರ್ಧರಿಸಿದರೆ ಯಶಸ್ಸು ಆಗಲು ಸಾಧ್ಯವಿಲ್ಲ. ಅಧಿಕಾರಿಗಳೊಂದಿಗೆ ಜನರು ಸಂಪೂರ್ಣವಾಗಿ ಯೋಜನೆಯಲ್ಲಿ ಭಾಗವಹಿಸಿ ತೊಡಗಿಸಿಕೊಂಡರೆಮಾತ್ರ ಇದುಯಶಸ್ವಿಯಾಗಲು ಸಾಧ್ಯ. ಶಾಲಾ ವಿದ್ಯಾರ್ಥಿಗಳನ್ನು ಪ್ರವಾಸ ಸ್ಥಳಗಳಿಗೆ ಕರೆದುಕೊಂಡು ಹೋಗುವಂತೆಯೇ ಅವರಿಗೆ ಸ್ವಚ್ಛ ಘಟಕಗಳನ್ನೂ ತೋರಿಸಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಬೇಕಿದೆ ಎಂದರು.



ನರೇಗಾ ಯೋಜನಾಧಿಕಾರಿ ಜಯರಾಮ್ ಸ್ವಚ್ಛ ಮನೆ ಘೋಷಣಾ ಪತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿ, ದೂರದೃಷ್ಟಿಕೋನ ಇಟ್ಟುಕೊಂಡು ನಾವು ಕಾರ್ಯಪ್ರವೃತ್ತರಾದರೆ ಯಶಸ್ಸು ಸಾಧ್ಯ. ಸರ್ಕಾರದ ಯೋಜನೆಗಳನ್ನು, ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಲೆಕ್ಕಸಹಾಯಕರಾಗಿಕಾರ್ಯನಿರ್ವಹಿಸಿಇದೀಗ ವರ್ಗಾವಣೆಗೊಂಡ ರುಕ್ಮನ್ ದಾಸ್, ಆರೋಗ್ಯ ಸಹಾಯಕಿಯಾಗಿ ವರ್ಗಾವಣೆಗೊಂಡ ನಳಿನಾಕ್ಷಿ ಲಿಂಗಪ್ಪ, ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಪುಷ್ಪ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

- ಸರ್ಕಾರದ ಅನೇಕ ಮಹತ್ವಪೂರ್ಣವಾದ ಯೋಜನೆಗಳ ಸಮರ್ಪಕ ಸದ್ಬಳಕೆಯನ್ನು ಮಾಡುವ ಮೂಲಕ ಎಷ್ಟೋ ಜನರು ಸ್ವಾವಲಂಬಿ ಬದುಕನ್ನು ಕಂಡುಕೊಂಡಿದ್ದಾರೆ
- ಸ್ವಚ್ಛ ಗ್ರಾಮವಾಗಿ ಬಾಳೆಪುಣಿ ಗ್ರಾಮ ಪಂಚಾಯತ್ ಮಾದರಿಯಾಗಿದೆ.
- ಕಾರ್ಯಯೋಜನೆಗಳನ್ನು ಎಸಿ ರೂಮುನೊಳಗೆ ಕೂತು ನಿರ್ಧರಿಸಿದರೆ ಯಶಸ್ಸು ಆಗಲು ಸಾಧ್ಯವಿಲ್ಲ.

ಶೈಕ್ಷಣಿಕ ಹಾಗೂ ಇತರ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಕಪಾಟು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬಾಳೆಪುಣಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಗೀತಾ ಭಂಡಾರಿ, ಉಪಾಧ್ಯಕ್ಷ ಸಿ.ಎಂ. ಶರೀಫ್ ಚೆಂಬೆತೋಟ, ಉದ್ಯಮಿ ನಾಸೀರ್ ಎನ್ ಎಸ್ ನಡುಪದವು, ಮಾಜಿ ತಾಲೂಕು ಪಂಚಾಯತ್ ಸದಸ್ಯ ಹೈದರ್ ಕೈರಂಗಳ, ಮಾಜಿ ಅಧ್ಯಕ್ಷ ಬಶೀರ್, ಹಿರಿಯ ಸದಸ್ಯ ಬಾಸ್ಕರ ಕೋಟ್ಯಾನ್, ದ.ಕ.ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ, ಸದಸ್ಯರಾದ ಅಬ್ದುಲ್ ರಹಿಮಾನ್, ಅಬ್ಬಾಸ್, ಸುಜಾತ, ದೊಂಬಯ್ಯ, ಸುನೀಲ್, ಸಾವಿತ್ರಿ, ಅಂಜಲಿ, ಸುಮನಾ ಕ್ರಾಸ್ತಾ, ಅಬ್ದುಲ್ ರಹಿಮಾನ್, ಗುರುರಾಜ್ ಭಟ್, ಶಶಿಧರ್, ಮಾಜಿ ಅಧ್ಯಕ್ಷರಾದ ಸುಕನ್ಯಾ ರೈ, ಜೊಹರಾ, ಯಾಕೂಬ್ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯದರ್ಶಿ ಆಯಿಷಾ ಬಾನು ಪ್ರಾಸ್ತಾವಿಕವಾಗಿ ಮಾತನಾಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೆಂಕಟೇಶ್ ಅವರು ಸ್ವಾಗತಿಸಿದರು. ಉಪಾಧ್ಯಕ್ಷರಾದ ಸಿ.ಎಂ.ಶರೀಫ್ ವಂದಿಸಿದರು. ಸದಾನಂದ ಹಾಗೂ ಮಂಜಪ್ಪ ಅವರು ಕಾರ್ಯಕ್ರಮ ನಿರೂಪಿಸಿದರು.

ಸಾವಯವ ಬಾಟಲಿ ಹಾಗೂ ಸಾವಯವ ಕೈಚೀಲ ಬಿಡುಗಡೆ

ಬಾಳೆಪುಣಿಯಲ್ಲಿ ನಡೆದ ಗ್ರಾಮೋತ್ಸವ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಮೆಲ್ವಿನ್ ಅರುಣ್, ಕವಿತಾ ದಂಪತಿ ಕಬ್ಬು, ಜೋಳ ಮೊದಲಾದ ಸಾವಯವ ಪದಾರ್ಥಗಳನ್ನು ಬಳಸಿ ತಯಾರಿಸಿದ ಸಾವಯವ ನೀರಿನ ಬಾಟ್ಲಿ ಹಾಗೂ ಸಾವಯವ ಪ್ಲಾಸ್ಟಿಕ್ ಚೀಲ, ಸಾವಯವ ನರ್ಸರಿ ಚೀಲವನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಸ್ತ್ರೀ ಶಕ್ತಿ ಬಲವರ್ಧನೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿ : ಸಂಸದ ಕೋಟ ಪ್ರಶಂಸೆ

ಕೋಟ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸಾಕಷ್ಟು ಕುಟುಂಬಗಳು ತಮ್ಮ ಜೀವನ ಕಟ್ಟಿಕೊಂಡು ಸ್ವಾವಲಂಬಿ ಬದುಕನ್ನು ಕಂಡುಕೊಂಡಿದ್ದಾರೆ ಎಂದು ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶುಕ್ರವಾರ ಕೋಟತಟ್ಟು ಪಂಚಾಯತ್ ಸಭಾಂಗಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬ್ರಹ್ಮಾವರ ತಾಲೂಕು ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಮಾರ್ಗದರ್ಶನದಲ್ಲಿ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಹೊಲಿಗೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ಘಾ ಟಿಸಿ ಮಾತನಾಡಿ ಸಮಾಜದಲ್ಲಿ ನಂಬಿಕೆ ತಳಹದಿದಲ್ಲಿ ಕಾರ್ಯಾಚರಿಸುವ ಏಕಮಾತ್ರ ಸಂಸ್ಥೆಯಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗುರುತಿಸಿಕೊಂಡಿದೆ, ಕಾವಂದರ ಚಿಂತನೆ ಅವರು ಈ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು ಈ ದಿಸೆಯಲ್ಲಿ ಸ್ವಂತ ಉದ್ಯಮಕ್ಕೆ ಈ ಹೊಲಿಗೆ ತರಬೇತಿ ಶಕ್ತಿಯುತವಾಗಿ ಈ ಸಮಾಜದಲ್ಲಿ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ ಶ್ರೀ ಕ್ಷೇತ್ರ ಪ್ರತಿಯೋಜನೆ ಯೋಚನೆ ದುರ್ಬಲರ ಕಣ್ಣೀರೊರೆಸುವ ಕಾರ್ಯ ಮಾಡಲಿದೆ ಎಂದರು. ಸಭೆಯಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿಯವರನ್ನು ಅಭಿನಂದಿಸಲಾಯಿತು.



- ಸಮಾಜದಲ್ಲಿ ನಂಬಿಕೆ ತಳಹದಿದಲ್ಲಿ ಕಾರ್ಯಾಚರಿಸುವ ಏಕಮಾತ್ರ ಸಂಸ್ಥೆಯಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗುರುತಿಸಿಕೊಂಡಿದೆ
- ಕಾವಂದರ ಚಿಂತನೆ ಅವರು ಈ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು

ತರಬೇತಿ ನಿರತರ ಅಮೃತ ಪೂಜಾರಿ ಕದ್ರಿಕಟ್ಟು ಇವರಿಗೆ ಸಂಸದ ಕೋಟ ಪ್ರಮಾಣಪತ್ರವನ್ನು ವಿತರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಜಾಗೃತಿ ವೇದಿಕೆ ಕೋಟ ವಲಯ ಅಧ್ಯಕ್ಷ ಎಂ.ಜಯರಾಮ ಶೆಟ್ಟಿ ವಹಿಸಿದ್ದರು.

ಮುಖ್ಯಅತಿಥಿಯಾಗಿಕಾಪತಾಲೂಕು ಅಧ್ಯಕ್ಷ ಜಿ.ರಾಮಚಂದ್ರ ಐತಾಳ್, ತಾಲೂಕು ಜನಜಾಗೃತಿ ವೇದಿಕೆಯ ಸದಸ್ಯ ರವೀಂದ್ರ ಐತಾಳ್ ಪಾರಂಪಳ್ಳಿ, ಶ್ರೀ ಕ್ಷೇತ್ರ ಧರ್ಮಸ್ಥಳಗ್ರಾಮಾಭಿವೃದ್ಧಿಯೋಜನೆಯ ತಾಲೂಕು ಯೋಜನಾಧಿಕಾರಿ ರಮೇಶ್ ಪಿ ಕೆ, ಕೋಟ ಒಕ್ಕೂಟದ ಪ್ರೇಮ ಹಂದಟ್ಟು, ತರಬೇತುದಾರೆ ಸೇವಾಪ್ರತಿನಿಧಿ ಶೋಭಾ ಶಂಕರ್ ಪುತ್ರನ್ ಉಪಸ್ಥಿತರಿದ್ದರು. ಮೇಲ್ವಿಚಾರಕ ನಾಗೇಶ್ ಸ್ವಾಗತಿಸಿದರು. ಯೋಜನೆಯ ಒಕ್ಕೂಟದ ಮೇಲ್ವಿಚಾಕರಿ ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು. ಸೇವಾಪ್ರತಿನಿಧಿ ಶ್ರೀಲಕ್ಷ್ಮೀ ಪ್ರಭು ವಂದಿಸಿದರು.

ವಂಚಕ ಉದ್ಯೋಗ ಏಜೆನ್ಸಿಗಳ ಕಡಿವಾಣಕ್ಕೆ ವಿದೇಶಾಂಗ ಸಚಿವರಿಗೆ ಸಂಸದ ಒತ್ತಾಯ

ಮಂಗಳೂರು: ಮಂಗಳೂರು ಹಾಗೂ ಕರಾವಳಿ ಕರ್ನಾಟಕದ ಯುವಕರು ನಕಲಿ ಉದ್ಯೋಗ ನೇಮಕ ಏಜೆನ್ಸಿಗಳ ಮೂಲಕ ಗಲ್ಫ್ ಹಾಗೂ ದಕ್ಷಿಣ ಏಷ್ಯಾ ದೇಶಗಳಿಗೆ ತೆರಳಿ ಅಲ್ಲಿ ಮೋಸ ಹೋಗಿ ಸಂಕಷ್ಟಕ್ಕೆ ಸಿಲುಕಿರುವ ಅತ್ಯಂತ ಗಂಭೀರ ವಿಚಾರವಾಗಿದ್ದು, ಇಂಥಹ ಪ್ರಕರಣ ದೇಶದೆಲ್ಲೆಡೆ ಜಾಸ್ತಿಯಾಗುತ್ತಿದೆ. ಈ ಹಿನ್ನಲೆಯಲ್ಲಿ ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳುವ ಭಾರತೀಯ ನಾಗರಿಕರ ಸುರಕ್ಷತೆ ಹೆಚ್ಚಿಸಲು ಜಾಗೃತಿ ಮೂಡಿಸುವ ಜತೆಗೆ ವಂಚನೆ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕೋರಿ ಕ್ಯಾ. ಬ್ರಿಜೇಶ್ ಚೌಟ ಅವರು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.



ನವದೆಹಲಿಯಲ್ಲಿ ಶುಕ್ರವಾರ ಸಚಿವರನ್ನು ಭೇಟಿಯಾಗಿ ಸುದೀರ್ಘ ಮಾತುಕತೆ ನಡೆಸಿರುವ ಸಂಸದರು, ಮಂಗಳೂರು ಹಾಗೂ ಕರಾವಳಿ ಕರ್ನಾಟಕದ ಯುವ ಜನರು ಉದ್ಯೋಗ ಪಡೆಯುವ ಕನಸಿನೊಂದಿಗೆ ಗಲ್ಫ್ ಹಾಗೂ ದಕ್ಷಿಣ ಏಷ್ಯಾ ದೇಶಗಳಿಗೆ ತೆರಳುತ್ತಿದ್ದಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅನೇಕ ಸಂದರ್ಭಗಳಲ್ಲಿ ನಕಲಿ ಅಥವಾ ವಂಚಕ ಉದ್ಯೋಗ ನೇಮಕ ಏಜೆನ್ಸಿಗಳ ಮೂಲಕ ವಿದೇಶಕ್ಕೆ ತೆರಳಿದ ಬಳಿಕ ಅಲ್ಲಿ ಸೈಬರ್ ವಂಚಕರ ಬಲೆಗೆ ಸಿಲುಕುತ್ತಿರುವ, ಉದ್ಯೋಗವಿಲ್ಲದೆ ಅಥವಾ ನಿರೀಕ್ಷಿತ ಕೆಲಸ ಸಿಗದೆ ಸಂಕಷ್ಟದಲ್ಲಿ ಸಿಲುಕಿಕೊಂಡಿರುವ ಬಗ್ಗೆ ದೂರುಗಳು ಬರುತ್ತಿವೆ. ಹೀಗಾಗಿ, ಈ ವಂಚಕ ಜಾಲಕ್ಕೆ ಕಡಿವಾಣ ಹಾಕುವುದಕ್ಕೆ ಅಗತ್ಯ ಕ್ರಮಗಳನ್ನು ಸಚಿವಾಲಯದ ಮೂಲಕ ಜರುಗಿಸಬೇಕು. ಇಂಥಹ ನಕಲಿ ಏಜೆನ್ಸಿಗಳ ಬಗ್ಗೆಯೂ ಜನರ ಲ್ಲಿಯೂ ಪೂರ್ವ-ಪ್ರಯಾಣ ಸಮಾಲೋಚನೆ (ಪ್ರಿ-ಡಿಪಾರ್ಚರ್ ಕೌನ್ಸೆಲಿಂಗ್), ನಕಲಿ ಏಜೆನ್ಸಿಗಳ ಬಗ್ಗೆ ಜಾಗೃತಿ ಅಭಿಯಾನಗಳು ಹಾಗೂ ನೇಮಕಾತಿ ಸಂಸ್ಥೆಗಳೊಂದಿಗೆ ಸಮನ್ವಯವನ್ನು ಬಲಪಡಿಸುವ ಬಗ್ಗೆ ಸಚಿವಾಲಯ ಗಮನಹರಿಸಬೇಕು. ಅಲ್ಲದೆ, ಅಪಾಯ ಹೆಚ್ಚಿರುವ ದೇಶಗಳಲ್ಲಿ ಹೆಚ್ಚುವರಿ ಮೇಲ್ವಿಚಾರಣಾ ವ್ಯವಸ್ಥೆ ಬಲಪಡಿಸಬೇಕೆಂದು ಸಚಿವರಲ್ಲಿ ಮನವಿ ಮಾಡಿದ್ದಾರೆ.

ಇತ್ತೀಚೆಗೆ ಮಂಗಳೂರು ಸೇರಿದಂತೆ ಕರ್ನಾಟಕದ ಹಲವು ಯುವಕರು ಕಾಂಬೋಡಿಯಾ ದೇಶಕ್ಕೆ ತೆರಳಿ ಅಲ್ಲಿ ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ಸಾಕಷ್ಟು ತೊಂದರೆ ಅನುಭವಿಸಿದ್ದರು. ಕೊನೆಗೆ ವಿದೇಶಾಂಗ ಸಚಿವಾಲಯದ ಮಧ್ಯಸ್ಥಿಕೆಹಾಗೂನಿರಂತರಫಾಲೋಅಪ್ ನಿಂದಾಗಿ ಮಂಗಳೂರಿನ ಐವರು ಯುವಕರನ್ನು ಕಾಂಬೋಡಿಯಾದ ನರಕಯಾತನೆ ಪರಿಸ್ಥಿತಿಯಿಂದ ರಕ್ಷಿಸಿ ಸುರಕ್ಷಿತವಾಗಿ ತಾಯ್ನಾಡಿಗೆ ವಾಪಾಸ್ ಕರೆತರುವುದಕ್ಕೆ ಸಾಧ್ಯವಾಗಿದೆ. ಈ ಬಗ್ಗೆ ಸಂತ್ರಸ್ತರು ಹಾಗೂ ಅವರ ಕುಟುಂಬಸ್ಥರು ಅನುಭವಿಸಿದ ಯಾತನೆ-ನೋವು ತೋಡಿಕೊಂಡಿರುವುದನ್ನು ಅವರು ಸಚಿವರ ಗಮನಕ್ಕೆ ತಂದಿದ್ದಾರೆ.

ಸಂಸದರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವ ಡಾ. ಎಸ್. ಜೈಶಂಕರ್ ಅವರು, ವಿದೇಶದಲ್ಲಿರುವ ಭಾರತೀಯರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ಸಮಾವೇಶಕ್ಕೆ ಪ್ರಸ್ತಾವನೆ ಇದೇ ಸಂದರ್ಭದಲ್ಲಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಆಶ್ರಯದಲ್ಲಿ ಮಂಗಳೂರಿನಲ್ಲಿ ತಂತ್ರಜ್ಞಾನ, ಪ್ರವಾಸೋದ್ಯಮ ಮತ್ತು ವ್ಯಾಪಾರ ಕ್ಷೇತ್ರಗಳನ್ನುಒಳಗೊಂಡಅಂತಾರಾಷ್ಟ್ರೀಯ ಸಮಾವೇಶವನ್ನು ಆಯೋಜಿಸುವ ಕುರಿತು ಕ್ಯಾ. ಚೌಟ ಅವರು ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿದರು.

ಹಳ್ಳಾಡಿ ಜಯರಾಮ ಶೆಟ್ಟರಿಗೆ ಪುಂಡಲೀಕ ಹಾಲಂಬಿ ಪ್ರಶಸ್ತಿ ಪ್ರದಾನ

ಕುಂದಾಪುರ : ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜಿ. ಸರೋಜಮ್ಮ ಪ್ರಾಯೋಜಿತ ಪುಂಡಲೀಕ ಹಾಲಂಬಿ ದತ್ತಿ ಕಾರ್ಯಕ್ರಮದಡಿ ಯಕ್ಷಗಾನ ಕಲಾವಿದ ಹಳ್ಳಾಡಿ ಜಯರಾಮ ಶೆಟ್ಟರಿಗೆ ಪುಂಡಲೀಕ ಹಾಲಂಬಿ ಪ್ರಶಸ್ತಿ ಪ್ರದಾನ ಸಮಾರಂಭ ಕುಂದಾಪುರದ ಸರಕಾರಿ ಪ.ಪೂ. ಕಾಲೇಜಿನ ಕಲಾಮಂದಿರದಲ್ಲಿ ಶನಿವಾರ ಸಂಜೆ ನಡೆಯಿತು.

ಉದ್ಘಾಟಿಸಿದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಇದೊಂದು ಒಳ್ಳೆಯ ಕಾರ್ಯಕ್ರಮವಾಗಿದ್ದು, ಹಾಲಂಬಿಯವರು ಸಾಹಿತ್ಯ ಪರಿಷತ್‌ಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಹಳ್ಳಾಡಿ ಜಯರಾಮ ಶೆಟ್ಟರು ಉತ್ತಮ ಹಾಸ್ಯ ಕಲಾವಿದ. ಅವರಿಗೆ ಈ ಪ್ರಶಸ್ತಿ ನೀಡುವ ಮೂಲಕ ಇದರ ಮೌಲ್ಯ ಇನ್ನಷ್ಟು ಹೆಚ್ಚಾಗಿದೆ. ಪಡೆದವರ ಗೌರವವೂ ಹೆಚ್ಚಾಗಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಯಕ್ಷಗಾನಅಕಾಡೆಮಿಅಧ್ಯಕ್ಷಡಾ.ತಲ್ಲೂರುಶಿವರಾಮ ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಿ, ಹಳ್ಳಾಡಿಯವರು ದೊಡ್ಡ ಕಲಾವಿದರು. ನೈಜ ಸಾಧಕರಿಗೆ ಸಂದ ಗೌರವ ಇದಾಗಿದೆ ಎಂದು ಶ್ಲಾಘಿಸಿದರು.



ಪ್ರಶಸ್ತಿ ಸ್ವೀಕರಿಸಿದ ಹಳ್ಳಾಡಿ ಜಯರಾಮ ಶೆಟ್ಟಿ ಮಾತನಾಡಿ, 40 ಪೈಸೆಗೆ ಯಕ್ಷರಂಗದಲ್ಲಿ ದುಡಿಮೆ ಆರಂಭಿಸಿದ ನನಗೆ, ಈಗ ಈ ಪ್ರಶಸ್ತಿ ರೂಪದಲ್ಲಿ 25 ಸಾವಿರ ರೂ. ಒಂದೇ ದಿನದಲ್ಲಿ ಪಡೆಯುವ ಮಟ್ಟಿಗೆ ಬೆಳೆಸಿರುವುದು ಪ್ರೇಕ್ಷಕರು. ಈ ಗೌರವ ಎಲ್ಲವೂ ಪ್ರೇಕ್ಷರಿಗೆ ಸಲ್ಲಬೇಕಾದುದು. 18 ತಿಂಗಳು ಕಾಲಿನ ಅನಾರೋಗ್ಯದಿಂದ ಮನೆಯಲ್ಲಿದ್ದೆ. ಮತ್ತೆ ರಂಗಕ್ಕೆ ಬರುವಂತಾಗಿದ್ದು ವೈದ್ಯರ ಪರಿಶ್ರಮ, ಯಕ್ಷಾಭಿಮಾನಿಗಳ ಸಹಾಯದಿಂದ. ಒಳ್ಳೆಯ ಕಲಾವಿದ ಅನ್ನುವ ಬಿರುದು ಪ್ರೇಕ್ಷಕರು ಕೊಟ್ಟ ಬಿರುದು ಎಂದರು.

ಕಸಾಪ ಕುಂದಾಪುರ ತಾಲೂಕು ಘಟಕದ ಅಧ್ಯಕ್ಷ ಡಾ. ಉಮೇಶ್ ಪುತ್ರನ್ ಆಶಯ ನುಡಿಗಳನ್ನಾಡಿದರು. ಕಸಾಪ ಸ್ಥಾಪಕಾಧ್ಯಕ್ಷ ಎ.ಎಸ್. ಎನ್. ಹೆಬ್ಬಾರ್ ಅಭಿನಂದನಾ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಲೇಖಕ ಜಯಪ್ರಕಾಶ್ ಪುತ್ತೂರು ರಚಿಸಿದ ವ್ಯಕ್ತಿತ್ವ ವಿಕಸನ ವಿಚಾರಧಾರೆ ಪುಸ್ತಕ ಬಿಡುಗಡೆಗೊಂಡಿತು. ದತ್ತಿ ನಿಧಿ ದಾನಿ ಜಿ. ಸರೋಜಮ್ಮ ಪುಂಡಲೀಕ ಹಾಲಂಬಿ, ಸಾಂಸ್ಕೃ ತಿಕ ಚಿಂತಕ ಕೆ. ಸೀತಾರಾಮ ನಕ್ಕತ್ತಾಯ, ಕುಂದಾಪುರ ಸರಕಾರಿ ಪ.ಪೂ. ಕಾಲೇಜಿನ ಪ್ರಾಂಶುಪಾಲ ಜಿ. ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು. 'ಸಾಪ ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಸುಬ್ರಹ್ಮಣ್ಯ ಶೆಟ್ಟಿ ಪ್ರಸ್ತಾವಿಸಿ, ಕಾರ್ಕಳ ಕಸಾಪ ಅಧ್ಯಕ್ಷ ಕೊಂಡಳ್ಳಿ ಪ್ರಭಾಕರ ಶೆಟ್ಟಿ ಪರಿಚಯಿಸಿದರು. ಮನೋಹರ ಪಿ. ಸ್ವಾಗತಿಸಿ, ಮಂಜುನಾಥ ಕೆ.ಎಸ್. ವಂದಿಸಿದರು. ದಿನಕರ ಆರ್. ಶೆಟ್ಟಿ ನಿರೂಪಿಸಿದರು.

ಶ್ರೀ ಇಂದುಧರ ದೇವಸ್ಥಾನದ ವತಿಯಿಂದ 81ನೇ ಮಹಾ ಶಿವರಾತ್ರಿ ಮಹೋತ್ಸವದ ಪ್ರಯುಕ್ತ

ಕಾರವಾರ-ಮಂಗಳೂರುವರೆಗಿನ ಆಹ್ವಾನಿತ ತಂಡಗಳ ಕುಣಿತ ಭಜನಾ ಸ್ಪರ್ಧೆ

ಕುಂದಾಪುರ : ದೇವರ ಒಲುಮೆಗೆ ಪಾತ್ರರಾಗಲು ಮತ್ತು ದೇವರನ್ನು ಒಲಿಸಿಕೊಳ್ಳಲು ಭಜನೆ ಸುಲಭ ಮಾರ್ಗವಾಗಿದೆ. ಭಕ್ತಿಯಿಂದಮಾಡಿದಪ್ರತಿಯೊಂದು ಕಾರ್ಯ ದೇವರಿಗೆ ಸಲ್ಲುತ್ತದೆ. ಗುರುಗಳು ಹಾಗೂ ಹಿರಿಯರು ನಡೆದುಕೊಂಡು ಬಂದ ಸನ್ಮಾರ್ಗದಲ್ಲಿ ಮುನ್ನಡೆದು, ಪ್ರತಿನಿತ್ಯ ಮನೆಯಲ್ಲಿ ಭಜನೆ ಮಾಡುವ ಸಂಪ್ರದಾಯವನ್ನು ಬೆಳೆಸಿ ಮುನ್ನಡೆಸಿಕೊಂಡು ಬರಬೇಕು. ಭಜನೆಯಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುವುದಲ್ಲದೆ ಸಮಾಜದ ಒಗ್ಗಟ್ಟು ಹಾಗೂ ಬೆಳವಣಿಗೆ ಕೂಡ ಸಾಧ್ಯವಾಗುತ್ತದೆ ಎಂದು ನಿವೃತ್ತ ಲೆಕ್ಕಪರಿಶೋಧಕ ಮಂಜುನಾಥ ಖಾರ್ವಿ ಹೇಳಿದರು.

ಗಂಗೊಳ್ಳಿಯ ಶ್ರೀ ಇಂದುಧರ ದೇವಸ್ಥಾನದ ವತಿಯಿಂದ 81ನೇ ಮಹಾ ಶಿವರಾತ್ರಿ ಮಹೋತ್ಸವದ ಪ್ರಯುಕ್ತ ಗಂಗೊಳ್ಳಿಯ ಸ.ವಿ. ಹಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಆಯೋಜಿಸಲಾಗಿದ್ದ ಕಾರವಾರ–ಮಂಗಳೂರುವರೆಗಿನ ಆಹ್ವಾನಿತ ತಂಡಗಳ ಕುಣಿತ ಭಜನಾ ಸ್ಪರ್ಧೆಯನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಪಂ. ಮಾಜಿ ಸದಸ್ಯ, ಪತ್ರಕರ್ತ ಬಿ.ರಾಘವೇಂದ್ರ ಪೈ ಅಧ್ಯಕ್ಷತೆ ವಹಿಸಿದ್ದರು. ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಆಗಮಿಸಿ ಶುಭ ಕೋರಿದರು. ಮಾಜಿ ಮಂಡಲ ಪ್ರಧಾನ ಬಿ.ಸದಾನಂದ ಶೆಣೈ, ಗಂಗೊಳ್ಳಿ ಗ್ರಾಪಂ. ಸದಸ್ಯ ರಾಜೇಂದ್ರ ಶೇರುಗಾರ್, ಮಂಜುನಾಥಸಾಲಿಯಾನ್ ತ್ರಾಸಿ, ಬಡಾನಿಡಿಯೂರು ಗ್ರಾಪಂ. ಪಿಡಿಒ ನಾಗರತ್ನ, ಡಾ.ಸಪ್ತಮಿ ಕೆ. ಮರವಂತೆ ಮತ್ತು ಉಡುಪಿ ಜಿಲ್ಲಾ ಭಜನಾ ಮಂಡಳಿಗಳ ಒಕ್ಕೂಟದ ಸಂಚಾಲಕ ಜಯಕರ ಪೂಜಾರಿ ಗುಲ್ವಾಡಿ ಶುಭಾಶಂಸನೆಗೈದರು. ಇದೇ ಸಂದರ್ಭ ಡಾ. ಸಪ್ತಮಿ ಕೆ. ಮರವಂತೆ ಮತ್ತು ಜಯಕರ ಪೂಜಾರಿ ಗುಲ್ವಾಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.



ಗಂಗೊಳ್ಳಿಯ ಉದ್ಯಮಿ ರಾಜೇಶ ಪೂಜಾರಿ, ಮತ್ಸ್ಯೋದ್ಯಮಿ ಮಂಜುನಾಥ ಜಿ.ಟಿ., ಗಂಗೊಳ್ಳಿ ಗ್ರಾಪಂ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಮಹೇಶ್ (ಅಯ್ಯಪ್ಪ), ಬೈಂದೂರು ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಅಶೋಕ ಎನ್.ಡಿ., ಭಜನಾ ಪರಿಷತ್ ಗಂಗೊಳ್ಳಿ ವಲಯ ಅಧ್ಯಕ್ಷ ಜಗದೀಶ ಪೂಜಾರಿ, ಮತ್ಸ್ಯೋದ್ಯಮಿ ಅನಿಲ್ ಸಾಲ್ಯಾನ್, ದೇವಸ್ಥಾನದ ಅಧ್ಯಕ್ಷ ಗುರುರಾಜ್, ಕಾರ್ಯದರ್ಶಿ ವರದರಾಜ್ ಜಿ.ಟಿ. ಮತ್ತು ಅರ್ಚಕ ಕೃಷ್ಣ ಜಿ.ಟಿ. ಉಪಸ್ಥಿತರಿದ್ದರು.

ದೇವಸ್ಥಾನದ ಮಾಜಿ ಅಧ್ಯಕ್ಷ ಸುಂದರ ಜಿ. ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಕಿರು ಸುದ್ದಿ

ಸಾರಿ ಪ್ಲೋಲ್ಡಿಂಗ್, ಮೆಹಂದಿ ಡಿಸೈನ್ ತರಬೇತಿ ಸಮಾರೋಪ

ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕಡಬ ತಾಲೂಕು ಹಾಗೂ ಗ್ರಾಮೀಣ ಶ್ರೇಷ್ಠತಾ ಕೇಂದ್ರ ಬೆಳ್ತಂಗಡಿ ಇದರ ವತಿಯಿಂದ ಯೋಜನೆಯ ಪಾಲುದಾರ ಬಂಧುಗಳಿಗೆ ಉದ್ಯಮಶೀಲತ ತರಬೇತಿಯಡಿಯಲ್ಲಿ ರಾಮಕುಂಜ ಗ್ರಾ.ಪಂ. ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 5 ದಿನ ನಡೆದ ಸಾರಿ ಫೋಲ್ಡಿಂಗ್ ಮತ್ತು ಮೆಹಂದಿ ಡಿಸೈನ್ ತರಬೇತಿ ಶಿಬಿರದ ಸಮಾರೋಪ ನಡೆಯಿತು. ಸಿಆರ್‌ಇ ಸಂಸ್ಥೆಯ ಪ್ರಾಂಶುಪಾಲ ರಮೇಶ್ ಅವರು ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಿದರು. ಗ್ರಾಮಾಭಿವೃದ್ಧಿ ಯೋಜನೆಯ ಕಡಬ ತಾಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಮಾತನಾಡಿ, ಯೋಜನೆ ಇಂತಹ ಉತ್ತಮ ಕೆಲಸವನ್ನು ಮಾಡಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸ್ಪೂರ್ತಿಯಾಗಿದೆ ಎಂದು ಹೇಳಿ ಶುಭ ಹಾರೈಸಿದರು. ಸಂಪನ್ಮೂಲ ವ್ಯಕ್ತಿ ಹರ್ಷಿತಾ ಮಾತನಾಡಿ, ತರಬೇತಿಯಲ್ಲಿ ಪಾಲ್ಗೊಂಡ ಅಭ್ಯರ್ಥಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಿಬಿರಾರ್ಥಿಗಳಾದ ಮಮತಾ, ಮಲ್ಲಿಕಾ, ದಿವ್ಯ, ವಸಂತಿ, ಅನಿತಾ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಸಿಆರ್‌ಇ ತರಬೇತಿ ಸಂಸ್ಥೆಯ ಉಪನ್ಯಾಸಕ ಜನಾರ್ದನ್ ಸ್ವಾಗತಿಸಿ, ವಲಯ ಮೇಲ್ವಿಚಾರಕಿ ಜಯಶ್ರೀ ವಂದಿಸಿದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಚೇತನ ಕಾರ್ಯಕ್ರಮ ನಿರ್ವಹಿಸಿದರು. ಸೇವಾ ಪ್ರತಿನಿಧಿಗಳಾದ ಸುಮಲತಾ, ಪ್ರೇಮಾವತಿ ಸಹಕರಿಸಿದರು.

ನಗರ ಭಜನೆ

ಕುಂದಾಪುರ: ಗಂಗೊಳ್ಳಿಯ ಶಿವರಾತ್ರಿ ಸೇವಾ ಸಮಿತಿ ಶ್ರೀ ವೀರೇಶ್ವರ ಮತ್ತು ಉಮಾಮಹೇಶ್ವರ ದೇವಸ್ಥಾನ ವತಿಯಿಂದ ಶ್ರೀ ವೀರೇಶ್ವರ ಮತ್ತು ಉಮಾಮಹೇಶ್ವರ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ ಮತ್ತು ಮತ್ಸ್ಯಕ್ಷಾಮ ನಿವಾರಣೆಗಾಗಿ ನಡೆಯುತ್ತಿರುವ 108 ದಿನಗಳ ಅಖಂಡ ಭಜನಾ ಕಾರ್ಯಕ್ರಮದ ನಿಮಿತ್ತ ನಗರ ಭಜನೋತ್ಸವ ಭಾನುವಾರ ನಡೆಯಿತು. ಸಮಿತಿ ಸದಸ್ಯರು, ವಿವಿಧ ಭಜನಾ ಮಂಡಳಿಗಳ ಸದಸ್ಯರು, ಭಕ್ತರು ನಗರ ಭಜನೋತ್ಸವದಲ್ಲಿ ಪಾಲ್ಗೊಂಡಿದ್ದರು.

ನಿಧನ ಸುದ್ದಿ

ರಾಕೇಶ್ ರಾವ್



ಮಂಗಳೂರು: ಮಂಗಳೂರು ಆರ್‌ಟಿಒ ಕಚೇರಿಯ ಪ್ರಥಮ ದರ್ಜೆ ಸಹಾಯಕರಾಗಿದ್ದ ರಾಕೇಶ್ ರಾವ್ (43) ಅವರು ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ನಿಧನರಾದರು. ದಕ್ಷಿಣ ಕನ್ನಡ ಜಿಲ್ಲಾ ಸರಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿಯಾಗಿದ್ದ ಅವರು, ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಆಗಲಿದ್ದಾರೆ.

ಗೋಕುಲದಾಸ್ ಪೈ



ಬಂಟ್ವಾಳ: ಪಾಣೆಮಂಗಳೂರು ನಿವಾಸಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಸ್ವಯಂಸೇವಕರಾದ ಗೋಕುಲದಾಸ್ ಪೈ (81) ಅಸೌಖ್ಯದಿಂದ ಪಾಣೆಮಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು, ಪತ್ನಿ ಹಾಗೂ ಪುತ್ರನನ್ನು ಆಗಲಿರುತ್ತಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಕ್ಷಕರಾಗಿ ಪಾಣೆಮಂಗಳೂರಿನಲ್ಲಿ ಒಂದು ದಶಕಗಳಿಗಿಂತ ಅಧಿಕ ಕಾಲ ಸೇವೆ ಸಲ್ಲಿಸಿದ್ದಲ್ಲದೆ ಧಾರ್ಮಿಕ,ಸಾಮಾಜಿಕ,ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದು ಸ್ಥಳೀಯವಾಗಿ 'ಪೈಮಾಮ್' ಎಂದೇ ಜನಾನುರಾಗಿದ್ದರು.

ದಿವಾಕರ ಪೂಜಾರಿ



ಕಿನ್ನಿಗೋಳಿ: ಮುಂಡ್ಕೂರು ಜಾರಿಗೆಕಟ್ಟೆ ಕೊರಗಜ್ಜ ಕ್ಷೇತ್ರದ ಧರ್ಮದರ್ಶಿ ದಿವಾಕರ ಪೂಜಾರಿ (60) ಫೆಬ್ರವರಿ 15 ರಂದು ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಆಗಲಿದ್ದಾರೆ. ಕಾಸರಗೋಡಿನಲ್ಲಿ ದೈವ ದರ್ಶನಕ್ಕೆಂದು ತೆರಳಿದ್ದ ಸಂದರ್ಭ ಹೃದಯಾಘಾತಕ್ಕೊಳಗಾದ ದಿವಾಕರ ಪೂಜಾರಿಯವರನ್ನು ಆಸ್ಪತ್ರೆಗೆ ದಾಖಲಿಸಿದ್ದರೂ ಫಲಕಾರಿಯಾಗದೆ ಮೃತಪಟ್ಟರು. ಮುಂಡ್ಕೂರಿನ ಜಾರಿಗೆಕಟ್ಟೆಯಲ್ಲಿ ಕೊರಗಜ್ಜ, ಕೊರಗರ ಪಂಜುರ್ಲಿ ಸಹಿತ ವಿವಿಧ ಪರಿವಾರ ಶಕ್ತಿಗಳ ಕೇಂದ್ರಕ್ಕೆ ಸಹಸ್ರಾರು ಭಕ್ತಾದಿಗಳು ಆಗಮಿಸುತ್ತಿದ್ದು ಕ್ಷೇತ್ರದಲ್ಲಿ ನಿರಂತರ ಕೋಲ, ಅಗೇಲು ಸೇವೆಗಳು ನಡೆಯುತ್ತಿದ್ದವು. ಕ್ಷೇತ್ರದಲ್ಲಿ ಕ್ರೈಸ್ತ, ಮುಸ್ಲಿಂ ಸಮಾಜದ ಬಂಧುಗಳೂ ಹರಕೆಯ ಕೋಲ ಹಾಗೂ ಅಗೇಲು ಸೇವೆ ನೀಡುತ್ತಿದ್ದು ಜಾರಿಗೆಕಟ್ಟೆ ಕೊರಗಜ್ಜ ಕ್ಷೇತ್ರ ಕಾರಣಿಕ ಕ್ಷೇತ್ರವೆನಿಸಿತ್ತು. ಮೃತರು ಮುಂಡ್ಕೂರು ಪೊಸ್ರಾಲು ಬ್ರಹ್ಮಶ್ರೀ ನಾರಾಯಣ ಗುರು ಸಂಘದ ಅಧ್ಯಕ್ಷರಾಗಿದ್ದು ಇತ್ತೀಚೆಗೆ ಸಂಘದ ನೂತನ ಕಟ್ಟಡ ನಿರ್ಮಾಣದಲ್ಲೂ ಪ್ರಮುಖ ಪಾತ್ರ ವಹಿಸಿದ್ದರು.



ಪುತ್ತೂರಿನಲ್ಲಿ ನ್ಯಾಯಾಲಯ ಸಂಕೀರ್ಣ ಉದ್ಘಾಟನೆಗೆ ಆಗಮಿಸಿದ್ದ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜ. ಅಬ್ದುಲ್ ನಝೀರ್ ಅವರಿಗೆ ಏಷ್ಯಾದ ಅತಿ ದೊಡ್ಡ ಚಾಕಲೇಟು ಕಾರ್ಖಾನೆ ಕ್ಯಾಂಪ್ಕೋದ ಕುರಿತು ಕ್ಯಾಂಪ್ಕೋ ನಿರ್ದೇಶಕ, ನ್ಯಾಯವಾದಿ ಮುರಳೀಕೃಷ್ಣ ಕೆ.ಎನ್. ಮಾಹಿತಿ ನೀಡಿದರು. ವಿವಿಧ ನ್ಯಾಯಾಧೀಶರು, ಶಾಸಕ ಅಶೋಕ್ ರೈ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶ್ರೀ ಕೋದಂಡ ರಾಮೋತ್ಸವ ಸಮಿತಿಯಿಂದ ಆಯೋಜನೆ
ಮಾ.25ರಿಂದ ಅದ್ದೂರಿ ರಾಮೋತ್ಸವ

ಮಡಿಕೇರಿ: ಶ್ರೀ ಕೋದಂಡ ರಾಮೋತ್ಸವ ಸಮಿತಿ ವತಿಯಿಂದ ಮಾ.25ರಿಂದ 27ರವರೆಗೆ ಮಡಿಕೇರಿ ನಗರದಲ್ಲಿ ಶ್ರೀ ರಾಮನವಮಿ ಪ್ರಯುಕ್ತ 36ನೇ ವರ್ಷದ ರಾಮೋತ್ಸವ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆಯಲಿವೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಶ್ರೀ ಕೋದಂಡ ರಾಮೋತ್ಸವ ಸಮಿತಿಯ ಅಧ್ಯಕ್ಷ ಕೆ.ಎಂ.ಗಣೇಶ್ ಅವರು, ಮಾ.25ರಂದು ಸಂಜೆ 6 ಗಂಟೆಗೆ ನಗರದಲ್ಲಿ ಶ್ರೀರಾಮನ ಪಲ್ಲಕ್ಕಿ ಮತ್ತು ಕಳಶದೊಂದಿಗೆ ಭಕ್ತರ ಬೃಹತ್ ಮೆರವಣಿಗೆ ನಡೆಯಲಿದೆ. ರಾತ್ರಿ ಶ್ರೀಕೋದಂಡರಾಮ ದೇವಾಲಯದಲ್ಲಿ ಭಕ್ತರಿಗೆ ಅನ್ನಸಂತರ್ಪಣೆಯಾಗಲಿದೆ. ಮಾ.26 ರಂದು ಬೆಳಗಿನಿಂದ ದೈವ ನೃತ್ಯ, ಮಹಾಪೂಜೆ, ಪ್ರತಿಷ್ಠಾಪನಾ ವಾರ್ಷಿಕೋತ್ಸವ, ರಾಮನವಮಿ ಕಾರ್ಯಕ್ರಮಗಳು ಹಾಗೂ ಭಜನೆ ಶ್ರದ್ಧಾಭಕ್ತಿಯಿಂದ ಜರುಗಲಿದೆ ಎಂದರು.

ಮಾ.27 ರಂದು ಸಂಜೆ 6.30 ಗಂಟೆಗೆ ನಗರದ ಬನ್ನಿ ಮಂಟಪದ ಬಳಿಯಿಂದ ದೇವಾನುದೇವತೆಗಳ ಸ್ತಬ್ಧಚಿತ್ರಗಳು ಮತ್ತು ಜಾನಪದ ಕಲಾತಂಡಗಳ ಬೃಹತ್ ಶೋಭಾಯಾತ್ರೆ ಸಾಗಲಿದೆ. ಈ ಶೋಭಾಯಾತ್ರೆಗೆ ಮಕ್ಕಳ ಮಂಟಪಗಳ ಮೆರಗು ಜೊತೆಯಾಗಲಿದೆ. ಒಂದು ಟ್ರ್ಯಾಕ್ಟರ್ ಮಾತ್ರ ಬಳಸಬಹುದಾಗಿದ್ದು, 20 ಸ್ತಬ್ಧಚಿತ್ರಗಳಿಗೆ ಅವಕಾಶ ಕಲ್ಪಿಸಲಾಗುವುದು. ಶೋಭಾಯಾತ್ರೆಯಲ್ಲಿ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲು ಆಸಕ್ತಿ ಇರುವವರು 9880778047 ನ್ನು ಸಂಪರ್ಕಿಸಬಹುದಾಗಿದೆ ಎಂದರು. ನಗರದ ಗಾಂಧಿ ಮೈದಾನದಲ್ಲಿ ಸಂಜೆ 6 ಗಂಟೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಮಿನಿ ದಸರಾದಂತೆ ಭಾಸವಾಗಲಿದೆ. ಶಾಸಕರಾದಿಯಾಗಿ ಹಲವು ದಾನಿಗಳು ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಖಜಾಂಚಿ ಕೋಲೆಯಂಡ ಡಾ.ಮೋಹನ್ ಅಪ್ಪಾಜಿ, ಮಹಿಳಾ ಸಮಿತಿಯ ಕಾರ್ಯಾಧ್ಯಕ್ಷೆ ಡಾ.ಜಯಂತಿ ಶೆಟ್ಟಿ, ಶ್ರೀಕೋದಂಡ ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ, ಉಪಾಧ್ಯಕ್ಷ ಅಂಬೆಕಲ್ ನವೀನ್, ಮಹಿಳಾ ಸಮಿತಿಯ ಕಾರ್ಯಾಧ್ಯಕ್ಷೆ ಡಾ.ಜಯಂತಿ ಶೆಟ್ಟಿ ಹಾಗೂ ಶ್ರೀಕೋದಂಡರಾಮ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಎನ್.ನಂಜುಂಡ ಸುದ್ದಿಗೋಷ್ಠಿಯಲ್ಲಿದ್ದರು.

ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ವತಿಯಿಂದ ಸಾಧಕರಿಗೆ 'ಅಬ್ಬಕ್ಕ ಪ್ರಶಸ್ತಿ' ಪ್ರದಾನ
ಉತ್ತಮ ನಾಗರಿಕರಿದ್ದರೆ ಉತ್ತಮ ಸಮಾಜ



ಉಳ್ಳಾಲ: ಸ್ವದೇಶಿ ಪ್ರೇಮ, ಸ್ವಾಭಿಮಾನಿ, ಸಮೃದ್ಧ ದೇಶ ನಮ್ಮದಾಗಬೇಕೆಂಬ ಚಿಂತನೆ ವೀರ ರಾಣಿ ಅಬ್ಬಕ್ಕಳದಾಗಿತ್ತು. ಅಬ್ಬಕ್ಕಳ ಆ ಅದ್ಭುತ ಚಿಂತನೆಯನ್ನು ನಾವು ಕಾರ್ಯರೂಪಕ್ಕೆ ತರಬೇಕಿದೆ. ಪ್ರತಿಯೊಬ್ಬ ನಾಗರಿಕನೂ ತನ್ನ ಹೊಣೆಗಾರಿಕೆಯನ್ನು ಅರಿತು ನಡೆದುಕೊಂಡಾಗ ಮಾತ್ರ ನಿಜವಾದ ಬದಲಾವಣೆ ತರಲು ಸಾಧ್ಯವೆಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.

ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ವತಿಯಿಂದ ತೊಕ್ಕೊಟ್ಟು ಒಳಪೇಟೆಯ ಅಂಬೇಡ್ಕರ್ ಮೈದಾನದಲ್ಲಿ ಶನಿವಾರದಂದು ನಡೆದ 'ವೀರರಾಣಿ ಅಬ್ಬಕ್ಕ ಉತ್ಸವ'ದಲ್ಲಿ ಸಾಧಕರಿಗೆ ಅಬ್ಬಕ್ಕ ಪ್ರಶಸ್ತಿ ಪ್ರದಾನಿಸಿ ಅವರು ಮಾತನಾಡಿದರು.

ಭಾರತವು ಅದ್ಭುತ ರಾಷ್ಟ್ರವಾಗಿ ಹೊರಹೊಮ್ಮಬೇಕಾದರೆ ನಾವು ನಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನೆರವೇರಿಸಬೇಕು. ಉತ್ತಮ ನಾಗರಿಕರು ಬೆಳೆದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಉತ್ತಮ ಸಮಾಜ ನಿರ್ಮಾಣವಾದಾಗ ಮಾತ್ರ ಬಲಿಷ್ಠ ರಾಷ್ಟ್ರ ರೂಪುಗೊಳ್ಳುತ್ತದೆಯೆಂದರು.

ಅಬ್ಬಕ್ಕ ಉತ್ಸವ ಉದ್ಘಾಟಿಸಿದ ರಾಣಿ ಅಬ್ಬಕ್ಕ ವಂಶಸ್ಥರಾದ ಶ್ರೀ ಕ್ಷೇತ್ರ ಧರ್ಮಸ್ಥಳದ ಅನಿತಾ ಸುರೇಂದ್ರ ಕುಮಾರ್ ಮಾತನಾಡಿ, ದೇಶದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ಅಬ್ಬಕ್ಕಳ ಕುರಿತಂತೆ ದೇಶದ ವಿವಿಧೆಡೆಗಳಲ್ಲಿ ಕಾರ್ಯಕ್ರಮಗಳು, ಆಕೆಯ ಪ್ರತಿಮೆಗಳ ಅನಾವರಣ ಆಗುತ್ತಿರುವುದು ಹೆಮ್ಮೆಯ ವಿಚಾರ. ಐನೂರು ವರುಷಗಳ ಬಳಿಕವೂ ಅಬ್ಬಕ್ಕಳನ್ನು ನಾವು ನೆನೆಯುತ್ತಿರುವುದು ಆಕೆಯ ಮೇಲಿನ ಅಭಿಮಾನದ ಪ್ರತೀಕವಾಗಿದೆ. ಉಳ್ಳಾಲದಲ್ಲಿ ನಡೆಯುತ್ತಿರುವ ಈ ಉತ್ಸವವು ಅಬ್ಬಕ್ಕ ರಾಣಿಯ ಗತವೈಭವವನ್ನು ಮರುಕಳಿಸುವಂತೆ ಮಾಡಿದೆ ಎಂದರು.

ಮಂಗಳೂರು ಆಸರೆ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಡಾ.ಆಶಾ ಜ್ಯೋತಿ ರೈ ಸಾಹಿತ್ಯ-ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಎಂಭತ್ತನೇ ವರುಷದ ಹುಟ್ಟು ದಿನ ಆಚರಿಸುತ್ತಿರುವ ಅಬ್ಬಕ್ಕ ಉತ್ಸವ ಸಮಿತಿಯ ಸ್ವಾಗತಾಧ್ಯಕ್ಷ ಹಾಗೂ ಮಾಜಿ ಶಾಸಕ ಕೆ.ಜಯರಾಮ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಡಿ.ಎಸ್. ಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಪೆರ್ಮನ್ನೂರು ಚರ್ಚ್‌ನ ಧರ್ಮಗುರು ಸಿಪ್ರಿಯನ್ ಪಿಂಟೋ, ಹಾವೇರಿ ವಿವಿ ವಿಶ್ರಾಂತ ಕುಲಪತಿ ಡಾ.ಚಿನ್ನಪ್ಪ ಗೌಡ, ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರನಾಥ ಗಟ್ಟಿ, ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಉಮರ್ ಯು.ಹೆಚ್, ಮನಪಾ ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರ ಸುರೇಶ್ ಭಟ್ನಗರ, ಉಳ್ಳಾಲ ಮೊಗವೀರ ಸಂಘದ ಅಧ್ಯಕ್ಷ ಯಶವಂತ ಅಮೀನ್, ಕೋಟೆಕಾರು ಪ.ಪಂ ಅಧ್ಯಕ್ಷರಾದ ದಿವ್ಯ ಶೆಟ್ಟಿ, ಸೋಮೇಶ್ವರ ಪುರಸಭೆಯ ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ಉಳ್ಳಾಲ ನಗರಸಭೆ ಪೌರಾಯುಕ್ತ ಸಂತೋಷ್ ಡಿ, ಹಿರಿಯ ರೈತ ಮುಖಂಡರಾದ ಕೃಷ್ಣಪ್ಪ ಸಾಲಿಯಾನ್, ಅಬ್ಬಕ್ಕ ಉತ್ಸವ ಸಮಿತಿಯ ಪದಾಧಿಕಾರಿಗಳಾದ ಹೈದರ್ ಪರ್ತಿಪ್ಪಾಡಿ, ಸದಾನಂದ ಬಂಗೇರ, ದೇವಕಿ ಉಳ್ಳಾಲ್, ಸ್ವಪ್ನ ಶೆಟ್ಟಿ, ಶಶಿಕಲಾ ಗಟ್ಟಿ, ಮಾಧವಿ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು.

ಉತ್ಸವ ಸಮಿತಿಯ ಅಧ್ಯಕ್ಷ ದಿನಕರ ಉಳ್ಳಾಲ್ ಸ್ವಾಗತಿಸಿದರು. ಪ್ರ.ಕಾ. ಧನಲಕ್ಷ್ಮೀ ಗಟ್ಟಿ ನಿರೂಪಿಸಿದರು. ಆನಂದ ಕೆ. ಅಸೈಗೋಳಿ ವಂದಿಸಿದರು.

ಅಬ್ಬಕ್ಕ ಪ್ರಶಸ್ತಿ ಪ್ರದಾನ

ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ದೇರಳಕಟ್ಟೆಯ ನಿಟ್ಟೆ ವಿಶ್ವವಿದ್ಯಾನಿಲಯದ ಮಾನವಿಕ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ.ಸಾಯಿಗೀತಾ ಹೆಗ್ಡೆ ಮತ್ತು ಭರತನಾಟ್ಯ ಕ್ಷೇತ್ರದ ಸಾಧನೆಗಾಗಿ ಉಳ್ಳಾಲ ನಾಟ್ಯನಿಕೇತನ ನೃತ್ಯ ಸಂಸ್ಥೆಯ ಪ್ರಾಂಶುಪಾಲೆ ರಾಜಶ್ರೀ ಉಳ್ಳಾಲ್ ಅವರಿಗೆ ವೀರರಾಣಿ ಅಬ್ಬಕ್ಕ ಪ್ರಶಸ್ತಿಯನ್ನು ಪ್ರದಾನಿಸಲಾಯಿತು.

> ರಾಣಿ ಅಬ್ಬಕ್ಕಳು ಐನೂರು ವರುಷಗಳ ಹಿಂದೆಯೇ ನಾಡಿನ ರಕ್ಷಣೆಗಾಗಿ ನೌಕಾ ಪಡೆ ರಚಿಸಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಳು.ನಾವಿಂದು ದೇಶ ರಕ್ಷಣೆಗಾಗಿ ಎಷ್ಟು ಜನ ತಮ್ಮ ಮಕ್ಕಳನ್ನು ನೌಕಾಪಡೆಗೆ ಸೇರಿಸಲು ಉತ್ತೇಜನ ನೀಡುತ್ತೇವೆಂದು ಯೋಚಿಸಬೇಕಿದೆ. ದೇಶ ರಕ್ಷಣೆಯ ನಿಟ್ಟಿನಲ್ಲಿ ಮಕ್ಕಳು ಸೇನೆಗೆ ಸೇರಲು ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಅಬ್ಬಕ್ಕ ಉತ್ಸವ ಸಮಿತಿಯವರು ನಡೆಸಬೇಕಿದೆ. ಯುವ ಜನಾಂಗಕ್ಕೆ ಅಬ್ಬಕ್ಕಳ ಯಶೋಗಾಥೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಂಯೋಜಿಸಬೇಕಿದೆ.
> ■ **ಆಶಾ ಜ್ಯೋತಿ ರೈ**, ಅಧ್ಯಕ್ಷರು, ಆಸರೆ ಚಾರಿಟೇಬಲ್ ಟ್ರಸ್ಟ್.

ಅಬ್ಬಕ@500... ಶತಕದ ಸಾರ್ಥಕ ಕಾರ್ಯಕ್ರಮ

▸ ವರ್ಕಾಡಿ ರವಿ ಅಲೆವೂರಾಯ

ತುಳುನಾಡಿನ ದಿಟ್ಟ – ವೀರ ಮಹಿಳೆ 'ಅಭಯ ರಾಣಿ' ಅಬ್ಬಕ ಬಗ್ಗೆ ಈ ಮಣ್ಣಿನ ಮಕ್ಕಳು ಮರೆಯಲಾರರು. ತನ್ನೊಳಗಿನ ಶತ್ರುಗಳನ್ನೂ, ಹೊರಗಿನ ಶತ್ರುಗಳನ್ನೂ ಮೆಟ್ಟಿ ನಿಂತು, ಸ್ವಾಭಿಮಾನಿಯಾಗಿ ಸಾವಿನ ಕೊನೆಯ ತನಕ ಹೋರಾಟ ಮಾಡಿ ಎಲ್ಲರಿಗೂ ಆದರ್ಶ ರಾಣಿಯಾದ ಉಳ್ಳಾಲವನ್ನು ಕೇಂದ್ರಸ್ಥಾನವಾಗಿಸಿಕೊಂಡು ಉತ್ತಮ ಆಡಳಿತಗಾರ್ತಿಯಾಗಿ ಇತಿಹಾಸ ನಿರ್ಮಾಣ ಮಾಡಿದ ಮೂಡಬಿದಿರೆಯ ಶ್ರೀ ಸೋಮನಾಥ ದೇವಾಲಯದಿಂದ ಉಳ್ಳಾಲದ ಸೋಮನಾಥ ದೇವಾಲಯದವರೆಗೂ ವ್ಯಾಪಿಸಿ ಕ್ರಾಂತಿಕಾರಿ ಮಹಿಳೆಯೆನಿಸಿದ ಮಹಾರಾಣಿಯ ನೆನಪನ್ನು ಅಜರಾಮರಗೊಳಿಸಿದ ಈ ವರ್ಷ ಅವಿಸ್ಮರಣೀಯ.

ಈ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶತಕದ ಕಾರ್ಯಕ್ರಮದವರೆಗೂ ತಲುಪಿಸಿದ್ದು ಮಂಗಳೂರು ವಿಭಾಗದ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಎಂಬ ಸಂಘಟನೆ. ಉಳ್ಳಾಲದ ಕಣ್ಮಣಿ ಅಬ್ಬಕ್ಕ ದೇವಿಯವರ 500ನೇ ವರ್ಷದ ಹರ್ಷದ ಸಂಭ್ರಮವನ್ನು ಸಮಾಜದೆಲ್ಲೆಡೆ ಪಸರಿಸುವ, ಯುವ ಜನಾಂಗಕ್ಕೆ ಚರಿತ್ರೆಯನ್ನು ತಿಳಿಸುವ ಸದುದ್ದೇಶದಿಂದ ಈ ಶಿಕ್ಷಕ ಸಂಘ ಈ ಅಬ್ಬಕ್ಕ ಯಾನವನ್ನು ಆರಂಭಿಸಿತು. ಸಂಘಕ್ಕೆ ನೂರರ ಸಂಭ್ರಮ – ಅಬ್ಬಕ್ಕ ರಾಣಿಯ 500 ರ ಸಂಭ್ರಮಕ್ಕಾಗಿ ನೂರು ಕಾರ್ಯಕ್ರಮಗಳನ್ನು ಆಯೋಜಿಸಿತು. ಇದೊಂದು ರಾಷ್ಟ್ರೀಯ ಸಂಘಟನೆ. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಸಂಘಟನೆ ಇದು. ಭಾರತೀಯತೆಯನ್ನು ಆಧಾರವಾಗಿಸಿಕೊಂಡು, ಶಿಕ್ಷಣ ಹಾಗೂ ಸಮಾಜ ಕ್ಷೇತ್ರದಲ್ಲಿ ಸಾಂಸ್ಕೃತಿಕ ರಾಷ್ಟ್ರೀಯತೆಯ ತತ್ವವನ್ನು ಪ್ರಚಾರಗೊಳಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುವ ಅತ್ಯಂತ ದೊಡ್ಡ ಸಂಘಟನೆಯಾಗಿದೆ ಇದು. ಈ ಉದ್ದೇಶದ ಅನುಸಾರವಾಗಿ ರಾಷ್ಟ್ರ ಭಾವನೆ ಮತ್ತು ಭಾರತೀಯ ದರ್ಶನದಿಂದ ಸ್ಫೂರ್ತಿಗೊಂಡ ಪ್ರೀ ಪ್ರೈಮರಿ ಹಂತದಿಂದ ವಿಶ್ವವಿದ್ಯಾಲಯ ಮಟ್ಟದವರೆಗೆ ಇರುವ ಶಿಕ್ಷಕರ ಸಮೂಹವನ್ನು ಒಗ್ಗೂಡಿಸಿ 1988ರಲ್ಲಿ ಈ ಮಹಾಸಂಘವನ್ನು ಸ್ಥಾಪಿಸಲಾಯಿತು. ಇಂದು ಮಹಾಸಂಘವು ದೇಶವ್ಯಾಪಿ ಸಂಸ್ಥೆಯಾಗಿ ವಿಸ್ತರಿಸಿದೆ. ಪ್ರಸ್ತುತ 24 ರಾಜ್ಯಗಳಲ್ಲಿ ಹರಡಿರುವ 35 ರಾಜ್ಯ ಮಟ್ಟದ ಸಂಘಟನೆಗಳು ಹಾಗೂ 50ಕ್ಕೂ ಹೆಚ್ಚು ವಿಶ್ವವಿದ್ಯಾಲಯ ಮಟ್ಟದ ಸಂಘಟನೆಗಳು ಇದಕ್ಕೆ ಸಂಯೋಜಿತವಾಗಿವೆ.

ಇನ್ನು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘವು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಕರ್ನಾಟಕದ ಕಾಲೇಜು ಮತ್ತು ವಿಶ್ವವಿದ್ಯಾಲಯ ಶಿಕ್ಷಕರ ಸಂಘಟನೆಯಾಗಿದ್ದು ನವದೆಹಲಿಯ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಸಂಯೋಜಿತ ಸಂಸ್ಥೆಯಾಗಿದೆ. ಇದು 2015ರ ಆಗಸ್ಟ್ 9 ರಂದು ಸ್ಥಾಪನೆಯಾಗಿ ಶೈಕ್ಷಣಿಕ ಮೌಲ್ಯಗಳು ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಸಮಾಜ ಇದರೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುವ ಗುರಿಯನ್ನು ಹೊಂದಿದೆ. ಈ ಸಂಸ್ಥೆ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಿ, ಶಿಕ್ಷಕರನ್ನು ಜವಾಬ್ದಾರಿಯುತ ರಾಷ್ಟ್ರ ನಿರ್ಮಾತೃ ಎಂಬ ಸ್ಥಾನಕ್ಕೆ ಪುನಃ ತರುವ ಉದ್ದೇಶದಿಂದ ಕಾರ್ಯನಿರ್ವಹಿಸುವ ವಿಶಿಷ್ಟ ಸಂಘಟನೆಯಾಗಿರುತ್ತದೆ..

ಪಂಜಿನ ಕ್ರಾಂತಿಯಿಂದ ವಿರೋಧಿಗಳನ್ನು ಹಿಮ್ಮೆಟ್ಟಿಸಿದ, ತನ್ನ ಮಕ್ಕಳನ್ನು ಬೆನ್ನಿಗೆ ಆತುಕೊಂಡು ಬಿಗು ಹೋರಾಟ ನೀಡಿದ ಮಹಿಳೆಯನ್ನು ಯುವ ಜನಾಂಗಕ್ಕೆ ಪರಿಚಯಿಸುವ ಕಾರ್ಯ ಸ್ತುತ್ಯರ್ಹವೂ ಹೌದು. ಆದರೆ, ನೂರು ಕಡೆಗಳಲ್ಲಿ ಸಂಘಟಕರಿಗೆ ವಿಷಯವನ್ನು ವಿವರಿಸಿ ಕಾರ್ಯಕ್ರಮಗಳನ್ನು ನೀಡುತ್ತಾ ಆದರಲ್ಲೇ ತೃಪ್ತಿಯನ್ನು ಕಂಡವರ ಈ ಶಿಕ್ಷಣವೇತ್ತರು. ನೂರನೇ ಕಾರ್ಯಕ್ರಮವು ಪುತ್ತೂರಿನ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿಯ ಸಹಯೋಗದೊಂದಿಗೆ ಜರಗಲಿದೆ. ನೂರರ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರ ಸನ್ಮಾನ, ಹರಿಕಥೆ ಇತ್ಯಾದಿ ಗಳಿವೆ.

ಮೇ 31ರಿಂದ ಜೂ.6ರವರೆಗೆ ಯಕ್ಷಧ್ರುವ ಸಮುದ್ರಯಾನ



ಮಂಗಳೂರು: ಮೇ 31ರಿಂದ ಜೂನ್ 6ರತನಕ ಆಯೋಜಿಸಲಾಗಿರುವ ಲಕ್ಷ ದ್ವೀಪ ಪ್ರಯಾಣದ ಯಕ್ಷಧ್ರುವ ಸಮುದ್ರಯಾನದ ಬ್ಯಾನರ್‌ನ್ನು ಅನಾವರಣ ನಗರದ ಪತ್ತುಮುಡಿ ಸೌಧದಲ್ಲಿ ನಡೆಯಿತು.

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಮಹಾದಾನಿ ಬರೋಡ ಶಶಿಧರ ಶೆಟ್ಟಿ ಬ್ಯಾನರ್ ಅನಾವರಣಗೊಳಿಸಿ ಮಾತನಾಡಿ, ಭವಾನಿ ಶಿಪ್ಪಿಂಗ್ ಸರ್ವಿಸಸ್ ಮುಂಬೈ ಇದರ ಸಂಪೂರ್ಣ ಸಹಕಾರದೊಂದಿಗೆ ಯಕ್ಷಧ್ರುವ ಪಟ್ಲ ಫೌಂಡೇಶನ್ ಹಾಗೂ ತ್ರಿರಂಗ ಸಂಗಮ ಮುಂಬೈ ಸಂಯೋಜನೆಯಲ್ಲಿ, ಫೌಂಡೇಶನ್‌ನ ಸದಸ್ಯರು, ಊರಿನ, ಮುಂಬೈ ಹಾಗೂ ವಿದೇಶಗಳ ಹಿತೈಷಿಗಳನ್ನು ಹಡಗಿನಲ್ಲಿ ಒಂದೆಡೆ ಸೇರಿಸಿ ಯಕ್ಷಗಾನ, ತಾಳಮದ್ದಲೆ ಸಹಿತ ಬೇರೆ ಬೇರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಮೇ 31ರಂದು ಮಂಗಳೂರಿನಿಂದ ಮುಂಬೈಗೆ ತೆರಳಿ ಜೂನ್ 1 ರಂದು ಹಡಗಿನಲ್ಲಿ ಲಕ್ಷದ್ವೀಪಕ್ಕೆ ತೆರಳಿ ಜೂನ್ 6ಕ್ಕೆ ಮಂಗಳೂರಿಗೆ ವಾಪಾಸು ಬರಲಾಗುವುದು. ಪ್ರಯಾಣದ ದರವನ್ನು ನಿಗದಿಗೊಳಿಸಲಾಗಿದ್ದು, ಆಸಕ್ತರು ಇದರ ಪ್ರಯೋಜನವನ್ನು ಪಡೆಯಬಹುದು. ಮುಂದಿನ ವರ್ಷ ವಿಮಾನಯಾನ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದರು.

ಪಟ್ಲ ಸತೀಶ್ ಶೆಟ್ಟಿ ಮಾತನಾಡಿ, ಯಕ್ಷಧ್ರುವ ಸಮುದ್ರಯಾನ ಬರೋಡ ಶಶಿಧರ ಶೆಟ್ಟಿಯವರ ಕಲ್ಪನೆಯಾಗಿದೆ. ಸಮುದ್ರಯಾನದಲ್ಲಿ ಟ್ರಸ್ಟ್‌ನ ಮಹಾದಾನಿಗಳಾದ ಡಾ. ಕನ್ಯಾನ ಸದಾಶಿವ ಶೆಟ್ಟಿ, ಎಂಆರ್‌ಜಿ ಗ್ರೂಪ್‌ನ ಎಂಡಿ ಡಾ. ಕೆ ಪ್ರಕಾಶ್ ಶೆಟ್ಟಿ, ಭವಾನಿ ಶಿಪ್ಪಿಂಗ್‌ನ ಆಡಳಿತ ನಿರ್ದೇಶಕ ಕುಸುಮೋದರ ಡಿ. ಶೆಟ್ಟಿ ಸಹಿತ ಗಣ್ಯರು ಭಾಗವಹಿಸಲಿದ್ದಾರೆ. ಮೇ 30ರಂದು 11ನೇ ವರ್ಷದ 'ಪಟ್ಲ ಸಂಭ್ರಮ' ಕಾರ್ಯಕ್ರಮ ನಡೆಯಲಿದೆ ಎಂದು ಪಟ್ಲ ಸತೀಶ್ ಶೆಟ್ಟಿ ತಿಳಿಸಿದರು.

ಸಮುದ್ರಯಾನದ ಕುರಿತು ತ್ರಿರಂಗ ಸಂಗಮದ ಸಂಚಾಲಕ ಕರ್ನೂರು ಮೋಹನ್ ರೈ ಮತ್ತು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಭಂಡಾರಿ ಅಡ್ಯಾರ್ ಮಾಹಿತಿ ನೀಡಿದರು.

ಕಲಾವಿದರಿಗೆ ಪಟ್ಲ ಯಕ್ಷಾಶ್ರಯ ಯೋಜನೆಯಡಿಯಲ್ಲಿ 15 ಲಕ್ಷ ರೂ. ವಿತರಿಸಲಾಯಿತು. ಸರಪಾಡಿ ಅಶೋಕ ಶೆಟ್ಟಿ, ಪ್ರಭಾಕರ ಜೋಷಿ, ಭುಜಬಲಿ ಮೊದಲಾದವರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಟ್ರಸ್ಟ್‌ನ ಕೋಶಾಧಿಕಾರಿ ಸಿಎ ಸುದೇಶ್ ಕುಮಾರ್ ರೈ, ಸಂಘಟನಾ ಕಾರ್ಯದರ್ಶಿ ಪ್ರದೀಪ್ ಆಳ್ವ ಕದ್ರಿ, ಬಾಳ ಜಗನ್ನಾಥ ಶೆಟ್ಟಿ, ಜೊತೆ ಕಾರ್ಯದರ್ಶಿ ರವಿಚಂದ್ರ ಶೆಟ್ಟಿ, ಉದಯಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

1100 ವರ್ಷಗಳ ಇತಿಹಾಸವಿರುವ ಶ್ರೀ ಮೃತ್ಯುಂಜಯೇಶ್ವರ ದೇವಸ್ಥಾನದ ನೂತನ ಗರ್ಭಗುಡಿಯ ಶಿಲಾನ್ಯಾಸ
ಒಳಿತು-ಕೆಡುಕುಗಳಿಗೆ ಮನಸ್ಸು ಕಾರಣ: ಪೇಜಾವರ ಶ್ರೀ



ಕೈಕಂಬ: ಮಂಗಳೂರು ತಾಲೂಕಿನ ಗಂಜಿಮಠದಲ್ಲಿನ ಸುಮಾರು 1100 ವರ್ಷಗಳ ಇತಿಹಾಸ ಇರುವ ಶ್ರೀ ಮೃತ್ಯುಂಜಯೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಪ್ರಯುಕ್ತ ದೇವರ ನೂತನ ಗರ್ಭಗುಡಿಯ ಶಿಲಾನ್ಯಾಸ ಸಮಾರಂಭವು ಒಡಗ ಎಡಪದವು ವೇದಮೂರ್ತಿ ಟಿ.ಮುರಳೀಧರ ತಂತ್ರಿಗಳ ನೇತೃತ್ವದಲ್ಲಿ, ಭಾನುವಾರ ನಡೆಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದ ಉಡುಪಿ ಶ್ರೀ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಒಳಿತು-ಕೆಡುಕುಗಳಿಗೆ ಮನಸ್ಸು ಕಾರಣವಾಗಿದೆ. ಸರಿಯಾದ ನಡೆ ನಮ್ಮ ವಿಮೋಚನೆಗೆ ದಾರಿಯಾಗುತ್ತದೆ. ಈಗಿನ ತೌಳವ ಪ್ರದೇಶ ಹಿಂದಿನ ದಂಡಕಾರಣ್ಯವಾಗಿತ್ತು. ಋಷಿಮುನಿಗಳು ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡ ಪುಣ್ಯ ಭೂಮಿಯಾಗಿದೆ. ಕಾಲದ ಹೊಡೆತಕ್ಕೆ ನಶಿಸಿ ಹೋಗಿದೆ. ಯಾವ ಕಾಲಕ್ಕೆ ಯಾವ ಕೆಲಸ ಆಗಬೇಕು ಎಂದು ಪರಮಾತ್ಮ ಮಾಡಿಸುತ್ತಾನೆ. ಅದೇ ರೀತಿ ಮೃತ್ಯುಂಜಯೇಶ್ವರನ ಈ ಕ್ಷೇತ್ರ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಜೀರ್ಣೋದ್ಧಾರಗೊಂಡು ಬೆಳಗಲಿ ಎಂದರು.

ಶ್ರೀಧಾಮ ಮಾಣಿಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಶಿಲಾನ್ಯಾಸ ನೆರವೇರಿಸಿದರು.

ದೇವಸ್ಥಾನದ ಆಡಳಿತ ಮೊಕ್ತೇಸರ ಪೊಳಲಿ ಮಂಜಯ್ಯ ಶೆಟ್ಟಿ, ಮಾಜಿ ಸಚಿವ, ಶಾಸಕ ರಮೇಶ್ ಕುಮಾರ್, ಮಾಜಿ ಶಾಸಕ ನಾಗರಾಜ್ ಶೆಟ್ಟಿ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕರಾದ ಡಾ. ವೈ. ಭರತ್ ಶೆಟ್ಟಿ, ರಾಜೇಶ್ ನ್ಯಾಕ್, ಪ್ರಮುಖರಾದ ಹರಿಕೃಷ್ಣ ಬಂಟ್ವಾಳ್, ಶ್ರುತಾಂಜನ್ ಜೈನ್, ಕಲ್ಲೂರ ಪ್ರತಿಷ್ಠಾನದ ಪ್ರದೀಪ್ ಕುಮಾರ್ ಕಲ್ಕೂರ, ಚಂದ್ರಹಾಸ್ ಶೆಟ್ಟಿ ನಾರಳ, ಭಾಸ್ಕರ್ ಭಟ್, ಅರ್ಚಕರಾದ ಸೂರ್ಯನಾರಾಯಣ ಭಟ್, ರಮೇಶ್ ಭಟ್ ನಾರಳ, ಮುಖಂಡರಾದ ಸೋಹನ್ ಅತಿಕಾರಿ, ಗಣೇಶ್ ಭಟ್, ಹರೀಶ್ ಕಾಮತ್, ಮಾಲತಿ ಮತ್ತಿತರರು ಇದ್ದರು.

ಬೆಳಿಗ್ಗೆ 10 ರಿಂದ ಸ್ವರ ಸಮರ್ಪಣೆ ಸಂಗೀತ ಕಾರ್ಯಕ್ರಮ – ದಿವ್ಯನಿಧಿ ರೈ ಎರುಂಬು ಮತ್ತು ಬಳಗದವರಿಂದ ಸ್ವರ ಸಮರ್ಪಣೆ ಸಂಗೀತ ಕಾರ್ಯಕ್ರಮ ಮತ್ತು ಅನ್ನ ಸಂತರ್ಪಣೆ ಜರಗಿತು. ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

» ಒಳಿತು-ಕೆಡುಕುಗಳಿಗೆ ಮನಸ್ಸು ಕಾರಣವಾಗಿದೆ. ಸರಿಯಾದ ನಡೆ ನಮ್ಮ ವಿಮೋಚನೆಗೆ ದಾರಿಯಾಗುತ್ತದೆ.

» ಋಷಿಮುನಿಗಳು ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡ ಪುಣ್ಯ ಭೂಮಿಯಾಗಿದೆ.

ಪತ್ರಕರ್ತ ಪಿ.ಬಿ.ಹರೀಶ್ ರೈಗೆ
ಗಡಿನಾಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



ಮಂಗಳೂರು: ಕಾಸರಗೋಡಿನ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ನೀಡಲಾಗುವ 2025ನೇ ಸಾಲಿನ ಗಡಿನಾಡ ರಾಜ್ಯೋತ್ಸವ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಅವರಿಗೆ ಕಾಸರಗೋಡಿನ ಕ್ಯಾಪಿಟಲ್ ಇನ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಪ್ರದಾನ ಮಾಡಿದರು.

ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಪಿಂಟೊ, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಕಾಸರಗೋಡು ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿಯ ಸಂಸ್ಥಾಪಕ ಎಸ್. ಪ್ರದೀಪ ಕುಮಾರ ಕಲ್ಕೂರ, ಅಧ್ಯಕ್ಷ ಚನಿಯಪ್ಪ ನಾಯ್ಕ, ಪ್ರಧಾನ ಕಾರ್ಯದರ್ಶಿ ಅಖಿಲೇಶ್ ನಗುಮುಗಂ, ಕನ್ನಡ ಸಾಹಿತ್ಯ ಪರಿಷತ್ತು ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೇರಳ ಪ್ರಾಂತ್ಯ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ್ ಎ., ಗಮಕ ಕಲಾಪರಿಷತ್ತು ಕಾಸರಗೋಡು ಅಧ್ಯಕ್ಷ ತೆಕ್ಕೆಕೆರೆ ಶಂಕರನಾರಾಯಣ ಭಟ್, ರಾಧಾಕೃಷ್ಣ ಉಳಿಯತಡ್ಕ, ಗಂಗಾಧರ ತೆಕ್ಕೆಮೂಲೆ, ಎ.ಆರ್. ಸುಬ್ಬಯ್ಯಕಟ್ಟೆ ಉಪಸ್ಥಿತರಿದ್ದರು.

ಪತ್ರಕರ್ತ ಪುರುಷೋತ್ತಮ ಪೆರ್ಲ ಸ್ವಾಗತಿಸಿ, ಶ್ರೀಕಾಂತ್ ಕೆ.ಎಸ್. ವಂದಿಸಿದರು. ವಿ.ಜಿ.ಕಾಸರಗೋಡು ಕಾರ್ಯಕ್ರಮ ನಿರೂಪಿಸಿದರು.

ಇಂದಿನ ಪಂದ್ಯಗಳು

ಅಫ್ಘಾನಿಸ್ತಾನ VS ಯುಎಇ
ಬೆಳಗ್ಗೆ 11 (ದಿಲ್ಲಿ)

ಇಂಗ್ಲೆಂಡ್ VS ಇಟಲಿ
ಮಧ್ಯಾಹ್ನ 3 (ಕೋಲ್ಕತ್ತಾ)

ಶ್ರೀಲಂಕಾ VS ಆಸ್ಟ್ರೇಲಿಯಾ
ಸಂಜೆ 7 (ಕೊಲಂಬೋ)

ಕಿರುಸುದ್ದಿ

ಬಾಲಾಜಿ-ನೀಲ್‌ಗೆ ಟೆರೆಗಾ ಪಟ್ಟ

ಹೊಸದಿಲ್ಲಿ: ತಮ್ಮ ಆಸ್ಟ್ರೇಲಿಯನ್ ಜೊತೆಗಾರ ನೀಲ್ ಒಬರ್‌ಲೀಟ್ನರ್ ಅವರೊಂದಿಗೆ ಕೂಟವೊಂದರಲ್ಲಿ ಮಿಂಚಿದ ಹಿರಿಯ ಟೆನಿಸ್ ಪಟು ಸಾಯಿರಾಮ್ ಬಾಲಾಜಿ ಟೆರೆಗಾ ಓಪನ್ ಪೌ ಪೈರಿನೀಸ್ ಎಂಬ ಪಂದ್ಯಾವಳಿಯ ಕಿರೀಟ ಮುಡಿಗೇರಿಸಿಕೊಂಡರು.

ತಾಳಕ್ಕೆ ಶೃತಿ ಸಿಕ್ಕಂತೆ ಒಬ್ಬರ ಆಟಕ್ಕೆ ಇನ್ನಬ್ಬರು ಸಾಥ್ ನೀಡುತ್ತಾ ಜೋಡೆತ್ತುಗಳಂತೆ ಎದುರಾಳಿಗಳ ಮೇಲೆ ಮುಗಿಬಿದ್ದ ಬಾಲಾಜಿ-ನೀಲ್ ಜೋಡಿ ಸ್ವಿಟ್ಜರ್ ಲೆಂಡ್ ಜಾಕುಬ್ ಪೌಲ್ ಮತ್ತು ಜೆಕ್ ಗಣರಾಜ್ಯದ ಮಾಟೇಜ್ ವಿಕೆಲ್ ಜೋಡಿಯನ್ನು ಸೋಲಿಸಿತು. ರೋಮಾಂಚನಕಾರಿ ಪಂದ್ಯದಲ್ಲಿ ಬಾಲು ಕೋರ್ಟ್‌ನಲ್ಲಿ ಬಿದ್ದಂತೆ ಗೆಲುವು ಕೂಡ ಅವರ ಕೋರ್ಟ್‌ನಲ್ಲೊಮ್ಮೆ ಇವರ ಕೋರ್ಟ್‌ನಲ್ಲೊಮ್ಮೆ ಬಿದ್ದಿತ್ತು. ಮೊದಲ ಸೆಟ್‌ನಲ್ಲಿ 6-1 ರಿಂದ ಗೆದ್ದು ಗೆಲುವಿಗಾಗಿ ದಾಪುಗಾಲು ಹಾಕಿತ್ತು ಭಾರತ ಜೋಡಿ. ಆದಾಗ್ಯೂ ಎರಡನೇ ಸುತ್ತಿನಲ್ಲಿ ತಾವು ಕಲೆತಿದ್ದೆಲ್ಲಾ ಕೌಶಲ ಬಳಸಿ ತೀವ್ರ ಪೈಪೋಟಿಯೊಂದಿಗೆ ಎದುರಾಳಿ ತಂಡ ಪುನರಾಗಮನ ಮಾಡಿತು. ಹೀಗಾಗಿ ಗೆಲುವಿಗೆ ದಾಪುಗಾಲಿಟ್ಟಿದ್ದ ಭಾರತ-ಆಸ್ಟ್ರೇಲಿಯಾ ಜೋಡಿ ಗೆಲುವಿಗೆ ತಿಲಕವನ್ನಿಡಲು ಟೈಬ್ರೇಕರ್ ಮೊರೆಗೆ ಹೋಗಬೇಕಾಯಿತು. ಅಲ್ಲಿಯೂ ಕೂಡ 6-3(13-11)ರ ತನಕ ಹೋರಾಡಬೇಕಾಯಿತು.

ಅಥ್ಲೆಟಿಕ್ಸ್: ಗುಲ್ವೀರ್ ಸಿಂಗ್‌ಗೆ ಮೂರನೇ ಸ್ಥಾನ

ಹೊಸದಿಲ್ಲಿ: ಬೆಳ್ಳಿ ಮಟ್ಟದ ಕೂಟವೊಂದರಲ್ಲಿ ಚಿರತೆಯಂತೆ ಓಡಿ ಅಥ್ಲೆಟಿಕ್ಸ್ ಲೋಕದಲ್ಲಿ ಧೂಳೆಬ್ಬಿಸಿರುವ ಭಾರತೀಯ ರನ್ನರ್ ಗುಲ್ವೀರ್ ಸಿಂಗ್ ವಿಶ್ವ ಅಥ್ಲೆಟಿಕ್ಸ್ ಇಂಡೋರ್ ಟೂರ್‌ನ 5000 ಮೀ. ದೊಡ್ಡ ಓಟ ಸ್ಪರ್ಧೆಯಲ್ಲಿ ಪೋಡಿಯಂ ಫಿನಿಶ್ ಮಾಡಿ ವಿಶ್ವವನ್ನು ಭಾರತದತ್ತ ನೋಡುವ ಹಾಗೆ ಮಾಡಿದರು. ಅಪರೂಪದ ದಾಖಲೆಯನ್ನು ಮಾಡಿದ್ದಲ್ಲದೆ ಮೂರನೇ ಸ್ಥಾನ ಪಡೆದು ಮೆರೆದರು. ತಮಗಿಂತ ಮೊದಲು ಕ್ರಮಿಸಲು ಬಂದ ಸ್ಪರ್ಧಿಗಳನ್ನು ಹಿಂದಿಕ್ಕಿ, ಅಡತಡೆಗಳನ್ನು ದಾಟಿ ಗುರಿ ಮುಟ್ಟಬೇಕೆಂಬ ಛಲದೊಂದಿಗೆ ಅವರು 13:15.84 ನಿಮಿಷದಲ್ಲಿ ಕ್ರಮಿಸಿದರು. ವಿಶ್ವದ ಹೆಚ್ಚು ದೂರದದಿಂದ ಓಡಿಬರುವ ಸ್ಪರ್ಧೆಗಳಲ್ಲಿ ಒಂದೆನ್ನಿಸಿಕೊಳ್ಳುವ ಈ ವಿಭಾಗದಲ್ಲಿ ಶಿಸ್ತು, ಬದ್ಧತೆ, ಸಂಯೋಜನೆ, ಸಮಯೋಜನೆ ಪ್ರದರ್ಶಿಸಿದ ಅವರು, ಅಂಡ್ರೆವ್ ಹುಂಟ್ ಹಾಗೂ ಅಬ್ದಿಹಮೀದ್ ನೂರ್ ಅವರ ನಂತರದ ಸ್ಥಾನ ಪಡೆದುಕೊಂಡರು. ಹತ್ತಾರು ದಾಖಲೆಗಳ ಇತಿಹಾಸ ಹೊಂದಿ ನಿರೀಕ್ಷೆಗಳನ್ನು ಹೊತ್ತುಕೊಂಡು ಬಂದಿದ್ದ ಭಾರತದ ಭರವಸೆಯ ದೂರೋಟದ ಅಥ್ಲೀಟ್ ಎನಿಸಿಕೊಳ್ಳುವ ಗುಲ್ವೀರ್, ವಿಭಾಗದ ತಮ್ಮ ಮೂರನೇ ಬೆಸ್ಟ್ ಎಂಬ ದಾಖಲೆ ಮಾಡಿಬಿಟ್ಟರು . ವಿವಿಧ ವಿಭಾಗಗಳಲ್ಲಿ ಉತ್ತಮ ಓಟಗಾರನೆಂಬ ಪಟ್ಟ ಕಟ್ಟಿಕೊಂಡಿರುವ ಅವರು, ಇದಕ್ಕೂ ಮುನ್ನ ಇದೇ ವಿಭಾಗದಲ್ಲಿ 12:59.77 ಮತ್ತು 13:11.82ರ ಸಮಯದಲ್ಲಿ ಕ್ರಮಿಸಿದ ಸ್ಫೂರ್ತಿದಾಯಕ ಇತಿಹಾಸ ಹೊಂದಿದ್ದಾರೆ. ಸ್ಪರ್ಧೆಯಲ್ಲಿ ಅಂಡ್ರೆವ್ ಹಂಟರ್ 13:10.87 ಮೊದಲ ಸ್ಥಾನ ಅಬ್ದಿಹಮೀದ್ ನೂರ್ 13:11.59 ಎರಡನೇ ಸ್ಥಾನ ಪಡೆದುಕೊಂಡರು.

» ಇಂಡೋರ್ ಅಥ್ಲೆಟಿಕ್ಸ್‌ನಲ್ಲಿ ಮಿಂಚಿನೋಟ
» ಮೂರನೇ ಬೆಸ್ಟ್ ಓಟ ಪ್ರದರ್ಶಿಸಿದ ಭಾರತೀಯ



ಪಾಕ್‌ಗೆ ಕಿಶನ್ ಕಿಕ್

ಪಾಕಿಸ್ತಾನ ವಿರುದ್ಧ ಗೆಲುವಿನೋಟ ಮುಂದುವರಿಸಿದ ಭಾರತ

ಕೊಲಂಬೋ: ಭಾರತ ವಿರುದ್ಧ ಸೋಲುವುದನ್ನು ಬಿಟ್ಟು ಬೇರೊಂದು ದಾರಿಯಿಲ್ಲ ಎಂಬ ಮಾತನ್ನು ಪಾಕಿಸ್ತಾನಕ್ಕೆ ಮರೆಯದ ಹಾಗೆ ಸ್ಪಷ್ಟಪಡಿಸಿದ ಭಾರತ ತಂಡವು ಸಾಂಪ್ರದಾಯಿಕ ಎದುರಾಳಿಗಳೊಂದಿಗೆ ಗೆಲ್ಲುವ ಸಂಪ್ರದಾಯವನ್ನು ಹಾಗೇ ಮುಂದುವರಿಸಿದೆ. ಅಭಿಷೇಕ್‌ಗಾಗಿ ತಯಾರಾಗಿ ಬಂದ ಪಾಕ್ ಬೌಲರ್‌ಗಳಿಗೆ ಇಶಾನ್ ಕಿಶಾನ್ ಪಾಠ ಕಲಿಸಿದರು. ಸ್ಪಿನ್‌ಗೆ ತಯಾರಾಗಿ ಬಂದ ಬ್ಯಾಟಿಗರಿಗೆ ವೇಗಿಗಳು ಪಾಠ ಕಲಿಸಿದರು. ಹೀಗೆ ಪಾಕ್ ಮುಂದೆಯೇ ಪಾಕ್‌ಗೆ ಗೊತ್ತಾಗದ ಯೋಜನೆಗಳೊಂದಿಗೆ ಗೆದ್ದು ಬೀಗಿತು ಭಾರತ. ಭಾನುವಾರದ ರೋಮಾಂಚನಕಾರಿ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175 ರನ್‌ಗಳಿಸಿತು. ಗುರಿ ಬೆನ್ನತ್ತಿದ ಪಾಕ್ ತಂಡ 18 ಓವರ್ ಗಳಲ್ಲಿ 114 ರನ್‌ಗಳಿಗೆ ಪತನಗೊಂಡು ಮಂಡಿಯೂರಿತು. ಈ ಗೆಲುವಿನೊಂದಿಗೆ ಪಂದ್ಯಾವಳಿಯ ಸೂಪರ್-8ಕ್ಕೆ ಲಗ್ಗೆ ಹಾಕಿರುವ ಭಾರತ, 2022ರ ವಿಶ್ವಕಪ್‌ನಲ್ಲಿ ಆರಂಭವಾದ ಪಾಕ್‌ನೊಂದಿಗಿನ ಗೆಲುವಿನ ಸ್ಟ್ರೀಕ್ ವಿಶ್ವಕಪ್‌ನ ಲೀಗ್ ಪಂದ್ಯದಲ್ಲಿ 61 ರನ್‌ಗಳ ಗೆಲುವಿನ ತನಕ ವಿಸ್ತರಿಸಿದೆ. ಇಶಾನ್ ಕಿಶನ್ ಪಾಕ್‌ಗೆ ದುಸ್ವಪ್ನವಾಗಿ ಕಾಡಿದರಲ್ಲದೆ, 77 ರನ್‌ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಭಾರತದ ಪ್ರತಿಯೊಬ್ಬ ಬೌಲರ್‌ಗಳು ಭೇಷ್ ಎನ್ನುವಂತೆ ಆಡಿದರು. ಮುಂದಿನ ಪಂದ್ಯದಲ್ಲಿ ಭಾರತ ನೆದರ್ಲೆಂಡ್ಸ್ ತಂಡದೊಂದಿಗೆ ಆಡಲಿದೆ.

ಉರುಳಿದ ಪಾಕಿಸ್ತಾನ: ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಅಕ್ಷರ್ ಪಟೇಲ್ ಸ್ಪಿನ್ ಎದುರಿಸುವುದಕ್ಕೆ ನಾವು ಸಜ್ಜು ಎಂಬಂತೆ ಬಂದ ಪಾಕಿಸ್ತಾನ ಬ್ಯಾಟಿಗರನ್ನು ಪೆವಿಲಿಯನ್‌ಗಟ್ಟಿದ ಹಾರ್ದಿಕ್ ಮತ್ತು ಬೂಮ್ರಾ ಆರಂಭಿಕ ಮೂರು ಓವರ್‌ಗಳಲ್ಲಿ 3 ಪಡೆದು ಪಾಕ್ ವಿಶ್ವಾಸವನ್ನು ಹಂಗೆ ಕಿತ್ತೆಸೆದರು. ಸಾಲದಕ್ಕೆ ಅಕ್ಷರ್ ಪಟೇಲ್ ಬಾಬರ್ ಆಜಂಗೆ ಪೆವೆಲಿಯನ್ ದಾರಿ ತೋರಿಸಿದರು. ಉಸ್ಮಾನ್ ಖಾನ್ ಮಧ್ಯಮ ಕ್ರಮಾಂಕದಲ್ಲಿ ಅಲ್ಪ ಹೋರಾಟ ಮಾಡಿದ್ದಾದರೂ 44 ರನ್‌ಗಳಿಗೆ ಔಟಾದರು. ಮುಂದಿನ ಬ್ಯಾಟಿಗರು ಕ್ರೀಜ್‌ನಲ್ಲಿ ನಿಲ್ಲಲೇ ಇಲ್ಲ. ಭಾರತ ಪರ ಹಾರ್ದಿಕ್, ಬೂಮ್ರಾ, ವರುಣ್ ಹಾಗೂ ಅಕ್ಷರ್ ತಲಾ 2, ಕುಲ್ದೀಪ್ ಹಾಗೂ ತಿಲಕ್ ತಲಾ ಒಂದು ವಿಕೆಟ್ ಪಡೆದು ಮಿಂಚಿದರು.

ಪಾಕ್ ಚಳಿ ಬಿಡಿಸಿದ ಇಶಾನ್

ಮೊದಲನೇ ಓವರ್‌ನಿಂದಲೂ ಇಶಾನ್ ಕಿಶನ್ ಆಕ್ರಮಣಕಾರಿ ಮನಸ್ಥಿತಿಯಿಂದಲೇ ಬ್ಯಾಟಿಂಗ್ ಮಾಡಿದರು. ಸಿಂಗಲ್‌ಗಳ ಮೂಲಕ ಸಮಾಧಾನದಿಂದ ಸೆಟ್ ಆಗಿ ನಂತರ ಆಡುವ ಔಪಚಾರಿಕತೆಗೆ ಕಿಶನ್ ಬೀಳಲೇ ಇಲ್ಲ. ಪಾಕ್ ತಂಡವನ್ನು ಮೊದಲಿನಿಂದ ಕೊನೆಯವರೆಗೆ ದಂಡಿಸುತ್ತೇನೆ ಎಂಬ ಅವರ ನಿರ್ಧಾರ ಸಷ್ಟವಾಗಿತ್ತು. ಇತ್ತ ಅಭಿಷೇಕ್ ಶರ್ಮ ಮೊದಲ ಎಸೆತದಲ್ಲೇ ವಿಕೆಟ್ ಒಪ್ಪಿಸಿ ಕೋಟ್ಯಾಂತರ ಅಭಿಮಾನಿಗಳ ನಿರೀಕ್ಷೆಗೆ ಗಾಸಿ ಮಾಡಿದರು. ತಿಲಕ್ ವರ್ಮಾ ಅವರನ್ನು ನಾನ್‌ಸ್ಟ್ರೈಕ್‌ನಲ್ಲೇ ನಿಲ್ಲುವಂತೆ ಹೇಳಿದ ಅವರು, ಪಾಕ್ ತಂಡವನ್ನು ಮನಸು ತುಂಬುವ ತನಕ, ಮನಸ್ಸಿಗೆ ಬಂದಲ್ಲಿ, ಮನಸ್ಸಿಗೆ ಬಂದ ಸ್ಟೈಲ್‌ನಲ್ಲಿ, ಮನಸ್ಸಿಗೆ ಬಂದಂತೆ ದಂಡಿಸಿ ಮೆರೆದರು. 40 ಬಾಲ್ ಮಾತ್ರ ಎದುರಿಸಿದ ಅವರು, 10 ಬೌಂಡರಿ 3 ಸಿಕ್ಸರ್‌ಗಳೊಂದಿಗೆ 77 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಸೂರ್ಯ-ತಿಲಕ್ ಆಟ

ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ ಹಾಗೂ ಸೂರ್ಯಕುಮಾರ್ ಯಾದವ್ ಕೊಂಚ ಹೊತ್ತು ನಿಧಾನ ಬ್ಯಾಟಿಂಗ್ ಮಾಡಿದರು. ಕೊಲಂಬೋ ಪಿಚ್ ಅನ್ನು ಅರಿತುಕೊಳ್ಳುವಲ್ಲಿ ಸಮಯ ತೆಗೆದುಕೊಂಡರು. ಆದಾಗ್ಯೂ ತಿಲಕ್ 25 ರನ್‌ಗೆ ಔಟ್ ಮಾಡಿತು ಪಾಕ್. ಇನ್ನು ಸೂರ್ಯ ಸ್ಲಾಗ್ ಓವರ್‌ಗಳವರೆಗೂ ನಿಂತು, 29 ಎಸೆತ ಎದುರಿಸಿ 32 ರನ್ ಗಳಿಸಿ ಪೆವಿಲಿಯನ್‌ನತ್ತ ನಡೆದರು. ಇನ್ನು ಶಿವಂ ದುಬೆ ಒಂದೆರಡು ಲೀಲಾಜಾಲ ಬೌಂಡರಿ ಮತ್ತು ಬಾನೆತ್ತರದ ಒಂದು ಸಿಕ್ಸರ್ ಬಾರಿಸಿ 27 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಕೊನೆಯ ಓವರ್‌ನಲ್ಲಿ ರಿಂಕು ಸಿಂಗ್ ಒಂದು ಗಗನದೆತ್ತರದ ಸಿಕ್ಸ್ ಹಾಗೂ ಫೋರ್‌ನೊಂದಿಗೆ 11 ರನ್ ಜೋಡಿಸಿ ಸ್ಕೋರ್ ಹಿಗ್ಗಿಸಿದರು.

ಕೈಕುಲುಕದ ಭಾರತ

ಭಾರತ ಹಾಗೂ ಪಾಕಿಸ್ತಾನ ನಡುವೆ ಕೈಕುಲುಕದಿರುವ ಹೊಸ ಸಂಪ್ರದಾಯ ಮುಂದುವರೆದ್ದು, ಪಾಕ್ ನಾಯಕನಿಗೆ ಕಾಸಿನ ಕಿಮ್ಮತ್ತು ನೀಡದೆ ಟಾಸ್ ಮುಗಿಸಿ ಸೂರ್ಯಕುಮಾರ್ ಯಾದವ್ ಹಾಗೇ ಹೊರಟುಬಿಟ್ಟರು. ಆಪರೇಷನ್ ಸಿಂದೂರ್ ಮುಗಿದ ತಕ್ಷಣಕ್ಕೆ ಆರಂಭವಾಗಿದ್ದ ಏಷ್ಯಾಕಪ್ ವೇಳೆ ಪಾಕ್ ಸೊಕ್ಕು ಮುರಿಯುವುದಕ್ಕೆ ತೆಗೆದುಕೊಂಡ ತೀರ್ಮಾನ ಭಾರತ ಮುಂದುವರಿಸಿದೆ. (ಭಾರತ ತಂಡದವರು ನಮ್ಮವರದಿಗೆ ಕೈಕುಲುಕುತ್ತಿಲ್ಲ) ಎಂದು ಐಸಿಸಿ ಮುಂದೆ ಗೋಳು ಹೇಳಿಕೊಳ್ಳುತ್ತಿದ್ದ ಪಾಕ್‌ನ ಮರ್ಯಾದೆ ಮತ್ತೊಮ್ಮೆ ಹೋಗಿದೆ.

ಸ್ಕೋರ್ ಬೋರ್ಡ್

ಭಾರತ	20 ಓವರ್‌ಗಳಲ್ಲಿ	175/7
ಕಿಶನ್	ಬಿ ಆಯೂಬ್	77
ಅಭಿಷೇಕ್	ಸಿ ಆಫ್ರಿದಿ ಬಿ ಸಲ್ಮಾನ್	0
ತಿಲಕ್	ಎಲ್‌ಬಿ ಬಿ ಆಯೂಬ್	25
ಸೂರ್ಯ	ಸಿ ಆಯೂಬ್ ಬಿ ಉಸ್ಮಾನ್	32
ಹಾರ್ದಿಕ್	ಸಿ ಬಾಬರ್ ಬಿ ಆಯೂಬ್	0
ದುಬೆ	ರನೌಟ್	27
ರಿಂಕು	ನಾಟೌಟ್	11
ಅಕ್ಷರ್	ಸಿ ಆಯೂಬ್ ಬಿ ಆಫ್ರಿದಿ	0
ಇತರೆ		3

ಬೌಲಿಂಗ್ ವಿವರ

ಆಘಾ	2-0-10-1
ಆಫ್ರಿದಿ	2-0-31-1
ಆಯೂಬ್	4-0-25-3
ಅಬ್ರಾರ್	3-0-38-0
ಶಾದಬ್	1-0-17-0
ನವಾಜ್	4-0-28-0
ಉಸ್ಮಾನ್	4-0-24-1

ಪಾಕ್	18 ಓವರ್‌ಗಳಲ್ಲಿ	100/10
ಫರ್ಹಾನ್	ಸಿ ರಿಂಕು ಬಿ ಪಾಂಡ್ಯ	0
ಆಯೂಬ್	ಎಲ್‌ಬಿ ಬಿ ಬೂಮ್ರಾ	6
ಸಲ್ಮಾನ್	ಸಿ ಪಾಂಡ್ಯ ಬಿ ಬೂಮ್ರಾ	4
ಬಾಬರ್	ಬಿ ಅಕ್ಷರ್	5
ಉಸ್ಮಾನ್	ಸ್ಟಂಪ್ ಕಿಶನ್ ಬಿ ಅಕ್ಷರ್	44
ಶಾದಬ್	ಸಿ ದುಬೆ ಬಿ ತಿಲಕ್	14
ನವಾಜ್	ಸಿ ದುಬೆ ಬಿ ಕುಲ್ದೀಪ್	4
ಫಹೀಮ್	ಸಿ ರಿಂಕು ಬಿ ವರುಣ್	10
ಆಫ್ರಿದಿ	ನಾಟೌಟ್	23
ಅಬ್ರಾರ್	ಎಲ್‌ಬಿ ಬಿ ವರುಣ್	0
ಉಸ್ಮಾನ್	ಬಿ ಪಾಂಡ್ಯ	0
ಇತರೆ		4

ಬೌಲಿಂಗ್ ವಿವರ

ಪಾಂಡ್ಯ	3-1-16-2
ಬೂಮ್ರಾ	2-17-0-2
ಅಕ್ಷರ್	4-0-29-2
ವರುಣ್	3-0-17-2
ಕುಲ್ದೀಪ್	3-0-16-1
ತಿಲಕ್	2-0-11-1
ರಿಂಕು	1-0-9-0

ರೆಡ್ಡಿ ದಾಳಿಗೆ ತತ್ತರಿಸಿದ ಆಸೀಸ್

ಸಿಡ್ನಿ(ಆಸ್ಟ್ರೇಲಿಯಾ): ಅರುಂಧತ್ತಿ ರೆಡ್ಡಿ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ಉದುರಿದ ಆಸ್ಟ್ರೇಲಿಯಾ ಮಹಿಳಾ ತಂಡವು ಮಳೆಯ ರಭಸದ ಬೆನ್ನಲ್ಲೇ ಸಿಡಿಲಿನಂತೆ ಒಡಿದಾಡಿದ ಶಫಾಲಿ ವರ್ಮಾ ಆಟಕ್ಕೆ ಬೆದರಿ ಹೋಯಿತು. ಪುರುಷರ ವಿಶ್ವಕಪ್‌ನ ಕುತೂಹಲಕಾರಿ ಪಂದ್ಯಗಳ ಮಧ್ಯೆ ಮೂರೂ ಮಾದರಿಯ ದೊಡ್ಡ ಸರಣಿಗಾಗಿ ಆಸ್ಟ್ರೇಲಿಯಾಗೆ ತೆರಳಿರುವ ಭಾರತೀಯ ಮಹಿಳೆಯರ ತಂಡವು ಮೊದಲ ಟಿ20 ಪಂದ್ಯದಲ್ಲಿ ಗೆದ್ದು ಮಿಂಚಿನ ಆರಂಭ ಪಡೆಯಿತು.

ಎರಡು ಪಂದ್ಯಗಳ ಚುಟುಕು ಸರಣಿಯ ಮೊದಲ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 18 ಓವರ್ ಮಾತ್ರ ಬ್ಯಾಟಿಂಗ್ ಮಾಡಿ 133 ರನ್‌ಗಳಿಗೆ ಪತನಗೊಂಡಿತು. ದುಸ್ವಪ್ನದಂತೆ ಬ್ಯಾಟಿಗರನ್ನು ಕಾಡಿದ ರೆಡ್ಡಿ 22 ರನ್ ಮಾತ್ರ ನೀಡಿ 4 ಪ್ರಮುಖ ವಿಕೆಟ್‌ಗಳನ್ನು ಕಿತ್ತರು. ಜಾರ್ಜಿಯಾ ವಾರೆಹಾಮ್ 30 ರನ್‌ಗಳಿಸಿ ಇದ್ದಿದ್ದರಲ್ಲಿ ಪ್ರತಿರೋಧಿಸಿದವರಾದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಬೇಗನೇ ಪಂದ್ಯ ಮುಗಿಸಿ ಮುನ್ನಡೆ ಬುಟ್ಟಿಗೆ ಹಾಕಿಕೊಳ್ಳಬೇಕೆಂಬ ಭಾರತ ಯೋಜನೆಗೆ ಮಳೆ ಅಡ್ಡಿಯಾಯಿತು. ಆಡಿದ ಐದೇ ಓವರ್‌ಗಳಲ್ಲಿ ಶಫಾಲಿ ವರ್ಮಾ ಬಾಲಿಗೆ ಎಲ್ಲಾ ದಿಕ್ಕುಗಳನ್ನು ತೋರಿಸಿ 11 ಮಾತ್ರ ಎಸೆತದಲ್ಲಿ 21 ರನ್‌ಗಳ ಚಿಕ್ಕ-ಚೊಕ್ಕ ಇನ್ನಿಂಗ್ಸ್ ಆಡಿಬಿಟ್ಟಿದ್ದರು. ಅದಕ್ಕಿಷ್ಟು ಮಂಧಾನ ಅವರ ತಾಳ್ಮೆಯ ಶಕ್ತಿ ಮತ್ತು ರಾಡ್ರಿಗ್ಸ್ ಅವರ ಆವೇಗ ಸಿಕ್ಕ ನಂತರ ಭಾರತ 5.1 ಓವರ್‌ಗಳಲ್ಲಿ 50 ರನ್ ಬಾರಿಸಿತ್ತು.

ಮುಂದಿನ ಪಂದ್ಯಕ್ಕೆ ಮಳೆ ಅಪ್ಪಣೆ ನೀಡದ ಕಾರಣದಿಂದಾಗಿ ಪಂದ್ಯವನ್ನು ಅಲ್ಲಿಗೆ ನಿಲ್ಲಿಸಿ, 5.1 ಓವರ್ ಹೊತ್ತಿಗಾಗಲೇ ಆಸ್ಟ್ರೇಲಿಯಾಗಿಂತ 21 ರನ್ ಮುಂದಿದ್ದ ಭಾರತ ತಂಡವನ್ನು ವಿಜೇತರನ್ನಾಗಿ ಘೋಷಿಸಲಾಯಿತು.

ರೆಡ್ಡಿ ಮಿಂಚಿನಾಟ: ಆಸ್ಟ್ರೇಲಿಯಾದ ಪ್ರಮುಖ ಬ್ಯಾಟರ್ ಗಳೆನ್ನಿಸಿಕೊಳ್ಳುವ ಫೋಬಿ ಲಿಚ್‌ಫೀಲ್ಡ್, ಎಲ್ಲಿಸ್ ಪೆರ್ರಿ, ಜಾರ್ಜಿಯಾ ಮತ್ತು ಬ್ರೋನ್ ಅವರ ವಿಕೆಟ್ ಪಡೆದ ಭಾರತದ ವೇಗಿ ಅರುಂಧತ್ತಿ ರೆಡ್ಡಿ ದೊಡ್ಡ ಸ್ಕೋರಿನ ಆಸೀಸ್ ಕನಸನ್ನು ಮುರಿದು ಹಾಕಿ ಭಾರತದ ಗೆಲುವಿಗೆ ಭದ್ರ ಬೂನಾದಿ ಹಾಕಿಕೊಟ್ಟರು. ಅವರಷ್ಟೇ ಅಲ್ಲದೆ, ರೇಣುಕಾ ಸಿಂಗ್, ಶ್ರೀ ಚಾರಣಿ ತಲಾ ಎರಡು ಮತ್ತು ದೀಪ್ತಿ, ಕ್ರಾಂತಿ ತಲಾ ಒಂದು ವಿಕೆಟ್‌ನೊಂದಿಗೆ ಆಸ್ಟ್ರೇಲಿಯಾ ತಂಡವನ್ನು ಆಲೌಟ್ ಮಾಡುವಲ್ಲಿ ಮಹತ್ವದ ಕಾಣಿಕೆ ನೀಡಿದರು.



ಸಂಕ್ಷಿಪ್ತ ಸ್ಕೋರ್

ಆಸ್ಟ್ರೇಲಿಯಾ 18 ಓವರ್‌ಗಳಲ್ಲಿ 139/10
ಜಾರ್ಜಿಯಾ 30, ಅರುಂಧತ್ತಿ 22/4, ರೇಣುಕಾ 14/2
ಭಾರತ 5.1 ಓವರ್‌ಗಳಲ್ಲಿ 50/1
ಶಫಾಲಿ 21, ಮಂಧಾನ 16★
ಫಲಿತಾಂಶ: ಭಾರತಕ್ಕೆ 21 ರನ್‌ಗಳ ಜಯ. (ಡಕ್ವರ್ತ್ ಲೂಯಿಸ್ ನಿಯಮಾನ್ವದಡಿಯಲ್ಲಿ)

ಸೂಪರ್ 8ಕ್ಕೆ ವೆಸ್ಟ್ ಇಂಡೀಸ್

ಮುಂಬೈ: ವಿಶ್ವ ಕ್ರಿಕೆಟ್‌ನಲ್ಲಿ ತಮ್ಮ ಹಳೆಯ ಲಯಕ್ಕೆ ವಿಶ್ವಕಪ್ ಮುಖಾಂತರ ಬರುವ ಸಂದೇಶ ನೀಡುತ್ತಿರುವ ವೆಸ್ಟ್ ಇಂಡೀಸ್ ಪ್ರತಿಷ್ಠಿತ ಕೂಟದ ಸೂಪರ್-8ಕ್ಕೆ ಲಗ್ಗೆ ಹಾಕಿತು.

ಎರಡು ಗೆಲುವುಗಳ ಸಂಭ್ರಮ ಜೇಬಿನಲ್ಲಿ ತೆಗೆದುಕೊಂಡು ಬಂದಿದ್ದ ವಿಂಡೀಸ್ ನೇಪಾಳ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು. ಇದರೊಂದಿಗೆ ವಿಂಡೀಸ್ ಅರ್ಭಟ ಈಗ ಸೂಪರ್-8ಕ್ಕೆ ವಿಸ್ತಾರವಾಗುವ ಭರವಸೆ ಹುಟ್ಟಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 133 ರನ್‌ಗಳಿಸಿತು. ಗುರಿ ಬೆನ್ನತ್ತಿದ ವಿಂಡೀಸ್ 15.2 ಓವರ್‌ಗಳಲ್ಲಿ 1 ವಿಕೆಟ್ ಮಾತ್ರ ಕಳೆದುಕೊಂಡು ಗುರಿ ಪೇರಿಸಿತು.

ವಿಂಡೀಸ್ ಕ್ರಿಕೆಟ್ ಸೊರಗಿ ಹೋಗಿದೆ. ಈಗ ಅದು ಮೊದಲಿನಂತೆ ಆಡುತ್ತಿಲ್ಲ ಎಂಬ ಟೀಕೆಗಳಿಗೆ ವಿಶ್ವಕಪ್‌ನಲ್ಲಿ ಉತ್ತರ ನೀಡಬೇಕೆಂಬ ದೃಢ ನಿರ್ಧಾರ ಮಾಡಿಕೊಂಡೇ ಬಂದಿರುವ ವಿಂಡೀಸ್ ಪಡೆ ಮೊದಲ ಪಂದ್ಯದಿಂದ ಲೀಲಾಜಾಲದ ಆಟದೊಂದಿಗೆ ಎದುರಾಳಿಗಳನ್ನು ಬಲೆಗೆ ಬೀಳಿಸಿಕೊಳ್ಳುತ್ತಾ ಬಂದಿದೆ. ಅದು ನೇಪಾಳ ವಿರುದ್ಧದ ಪಂದ್ಯದ ವೇಳೆ ಸ್ಪಷ್ಟವಾಗಿ ಗೋಚರಿಸಿತು. 27 ರನ್ ಮಾತ್ರವಷ್ಟೇ ನೀಡಿದ ಜೇಸನ್ ಹೋಲ್ಡರ್ 4 ವಿಕೆಟ್ ಕಿತ್ತಿ ಗೆಲುವಿಗೆ ಅಡಿಪಾಯ ಹಾಕಿದರು. ಬೆಸ್ಟ್ ಬೌಲರ್ ಮತ್ತು ಪಂದ್ಯದ ಶ್ರೇಷ್ಠ ಆಟಗಾರ ಎನಿಸಿದರು. ಆ ಅಡಿಪಾಯವನ್ನು ಶೈ ಹೋಪ್ ಗೆಲುವಿನ ದಡ ಸೇರಿಸಿದರು. 61 ರನ್‌ಗಳಿಸಿ ಪಂದ್ಯದ ಉತ್ತಮ ಬ್ಯಾಟರ್ ಎನಿಸಿಕೊಂಡರು.

ಮಿಂಚಿದ ಜೇಸನ್: ಮೊದಲು ಬ್ಯಾಟಿಂಗ್ ಮಾಡಿದ ನೇಪಾಳಕ್ಕೆ ಹೋಲ್ಡರ್ ಆಘಾತ ನೀಡಿದರು. ಆಸಿಫ್, ಆರೀಫ್, ಕರಣ್ ಹಾಗೂ ಉತ್ತಮ ಬ್ಯಾಟಿಂಗ್ ಮಾಡಿದ ದೀಪೇಂದ್ರ ವಿಕೆಟ್ ಪಡೆದ ಹೋಲ್ಡರ್ ನೇಪಾಳಕ್ಕೆ ತೀವ್ರ ಕಾಟ ನೀಡಿದರು. 4 ವಿಕೆಟ್ ಪಡೆದ ಅವರಿಗೆ ಹೊಸೈನ್, ಫೋರ್ಡ್, ಜೋಸೆಫ್, ಚೇಸ್ ಸಾಥ್ ಸಿಕ್ಕಿತ್ತು. ಪರಿಣಾಮ ನೇಪಾಳ ಹೆಚ್ಚಿನ ಸ್ಕೋರ್ ಕಲೆಹಾಕಲಿಲ್ಲ.

ಹೋಪ್ ಅಬ್ಬರ: ಗುರಿ ಬೆನ್ನತ್ತಿದ ವಿಂಡೀಸ್‌ಗೆ ಯಾವುದೇ ಕ್ಷಣವೂ ಹಿನ್ನಡೆಯಾಗಲಿಲ್ಲ. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿಕೊಂಡು ಬಂದ ಶೈ ಹೋಪ್ ಯಾವುದೇ ಕ್ಷಣಕ್ಕೂ ಎದುರಾಳಿಗಳಿಗೆ ಹೋಪ್ ನೀಡದೆ ಪಂದ್ಯ ಬಾಚಿ ಕೊಂಡರು. 44 ಬಾಲ್‌ಗಳಲ್ಲಿ ಅವರು 61 ರನ್‌ಗಳಿಸಿದರು. ಹ್ಯಾಟ್ಮೇರ್ 32 ಬಾಲ್‌ಗಳಲ್ಲಿ 46 ರನ್ ಗಳಿಸಿದರು. 15.2 ಓವರ್‌ಗಳಲ್ಲಿ ವಿಂಡೀಸ್ ಗುರಿ ಮುಟ್ಟಿತು.



ಅಮೆರಿಕಕ್ಕೆ ಗೆಲುವು

ಚೆನ್ನೈ: ಸಂಜಯ್ ಕೃಷ್ಣಮೂರ್ತಿ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿರುವ ಅಮೆರಿಕ ತಂಡವು ನಮೀಬಿಯಾ ವಿರುದ್ಧದ ಪಂದ್ಯದಲ್ಲಿ 31 ರನ್‌ಗಳ ಗೆಲುವು ಸಾಧಿಸಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲಿತಾಂಶ ಕಂಡಿರುವ ಯುಎಸ್‌ಎ ಈ ಪಂದ್ಯದಲ್ಲಿ ಸಮತೋಲಿತ ಪ್ರದರ್ಶನ ನೀಡಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ 4 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ಮೋನಂಕ್ ಪಟೇಲ್ ನೀಡಿದ ಅತ್ಯುತ್ತಮ ಆರಂಭಕ್ಕೆ ಸಂಜಯ್ ಕೃಷ್ಣಮೂರ್ತಿ ಫಿನಿಶಿಂಗ್ ಟಚ್ ಸಿಕ್ಕಿತು. ಗುರಿ ಬೆನ್ನತ್ತಿದ ನಮೀಬಿಯಾ 6 ವಿಕೆಟ್‌ಗೆ 168 ರನ್ ಗಳಿಸಿಲಷ್ಟೇ ಶಕ್ತವಾಯಿತು. ಸ್ಫೋಟಕ ಬ್ಯಾಟಿಂಗ್ ಮಾಡಿದ ಮೋನಂಕ್ ಮತ್ತು ಸಂಜಯ್ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿಕೊಂಡರೆ, ಟೂರ್ನಿಯಲ್ಲಿ ಬೆಸ್ಟ್ ಬೌಲರ್ ರೇಸ್‌ನಲ್ಲಿ ಮೊದಲನೇ ಸ್ಥಾನದ ಲ್ಲಿರುವ ವ್ಯಾನ್ ಪಂದ್ಯದ ಉತ್ತಮ ಬೌಲರ್ ಎನಿಸಿಕೊಂಡರು. ತಮ್ಮ ವಿಕೆಟ್ ಎಣಿಕೆಗೆ 2 ಅಂಕಿ ಏರಿಸಿಕೊಂಡರು.

ಸಿಡಿದ ಕೃಷ್ಣಮೂರ್ತಿ

30 ಬಾಲ್‌ಗಳಲ್ಲಿ 3 ಸಿಕ್ಸರ್ ಹಾಗೂ 3 ಬೌಂಡರಿಗಳನ್ನು ಬಾರಿಸಿ ಪಂದ್ಯಕ್ಕೆ ಅತ್ಯುತ್ತಮ ಆರಂಭ ನೀಡಿದ ಮೋನಂಕ್ ಅರ್ಧಶತಕ ಬಾರಿಸಿ ತನ್ನ ಪಾತ್ರ ಮುಗಿಯಿತೆಂಬಂತೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಾಗಲಿಲ್ಲ. ಸಂಜಯ್ ಕೊನೆಯ ಓವರ್‌ವರೆಗೂ ನಿಂತು ಸ್ಫೋಟಕ ಬ್ಯಾಟಿಂಗ್ ಮಾಡಿ ಅಬ್ಬರಿಸಿದರು. 33 ಬಾಲ್ ಮಾತ್ರದಲ್ಲಿ ಅವರು 6 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 66 ರನ್ ಬಾರಿಸಿದರು. ಗುರಿ ಬೆನ್ನತ್ತಿದ ನಮೀಬಿಯಾ ಪರ 58 ರನ್ ಬಾರಿಸಿ ಸ್ಟೀಕಾಂಪ್ ಹೋರಾಡಿದರು.

ಸಂಕ್ಷಿಪ್ತ ಸ್ಕೋರ್

ಅಮೆರಿಕ-ನಮೀಬಿಯಾ
ಅಮೆರಿಕ 20 ಓವರ್‌ಗಳಲ್ಲಿ 199/4
ಸಂಜಯ್ 68★, ಮೋನಂಕ್ 52, ವಿಲ್ಲೆಮ್ 22/2,
ನಮೀಬಿಯಾ 20 ಓವರ್‌ಗಳಲ್ಲಿ 168/6
ಸ್ಟೀಕಾಪ್ 58, ವ್ಯಾನ್ 30/2


ವಿಂಡೀಸ್-ನೇಪಾಳ
ನೇಪಾಳ 18 ಓವರ್‌ಗಳಲ್ಲಿ 133/8
ದಿಪೇಂದ್ರ 58; ಹೋಲ್ಡರ್ 27/4
ವಿಂಡೀಸ್ 15.2 ಓವರ್‌ಗಳಲ್ಲಿ 134/1
ಹೋಪ್ 61★, ಹ್ಯಾಟ್ಮೇರ್ 46

ರಾಹುಲ್-ಪಡಿಕ್ಕಲ್ ಶತಕ, ಕರ್ನಾಟಕ 355 ರನ್

ಲಖನೌ: ಉತ್ತರಾಖಂಡಕ್ಕೆ ಉತ್ತರ ಸಿಗದಂತೆ ಬ್ಯಾಟಿಂಗ್ ಮಾಡಿರುವ ಕೆ.ಎಲ್. ರಾಹುಲ್ ಮತ್ತು ದೇವದತ್ತ ಪಡಿಕ್ಕಲ್ ಮೊದಲ ದಿನ ಶತಕ ಬಾರಿಸಿ ಮೆರೆದಾಡಿಬಿಟ್ಟರು. ದೇಶಿ ಕ್ರಿಕೆಟ್ ಅಂಗಳದಲ್ಲಿ ರಣಜಿ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯ ನಡೆಯುತ್ತಿದೆ. ಅಲ್ಲಿ ಮೊದಲು ಬ್ಯಾಟಿಂಗ್ ಆಯ್ದುಕೊಂಡಿರುವ ಕರ್ನಾಟಕ ತಂಡವು ಉತ್ತಮ ಬ್ಯಾಟಿಂಗ್‌ನೊಂದಿಗೆ ಮೊದಲ ದಿನ 2 ವಿಕೆಟ್ ಮಾತ್ರವಷ್ಟೇ ಕಳೆದುಕೊಂಡು 355 ರನ್ ಬಾರಿಸಿ ಪಂದ್ಯದ ಮೇಲೊಂದು ಹಿಡಿತ ಸಾಧಿಸಿ ಬ್ಯಾಟಿಂಗ್ ಉಳಿಸಿಕೊಂಡಿದೆ. ರಾಹುಲ್ ಮೊದಲಿನಿಂದಲೂ ತಮ್ಮ ವಿಶೇಷ ಕ್ಲಾಸಿಕ್ ಇನ್ನಿಂಗ್ಸ್‌ನೊಂದಿಗೆ ಮಿಂಚಿ 211 ಬಾಲ್‌ಗಳಲ್ಲಿ 145 ರನ್ ಗಳಿಸಿದರು. ಇದರಲ್ಲಿ ಅವರ ತಾಳ್ಮೆ, ಸ್ಥೈರ್ಯ, ಕೌಶಲ ಮತ್ತು ಕ್ಲಾಸ್ ಕಾಣಿಸಿಕೊಂಡಿತು. 5 ಸ್ಫೋಟಕ ಸಿಕ್ಸರ್ ಮತ್ತು 11 ಬೌಂಡರಿಗಳನ್ನು ಅವರು ಚಚ್ಚಿದ್ದಾರೆ.

ಪಡಿಕ್ಕಲ್ ಪರಾಕ್ರಮ: ಇನ್ನು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದಿರುವ ದೇವದತ್ತ ಪಡಿಕ್ಕಲ್ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ. ಮೊದಲಿನಿಂದಲೂ ತಾಳ್ಮೆಯ ಜತೆಗೆ ಪರಾಕ್ರಮ ಮೆರೆದ ಅವರು 236 ಬಾಲ್‌ಗಳಲ್ಲಿ 16 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳೊಂದಿಗೆ 148 ರನ್ ಗಳಿಸಿದ್ದಾರೆ. ಎರಡನೇ ದಿನ ಬ್ಯಾಟಿಂಗ್ ಆರಂಭಿಸಲಿದ್ದಾರೆ. ಅವರೊಂದಿಗೆ ಕರುಣ್ ನಾಯರ್ 37 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ.





ಎಫ್‌ಐಎಚ್ ಹಾಕಿ: ಭಾರತಕ್ಕೆ 3ನೇ ನಿರಾಸೆ

ರೌರ್ಕೆಲಾ: ರೌರ್ಕೆಲಾದಲ್ಲಿ ನಡೆದ ಎಫ್‌ಐಎಚ್ ಪ್ರೋ ಲೀಗ್ ಪಂದ್ಯಾವಳಿಯ ಎರಡನೇ ಹಂತದ ಪಂದ್ಯದಲ್ಲಿ ಆತಿಥೇಯ ಭಾರತ ತಂಡಕ್ಕೆ ಮತ್ತೊಮ್ಮೆ ನಿರಾಸೆ ಎದುರಾಗಿದೆ. ನಿರೀಕ್ಷಿತ ಫಲಿತಾಂಶ ನೀಡದ ಕಾರಣದಿಂದಾಗಿ ಸೊರಗಿರುವ ಭಾರತದ ಹಾಕಿ ಮೇಲಿನ ಹಿಡಿತಕ್ಕೆ ಮತ್ತೊಂದು ಆಘಾತ ಎದುರಾಗಿದೆ. ಶನಿವಾರ ನಡೆದ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ ಭಾರತ 2-4 ಗೋಲುಗಳಿಂದ ಸೋತು ಟೂರ್ನಿಯಲ್ಲಿ ಮೂರನೇ ಸರಣಿ ಸೋಲನ್ನು ಅನುಭವಿಸಿದ ಭಾರತ ಪುಟಿದೇಳುವ ನಿರೀಕ್ಷೆಗಳಿಗೆ ಹುಸಿ ಮಾಡಿತು.

ಪಂದ್ಯದ ಆರಂಭದಲ್ಲಿ ಭಾರತ ತಂಡ ಸಮನ್ವಯತೆ ಕಂಡುಕೊಂಡಂತೆ ಕಾಣಿಸಿದರೂ, ಅದು ಕೆಲವೇ ಕ್ಷಣಕ್ಕೆ ಸೀಮಿತವಾಯಿತು. ಬೆಲ್ಜಿಯಂ ಮೊದಲಾರ್ಧದಲ್ಲೇ ಆಕ್ರಮಣಾತ್ಮಕ ಆಟ ಪ್ರದರ್ಶಿಸಿ ಕೇವಲ ಆರು ನಿಮಿಷಗಳ ಅವಧಿಯಲ್ಲಿ ನಾಲ್ಕು ಪೆನಾಲ್ಟಿ ಕಾರ್ನರ್ ಗೋಲುಗಳನ್ನು ದಾಖಲಿಸಿತು. ಆದರೆ ರಕ್ಷಣೆಯಲ್ಲಿ ಎದುರಾಳಿಗಳು ಅಚ್ಚುಕಟ್ಟಾದ ಪ್ರದರ್ಶನ ನೀಡಿದರು.

ಪಂದ್ಯದ ಮೇಲೆ ಹಿಡಿತ ಸಾಧಿಸಿದ ಬೆಲ್ಜಿಯಂ



ಭಾರತ ಆರಂಭದಲ್ಲಿ ಸೃಷ್ಟಿಸಿದ್ದ ಅವಕಾಶಗಳಿಗೆ ಅಡ್ಡಿಯಾಯಿತು. ಗೋಲ್‌ಕೀಪರ್ ಗೋಡೆಯಂತೆ ಭಾರತದ ಆಕ್ರಮಣಗಳನ್ನು ಆತ್ಮವಿಶ್ವಾಸದಿಂದ ತಡೆದರು. ಅಕಸ್ಮಾತಾಗಿ ಆ ಗೋಲುಗಳನ್ನು ಪಡೆದಿದ್ದರೆ ಭಾರತ ಆರಾಮಾಗೇ ಪಂದ್ಯವನ್ನು ಗೆಲ್ಲಬಹುದಿತ್ತು. ಏಳನೇ ನಿಮಿಷದಲ್ಲಿ ಆದಿತ್ಯ ಲಾಲಗೆ ಗೋಲು ಹೊಡೆದರೂ, ರೆಫರಲ್ ಬಳಿಕ ಬಾಲ್ ಐದು ಮೀಟರ್ ಹೊರಗೆ ಹೋಗಿರಲಿಲ್ಲವೆಂಬ ಕಾರಣದಿಂದ ಅದು ಅಮಾನ್ಯಗೊಂಡಿತು.

ಬೆಲ್ಜಿಯಂ ಪ್ರತಿದಾಳಿ: ಪ್ರತಿದಾಳಿಗಳಲ್ಲಿ ಬೆಲ್ಜಿಯಂ ಆಟಗಾರರು ಮಧ್ಯದಲ್ಲಿ ಚುರುಕಾಗಿ ಚಲಿಸಿ, ಭಾರತೀಯ ರಕ್ಷಣೆಯಲ್ಲಿ ಇರುವ ಬಿರುಕುಗಳನ್ನು ಬಳಸಿಕೊಂಡು ನಿರಂತರವಾಗಿ ಪೆನಾಲ್ಟಿ ಕಾರ್ನರ್ ಪಡೆದುಕೊಂಡರು. 11ನೇ ನಿಮಿಷದಲ್ಲಿ ಹ್ಯುಗೋ ಲಬುಶೇರ್ ಮೊದಲ ಗೋಲು ದಾಖಲಿಸಿದರೆ, 17ನೇ ನಿಮಿಷದಲ್ಲಿ ಅಲೆಕ್ಸಾಂಡರ್ ಹೆಂಡ್ರಿಕ್ಸ್ ನಾಲ್ಕನೇ ಗೋಲು ಹೊಡೆದು ತಂಡಕ್ಕೆ ಭರ್ಜರಿ ಮುನ್ನಡೆ ನೀಡಿದರು. 24ನೇ ನಿಮಿಷದಲ್ಲಿ ಲಾಲಗೆ ಗೋಲುಮೌತ್ ಗದ್ದಲದ ವೇಳೆ ಒಂದು ಗೋಲು ಹಿಂದಕ್ಕೆ ತಂದುಕೊಟ್ಟರು. ಆದರೂ ಭಾರತೀಯ ರಕ್ಷಣಾ ವಿಭಾಗದಲ್ಲಿ ಸಮನ್ವಯದ ಕೊರತೆ ಸ್ಪಷ್ಟವಾಗಿ ಗೋಚರಿಸಿತು. ದ್ವಿತೀಯಾರ್ಧದಲ್ಲಿ ಚಿತ್ರಣ ಬದಲಾಗಿದರೂ, ಭಾರತೀಯ ಫಾರ್ವರ್ಡ್‌ಗಳು ಅವಕಾಶಗಳನ್ನು ಸದ್ವಿನಿಯೋಗ ಮಾಡಿಕೊಳ್ಳಲು ವಿಫಲರಾದರು. ಅಭಿಷೇಕ್ ಉತ್ತಮ ಸ್ಥಿತಿಗಳಲ್ಲಿ ಕಂಡುಬಂದರೂ ಗುರಿ ತಪ್ಪಿಸುತ್ತಲೇ ಇದ್ದರು. ಹಾರ್ದಿಕ್ ಸಿಂಗ್ ಮಾರ್ಗದರ್ಶನದಲ್ಲಿ ಕೆಲ ಕ್ಷಣಗಳಲ್ಲಿ ತಂಡ ಲಯ ಕಂಡುಕೊಂಡರೂ, ಅದನ್ನು ನಿರಂತರವಾಗಿ ಮುಂದುವರಿಸಲು ಸಾಧ್ಯವಾಗಲಿಲ್ಲ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5897

ಎಡದಿಂದ ಬಲಕ್ಕೆ
2.ಕೆಟ್ಟ ಘಟನೆ ನಡೆದ ದಿವಸ (5)
5.ನೇಗಿಲನ್ನೇ ಆಯುಧವಾಗುಳ್ಳವನು (4)
7.ಕೈಯಲ್ಲಿರುವ ದುಡ್ಡಿನ ಮೊದಲು ಆಭರಣವಿದೆ (3)
8.ವಿಷ್ಣುವಿನ ಮೂರನೆಯ ಅವತಾರ (3)
10.ಸುತ್ತು ಬಳಸುಗಳಿಲ್ಲದಿರುವಿಕೆ (2)
12.ತಾಮ್ರದ ಚಿಕ್ಕ ನಾಣ್ಯ-ಹಣ (2)
13.ದರದ ನಡುವಿನ ಊದಿಕೊಳ್ಳುವಿಕೆ ತಿರುಗಿದೆ (3)
14.ಅಲ್ಲಿಗೆ ಬಂದವರ ನಡುವೆ ನಡೆದ ಕಾಳಗ (3)
16.ಸಹಿ ಒಳಗೊಂಡ ಕ್ರಮವಾಗಿರಿಸಿದ್ದು (4)
17.ಬಿಳಿಕ್ರಾಂತಿ ಇದಕ್ಕೆ ಸಂಬಂಧಿಸಿದ್ದು (5)

ಮೇಲಿನಿಂದ ಕೆಳಕ್ಕೆ
1.ಹೊಂದಾಣಿಕೆಯೊಂದಿಗೆ ಒಟ್ಟಿಗೆ ನಡೆಸುವ ಬದುಕು (5)
3.ಪೂರ್ಣಚಂದ್ರದ ಇನ್ನೊಂದು ಹೆಸರು (3)
4.ವಾರವನ್ನೊಳಗೊಂಡ ಸೂರ್ಯ (4)
6.ಸಂಕಲನವನ್ನು ಸೂಚಿಸುವ ಚಿಹ್ನೆ (2)
9.ಶುಭವನ್ನು ಕೋರು-ಆಶೀರ್ವದಿಸು (3)
10.ನೇರವಾಗಿ ಸರ ಧರಿಸಿ ಬಂದ ಸೂರ್ಯ (3)
11.ಆದರ ತರುವಾಯ-ಆ ಬಳಿಕ ಎಂಬರ್ಥದ ಶಬ್ದ (5)
12.ಇದು ದೇವಲೋಕದ ಹಸು (4)
14.ಬರೀ ಜಾಗ ಕೇಳಿದ ಜಗಳಗಂಟಿ (3)
15.ಇದು ಸತ್ವದಿಂದ ಕೂಡಿದ್ದು (2)

5896 ಉತ್ತರ

ಎಡದಿಂದ ಬಲಕ್ಕೆ:
1.ಗಡಿಪಾರು
3.ಬಡಿವಾರ 6.ಬಂಗಾರ
7.ನವರಾತ್ರಿ 8.ಹೀನ
10.ಸಂಜೆ 12.ಸರಪಂಚ
14.ಗುಡುಗು 16.ರಣಹೇಡಿ
17.ದಿನಮೂರ್ತಿ

ಮೇಲಿನಿಂದ ಕೆಳಕ್ಕೆ :
1.ಗಜಾನನ 2.ರುಜು
3.ಬರಗಾಲ 4.ರಸಾಯನ
5.ಪರಾಗ 9.ಕರಕು
10.ಸಂಚಕಾರ
11.ಕಾಡುನುಡಿ
13.ಚಕ್ರವರ್ತಿ 15.ಕೌದಿ

ಕಿರುಸುದ್ದಿ

ಬಿದ್ದು ಗಾಯಗೊಂಡು ಚಿಕಿತ್ಸೆಯಲ್ಲಿದ್ದ ಮಹಿಳೆ ಮೃತ್ಯು

ಕಾಸರಗೋಡು: ಮನೆಯೊಳಗೆ ಬಿದ್ದು ಗಾಯಗೊಂಡು ಚಿಕಿತ್ಸೆಯಲ್ಲಿದ್ದ ಮಹಿಳೆ ಮೃತಪಟ್ಟಿದ್ದಾರೆ. ಬಾಯಾರು ಸಜಂಕಿಲ ಕೋಡಿಯಡ್ಕ ನಿವಾಸಿ ಅನಂತ ಪದ್ಮನಾಭ ಎಂಬವರ ಪತ್ನಿ ಗಂಗಾ (37) ಮೃತಪಟ್ಟವರು. ಫೆ.8ರಂದು ಮುಂಜಾನೆ ಅವರು ಮನೆಯೊಳಗೆ ಬಿದ್ದು ಗಂಭೀರ ಗಾಯಗೊಂಡಿದ್ದು, ದೇರಳಕಟ್ಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತಿ, ಪುತ್ರಿ ಧಾತ್ರಿ ಅವರನ್ನು ಅಗಲಿದ್ದಾರೆ.

ಎಂಡಿಎಂಎ ಸಹಿತ ಓರ್ವ ಸೆರೆ

ಕಾಸರಗೋಡು: ನಗರ ಠಾಣೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಮಾದಕ ವಸ್ತು ಸಹಿತ ಓರ್ವನನ್ನು ಸೆರೆ ಹಿಡಿಯಲಾಗಿದೆ. ನೆಲ್ಲಿಕುಂಜೆ ಬಂಗರಕುನ್ನು ಸಿಂಗಪೂರ್ ಹೌಸ್‌ನ ಬಿ.ಎಂ.ಸಿದ್ದಿಕ್ (43) ಎಂಬಾತನನ್ನು ಬಂಧಿಸಿ ಆತನಿಂದ 32 ಗ್ರಾಂ ಎಂಡಿಎಂಎ ವಶಪಡಿಸಲಾಗಿದೆ. ಕಾಸರಗೋಡು ನಗರ ಠಾಣೆಯ ಎಸ್‌ಐ ನೇತೃತ್ವದ ತಂಡ ರಾತ್ರಿ ತಪಾಸಣೆ ನಡೆಸುತ್ತಿದ್ದ ವೇಳೆ ಕರಂದಕ್ಕಾಡ್‌ನಿಂದ ಸಿದ್ದಿಕ್‌ನನ್ನು ಬಂಧಿಸಲಾಗಿದೆ.

ಮಕ್ಕಳೊಂದಿಗೆ ತಾಯಿಯ ರಕ್ಷಣೆ

ಕುಂದಾಪುರ : ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕೋಡಿ ಗ್ರಾಮದ ಕೋಡಿ ಸೀವಾಕ್ ಸಮೀಪ ಸೀವಾಕ್ ರೆಸ್ಟೋ ಕೆಫೆ ಬಳಿ ಮೂರು ಜನ ಚಿಕ್ಕ ಮಕ್ಕಳೊಂದಿಗೆ ದುಃಖಿತರಾಗಿ ನಿಂತಿದ್ದ ಮಹಿಳೆಯನ್ನು ರಕ್ಷಣೆ ಮಾಡಲಾಗಿದ್ದು, ಮಕ್ಕಳನ್ನು ಉಡುಪಿ ಕುಕ್ಕಿಕಟ್ಟೆಯ ಶ್ರೀಕೃಷ್ಣ ಬಾಲನಿಕೇತನಕ್ಕೆ ದಾಖಲು ಮಾಡಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಂಗನಹಳ್ಳಿಯ ಸ್ಲಂ ನಿವಾಸಿ ಸಂಗೀತ (27) ಮತ್ತು ಅವಳ ಮಕ್ಕಳಾದ ಅಜಯ (9), ಖುಷಿ (8) ಮತ್ತು ರೋಜಾ (5) ಎಂದು ಗುರುತಿಸಲಾಗಿದೆ. ಕೋಡಿ ಗ್ರಾಮದ ಕೋಡಿ ಸೀವಾಕ್ ಸಮೀಪ ಸೀವಾಕ್ ರೆಸ್ಟೋ ಕೆಫೆ ಬಳಿ ರೌಂಡ್ಸ್ ಕರ್ತವ್ಯದಲ್ಲಿದ್ದ ಗಂಗೊಳ್ಳಿ ಕರಾವಳಿ ಕಾವಲು ಪೊಲೀಸ್ ಠಾಣೆಯ ಪಿಎಸ್ಐ ಮುಕ್ತ ಬಾಯಿ ಮತ್ತು ಕೋಡಿ ಬೀಟ್ ಸಿಬ್ಬಂದಿ ಗೋಪಾಲ ಖಾರ್ವಿ ಅವರು ಚಿಕ್ಕ ಮಕ್ಕಳೊಂದಿಗೆ ದುಃಖಿತರಾಗಿ ನಿಂತಿದ್ದ ಮಹಿಳೆಯನ್ನು ಗುರುತಿಸಿ, ಮಹಿಳೆ ಮತ್ತು ಮಕ್ಕಳ ಜೊತೆಗೆ ಸಮಾಲೋಚನೆ ನಡೆಸಿ, ಕೋಡಿಯ ಸಮಾಜ ಸೇವಕ ಅಶೋಕ್ ಪೂಜಾರಿ ಸಹಕಾರದೊಂದಿಗೆ ಮಕ್ಕಳನ್ನು ಉಡುಪಿ ಕುಕ್ಕಿಕಟ್ಟೆಯ ಶ್ರೀಕೃಷ್ಣ ಬಾಲನಿಕೇತನಕ್ಕೆ ದಾಖಲು ಮಾಡಿಸಲಾಯಿತು. ತಾಯಿ ಸಂಗೀತಾ ಅವರಿಗೆ ಆಶ್ರಯ ಮತ್ತು ಕೆಲಸ ಕೊಡುವುದಾಗಿ ಕೋಡಿಯ ಜ್ಯೋತಿ ಮತ್ತು ವಿಕಾಸ್ ದಂಪತಿ ಸ್ವಯಂ ಪ್ರೇರಿತರಾಗಿ ಒಪ್ಪಿಕೊಂಡಿದ್ದು ಮಹಿಳೆಯ ಒಪ್ಪಿಗೆಯ ಮೇರೆಗೆ ಅವರ ಜೊತೆಯಲ್ಲಿ ಇರಿಸಿದ್ದಾರೆ. ಜೀವನದಲ್ಲಿ ಯಾರೂ ದಿಕ್ಕು ದೆಸೆ ಇಲ್ಲದೆ ನಿರ್ಗತಿಕರಾಗಿ ಅಲೆಮಾರಿ ಜೀವನ ನಡೆಸುತ್ತಿದ್ದರು ಎನ್ನಲಾಗಿದೆ.

ಆನ್‌ಲೈನ್ ಮೋಸ ಹೋದ ಕೋಟದ ವ್ಯಕ್ತಿ

ಕೋಟ : ಕೇವಲ ರೂ. 12 ಮೊತ್ತವನ್ನು ಗ್ಯಾಸ್ ಅಪ್‌ಡೇಟ್ ಹೆಸರಿನಲ್ಲಿ ಪಾವತಿಸಲು ಹೇಳಿ, ಬಳಿಕ ವಿವಿಧ ಬ್ಯಾಂಕ್ ಖಾತೆಗಳಿಂದ ಒಟ್ಟು ರೂ. 2,01,890 ಹಣ ದೋಚಿದ ಸೈಬರ್ ವಂಚನೆ ಘಟನೆ ಕೋಟ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ. ಬಸವಪುರ ಮೊಳಹಳ್ಳಿ ಗ್ರಾಮದ ಗಣಪತಿ ರಾಮಣ್ಣ ಶೆಟ್ಟಿ (54) ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಫೆ. 8 ರಂದು ಅಪರಿಚಿತ ವ್ಯಕ್ತಿಯಿಂದ ಮೊಬೈಲ್‌ಗೆ ಕರೆ ಬಂದು 'ಮುಂಬಯಿ ಮಹಾನಗರ ಗ್ಯಾಸ್' ಅಪ್‌ಡೇಟ್ ಮಾಡುವುದಾಗಿ ತಿಳಿಸಿ ರೂ. 12ನ್ನು ಕಳುಹಿಸುವಂತೆ ತಿಳಿಸಿದ್ದರು. ಇದನ್ನು ನಂಬಿದ ಅವರು ಡೆಬಿಟ್ ಕಾರ್ಡ್ ಮೂಲಕ ಹಣ ಪಾವತಿಸಿದ್ದಾರೆ. ನಂತರ 11ರಂದು ವಿವಿಧ ಬ್ಯಾಂಕ್ ಖಾತೆಗಳಿಂದ ಸುಮಾರು ರೂ. 2,01,890 ಹಣವನ್ನು ಸೈಬರ್ ವಂಚಕರು ಲಪಟಾಯಿಸಿದ್ದರು. ಕೋಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಿಕ್ಷಾ ಪಲ್ಟಿಯಾಗಿ ಮಹಿಳೆ ಸಾವು

ಬಂಟ್ವಾಳ: ರಿಕ್ಷಾ ಪಲ್ಟಿಯಾಗಿ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಮಾರಿಪಳ್ಳ ಸಮೀಪದ ಕಡೆಗೋಳಿ ಎಂಬಲ್ಲಿ ನಡೆದಿದೆ.ಮಂಗಳೂರು ನಿವಾಸಿ ವಿಶಾಲಾಕ್ಷಿ (45) ಮೃತಪಟ್ಟವರೆಂದು ಗುರುತಿಸಲಾಗಿದೆ. ಮಂಗಳೂರಿನಿಂದ ಬರುತ್ತಿರುವ ವೇಳೆ ಕಡೆಗೋಳಿ ಜಂಕ್ಷನ್‌ನಲ್ಲಿ ಬೈಕ್ ಸವಾರನೋರ್ವ ಎದುರು ಕಡೆಗೆ ಕ್ರಾಸ್ ಆಗಿದ್ದು, ರಿಕ್ಷಾ ಬೈಕ್‌ಗೆ ಡಿಕ್ಕಿಯಾಗಿದೆ, ಬಳಿಕ ನಿಯಂತ್ರಣ ಕಳೆದ ರಿಕ್ಷಾ ಎದುರುಭಾಗದಲ್ಲಿ ನಿಂತಿದ್ದ ಮತ್ತೊಂದು ರಿಕ್ಷಾಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ರಿಕ್ಷಾದಲ್ಲಿ ಮೃತ ವಿಶಾಲಾಕ್ಷಿ ಅವರ ತಂಗಿ ಹಾಗೂ ಅವರ ಇಬ್ಬರು ಮಕ್ಕಳು ಕೂಡ ಪ್ರಯಾಣಿಸುತ್ತಿದ್ದರು. ಆದರೆ ಚಾಲಕ ಸಹಿತ ನಾಲ್ವರು ಸಣ್ಣ ಪುಟ್ಟ ಗಾಯಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಬಂಟ್ವಾಳ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದ.ಕ. ಜಿಲ್ಲೆಯ ವಿವಿಧ ದೇವಸ್ಥಾನಗಳಲ್ಲಿ ಮಹಾಶಿವರಾತ್ರಿ ಆಚರಣೆ | ಭಕ್ತರ ಸಂದಣಿ | ಜಾಗರಣೆ

ಎಲ್ಲೆಡೆ ಶಿವಪಂಚಾಕ್ಷರಿ ಪಠಣ ಝೇಂಕಾರ

ಉಜಿರೆ: 'ಸರ್ವೇಜನಾಃ ಸುಖಿನೋ ಭವಂತು'. ಎಲ್ಲರಿಗೂ ಸುಖ-ಶಾಂತಿ, ನೆಮ್ಮದಿಯೊಂದಿಗೆ ಸನ್ಮಂಗಳವಾಗಲಿ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಸರ್ವರಿಗೂ ಕಲ್ಯಾಣವಾಗಲಿ ಎಂದು ಹಾರೈಸಿದರು.

ಅವರು ಭಾನುವಾರ ಧರ್ಮಸ್ಥಳದಲ್ಲಿ ಪ್ರವಚನ ಮಂಟಪದಲ್ಲಿ ಅಹೋರಾತ್ರಿ ಶಿವಪಂಚಾಕ್ಷರಿ ಪಠಣಕ್ಕೆ ದೀಪಬೆಳಗಿಸಿ ಚಾಲನೆ ನೀಡಿ ಶುಭ ಹಾರೈಸಿದರು. ಬಳಿಕ ಎಲ್ಲರೂ ಸಾಮೂಹಿಕವಾಗಿ 'ಓಂ ನಮಃ ಶಿವಾಯ' ಪಠಣ ಮಾಡಿದರು.

ಎಲ್ಲರೂಶ್ರದ್ಧಾ-ಭಕ್ತಿಯಿಂದಪಾದಯಾತ್ರೆಯಲ್ಲಿ ಧರ್ಮಸ್ಥಳಕ್ಕೆ ಬಂದು ದೇವರ ದರ್ಶನ ಮಾಡಿ, ಪ್ರಾರ್ಥನೆ ಸಲ್ಲಿಸಿ ಧನ್ಯತೆಯನ್ನು ಹೊಂದಿರುವಿರಿ. ನಿಮ್ಮ ಎಲ್ಲಾ ಕಷ್ಟಗಳನ್ನು ಶಿವನಿಗೆ ಅರ್ಪಿಸಿ, ಸುವಿಚಾರಗಳನ್ನು ಮಾತ್ರ ಕೊಂಡು ಹೋಗಿ. ವಿಷಕಂಠನಾದ ಶಿವನಿಗೆ ಮಾತ್ರ ಹಾಲಾಹಲ ಸ್ವೀಕರಿಸುವ ಸಾಮರ್ಥ್ಯವಿದೆ. ನನಗೆ ಎಂದು ವೈಯಕ್ತಿಕವಾಗಿ ಸುಖಕ್ಕಾಗಿ ಪ್ರಾರ್ಥಿಸುವ ಬದಲು ನಮಗೆ, ಇಡಿ ಸಮಾಜಕ್ಕೆ ಕಲ್ಯಾಣವಾಗಲಿ ಎಂಬ ಪ್ರಾರ್ಥನೆ ನಿಮ್ಮದಾಗಲಿ ಎಂದು ಹೇಳಿ ಅವರು ಶುಭ ಹಾರೈಸಿದರು.

ಪಾದಯಾತ್ರೆಯ ರೂವಾರಿ ಗುರು ಹನುಮಂತಪ್ಪ ಮತ್ತು ಮರಿಯಪ್ಪನವರ ನೇತೃತ್ವದಲ್ಲಿ ಏಳು ಮಂದಿಯೊಂದಿಗೆ ಪ್ರಾರಂಭವಾದ ಪಾದಯಾತ್ರೆ ಇಂದು ಎಪ್ಪತ್ತು ಸಾವಿರ ಮಂದಿ ಪಾದಯಾತ್ರಿಗಳು ಬೆಂಗಳೂರು ಮತ್ತು ಮೊದಲಾದ ಕಡೆಗಳಿಂದ ಶನಿವಾರ ಧರ್ಮಸ್ಥಳಕ್ಕೆ ಬಂದಿದ್ದರು.

ಎಲ್ಲರಿಗೂ ಶ್ರೀ ಸ್ವಾಮಿಯ ದರ್ಶನ, ಸೇವೆಯ ಫಲ ದೊರೆತು ಲೋಕ ಕಲ್ಯಾಣವಾಗಲಿ ಎಂದು ಹೆಗ್ಗಡೆ ಹಾರೈಸಿದರು.

ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರಕುಮಾರ್ ಉಪಸ್ಥಿತರಿದ್ದು, ಶಿವಪಂಚಾಕ್ಷರಿ ಪಠಣದಲ್ಲಿ ಭಾಗವಹಿಸಿದರು.

ಮಾಣಿಲದಮೋಹನದಾಸಸ್ವಾಮೀಜಿ,ಪಾದಯಾತ್ರೆಯ ರೂವಾರಿ ಗುರು ಹನುಮಂತಪ್ಪ ಸ್ವಾಮೀಜಿ ಮತ್ತು ಮರಿಯಪ್ಪ ಕೂಡಾ ಉಪಸ್ಥಿತರಿದ್ದರು.

ಶ್ರೀನಿವಾಸ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರ್ವಹಿಸಿದರು. ಅಹೋರಾತ್ರಿ ಶಿವಪಂಚಾಕ್ಷರಿ ಪಠಣ ನಡೆಯಿತು. ಭಕ್ತರು ದೇವರದರ್ಶನ ಮಾಡಿ ವಿಶೇಷವಾಗಿ ಎಳನೀರಿನ ಅಭಿಷೇಕ ಮತ್ತು ಶತರುದ್ರಾಭಿಷೇಕ ಸೇವೆ ಸಲ್ಲಿಸಿ ಧನ್ಯತೆಯನ್ನು ಹೊಂದಿದರು.

ದೇವಳ ಪಾರುಪತ್ಯಗಾರರಾದ ಲಕ್ಷ್ಮೀನಾರಾಯಣ ರಾವ್, ಹೆಗ್ಗಡೆಯವರ ಆಪ್ತಕಾರ್ಯದರ್ಶಿ ಎ.ವಿ. ಶೆಟ್ಟಿ ಉಪಸ್ಥಿತರಿದ್ದು ಸಮಾರಂಭದ ಯಶಸ್ವಿಗೆ ಸಹಕರಿಸಿದರು.

ಭಕ್ತರಿಂದ ಅನ್ನದಾಸೋಹ

ಬೆಂಗಳೂರಿನ ಭಕ್ತರು 1,75,000 ಮಂದಿಗೆ ಉಚಿತವಾಗಿ ಅನ್ನದಾಸೋಹ ಮಾಡಿ ಧನ್ಯತೆಯನ್ನು ಹೊಂದಿದರು. ಅನ್ನಪೂರ್ಣ ಭೋಜನಾಲಯದ ಹಿಂಬದಿಯ ಮೈದಾನ ಮತ್ತು ಹೈಸ್ಕೂಲು ಕ್ರೀಡಾಂಗಣದಲ್ಲಿ ಅನ್ನದಾಸೋಹಕ್ಕೆ ವ್ಯವಸ್ಥೆ ಮಾಡಲಾಯಿತು.

ಬೆಂಗಳೂರಿನ ಶ್ರೀನಿವಾಸ ರೆಡ್ಡಿ ಮತ್ತು ಬಳಗ (80 ಸ್ವಯಂಸೇವಕರು) ಯಲಹಂಕದ ತಿಮ್ಮಾ ರೆಡ್ಡಿ, ಮತ್ತು ಬಳಗ (50 ಸ್ವಯಂಸೇವಕರು) ಆನೇಕಲ್ ಮುನಿರೆಡ್ಡಿ ಮತ್ತು ಬಳಗ (50 ಸ್ವಯಂಸೇವಕರು), ಹೊಸೂರು ರಾಜ ರೆಡ್ಡಿ ಮತ್ತು ಬಳಗ (50 ಸ್ವಯಂಸೇವಕರು), ಆನೇಕಲ್ ಗೋಪಾಲ ರೆಡ್ಡಿ ಮತ್ತು ಬಳಗ(50 ಸ್ವಯಂಸೇವಕರು), ಮಾಲೂರು ರಾಮಕೃಷ್ಣಮತ್ತು ಬಳಗ(30 ಸ್ವಯಂಸೇವಕರು), ಸರ್ಜಾಪುರ ಬಸವರಾಜ ಮತ್ತು ಬಳಗ (50 ಸ್ವಯಂಸೇವಕರು), ನಾಗರಬಾವಿ ಪುಷ್ಪಮಂಜು ಬಳಗ (50 ಸ್ವಯಂಸೇವಕರು), ಶ್ರೀ ಮಂಜುನಾಥ ಸ್ವಾಮಿ ಪಾದಯಾತ್ರೆ ಸೇವಾ ಸಮಿತಿ, ಬೀರೂರು (25 ಸ್ವಯಂಸೇವಕರು), ಶ್ರೀ ಕ್ಷೇತ್ರ ಧರ್ಮಸ್ಥಳ ಅನ್ನಸಂತರ್ಪಣಾ ಸಮಿತಿ, ನಾಗರಬಾವಿ ಬೆಂಗಳೂರು (100 ಸ್ವಯಂಸೇವಕರು), ಕೃಷ್ಣ ರೆಡ್ಡಿ, ಆನೇಕಲ್, ಬೆಂಗಳೂರು (100 ಸ್ವಯಂಸೇವಕರು), ಶ್ರೀ ಮಂಜುನಾಥ ಸ್ವಾಮಿ ಪಾದಯಾತ್ರೆ ಸೇವಾ ಸಮಿತಿ, ಮಲ್ಲೇಶ್ವರಂ, ಬೆಂಗಳೂರು (50 ಸ್ವಯಂಸೇವಕರು), ಒಟ್ಟು 12 ತಂಡಗಳಲ್ಲಿ 635 ಸ್ವಯಂಸೇವಕರು 1,75,000 ಮಂದಿಗೆ ಅನ್ನದಾಸೋಹ ಸೇವೆ ಅರ್ಪಿಸಿದರು.

ಅನ್ನದಾಸೋಹದ ಮೆನು

ಊಟಕ್ಕೆ: ಅನ್ನ, ಸಾರು, ಸಾಂಬಾರು, ಪಲ್ಯ, ಮೊಸರನ್ನ, ರಾಗಿ ಮುದ್ದೆ, ಪಾಯಸ, ಬೂಂದಿ, ಮಸಾಲಪುರಿ

ಉಪಾಹಾರಕ್ಕೆ: ಉಪ್ಪಿಟ್ಟು, ಕ್ಷೀರ, ಪಲಾವ್, ಮೊಸರನ್ನ, ಕೇಸರಿಬಾತ್, ಬಿಸಿಬೇಳೆಬಾತ್, ಅವರೆಕಾಳು, ಮಸಾಲಪುರಿ.



ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ... ಡಾ.ಹೆಗ್ಗಡೆ ನುಡಿಮುತ್ತುಗಳು

- ನಿಮ್ಮೆಲ್ಲ ಕಷ್ಟಗಳನ್ನು ಶಿವನಿಗೆ ಅರ್ಪಿಸಿ , ಸುವಿಚಾರಗಳನ್ನು ನಿಮ್ಮೊಂದಿಗೊಯ್ಯಿರಿ
- ಶ್ರೀಸ್ವಾಮಿಗೆ ಪ್ರಾರ್ಥನೆ ಸಲ್ಲಿಸಿ ಧನ್ಯರಾಗಿ
- ಕೇವಲ ವೈಯಕ್ತಿಕ ಸುಖಕ್ಕಾಗಿ ಪ್ರಾರ್ಥಿಸದೆ ಸಮಾಜಕ್ಕೆ-ರಾಷ್ಟ್ರಕ್ಕೆ ಕಲ್ಯಾಣವಾಗಲೆಂದು ಪ್ರಾರ್ಥಿಸಿ
- ಕೇವಲ7ಮಂದಿಯಿಂದ ಶುರುವಾದ ಶ್ರೀಕ್ಷೇತ್ರ ಪಾದಯಾತ್ರೆಯಲ್ಲಿ ಈ ಬಾರಿ ರಾಜ್ಯದೆಲ್ಲೆಡೆಯಿಂದ 70,000ಕ್ಕೂ ಅಧಿಕ ಭಕ್ತರ ಆಗಮನ

ವಿಶೇಷತೆ

- 1,75,000ಮಂದಿಗೆ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಉಚಿತ ಅನ್ನದಾಸೋಹ
- ಶ್ರೀಕ್ಷೇತ್ರ ಭಕ್ತರ ಕಡೆಯಿಂದ ಅನ್ನದಾಸೋಹ
- ನೂರಾರು ಸ್ವಯಂಸೇವಕರ ತಂಡದಿಂದ ಸೇವೆ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಸಂಭ್ರಮ, ಶಿವ ಪಂಚಾಕ್ಷರಿ ಯಜ್ಞ



ಪುತ್ತೂರು: ಮಹಾಶಿವರಾತ್ರಿ ಪ್ರಯುಕ್ತ ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ವಿಶೇಷವಾಗಿ ಶಿವ ಪಂಚಾಕ್ಷರಿ ಯಜ್ಞ ಸಹಿತ ವಿವಿಧ ಪೂರ್ವಶಿಷ್ಟ ಸಂಪ್ರದಾಯದ ಕಾರ್ಯಕ್ರಮಗಳು ನಡೆದವು ಎಂದು ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ತಿಳಿಸಿದ್ದಾರೆ.

ಶಿವ ಪಂಚಾಕ್ಷರಿ ಯಜ್ಞವು ಇದೇ ಮೊದಲ ಬಾರಿ ಪುತ್ತೂರು ದೇಗುಲದಲ್ಲಿ ಆಯೋಜಿಸಲಾಯಿತು. ಪ್ರತೀ ವರ್ಷ ಪುತ್ತೂರು ದೇವಳದಲ್ಲಿ ಶಿವರಾತ್ರಿಯಂದು ವಿಶೇಷ ಕಾರ್ಯಕ್ರಮ ನಡೆಸಲಾಗುತ್ತದೆ. ಈ ಬಾರಿ ಶಿವ ಪಂಚಾಕ್ಷರಿ ಯಜ್ಞ ಆಯೋಜನೆಗೊಂಡಿತು. ದೇವಳದ ಪ್ರಧಾನ ಅರ್ಚಕ ವಸಂತ ಕೆದಿಲಾಯ ಅವರ ಸಾರಥ್ಯದಲ್ಲಿ 10 ವೈದಿಕರು ಬೆಳಗ್ಗೆ 9.30ಕ್ಕೆ ಯಜ್ಞ ಆರಂಭಿಸಿದರು. 10 ಸಾವಿರ ಆಹುತಿಗಳನ್ನು ನೀಡಿದ ಅನಂತರ ಮಧ್ಯಾಹ್ನ ಪೂರ್ಣಾಹುತಿ ನಡೆದು ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಶಿವರಾತ್ರಿಯ ಹಿನ್ನೆಲೆಯಲ್ಲಿ ಬೆಳಗ್ಗಿನಿಂದಲೇ ಭಕ್ತ ಸಾಗರ ದೇವಾಲಯದಲ್ಲಿ ಕಂಡುಬಂತು. ವಿಶೇಷವಾಗಿ ಬಿಲ್ವಾರ್ಚನೆ ಸೇವೆ, ಶಿವ ಪಂಚಾಕ್ಷರಿ ಯಜ್ಞ ಸೇವೆ ಮಾಡಿಸುವುದರೊಂದಿಗೆ ಉಪವಾಸ, ವ್ರತಾಚರಣೆಗಳನ್ನು ಭಕ್ತರು ಕೈಗೊಂಡರು.

ಬೆಳಗ್ಗಿನಿಂದಲೇ ಭಜನೋತ್ಸವ ನಡೆಯಿತು. ರಾತ್ರಿ ಶ್ರೀದೇವರ ಮಹಾಪೂಜೆಯ ಬಳಿಕ ಉತ್ಸವ ಬಲಿ, ಕಟ್ಟೆ ಪೂಜೆ, ಚಂದ್ರಮಂಡಲ ರಥೋತ್ಸವ, ಕೆರೆಯಲ್ಲಿ ಆಯನ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ವ್ಯವಸ್ಥಾಪನ ಸಮಿತಿ ಸದಸ್ಯರು, ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ಹಾಗೂ ಭಕ್ತಾಧಿಗಳು ಪಾಲ್ಗೊಂಡರು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶ್ರದ್ಧಾಭಕ್ತಿಯ ಮಹಾಶಿವರಾತ್ರಿ ಆಚರಣೆ







ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶಿವ ದೇವಸ್ಥಾನ ಸಹಿತ ಬಹುತೇಕ ದೇವಾಲಯ, ಭಜನಾ ಮಂದಿರಗಳಲ್ಲಿ ಭಾನುವಾರ ಮಹಾಶಿವರಾತ್ರಿ ಮಹೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ನಗರದ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ ನೆರವೇರಿತು. ದಿನವಿಡೀ ಸಹಸ್ರಾರು ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರುಶನ ಪಡೆದರು. ರುದ್ರಾಭಿಷೇಕ ಸಹಿತ ವಿವಿಧ ಪೂಜೆ ಸಲ್ಲಿಸಿದರು. ಕದ್ರಿ ಕೆರೆಗಳಲ್ಲಿ ಪವಿತ್ರ ಸ್ನಾನ ಕೈಗೊಂಡ ಬಳಿಕ ಭಕ್ತರು ಕೆರೆಯ ಮೇಲ್ಭಾಗದಲ್ಲಿರುವ ಶಿವಲಿಂಗಕ್ಕೆ ಜಲಾಭಿಷೇಕ, ಹಾಲಿನ ಅಭಿಷೇಕ ಮಾಡಿದರು. ಬಿಲ್ವಪತ್ರೆ ಅರ್ಪಿಸಿ ಪೂಜೆ ಸಲ್ಲಿಸಿದರು. ಇಲ್ಲಿನ ಶಿವಲಿಂಗವನ್ನು ಸ್ಪರ್ಶಿಸಿ ಭಕ್ತರಿಗೆ ಸ್ವತಃ ಅಭಿಷೇಕ ಸಲ್ಲಿಸಲು ಅವಕಾಶವಿರುವ ಕಾರಣ ಭಾರೀ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಸರತಿಯ ಸಾಲಿನಲ್ಲಿ ನಿಂತು ಗೋಮುಖ ಗಣಪತಿ ಗುಡಿ ಮುಂಭಾಗದಿಂದ ಗೋಮುಖ ತೀರ್ಥವನ್ನು ಪಡೆದು ಶಿವಲಿಂಗಕ್ಕೆ ಅಭಿಷೇಕ ಮಾಡಿದರು.

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ವರ್ಷಾವಧಿ ಜಾತ್ರೋತ್ಸವ, ಮಹಾಶಿವರಾತ್ರಿ ಉತ್ಸವ ಅಂಗವಾಗಿ ಭಾನುವಾರ ರಥೋತ್ಸವ ನೆರವೇರಿತು. ಕ್ಷೇತ್ರದಲ್ಲಿ ಉಮಾಮಹೇಶ್ವರ ಹೋಮ, ಮಹಾರುದ್ರಾಭಿಷೇಕ, ಶತ ಸೀಯಾಳಾಭಿಷೇಕ, ಮಹಾಪೂಜೆ, ವಿಷ್ಣು ಬಲಿ ಉತ್ಸವ ಮತ್ತು ರಥೋತ್ಸವ, ಶಿವಬಲಿ, ಮಹಾಶಿವರಾತ್ರಿ ಜಾಗರಣೆ ಬಲಿ, ಕಟ್ಟೆಪೂಜೆ, ರಥೋತ್ಸವ, ಕೆರೆದೀಪ, ಮಂಟಪ ಪೂಜೆ ನಡೆಯಿತು.

ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಾಂಡೇಶ್ವರ ಮಹಾಲಿಂಗೇಶ್ವರ ದೇವಸ್ಥಾನ, ಮಂಗಳಾದೇವಿ ಕ್ಷೇತ್ರ, ಅತ್ತಾವರ ಉಮಾಮಹೇಶ್ವರ ದೇವಸ್ಥಾನ ಸಹಿತ ನಗರ ಹಾಗೂ ವಿವಿಧೆಡೆಯ ದೇವಸ್ಥಾನಗಳಲ್ಲಿ ಶಿವರಾತ್ರಿ ಮಹೋತ್ಸವ, ಜಾಗರಣೆ ನೆರವೇರಿತು. ಜಾಗರಣೆ ಅಂಗವಾಗಿ ದೇವಸ್ಥಾನಗಳಲ್ಲಿ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಅಜ್ಜಿಯ ತಿಥಿಗಾಗಿ ಆಮೆ ಬೇಟೆ: ನಾಲ್ವರ ಸೆರೆ



- ಉಜಿರೆ ಗ್ರಾಮದ ಕುಂಟಿನಿ ನಿವಾಸಿ ಸಂಬಂಧಿ ಅಜ್ಜಿಯ ಉತ್ತರಕ್ರಿಯೆ ಕಾರ್ಯಕ್ರಮಕ್ಕಾಗಿ ಫೆ.13 ರಂದು ಆಗಮಿಸಿದ್ದರು.
- ಫೆ.14 ರಂದು ಬೆಳ್ತಂಗಡಿಯ ಸೋಮವತಿ ನದಿಗೆ ಬೇಟೆಯಾಡಲು ಆಗಮಿಸಿ ನಾಲ್ಕು ಆಮೆ ಸಮೇತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಬೆಳ್ತಂಗಡಿ: ಅಜ್ಜಿಯ ತಿಥಿ ಕಾರ್ಯಕ್ರಮಕ್ಕೆ ಪದಾರ್ಥ ಮಾಡಿ ಬಡಿಸಲು ಅಜ್ಜಿಗೆ ಇಷ್ಟವಾದ ಆಮೆಯನ್ನು ನದಿಯಲ್ಲಿ ಅಕ್ರಮವಾಗಿ ಬೇಟೆಯಾಡಿ ಮಾಂಸ ಮಾಡಲು ಪ್ರಯತ್ನಿಸುತ್ತಿದ್ದಾಗ ಬೆಳ್ತಂಗಡಿ ಪೊಲೀಸರು ದಾಳಿ ಮಾಡಿ ನಾಲ್ಕು ಆಮೆ ಸಮೇತ ನಾಲ್ಕು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಬೆಳ್ತಂಗಡಿ ನಗರದ ಸೋಮಾವತಿ ನದಿಯಲ್ಲಿ ಅಕ್ರಮವಾಗಿನಾಲ್ಕುಆಮೆಯನ್ನುಬೇಟೆಯಾಡಿ ನದಿ ಬದಿಯಲ್ಲಿ ಮಾಂಸ ಮಾಡಲು ಪ್ರಯತ್ನಿಸುತ್ತಿರುವಾಗ ಬೆಳ್ತಂಗಡಿ ಸಬ್ ಇನ್ಸ್‌ಪೆಕ್ಟರ್ ಆನಂದ್ ಎಂ. ನೇತೃತ್ವದ ತಂಡ ದಾಳಿ ಮಾಡಿ ನಾಲ್ಕು ಮಂದಿಯನ್ನು ವಶಕ್ಕೆ ಪಡೆದು ಅವರ ಬಳಿ ಇದ್ದ ನಾಲ್ಕು ಸುಟ್ಟ ಆಮೆಯನ್ನು ಜಪ್ತಿ ಮಾಡಿ ಮುಂದಿನ ತನಿಖೆಗಾಗಿ ಬೆಳ್ತಂಗಡಿ ವಲಯ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ಬೆಳ್ತಂಗಡಿ ವಲಯ ಅರಣ್ಯ ಇಲಾಖೆಯವರು ಫೆ.14 ರಂದು ಸಂಜೆ ಬೆಳ್ತಂಗಡಿ ಪೊಲೀಸರಿಂದ ಮಹಜರು ಮಾಡಿ ನಾಲ್ಕು ಸುಟ್ಟಿರುವ ಆಮೆಗಳು ಮತ್ತು ನಾಲ್ಕು ಮಂದಿ ಆರೋಪಿಗಳಾದ ಬದಿಯಡ್ಕ ನಿವಾಸಿ ಮಣಿಕಂಠ(42), ಮುಲ್ಕಿ ತಾಲೂಕಿನ ನೆಲ್ಲಿಗುಡ್ಡೆ ನಿವಾಸಿ ರಾಜೇಂದ್ರ (54), ಶಿರ್ಲಾಡಿ ಗ್ರಾಮದ ಮಕ್ಕಿ ನಿವಾಸಿ ವಿಘ್ನೇಶ್ (32), ಬೆಳ್ತಂಗಡಿ ತಾಲೂಕಿನ ಬಡಗ ಕಾರಂದೂರು ಗ್ರಾಮದ ನಿವಾಸಿ ಪ್ರಶಾಂತ್ (35) ಎಂಬವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇವರು ಉಜಿರೆ ಗ್ರಾಮದ ಕುಂಟಿನಿ ನಿವಾಸಿ ಸಂಬಂಧಿ ಅಜ್ಜಿಯ ಉತ್ತರಕ್ರಿಯೆ ಕಾರ್ಯಕ್ರಮಕ್ಕಾಗಿ ಫೆ.13 ರಂದು ಆಗಮಿಸಿದ್ದರು. ಫೆ.14 ರಂದು ಬೆಳ್ತಂಗಡಿಯ ಸೋಮವತಿ ನದಿಗೆ ಬೇಟೆಯಾಡಲು ಆಗಮಿಸಿ ನಾಲ್ಕು ಆಮೆ ಸಮೇತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ. ಇವರನ್ನು ಬೆಳ್ತಂಗಡಿ ವಲಯ ಅರಣ್ಯಾಧಿಕಾರಿಗಳು ವಿಚಾರಣೆ ನಡೆಸಿ ಬಳಿಕ ನ್ಯಾಯಾಲಯಕ್ಕೆ ಹಾಜರಾಗಲು ನೋಟಿಸ್ ನೀಡಿ ಫೆ.14ರಂದು ರಾತ್ರಿ ಬಿಡುಗಡೆ ಮಾಡಲಾಗಿದೆ. ಬೆಳ್ತಂಗಡಿ ಡಿವೈಎಸ್ಪಿ ರೋಹಿನಿ ಸಿ.ಕೆ. ಮತ್ತು ಬೆಳ್ತಂಗಡಿ ಇನ್ಸ್‌ಪೆಕ್ಟರ್ ಬಿ.ಜಿ.ಸುಬ್ಬಾಪುರ ಮಠ ಮಾರ್ಗದರ್ಶನದಲ್ಲಿ ಬೆಳ್ತಂಗಡಿ ಸಬ್ ಇನ್ಸ್‌ಪೆಕ್ಟರ್ ಆನಂದ್ ಎಮ್ ನೇತೃತ್ವದ ಸಿಬ್ಬಂದಿ ಎಎಸ್ಐ ಕುಶಾಲಪ್ಪ, ಹೆಡ್ ಕಾನ್‌ಸ್ಟೇಬಲ್ ಪ್ರಮೋದ್, ಪಂಪಾಪತಿ, ಪ್ರಕಾಶ್, ಶ್ವೇತಾ, ಸವಿತಾ ಹಾಗೂ ಬೆಳ್ತಂಗಡಿ ವಲಯ ಅರಣ್ಯಾಧಿಕಾರಿ ತ್ಯಾಗರಾಜ್, ಡಿ.ಆರ್.ಎಫ್.ಒ ಬೀಟ್ ಫಾರೆಸ್ಟರ್ ಪರಶುರಾಮ ಮೇಟಿ ಕಾರ್ಯಾಚರಣೆಯಲ್ಲಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾನೂನುಬದ್ಧ: ಸುಳ್ಳು ದೂರು ನೀಡಿದರೆ ಎಫ್‌ಐಆರ್

ಕಾಸರಗೋಡು: ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪೈವಳಿಕೆ ಪ್ರದೇಶಕ್ಕೆ ಸಂಬಂಧಿಸಿದಂತೆ ಭಾರತೀಯ ಪೌರತ್ವ ಹೊಂದಿಲ್ಲ ಎಂಬ ಕಾರಣಕ್ಕೆ ಮೊಹಮ್ಮದ್ ಎಂಬ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವಂತೆ ಕೋರಿ ಫಾರ್ಮ್-7ರ ಅಡಿಯಲ್ಲಿ ಸಲ್ಲಿಸಲಾದ ದೂರಿನ ಕುರಿತು ಕಾನೂನುಬದ್ಧ ವಿಚಾರಣೆ ನಡೆಯಿತು.



ದೂರುದಾರರು ವಿಚಾರಣೆಗೆ ಹಾಜರಾಗಿದ್ದರೂ ಅವರ ವಿರುದ್ಧದ ಆರೋಪವನ್ನು ಬೆಂಬಲಿಸಲು ಯಾವುದೇ ಸಾಕ್ಷ್ಯಾಧಾರ ಪುರಾವೆ ಗಳನ್ನು ನೀಡಲು ಸಾಧ್ಯವಾಗಲಿಲ್ಲ. ವಿಚಾರಣೆಯ ಸಮಯದಲ್ಲಿ ದಾಖಲೆಗಳ ಪರಿಶೀಲನೆ ಮತ್ತು ಮಾಹಿತಿ ಸಂಗ್ರಹಣೆಯ ಆಧಾರದ ಮೇಲೆ ಸಲ್ಲಿಸಲಾದ ದೂರು ಸುಳ್ಳು ಮತ್ತು ಆಧಾರರಹಿತವಾಗಿದೆ ಎಂದು ಕಂಡುಬಂದಿದೆ. ಆದ್ದರಿಂದ ಚುನಾವಣಾ ನೋಂದಣಿ ಅಧಿಕಾರಿ (ಇಆರ್‌ಒ) ಮೊಹಮ್ಮದ್ ಅವರ ಹೆಸರನ್ನು ಪ್ರಸ್ತುತ ಮತದಾರರ ಪಟ್ಟಿಯಲ್ಲಿ ಉಳಿಸಿಕೊಳ್ಳಲು ಆದೇಶಿಸಿದ್ದಾರೆ.

ಈ ಕುರಿತು ಸಲ್ಲಿಸಲಾದ ದೂರು ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿಯಿಂದ ಕೂಡಿದೆ. ಆದಕಾರಣ ಅದನ್ನು ಜನತಾ ಪ್ರಾತಿನಿಧ್ಯ ಕಾಯ್ದೆ 1950ರ ಸೆಕ್ಷನ್ 31 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುತ್ತದೆ. ಅದರಂತೆ ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತದೆ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ತಪ್ಪಿತಸ್ಥರೆಂದು ಸಾಬೀತಾದರೆ ಅವರಿಗೆ ಒಂದು ವರ್ಷದ ವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಬಹುದು ಎಂದು ಜಿಲ್ಲಾಧಿಕಾರಿ ಕೆ.ಇನ್ಬಶೇಖರನ್ ಹೇಳಿದ್ದಾರೆ.

ಮತದಾರರ ಪಟ್ಟಿಯ ನಿಖರತೆಯನ್ನು ಖಚಿತಪಡಿಸಿ ಕೊಳ್ಳಲು ನಮೂನೆ-7ರ ಅಡಿಯಲ್ಲಿ ಆಕ್ಷೇಪಣೆ ಸಲ್ಲಿಸುವುದು ಕಾನೂನುಬದ್ಧ ಹಕ್ಕಾಗಿದ್ದರೂ ಸುಳ್ಳು ಮಾಹಿತಿಯನ್ನು ಒದಗಿಸುವ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಉದ್ದೇಶಪೂರ್ವಕವಾಗಿ ದಾರಿತಪ್ಪಿಸುವ ಪ್ರಯತ್ನಗಳು ಕಠಿಣ ಕಾನೂನು ಕ್ರಮಕ್ಕೆ ಒಳಪಡುತ್ತವೆ ಎಂದವರು ಎಚ್ಚರಿಸಿದ್ದಾರೆ.

ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಸುಂಟಿಕೊಪ್ಪದಲ್ಲಿ ನೂತನ ಪೊಲೀಸ್ ವಸತಿ ಗೃಹ ಕಟ್ಟಡದ ಉದ್ಘಾಟನೆ ನೆರವೇರಿಸಿ ಡಾ.ಜಿ. ಪರಮೇಶ್ವರ್

ಪೊಲೀಸ್ ಮನೆಗಳ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕೋರಿಕೆ

ಸುಂಟಿಕೊಪ್ಪ: ರಾಜ್ಯದಲ್ಲಿ ಪೊಲೀಸರಿಗಾಗಿ ಪೊಲೀಸ್ ಗೃಹ ಯೋಜನೆಯನ್ನು 2030ನೇ ಇಸವಿಯವರೆಗೂ ಮುಂದುವರೆಸಲಾಗುತ್ತದೆ ಎಂದು ರಾಜ್ಯ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ.

ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಸುಂಟಿಕೊಪ್ಪದಲ್ಲಿ ಭಾನುವಾರ ನೂತನ ಪೊಲೀಸ್ ವಸತಿ ಗೃಹ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಪೊಲೀಸ್ ಗೃಹ ಯೋಜನೆಯಡಿ ಈಗಾಗಲೇ 40 ಸಾವಿರ ಮನೆಗಳು ಪೂರ್ಣಗೊಂಡಿವೆ. ಇನ್ನು 60 ಸಾವಿರ ಮನೆಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂದರಲ್ಲದೆ, ಈ ಬಗ್ಗೆ ಕೆಲವು ದಿನಗಳ ಹಿಂದೆ ಬಜೆಟ್ ಪೂರ್ವ ಇಲಾಖಾವಾರು ಚರ್ಚೆ ಸಂದರ್ಭ ಹೆಚ್ಚುವರಿ ಪೊಲೀಸ್ ಠಾಣೆಗಳನ್ನು ನೀಡಲು ಸಾಧ್ಯವಾಗದಿದ್ದರೂ ಪೊಲೀಸ್ ಮನೆಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಟ್ಟಿರುವುದಾಗಿ ಹೇಳಿದರು. ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊದಲ ಹಂತದ ಪೊಲೀಸ್ ವಸತಿಗೃಹ ನಿರ್ಮಾಣ ಪೂರ್ಣಗೊಂಡಿದ್ದು, ಇದರಲ್ಲಿ 12 ಮನೆಗಳಿವೆ. ಈಗಾಗಲೇ ಮಡಿಕೇರಿಯಲ್ಲಿ ರೂ.7.5.ಕೋಟಿ ವೆಚ್ಚದಲ್ಲಿ ಪೊಲೀಸ್ ವಸತಿ ಸಮುಚ್ಚಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ವತಿಯಿಂದ ಇದನ್ನು ನಿರ್ಮಿಸಲಾಗುತ್ತಿದೆ ಎಂದು ನುಡಿದರು.

ಪೊಲೀಸ್ ವೇದಿಗಳ ಜೀವನವನ್ನು, ಅವರ ವಸತಿ ಸಮಸ್ಯೆಯನ್ನು ತಾನು ಹತ್ತಿರದಿಂದ ಬಲ್ಲವನಾಗಿದ್ದು, 2015ರಿಂದಲೇ ಈ ಬಗ್ಗೆ ಗಮನಹರಿಸಿ, ಔರಾಗತರ್ ಸಮಿತಿಯನ್ನು ರಚಿಸಿ ಆ ಸಮಿತಿಯ ವರದಿಯನ್ನು ಹಂತ ಹಂತವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪೊಲೀಸ್ ಟೋಪಿ, ವೇತನ ಮತ್ತು ಇತರ ಮೂಲಭೂತ ವ್ಯವಸ್ಥೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುತ್ತಿದೆ ಎಂದು ಪರಮೇಶ್ವರ್ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಡಿಕೇರಿ ವಿಧಾನಸಭಾ ಕ್ಷೇತ್ರ ಶಾಸಕ ಡಾ.ಮಂಥರ್ ಗೌಡ ಅವರು ಮಾತನಾಡಿ, ಕುಶಾಲನಗರ ಪೊಲೀಸ್ ಉಪವಿಭಾಗದಲ್ಲಿ 144 ವಸತಿ ಗೃಹಗಳ ಬೇಡಿಕೆಯಿದ್ದು, ಈಗ 32 ಮಾತ್ರ ಲಭ್ಯವಿದೆ. ಸುಂಟಿಕೊಪ್ಪದಲ್ಲಿ 50 ವಸತಿಗಳ ಪೈಕಿ 12 ನಿರ್ಮಾಣಗೊಂಡಿದ್ದು, ಇನ್ನೂ ವಸತಿ ಗೃಹಗಳು ಬೇಕಾಗಿವೆ. ಜೊತೆಗೆ ಚಿಕ್ಕಳುವಾರದಲ್ಲಿ ಮಿನಿವಿಮಾನ ನಿಲ್ದಾಣಕ್ಕೆ ಕಾಯ್ದಿರಿಸಿದ 108 ಎಕರೆಜಾಗ ಪೊಲೀಸ್ ಇಲಾಖೆಗೆ ಬಂದಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಕೊಡಗಿಗೆ ವಾರಂತ್ಯಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಬರುತ್ತಿದ್ದು, ಪ್ರವಾಸಿಗರಿಗೂ, ಸ್ಥಳೀಯರಿಗೂ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕನಿಷ್ಠ 500 ರಿಂದ 600 ಮಂದಿ ಪೊಲೀಸರ ಅಗತ್ಯವಿದೆ ಎಂದು ಅವರು ಸಚಿವರ ಗಮನಸೆಳೆದರು.

ಕೋಡ್ಲಿಪೇಟೆಗೆ ಪೊಲೀಸ್ ಠಾಣೆ ಬೇಡಿಕೆ ಮಂಡಿಸಿದ ಅವರು, ಕೊಡಗಿನ ಇಲಾಖೆಗೆ ಸಮಗ್ರ ಅಭಿವೃದ್ಧಿಯ ಹಿನ್ನಲೆಯಲ್ಲಿ ಒಂದು ಪ್ಯಾಕೇಜ್ ನೀಡುವಂತೆ ಮನವಿ ಮಾಡಿದರು.

ಇದೇ ಸಂದರ್ಭದ ಗೃಹ ಸಚಿವರನ್ನು ಪೊಲೀಸ್ ಇಲಾಖೆಯ ಪರವಾಗಿ ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಡಾ.ಎಂ.ಬಿ.ಬೋರಲಿಂಗಯ್ಯ ಸನ್ಮಾನಿಸಿದರು.

ರಾಜ್ಯ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಸಿ.ಎಸ್. ಅರುಣ್‌ಮಾಚಯ್ಯ, ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ ಮಾಸ್ಟರ್, ಕೊಡಗು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಸುಂಟಿಕೊಪ್ಪ ಗ್ರಾಮ ಪಂಚಾಯತ್‌ನನಿಕಟಪೂರ್ವಅಧ್ಯಕ್ಷಪಿ.ಆರ್.ಸುನಿಲ್ ಕುಮಾರ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ. ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಬೆಂಗಳೂರು ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿಗಮದ ಮುಖ್ಯ ಅಭಿಯಂತರ ಪಿ.ಬಿ.ಪ್ರಕಾಶ್, ಜಿ.ಪಂ.ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಮಾಜಿ ಸದಸ್ಯ ಪಿ.ಎಂ.ಲತೀಫ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಬೆಟ್ಟಗೇರಿ ಸಮೂಹ ತೋಟ ಮಾಲಕ ಡಿ.ವಿನೋದ್ ಶಿವಪ್ಪ, ಕಾಂಗ್ರೆಸ್ ಮುಖಂಡರಾದ ಕೆ.ಕೆ.ಮಂಜುನಾಥ್ ಕುಮಾರ್, ಕೆ.ಎಂ.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಕುಶಾಲನಗರ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಪಿ.ಚಂದ್ರಶೇಖರ್, ಮಡಿಕೇರಿ ಡಿವೈಎಸ್‌ಪಿ.ಪಿ.ಮೇದಪ್ಪ, ವೃತ್ತ ನಿರೀಕ್ಷಕ ದಿನೇಶ್ ಕುಮಾರ್, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಪಿ.ಮೋಹನ್ ರಾಜ್ ಮತ್ತು ಸಿಬ್ಬಂದಿಗಳು ಬಿಗಿ ಬಂದೋಬಸ್ತ್ ಕಲ್ಪಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಸ್ವಾಗತಿಸಿದರೆ, ಜಿಲ್ಲಾ ಪೊಲೀಸ್‌ನ ಕಾವೇರಮ್ಮ ಮತ್ತು ಲೋಕೇಶ್ ಎಂ.ಎಸ್. ನಿರೂಪಿಸಿ, ವಂದಿಸಿದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 34⁰ 22⁰ | ಉಡುಪಿ 32⁰ 22⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 16, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಅಂತೂ ಇಂತು ನನಸಾಗಿದೆ ಜನರ ಬಹುಕಾಲದ ಕನಸು



ಪುಟ 6

ಉಡುಪಿಯಲ್ಲಿ ವಿಜೃಂಭಣೆಯ ಮಹಾಶಿವರಾತ್ರಿ ಉತ್ಸವ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಂಗಳೂರಿನ ಕದ್ರಿ ಮತ್ತು ಕುದ್ರೋಳಿ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಆಚರಣೆ





ಕರಾವಳಿಯಾದ್ಯಂತ ಶಿವ ದೇವಸ್ಥಾನ ಸಹಿತ ಬಹುತೇಕ ದೇವಾಲಯ, ಭಜನಾ ಮಂದಿರಗಳಲ್ಲಿ ಭಾನುವಾರ ಮಹಾಶಿವರಾತ್ರಿ ಮಹೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಮಂಗಳೂರಿನ ಕದ್ರಿ ಮತ್ತು ಕುದ್ರೋಳಿ ಕ್ಷೇತ್ರದಲ್ಲಿ ಭಕ್ತಸಾಗರ ಕಂಡುಬಂತು. ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಬೆಳಗ್ಗಿನಿಂದಲೇ ಕ್ಷೇತ್ರದತ್ತ ಧಾವಿಸಿದ್ದು ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು.

ಸುತ್ತಮುತ್ತ

ಕಾಜಿಮುಗೇರುನಲ್ಲಿ ಗೇರುತೋಟಕ್ಕೆ ಬೆಂಕಿ: ಸಾವಿರಾರು ರೂ. ನಷ್ಟ

ಬೆಳ್ತಂಗಡಿ: ಗೇರುತೋಟಕ್ಕೆ ಬೆಂಕಿ ಬಿದ್ದ ಪರಿಣಾಮ ಸಾವಿರಾರು ರೂ. ನಷ್ಟ ಉಂಟಾದ ಘಟನೆ ಕರಂಬಾರು ಗ್ರಾಮದ ಕಾಜಿಮುಗೇರು ಎಂಬಲ್ಲಿ ನಡೆದಿದೆ. ಇಲ್ಲಿನ ಎಂ.ಜಿ.ಬಾಪಟ್ ಎಂಬವರ ಗೇರುತೋಟಕ್ಕೆ ಭಾನುವಾರ ಸಂಜೆ ವಿದ್ಯುತ್ ಪರಿವರ್ತಕದಿಂದ ಸಿಡಿದ ಕಿಡಿಗಳ ಪರಿಣಾಮ ಬೆಂಕಿ ಹರಡಿದ್ದು 50 ಕ್ಕಿಂತ ಅಧಿಕ ಗೇರು ಮರಗಳು ಹಾಗೂ ಇತರ ಮರಮಟ್ಟು ಸುಟ್ಟು ಹೋಗಿದೆ. ಅಗ್ನಿಶಾಮಕ ದಳ ಹಾಗೂ ಸ್ಥಳೀಯರು ಬೆಂಕಿ ಹತೋಟಿಗೆ ತರಲು ಸಹಕರಿಸಿದರು.

ಹೇನಡ ಪರಿಸರದಲ್ಲಿ ಚಿರತೆಗಳ ಓಡಾಟ: ಸ್ಥಳೀಯರಿಗೆ ಆತಂಕ

ಬೆಳ್ತಂಗಡಿ: ನಡ ಮತ್ತು ಲಾಯಿಲ ಗ್ರಾಮದ ಗಡಿ ಭಾಗವಾದ ಅಗಳಿಯ ಹೇನಡ್ಕ ಪರಿಸರದಲ್ಲಿ ಶನಿವಾರ



ರಾತ್ರಿ ಚಿರತೆ ತಿರುಗಾಟ ನಡೆಸಿದೆ. ಒಂದು ದೊಡ್ಡ ಚಿರತೆ ಹಾಗೂ ಮರಿ ಚಿರತೆ ಸಂಚರಿಸಿರುವ ಹೆಜ್ಜೆಗಳು ರಸ್ತೆಯಲ್ಲಿ ಕಂಡು ಬಂದಿದ್ದು, ಸ್ಥಳೀಯರಲ್ಲಿ ಆತಂಕ ಹೆಚ್ಚಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಸುಮಾರು 150ಮೀ. ದೂರದಲ್ಲಿ ಹಾಗೂ ಸ್ಥಳೀಯ ಮನೆಗಳಿಂದ 50 ಮೀ.ಪ್ರದೇಶದಲ್ಲಿ ಚಿರತೆ ಸಂಚಾರ ನಡೆಸಿದೆ. ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳ ಪರಿಶೀ ಲನೆ ನಡೆಸಿದ್ದಾರೆ. ಈ ಪರಿಸರದಲ್ಲಿ ಆಗಾಗ ಚಿರತೆಗಳು ತಿರುಗಾಟ ನಡೆಸುವುದು ಮಾಮೂಲಾಗಿದೆ. ಸ್ಥಳೀಯ ವಾಗಿ ಸಾಕು ನಾಯಿಗಳನ್ನು ಗೂಡಿನಿಂದ ಬಿಡುವಂತಿಲ್ಲ, ಜಾನುವಾರುಗಳ ರಕ್ಷಣೆ ಸವಾಲಾಗಿ ಪರಿಣಮಿಸಿದೆ.

ಗ್ಯಾರೇಜ್ ಮುಂಭಾಗ ನಿಲ್ಲಿಸಿದ್ದ ಲಾರಿಯಿಂದ ಬ್ಯಾಟರಿ ಕಳವು: ದೂರು

ಮುಳ್ಳೇರಿಯ: ಗ್ಯಾರೇಜ್ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದ ಲಾರಿಯಿಂದ ಬ್ಯಾಟರಿಗಳನ್ನು ಕಳವುಗೈದಿರುವುದಾಗಿ ಆದೂರು ಪೊಲೀಸರಿಗೆ ದೂರು ನೀಡಲಾಗಿದೆ. ಮಲಪ್ಪುರಂನ ಕಿಳುವರಂಬ ಮಠದಲ್ಲಿ ಲಾರಿ ಮಾಲಕ ಅನಸ್ ಬಾಬು ನೀಡಿದ ದೂರಿನಂತೆ ಆದೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮುಳ್ಳೇರಿಯ ಸೌಪರ್ಣಿಕಾ ಆಟೋ ವರ್ಕ್‌ಶಾಪ್ ಬಳಿ ನಿಲ್ಲಿಸಲಾಗಿದ್ದ ಲಾರಿಯಲ್ಲಿದ್ದ 30 ಸಾವಿರ ರೂ. ಮೌಲ್ಯದ ಎರಡು ಬ್ಯಾಟರಿಗಳನ್ನು ಕಳವುಗೈಯ್ಯಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಣ್ಣಿಗೆ ಮಣ್ಣೆರಚುತ್ತಿದೆ ‘ಮಣ್ಣು ಸಾಗಾಟ’!

ನಿಯಮಗಳಿಲ್ಲಿ ಲೆಕ್ಕಕ್ಕಿಲ್ಲ!

ಕಠಿಣ ಕ್ರಮಕ್ಕೆ ಸಾರ್ವಜನಿಕರ ಆಗ್ರಹ

■ ರಾಜೇಶ್ ಪಟ್ಟೆ

ಪುತ್ತೂರು: ಸಾರ್ವಜನಿಕ ರಸ್ತೆಯಲ್ಲಿ ತೆರೆದ ಸ್ಥಿತಿಯಲ್ಲಿ ಲಾರಿಗಳಲ್ಲಿ ಅಥವಾ ಟಿಪ್ಪರ್‌ಗಳಲ್ಲಿ ಕೆಂಪುಕಲ್ಲು, ಮರಳು, ಮಣ್ಣು, ಜಲ್ಲಿ ಇತ್ಯಾದಿ ಸಾಗಾಟ ಮಾಡುವಾಗ ಟರ್ಪಾಲು ಮುಚ್ಚಿ ಕೊಂಡೊಯ್ಯಬೇಕೆಂಬ ನಿಯಮವಿದೆ. ಆದರೆ ದಕ್ಷಿಣ ಕನ್ನಡ ಸೇರಿದಂತೆ ಕರಾವಳಿಯ ಬಹುತೇಕ ಕಡೆ ಈ ನಿಯಮ ಸಾರಾಸಗಟಾಗಿ ಉಲ್ಲಂಘಿಸಲಾಗುತ್ತಿದೆ.

ಪುತ್ತೂರು ತಾಲೂಕಿನಲ್ಲಂತೂ ನಿತ್ಯ ಇದೇ ಗೋಳಾಗಿಪರಿಣಮಿಸಿದೆ. ಇಲ್ಲಿ ಯಾವ ಈ ನಿಯಮವೂ ಅನ್ವಯಿಸುವುದಿಲ್ಲ!.

ಹೌದು, ಇಲ್ಲಿ ಎಲ್ಲಾ ನಿಯಮಾವಳಿಗಳನ್ನು ಸಾರಾಸಗಟಾಗಿ ಗಾಳಿಗೆ ತೂರಲಾಗುತ್ತಿದೆ. ಅಧಿಕಾರಿಗಳ ಕಣ್ಣಮುಂದೆಯೇ ಮಣ್ಣು ತುಂಬಿದ ಲಾರಿಗಳು ಧೂಳೆಬ್ಬಿಸಿಕೊಂಡು ರಾಜಾರೋಷವಾಗಿ ಸಾಗುತ್ತಿದ್ದರೂ ಯಾವುದೇ ಕ್ರಮವಾಗುತ್ತಿಲ್ಲ. ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಲಾರಿಗಳಲ್ಲಿ ತೆರೆದ ಸ್ಥಿತಿಯಲ್ಲಿ ಮಣ್ಣು ಕೊಂಡೊಯ್ಯುವ ಕಾರಣದಿಂದ ದ್ವಿಚಕ್ರ ಸವಾರರಿಗೆ ಅಥವಾ ಹಿಂದಿನಿಂದ ಬರುವ ವಾಹನಗಳಿಗೆ, ರಸ್ತೆಯಲ್ಲಿ ಸಂಚರಿಸುವ ಪಾದಚಾರಿಗಳಿಗೆ ತೊಂದರೆಯಾಗು ತ್ತದೆ. ಗಾಳಿಗೆ ಲಾರಿಯಲ್ಲಿ ಹೇರಳವಾಗಿರುವ ಮಣ್ಣು ರಸ್ತೆಗೆ ಬಿದ್ದು ಕೆಲವೊಮ್ಮೆ ರಸ್ತೆ ತುಂಬಾ ಹರಡುತ್ತಿದೆ. ಕನಿಷ್ಟ ನೀರು ಹಾಕುವ ಕೆಲಸ ನಡೆಯುತ್ತಿಲ್ಲ. ⋙ ಪುಟ6



ಸಾರ್ವಜನಿಕರ ಕಣ್ಣಿಗೆ ಮಣ್ಣು

ಮಣ್ಣು ತುಂಬಿದ ಲಾರಿಗಳ ನಾಗಾಲೋಟದಿಂದ ರಸ್ತೆ ಬದಿಯಲ್ಲಿ ಸಾಗುವ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ದೂಳಿನಿಂದ ನಿತ್ಯ ಸಮಸ್ಯೆ ಎದುರಿಸುವಂತಾಗಿದೆ.

ಇಷ್ಟ ಬಂದಂತೆ ಸಾಗುತ್ತಿದೆ

ಉದ್ಯೋಗದ ದೃಷ್ಟಿಯಿಂದ ನಾನು ನಿತ್ಯ ನಗರಕ್ಕೆ ದ್ವಿಚಕ್ರ ವಾಹನದ ಮೂಲಕ ಪ್ರಯಾಣಿಸುವವನು. ಗ್ರಾಮಾಂತರಕ್ಕಿಂತಲೂ ನಗರ ಪ್ರದೇಶದಲ್ಲಿ ಮಣ್ಣು ತುಂಬಿದ ಲಾರಿಗಳು ಯಾವುದೇ ಟರ್ಪಾಲುಗಳ ಅಳವಡಿಸದೆ ಇಷ್ಟ ಬಂದಂತೆ ಸಾಗುತ್ತಿರುತ್ತದೆ.

● -ಗುಣಕರ ಸಂಪ್ಯ, ನಿತ್ಯ ಪ್ರಯಾಣಿಕ

ಬಡವರಿಗಷ್ಟೇ ದಂಡ!

ವಿವಿಧ ಕಾರಣಗಳಿಗೆ ನಗರಕ್ಕೆ ತಮ್ಮ ವಾಹನಗಳಲ್ಲಿ ಆಗಮಿಸುವ ಬಡ ಜನತೆ ಹಲವು ಕಡೆಗಳಲ್ಲಿ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ಸಣ್ಣ ಪುಟ್ಟ ತಪ್ಪಿಗೂ ದಂಡ ತೆರಬೇಕಾಗುತ್ತದೆ. ಆದರೆ ನಿಯಮಗಳನ್ನು ಗಾಳಿಗೆ ತೂರಿ ದೊಡ್ಡ ಮಟ್ಟದ ವ್ಯವಹಾರ ನಡೆಸುವ ಬಿಲ್ಡರ್‌ಗಳಿಗೆ ಅಧಿಕಾರಿಗಳೇ ಥಂಡ ಹೊಡೆಯುತ್ತಾರೆ ಎಂಬುದು ಸಾರ್ವಜನಿಕರ ದೂರು.

ಕಾಸರಗೋಡಿನಲ್ಲಿ ಹೆಚ್ಚುತ್ತಿದೆ ತಾಪಮಾನ

ಕಾರ್ಮಿಕರಿಗೆ ಮಧ್ಯಾಹ್ನ ಅವಧಿಯಲ್ಲಿ ವಿಶ್ರಾಂತಿ!

ಸುತ್ತೋಲೆ ಹೊರಡಿಸಿದ ಜಿಲ್ಲಾಡಳಿತ

ಕಾಸರಗೋಡು: ಜಿಲ್ಲೆಯಲ್ಲಿ ಸೂರ್ಯನ ತಾಪಮಾನ ದಿನ ಕಳೆದಂತೆ ಭಾರೀ ಏರಿಕೆಯಾಗುತ್ತಿದೆ. ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆ ಬಿಸಿಲಿಗೆಮೈಯೊಡ್ಡಿಕೆಲಸನಿರ್ವಹಿಸುವಕಾರ್ಮಿಕರ ಕೆಲಸದ ಸಮಯದಲ್ಲಿ ಕೇರಳ ಸರಕಾರ ಬದಲಾವಣೆ ತಂದಿದ್ದು ಅದರಂತೆ ಜಿಲ್ಲೆಯಲ್ಲಿ ಜಿಲ್ಲಾಡಳಿತ ಸುತ್ತೋಲೆ ಹೊರಡಿಸಿದೆ.

ಬಿಸಿಲಿನಲ್ಲಿ ಕೆಲಸ ನಿರ್ವಹಿಸುವವರಿಗೆ ಮಧ್ಯಾಹ್ನ 12 ಗಂಟೆಯಿಂದ ಅಪರಾಹ್ನ 3 ಗಂಟೆವರೆಗೆ ವಿಶ್ರಾಂತಿ ನೀಡಲಾಗಿದೆ. ಈ ವ್ಯವಸ್ಥೆ ಈಗಾಗಲೇ ಜಾರಿಗೆ ಬಂದಿದ್ದು ಮೇ 20ರ ತನಕ ಮುಂದುವರಿಯಲಿದೆ ಎಂದು ಸರಕಾರದ ಆದೇಶದಲ್ಲಿ ತಿಳಿಸಲಾಗಿದೆ. ಬಿಸಿಲಿನಲ್ಲಿ ಕೆಲಸ ನಿರ್ವಹಿಸುವವರಿಗೆ ಸೂರ್ಯಾಘಾತ ಸಂಭವಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

ಬೆಳಗ್ಗೆ 7ರಿಂದ ರಾತ್ರಿ 7 ವರೆಗಿನ ಸಮಯದಲ್ಲಿ ಕೆಲಸಗಾರರು ವಿಶ್ರಾಂತಿ ಸಮಯ ಕಳೆದು 8 ಗಂಟೆ ಕೆಲಸ ನಿರ್ವಹಿಸಬೇಕೆಂದೂ ತಿಳಿಸಲಾಗಿದೆ. ಈ ನಿಯಮ ಖಚಿತಪಡಿಸುವಂತೆ



ಎಚ್ಚರಿಕೆ ನೀಡಿದೆ

ಹೊಸ ನಿಯಮ ಪಾಲನೆಯ ಹಿನ್ನೆಲೆ ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಮತ್ತು ವೆಳ್ಳರಿಕುಂಡು ತಾಲೂಕುಗಳಲ್ಲಿ ಆಯಾ ತಾಲೂಕುಗಳ ಕಾರ್ಮಿಕ ಅಧಿಕಾರಿಗಳಿಗೆ ಮಹತ್ತರ ಜವಾಬ್ದಾರಿ ವಹಿಸಲಾಗಿದೆ. ಒಂದು ವೇಳೆ ಮಧ್ಯಾಹ್ನದ ಬಿಸಿಲಿಗೆ ಕಾರ್ಮಿಕರಲ್ಲಿ ಯಾರೇ ಆಗಲಿ ಕೆಲಸ ಮಾಡಿಸಿದಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟ ಇಲಾಖೆ ಸ್ಪಷ್ಟ ಎಚ್ಚರಿಕೆ ನೀಡಿದೆ.

ಲೇಬರ್ ಕಮೀಷನರ್ ಎಲ್ಲಾ ಜಿಲ್ಲಾಡಳಿತಗಳಿಗೆ ಸೂಚಿಸಿದ್ದು, ಈ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

ಹೊಸ ಸೇತುವೆ ನಿರೀಕ್ಷೆಯಲ್ಲಿ ಕಟೀಲಿನ ನಂದಿನಿ ನದಿ

ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನವನ್ನು ಸಂಪರ್ಕಿಸುವ ನಂದಿನಿ ನದಿಗೆ ಹಾಕಲಾಗಿರುವ ಸೇತುವೆಗೆ ದಶಕಗಳೇ ಕಳೆದು ಹೋಗಿದೆ. ದೇಗುಲಕ್ಕೆ ಬರುವ ಭಕ್ತರ, ವಾಹನಗಳ ಸಂಖ್ಯೆ ಏರುತ್ತ ಹೋಗುತ್ತಿದೆ. ರಸ್ತೆ ಇಕ್ಕಟ್ಟಾಗಿ ಕಟೀಲು ದೇಗುಲದ ಬಳಿ ಯಾವತ್ತೂ ವಾಹನ ಬ್ಲಾಕ್ ಆಗಿ ಎಲ್ಲರೂ ತಲೆಬಿಸಿ ಮಾಡಿಕೊಳ್ಳುವ ಅವಸ್ಥೆ. ಇಂತಹ ಪರಿಸ್ಥಿತಿಯಲ್ಲಿ ನಂದಿನಿ ನದಿಗೆ ಹಾಕಲಾಗಿರುವ ಸೇತುವೆ ಹೊಸತಾಗದಿದ್ದರೆ ದೊಡ್ಡ ಸಮಸ್ಯೆ ಎದುರಾಗುವ ಎಲ್ಲ ಸಾಧ್ಯತೆಗಳೂ ಇವೆ.

ಸೇತುವೆ ನಿರ್ಮಾಣಕ್ಕೆ ಮನಸ್ಸು ಮಾಡಲಿ

ಮಂತ್ರಿಗಳು, ಅಧಿಕಾರಿಗಳು, ಗಣ್ಯರು ಅವರು ಇವರು ಎಂದು ಸಾಕಷ್ಟು ಮಂದಿ ಬಂದು ಹೋಗುವಾಗ ಅವರಿಗೂ ಈ ಸಮಸ್ಯೆ ಯಾಕೆ ಅರ್ಥವಾಗುತ್ತಿಲ್ಲವೋ. ಆದಷ್ಟು ಶೀಘ್ರ ಹೊಸ ಸೇತುವೆ ನಿರ್ಮಾಣಕ್ಕೆ ಮನ ಮಾಡಲಿ ಎಂಬುದು ಮನವಿ.



ಎಚ್ಚೆತ್ತುಕೊಳ್ಳಿ

ಏಳೆಂಟು ದಶಕಗಳ ಹಿಂದಿನ ಸೇತುವೆಯಿದು. ಹಾಗಾಗಿ ಅಗಲವಾದ ಸೇತುವೆ ಅಥವಾ ಇನ್ನೊಂದು ಸೇತುವೆ ಆಗಲೇ ಬೇಕಾಗಿದೆ. ಈ ಬಗ್ಗೆ ಶಾಸಕರು, ಸಂಸದರು ಅಥವಾ ಯಾರಾದರೂ ಜನಪ್ರತಿನಿಧಿಗಳು ಮನಸ್ಸು ಮಾಡಿ ಕ್ರಿಯಾಶೀಲವಾಗದೆ ಹೋದರೆ ನಾಳೆ ಸೇತುವೆ ಅಪಾಯಕ್ಕೆ ಸಿಲುಕಿದರೆ ಜನರ ಹಿಡಿಶಾಪಕ್ಕೆ ಗುರಿಯಾಗಬೇಕಾಗುತ್ತದೆ.

ಭರ್ಜರಿ ಬೇಡಿಕೆಯ ಬೆನ್ನಲ್ಲಿಯೇ ಇಳುವರಿ ಕುಸಿತದ ಭೀತಿ

ಕಲ್ಲಂಗಡಿ ಬೆಳೆಗೆ ಕಾಡುತ್ತಿದೆ ಶಿಲೀಂದ್ರ ಬಾಧೆ!

ಉಡುಪಿ: ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವ ಬೆನ್ನಲ್ಲೇ ಕಲ್ಲಂಗಡಿ ಹಣ್ಣಿಗೆ ಭರ್ಜರಿ ಬೇಡಿಕೆ ಬಂದಿದೆ. ಮತ್ತೊಂದೆಡೆ ಬೈಂದೂರು ಭಾಗದಲ್ಲಿ ಬೆಳೆಯುವ ಕಲ್ಲಂಗಡಿ ಬೆಳೆಗೆ ಶಿಲೀಂಧ್ರ ರೋಗ ಬಾಧೆ ಉಂಟಾಗಿದ್ದು, ಈಗಾಗಲೇ ಕಟಾವಿಗೆ ಸಿದ್ಧವಾಗಿರುವ ಕಲ್ಲಂಗಡಿ ಬೆಳೆ ಹಾನಿ ಉಂಟಾಗಿದೆ.

ಇಳುವರೀ ಭಾರೀ ಕುಸಿತ

ಶಿಲೀಂಧ್ರ ಸೋಂಕಿನಿಂದ ಬಳ್ಳಿಗಳು ಒಣಗಿ ಹೋಗುತ್ತಿವೆ. ಆದರಿಂದ ಇಳುವರಿ ಕುಸಿತವಾಗುವುದರ ಜೊತೆಗೆ ಬಳ್ಳಿಯೇ ಸತ್ತು ಹೋಗುತ್ತಿದೆ. ಈಗಾಗಲೇ ಕೆಲವೆಡೆ ಕಲ್ಲಂಗಡಿ ಕಟಾವು ಆರಂಭವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಇಳುವರಿ ಭಾರೀ ಕುಸಿತವಾಗಿದೆ. ಹೂಮಿಡಿ ಕಾಣಿಸಿಕೊಳ್ಳುವ ಸಂದರ್ಭ ರೋಗ ತಗುಲಿರುವ ಕಾರಣ ಕಲ್ಲಂಗಡಿ ಹಣ್ಣು ಬೆಳವಣಿಗೆಯಾಗುತ್ತಿಲ್ಲ. ಕೆಲವೇ ದಿನಗಳಲ್ಲಿ ಕಟಾವು ಆರಂಭವಾಗಲಿರುವುದರಿಂದ ಬಳ್ಳಿಗಳಿಗೆ ಔಷಧಿ ಸಿಂಪಡಿಸದ ಕಾರಣದಿಂದ ರೋಗ ಬಾಧೆ ಹೆಚ್ಚಾಗಿ, ಕೃಷಿಕರು. ಒಂದೊಂದು ಬಳ್ಳಿಗಳಲ್ಲಿ ಕಾಣಿಸಿಕೊಳ್ಳುವ ರೋಗ ಹೊಲದ ತುಂಬಾ ಹರಡುತ್ತಿದೆ.



ರೋಗಕ್ಕೆ ಕಾರಣ ಏನು?

ಕಲ್ಲಂಗಡಿ ಬೆಳೆಗೆ ಅಂಟು ಕಾಂಡದ ರೋಗ ಬಾಧಿಸಿರುವುದಕ್ಕೆ ಹವಾಮಾನ ವೈಪರೀತ್ಯ, ನೀರಾವರಿ ನಿರ್ವಹಣೆ ಕಾರಣವಾಗಿರ ಬಹುದೆಂದು ತಜ್ಞರು ವಿಶ್ಲೇಷಿಸಿದ್ದಾರೆ. ಬಳ್ಳಿಗಳ ಬೇರಿನ ಜಾಗದಲ್ಲಿ ಅತಿಯಾದ ತೇವಾಂಶ ಇದ್ದರೆ ಶಿಲೀಂಧ್ರ ರೋಗಗಳು ಬೇಗ ಕಾಡುತ್ತವೆ. ಒಂದು ಬಳ್ಳಿಯಲ್ಲಿ ರೋಗ ಕಾಣಿಸಿಕೊಂಡರೆ ಸಸ್ಯ ಹೇನು ಮತ್ತು ಕೆಲವು ಕೀಟಗಳಿಂದ ಇಡೀ ಬಳ್ಳಿಗಳಿಗೆ ಹರಡುತ್ತದೆ.

ಬೆಳೆಗಳ ವಿವರ

ಈ ಬಾರಿ ಕಪ್ಪು ಕಲ್ಲಂಗಡಿ ಕೆ.ಜಿಗೆ ರೂ.16ರಿಂದ ರೂ.20ರಷ್ಟಿದೆ. ನಾಮಧಾರಿ ತಳಿಯ ಕಲ್ಲಂಗಡಿಗೆ ಕೆ.ಜಿ. ಗೆ ರೂ.14 ರಿಂದ ರೂ. 17 ರೂ.ವರೆಗೆ ಇದೆ.

ಸುತ್ತಮುತ್ತ



ಮುಲ್ಕಿ ಬಳಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಾನದಲ್ಲಿ ಶಿವರಾತ್ರಿ ಪ್ರಯುಕ್ತ ಶ್ರೀದೇವಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

ಪುನರೂರು ಮಹಾ ಶಿವರಾತ್ರಿ, ಪೂಜೆ ಭಜನೆ

ಕಿನ್ನಿಗೋಳಿ: ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಶ್ರೀ ಕ್ಷೇತ್ರದಲ್ಲಿ ಸುರ್ಯೋದಯದಿಂದ ಸೂರ್ಯಾಸ್ತ



ತನಕ ಭಜನಾ ಕಾರ್ಯಕ್ರಮ ನಡೆಯಿತು. ಆಡಳಿತ ಮಂಡಳಿಯ ಅಧ್ಯಕ್ಷ ಪಟೇಲ್ ವಾಸುದೇವ ರಾವ್ , ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ರವಿ ಶೆಟ್ಟಿ ಪುನರೂರುಗುತ್ತು, ಪಟೇಲ್ ವಿಶ್ವನಾಥ ರಾವ್, ಗೋಪಿನಾಥ ರಾವ್ , ಸುಧಾಕರ ರಾವ್, ಕೃಷ್ಣ ಮೂರ್ತಿ ಭಟ್ , ಸುರೇಶ್ ರಾವ್ ನೀರಳಿಕೆ ಶಿವಪ್ರಸಾದ್ ಉಪಸ್ಥಿತರಿದ್ದರು,

ಅಗ್ರಹಾರ: ಸಾಮೂಹಿಕ ಸಂಜೀವಿನಿ ಮೃತ್ಯುಂಜಯ ಹೋಮ

ಸುಬ್ರಹ್ಮಣ್ಯ: ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದ ಆಡಳಿತಕ್ಕೊಳಪಟ್ಟ ಅಗ್ರಹಾರ ಸೋಮನಾಥೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ



ಮಹೋತ್ಸವವು ಭಕ್ತಿ ಸಡಗರದಿಂದ ನಡೆಯಿತು. ರಾತ್ರಿ ಶ್ರೀ ಸೋಮನಾಥ ದೇವರಿಗೆ ವಿಶೇಷ ಅಭಿಷೇಕ, ರಂಗಪೂಜೆ ಹಾಗೂ ಮಹಾ ಮಂಗಳಾರತಿ, ನಂತರ ಅನ್ನಸಂತರ್ಪಣೆ ನಡೆಯಿತು. ಶಿವರಾತ್ರಿಯಂದು ಬೆಳಗ್ಗೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಸಾಮೂಹಿಕ ಸಂಜೀವಿನಿ ಮೃತ್ಯುಂಜಯ ಹೋಮ ನೆರವೇರಿತು. ಅನಂತರ ಹೋಮದ ಪೂರ್ಣಾಹುತಿ ನೆರವೇರಿತು. ಬಳಿಕ ಮಹಾಪೂಜೆ ನಡೆದು ಅನ್ನಸಂತರ್ಪಣೆ ನಡೆಯಿತು. ಸಂಜೆ ವಿವಿಧ ಭಜನಾ ತಂಡಗಳಿಂದ ಕುಣಿತ ಭಜನೆ ನೆರವೇರಿತು. ಭಜನೆ ನೆರವೇರಿಸಿದ ತಂಡಗಳಿಗೆ ಶ್ರೀ ಮಠದ ಆಡಳಿತಾಧಿಕಾರಿ ಸುದರ್ಶನ ಜೋಯಿಸ ಪ್ರಸಾದ ನೀಡಿ ಗೌರವಿಸಿದರು.

ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ರಾಧಾಕೃಷ್ಣ ಬೊಳ್ಳೂರು ನೇಮಕ

ಸುಳ್ಯ: ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ರಾಧಾಕೃಷ್ಣ ಬೊಳ್ಳೂರು ಅವರನ್ನು ನೇಮಕ ಮಾಡಿ ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಒಂದೂಕಾಲು ವರ್ಷಗಳ ಹಿಂದೆ ರಾಧಾಕೃಷ್ಣ ಬೊಳ್ಳೂರು ನೇಮಕಗೊಂಡಾಗ ವ್ಯಕ್ತವಾದ ಆಕ್ಷೇಪದ ಹಿನ್ನೆಲೆಯಲ್ಲಿ ಹೊಸ ಬ್ಲಾಕ್ ಅಧ್ಯಕ್ಷರ ನೇಮಕಾತಿ ವಿಚಾರ ನನೆಗುದಿಗೆ ಬಿದ್ದಿತ್ತು.



ಆ ಬಳಿಕ ಎರಡೆರಡು ಬಾರಿ ವೀಕ್ಷಕರು ಬಂದು ಕಾರ್ಯಕರ್ತರ ಅಭಿಪ್ರಾಯ ಪಡೆದು ಬೊಳ್ಳೂರು ಪರವಾಗಿ ವರದಿ ನೀಡಿದ್ದರೂ ನೇಮಕಾತಿ ಆಗಿರಲಿಲ್ಲ. ಕಳೆದ ತಿಂಗಳು ಡಿ.ಕೆ. ಶಿವಕುಮಾರ್ ಮಂಗಳೂರಿಗೆ ಬಂದಿದ್ದಾಗ ಸುಳ್ಯದ ಹಿರಿಯ ಕಾಂಗ್ರೆಸ್ ನಾಯಕರುಗಳ ಜತೆ ಮಾತುಕತೆ ನಡೆಸಿದ್ದರಲ್ಲದೆ, ಅಂತಿಮ ಅಧಿಕಾರವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಮತ್ತು ಲೋಕಸಭಾ ಅಭ್ಯರ್ಥಿಯಾಗಿದ್ದ ಪದ್ಮರಾಜ್ ಆರ್. ಪೂಜಾರಿಯವರಿಗೆ ನೀಡಿದ್ದರು. ಅದರಂತೆ ಅವರು ಎಲ್ಲರೊಂದಿಗೆ ಮಾತುಕತೆ ನಡೆಸಿ ಇದೀಗ ರಾಧಾಕೃಷ್ಣ ಬೊಳ್ಳೂರು ಅವರನ್ನು ಶಿಫಾರಸು ಮಾಡಿದ ಮೇರೆಗೆ ಕೆ.ಪಿ.ಸಿ.ಸಿ. ಅಧ್ಯಕ್ಷರು ರಾಧಾಕೃಷ್ಣ ಬೊಳ್ಳೂರು ಅವರನ್ನು ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.







ಉಪ್ಪಿನಂಗಡಿಯಲ್ಲಿ ಮಖೆ ಜಾತ್ರೆ, ಶಿವ ಪಂಚಾಕ್ಷರಿ ಜಪಯಜ್ಞ | ಚಾರ್ವಾಕದಿಂದ ಪಂಜಕ್ಕೆ ಪಾದಯಾತ್ರೆ

ದ.ಕ.: ವಿವಿಧ ದೇಗುಲಗಳಲ್ಲಿ ವಿಜೃಂಭಣೆಯ ಶಿವರಾತ್ರಿ ಉತ್ಸವ

ಉಪ್ಪಿನಂಗಡಿ/ ಸುಳ್ಯ/ಮುಲ್ಕಿ/ ಸುಬ್ರಹ್ಮಣ್ಯ: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ದೇಗುಲಗಳಲ್ಲಿ ಮಹಾಶಿವರಾತ್ರಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಪುರಾಣ ಪ್ರಸಿದ್ಧ ಮಹತೋಭಾರ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಸ್ಥಾನದಲ್ಲಿ ರವಿವಾರ ಶಿವರಾತ್ರಿ ಮಖೆ ಜಾತ್ರೆಯ ಪ್ರಯುಕ್ತ ಮಹಾ ಶಿವ ಪಂಚಾಕ್ಷರಿ ಜಪ ಯಜ್ಞ ನಡೆಯಿತು.

ಕ್ಷೇತ್ರದ ತಂತ್ರಿ ವೇ.ಮೂ. ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ, ಪವಿತ್ರಪಾಣಿ ಶ್ರೀ ಕರಾಯ ವಿಷ್ಣುಮೂರ್ತಿ ಕುದ್ದಣ್ಣಾಯರ ಉಪಸ್ಥಿತಿಯಲ್ಲಿ ವೈದಿಕರ ತಂಡದಿಂದ ಶಿವ ಪಂಚಾಕ್ಷರಿ ಜಪ ಯಜ್ಞವು ನಡೆಯಿತು. ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ರವರು ಯಜ್ಞ ಕರ್ತೃವಾಗಿ ಭಾಗವಹಿಸಿದ್ದರು. ಕ್ಷೇತ್ರಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಮುಂಜಾನೆ ಉಪಾಹಾರ ಹಾಗೂ ಮಧ್ಯಾಹ್ನ ಅನ್ನಂತರ್ಪಣೆಯು ನಡೆಯಿತು. ಶಿವರಾತ್ರಿ ಮಖೆ ಜಾತ್ರೆಯ ಪ್ರಯುಕ್ತ ರಾತ್ರಿ ರುದ್ರಪಾರಾಯಣ, ಬಲಿ ಹೊರಟು ಉತ್ಸವ, ಮಹಾಪೂಜೆ ನಡೆಯಿತು.

ಈ ಸಂಧರ್ಭದಲ್ಲಿ ದೇವಳದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ವೆಂಕಪ್ಪ ಪೂಜಾರಿ ಮರುವೇಲು, ಡಾ ರಮ್ಯ ರಾಜಾರಾಮ್, ಸೋಮಾನಾಥ, ದೇವಿದಾಸ್ ರೈ, ಹರೀಶ್ ಉಪಾಧ್ಯಾಯ, ಅನಿತಾ ಕೇಶವ ಗೌಡ, ಜಿ. ಕೃಷ್ಣ ರಾವ್, ಬಿ. ಗೋಪಾಲಕೃಷ್ಣ ರೈ, ಮಾಜಿ ಅಧ್ಯಕ್ಷ ಕರುಣಾಕರ ಸುವರ್ಣ, ಮಾಜಿ ಸದಸ್ಯರಾದ ಕಂಗ್ವೆ ವಿಶ್ವನಾಥ ಶೆಟ್ಟಿ, ಸುಂದರ ಗೌಡ, ಡಾ. ರಾಜಾರಾಮ ಕೆ.ಬಿ, ಜಯಂತ ಪೊರೋಳಿ, ಪ್ರಮುಖರಾದ ಕೈಲಾರ್ ರಾಜಗೋಪಾಲ ಭಟ್, ಮಾಧವ ಆಚಾರ್ಯ, ವಿದ್ಯಾಧರ ಜೈನ್, ಶರತ್ ಕೋಟೆ, ಅಶೋಕ್ ಕುಮಾರ್ ರೈ ಎ. ಭಾಗವಹಿಸಿದ್ದರು.



ಸುಳ್ಯದಲ್ಲಿ ಮಹಾಶಿವರಾತ್ರಿ ಉತ್ಸವ

ಸುಳ್ಯ ತಾಲೂಕಿನ ಶಿವ ಕ್ಷೇತ್ರ ಹಾಗೂ ಪಂಜ ಸೀಮೆ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಶನಿವಾರ ಮಹಾಶಿವರಾತ್ರಿ ಆಚರಣೆ ವಿವಿಧ ವೈದಿಕ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು. ಮುಂಜಾನೆಯಿಂದ ರಾತ್ರಿ ತನಕ ವಿವಿಧ ಬಜನಾ ತಂಡಗಳಿಂದ ಭಜನಾ ಸಂಕೀರ್ತನೆ ನಡೆದು ಬಳಿಕ ಶ್ರೀ ದೇವರಿಗೆ ಏಕಾದಶರುದ್ರಾಭಿಷೇಕ, ಬಿಲ್ವಾರ್ಚನೆ, ರುದ್ರ ಪಾರಾಯಣ ನಡೆದು ಬಳಿಕ ಮಹಾಪೂಜೆ ನಡೆದು ಮಧ್ಯಾಹ್ನ ಸರ್ವಸೇವೆ, ಶಿವಪೂಜೆ, ಮಹಾಪೂಜೆ, ಬಿಲ್ವಾರ್ಚನೆ ರುದ್ರಾಭಿಷೇಕ, ರಾತ್ರಿ ಶಿವಪೂಜೆ, ಮಹಾಪೂಜೆ, ಬಿಲ್ವಾರ್ಚನೆ, ರುದ್ರಾಭಿಷೇಕ ಸೇವೆಗಳು ನಡೆಯಿತು.

ಪಾದಯಾತ್ರೆ ಶ್ರೀ ಕಪಿಲೇಶ್ವರ ದೇವಸ್ಥಾನ ಚಾರ್ವಾಕ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಡಾ. ಧರ್ಮಪಾಲ ಕರಂದ್ಲಾಜೆ ಹಾಗೂ ಮಾಜಿ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಮೋಹನ ಗೌಡ ಇಡ್ಯಡ್ಕ ಇವರ ನೇತೃತ್ವದಲ್ಲಿ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಹಾಗೂ ಚಾರ್ವಾಕದ ಭಕ್ತರು ಹಾಗೂ ಊರ ಭಕ್ತರು ಪಾದಯಾತ್ರೆಯ ಮೂಲಕ ಚಾರ್ವಾಕ, ಎಡಮಂಗಲ, ಪುಳಿಕುಕ್ಕು ಮಾರ್ಗವಾಗಿ ಪಂಜ ಸೀಮೆ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲಕ್ಕೆ ಪಾದಯಾತ್ರೆಯಲ್ಲಿ ಆಗಮಿಸಿದರು. ಪಂಜ ಸಿಎ ಬ್ಯಾಂಕ್ ಬಳಿ ಅವರನ್ನು ದೇವಳದ ವತಿಯಿಂದ ಸ್ವಾಗತಿಸಲಾಯಿತು. ಬಳಿಕ ವ್ಯವಸ್ಥಾಪನಾ ಸಮಿತಿಯವರು, ಭಕ್ತರು ಪಾದಯಾತ್ರೆಯಲ್ಲಿ ದೇವಳಕ್ಕೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭ ಪಂಜ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸಂತೋಷ್ ರೈ ಪಲ್ಲತ್ತಡ್ಕ, ಧರ್ಮಪಾಲ ನಾಯ್ಕ ಗರಡಿ, ಧರ್ಮಪಾಲ ಗೌಡ ಮರಕ್ಕಡ, ಮಾಯಿಲಪ್ಪ ಗೌಡ ಪಟ್ಟೆ, ಮಾಲಿನಿ ಕುದ್ವ, ಪವಿತ್ರ ಮಲ್ಲೆಟ್ಟಿ, ಗೌರವ ಸಲಹೆಗಾರ ಪರಮೇಶ್ವರ ಬಿಳಿಮಲೆ, ಚಾರ್ವಾಕ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಧರ್ಮಪಾಲ ಗೌಡ ಕರಂದ್ಲಾಜೆ, ಮಾಜಿ ಅಧ್ಯಕ್ಷ ಮೋಹನ ಗೌಡ ಇಡ್ಯಡ್ಕ, ಪೈಂದೋಡಿ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಗೌಡ ಕುದ್ವ, ಪ್ರಮುಖರಾದ ಲಿಗೋಧರ ಆಚಾರ್ಯ, ನೇಮಿರಾಜ ಪಲ್ಲೋಡಿ, ನಾರಾಯಣ ಕೃಷ್ಣನಗರ, ಲಕ್ಷ್ಮಣ ಗೌಡ ಬೊಳ್ಳಾಜೆ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು. ಅಲ್ಲದೇ ಅಜ್ಜಾವರ ಗ್ರಾಮ ತುದಿಯಡ್ಕ ದಲ್ಲಿಯು ವಿಶೇಷಪೂಜೆ ನಡೆಯಿತು.

ಆರ್‌ಎಸ್‌ಎಸ್‌ನಿಂದ ಘೋಷ್ ವಾದನ

ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಶ್ರೀ ಮಹಾಗಣಪತಿ ಸದಾಶಿವ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಹಿನ್ನಲೆಯಲ್ಲಿ ವಿಶೇಷ ಪೂಜೆ ಸಂಧರ್ಭದಲ್ಲಿ ಆರೆಸ್ಸೆಸ್ ವತಿಯಿಂದ ಘೋಷ ವಾದನ ನಡೆಯಿತು.

ದೇಂದಡ್ಕದಲ್ಲಿ ಉತ್ಸವ ಬಲಿ

ಮುಲ್ಕಿ ಬಳಿಯ ಪುತ್ತೂರು ದೇಂದಡ್ಕ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಶಿವರಾತ್ರಿ, ವಾರ್ಷಿಕ ಜಾತ್ರೆ ಅಂಗವಾಗಿ ಧ್ವಜಾರೋಹಣ, ಉತ್ಸವ ಬಲಿ ಕ್ಷೇತ್ರದ ತಂತ್ರಿ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಸುಬ್ರಹ್ಮಣ್ಯ ಭಟ್ ನೇತೃತ್ವದಲ್ಲಿ ನಡೆಯಿತು. ಧಾರ್ಮಿಕ ಕಾರ್ಯಕ್ರಮ ಅಂಗವಾಗಿ ಬೆಳಿಗ್ಗೆ ವಿಶೇಷ ಪ್ರಾರ್ಥನೆ, ಶ್ರೀ ದೇವರ ಧ್ವಜಾರೋಹಣ ನಡೆಯಿತು.

ಕುಂಜಾರಗಿರಿ ವಿಜೃಂಭಣೆ ಮಹಾಶಿವರಾತ್ರಿ

ಮುಲ್ಕಿ ಅತಿಕಾರಿಬೆಟ್ಟು ಕುಂಜಾರಗಿರಿ ಶ್ರೀ ಮಹಾಲಿಂಗೇಶ್ವರ ಶಾಸ್ತಾವು ದೇವಸ್ಥಾನದಲ್ಲಿ ಮಹಾಶಿವರಾತ್ರಿ ಉತ್ಸವಕ್ಕೆ ಚಾಲನೆ ನೀಡಲಾಯಿತು ಮಹಾಶಿವರಾತ್ರಿ ಪ್ರಯುಕ್ತ ಭಾನುವಾರ ಬೆಳಿಗ್ಗೆ 6ರಿಂದ ಮರುದಿನ ಬೆಳಿಗ್ಗೆ 6 ರವರೆಗೆ ವಿವಿಧ ಭಜನಾ ಮಂಡಳಿಗಳಿಂದ ಅಹೋರಾತ್ರಿ ಭಜನಾ ಯಜ್ಞ ನಡೆಯಿತು. ದಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ಅರ್ಚಕ ಶ್ರೀಕಾಂತ್ ಭಟ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಭಜನಾ ಕಾರ್ಯಕ್ರಮಕ್ಕೆ ರೇಖಾ ಮಧುಕರ ಶೆಟ್ಟಿ ಮಾನಂಪಾಡಿ ದೀಪಾ ಬೆಳಗಿಸಿ ಚಾಲನೆ ನೀಡಿದರು. ಈ ಸಂದರ್ಭ ಗೋಪಿನಾಥ ಪಡಂಗ, ಗಂಗಾಧರ ಶೆಟ್ಟಿ ಬರ್ಕೆ ತೋಟ,ಮನೋಹರ ಕೋಟ್ಯಾನ್ ,ರಂಗನಾಥ ಶೆಟ್ಟಿ,ಶೇಖರ ಕೊಲಕಾಡಿ, ರಂಜನ್ ಶೆಟ್ಟಿ ಕೆಂಪುಗುಡ್ಡೆ, ಅಣ್ಣು ಕೋಟ್ಯಾನ್ ಮೈಲೊಟ್ಟು ಮತ್ತಿತರರು ಉಪಸ್ಥಿತರಿದ್ದರು. ಫೆ. 16ರಂದು ರಾತ್ರಿ ಯುವಕ ಸಂಘದ ವಾರ್ಷಿಕೋತ್ಸವದ ಅಂಗವಾಗಿ ದಿ. ರಾಮ ಮಾಸ್ಟರ್ ಕೊಲಕಾಡಿ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು ಡಾ. ರಾಧಾಕೃಷ್ಣ ಶಾಸ್ತ್ರಿ ಪಡುಬಿದ್ರೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಮಾನಪಾಡಿ ಶ್ರೀ ವೀರಭದ್ರ ದೇವಸ್ಥಾನದ ಆಡಳಿತ ಮೊಕ್ತೇಸರ ಪುರಂದರ ಶೆಟ್ಟಿಗಾರ್, ರಾಷ್ಟ್ರೀಯ ಫೆಲೋಶಿಪ್ ಪ್ರಶಸ್ತಿ ಪುರಸ್ಕೃತ ಸುರೇಶ್ ಜೆ ಕೊಲಕಾಡಿ, ನಾಗೇಶ್ ಪ್ರಸಾದ್ ಚೆನ್ನೈ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ದೈವರಾದಕ ವಾಸು ಮುಖಾರಿ ಕಕ್ವ, ಸಾಹಿತಿ ಶಂಕರ್ ಪಡಂಗ, ರಮಾನಂದ ಕೋಟ್ಯಾನ್ ಕೊಲಕಾಡಿ ರವರಿಗೆ ಗೌರವ ಸನ್ಮಾನ ಹಾಗೂ ಉನ್ನತ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ಫೆ. 17ರಂದು ರಾತ್ರಿ 8ಕ್ಕೆ ನಾಟಕ ಪ್ರದರ್ಶನ ನಡೆಯಲಿದೆ.

ಉಜಿರೆ ಶ್ರೀ ಜನಾರ್ದನ ದೇಗುಲದಲ್ಲಿ ರುದ್ರಾಧ್ಯಾಯದ ಸಾಮೂಹಿಕ ಪಠಣ



ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಮಂಜುಳೇಶನ ಸನ್ನಿಧಿಯಲ್ಲಿ ಶ್ರೀ ಮಹಾಶಿವರಾತ್ರಿ ಪ್ರಯುಕ್ತ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರ ನೇತೃತ್ವದಲ್ಲಿ, ಅರ್ಚಕ ಶ್ರೀನಿವಾಸ ಹೊಳ್ಳ, ರಾಮಚಂದ್ರ ಹೊಳ್ಳ, ವೇದಮೂರ್ತಿ ಶ್ರೀಪತಿ ಎಳಚಿತ್ತಾಯ ಮತ್ತು ಡಾ.ಶ್ರೀಧರ ಭಟ್ ಅವರ ಉಪಸ್ಥಿತಿಯಲ್ಲಿ ಬೆಳಿಗ್ಗೆ ತಾಲೂಕಿನ ವಿಪ್ರ ಬಾಂಧವರಿಂದ ಸಾಮೂಹಿಕ ರುದ್ರಾಧ್ಯಾಯ ಪಠಣ, ಶತ ರುದ್ರಾಭಿಷೇಕ, ವಿಶೇಷ ಅರ್ಚನೆ, ಪೂಜೆ ನಡೆಯಿತು. ಸಂಜೆ ನಿರಂತರ ಭಜನಾ ಕಾರ್ಯಕ್ರಮದಲ್ಲಿ ಉಜಿರೆ ಶ್ರೀ ಜನಾರ್ದನ ಸ್ವಾಮಿ ಭಗಿನಿ ಭಜನಾ ಮಂಡಳಿ, ಶ್ರೀ ಮಹಮ್ಮಾಯಿ ಭಜನಾ ಮಂಡಳಿ, ಶ್ರೀ ಛತ್ರಪತಿ ಶಿವಾಜಿ ಭಜನಾ ಮಂಡಳಿ, ಶ್ರೀ ಮಾತೃ ಮಂಡಳಿ, ಶ್ರೀ ದುರ್ಗಾ ಭಜನಾ ಮಂಡಳಿ, ಶ್ರೀ ಹರೇ ಕೃಷ್ಣ ಭಜನಾ ಮಂಡಳಿ, ವಿನಾಯಕ ನಗರದ ಶ್ರೀ ಸಿದ್ಧಿವಿನಾಯಕ ಭಜನಾ ಮಂಡಳಿ, ಬೆಳ್ತಂಗಡಿಯ ವಿವೇಕ ಜಾಗೃತ ಬಳಗ ಹಾಗೂ ಉಜಿರೆ ಮಾಚಾರು ಶ್ರೀ ಲಕ್ಷ್ಮೀಜನಾರ್ದನ ಭಜನಾ ಮಂಡಳಿಯ ಸದಸ್ಯರು ಭಜನೆ ನಡೆಸಿಕೊಟ್ಟರು.



ರೂ.4 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಬೆಳ್ತಂಗಡಿ ತಾಲೂಕಿನ ಮಲವಂತಿಗೆ ಗ್ರಾಮದ ಕೊಲ್ಲಿ-ಕಲ್ಬೆಟ್ಟು-ಬಾಳಿಹಿತ್ತಿಲು ರಸ್ತೆ ಕಾಂಕ್ರಿಟೀಕರಣ ಹಾಗೂ ಕಲ್ಬೆಟ್ಟು ಎಂಬಲ್ಲಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಶಾಸಕ ಹರೀಶ್ ಪೂಂಜ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭ ಮಲವಂತಿಗೆ ಗ್ರಾ.ಪಂ. ಅಧ್ಯಕ್ಷ ಪ್ರಕಾಶ್ ಜೈನ್, ಮಿತ್ತಬಾಗಿಲು ಗ್ರಾ.ಪಂ. ಅಧ್ಯಕ್ಷ ವಿನಯಚಂದ್ರ, ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಪಂಚ ಪರಿವರ್ತನೆಯಿಂದ ಉತ್ತಮ ಬದುಕನ್ನು ರೂಪಿಸಿಕೊಳ್ಳಿ: ಕಿಶೋರ್



ಬಂಟ್ವಾಳ: ರಾಷ್ಟ್ರೀಯ ಸ್ವಯಂ ಸೇವಕ ಸಂಘ ಶತಾಬ್ದಿಯ ಸಂಭ್ರಮದಲ್ಲಿರುವ ಈ ಸಂದರ್ಭದಲ್ಲಿ ಪಂಚ ಪರಿವರ್ತನೆಯ ಮೂಲಕ ಉತ್ತಮ ಜೀವನವನ್ನು ರೂಪಿಸಿಕೊಂಡು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ಹೇಳಿದ್ದಾರೆ.

ಕೊಡ್ಮಾಣ್ ದ. ಕ. ಜಿ. ಪಂ. ಹಿರಿಯ ಪ್ರಾಥಮಿಕ ಶಾಲೆ ಹಳೇ ವಿದ್ಯಾರ್ಥಿ ಸಂಘ ಮತ್ತು ದ.ಕ. ಜಿ. ಪಂ. ಪ್ರೌಢಶಾಲೆ ಕೊಡ್ಮಾಣ್ ಇದರ 46ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ದೇವರ ಮೇಲೆ ಭಕ್ತಿ ನಂಬಿಕೆ ಇಟ್ಟ ಸಮಾಜ ನಮ್ಮದು. ನಾರಿ ಶಕ್ತಿ ಜಾಗೃತಿಯಾಗಿ ದೇಶದ ಭವಿಷ್ಯ ಉಜ್ವಲವಾಗಲಿ ಎಂದು ಹೇಳಿದರು.

ಬಂಟ್ವಾಳ ಉಪ ತಹಸೀಲ್ದಾರ್ ನವೀನ ಬೆಂಜನಪದವು, ಎಕ್ಸೆಲ್ ಪಿಯು ಕಾಲೇಜು ಪ್ರಾಚಾರ್ಯ ಪ್ರಜ್ವಲ್ ನಿಡ್ಲೆ ಮಾತನಾಡಿದರು.

ಅಧ್ಯಕ್ಷತೆಯನ್ನು ಉದ್ಯಮಿ ಗೋಪಾಲಕೃಷ್ಣ ಶೆಟ್ಟಿ ಕೊಡ್ಮಾಣ್ ವಹಿಸಿದ್ದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಶಾಲಾ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯಾಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು ಹಾಗೂ ಆಟೋಟ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಉದ್ಯಮಿ ರಾಜೇಶ್ ಶೆಟ್ಟಿ ಜಪ್ಪು ಗುಡ್ಡೆಗುತ್ತು, ಮಾಜಿ ಗ್ರಾ ಪಂ ಅಧ್ಯಕ್ಷ ಗಂಗಾಧರ ಪೂಜಾರಿ, ರಶ್ಮಿ ಫ್ಲವರ್ಸ್ ಮಾಲಕ ವಿಶ್ವನಾಥ ಕುಲಾಲ್ ಚಾಪೆ, ಸುಲೋಚನಾ ಕೆ ಶೆಟ್ಟಿ ಕೊಡ್ಮಾಣ್, ಪ್ರೌಢಶಾಲಾ ಮುಖ್ಯ ಶಿಕ್ಷಕ ಭಾಸ್ಕರ್ ರಾವ್, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಪ್ರೇಮಾ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ದೇವದಾಸ ಕೊಡ್ಮಾಣ್, ಮಾಧವಿ ಸಂದೀಪ್ ಶೆಟ್ಟಿ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಆನಂದ ಆಳ್ವ ಪೊನ್ನೋಡಿ, ಕಾರ್ಯದರ್ಶಿ ಜಗದೀಶ ಕಾಂಜಿಲಕೊಡಿ ಉಪಸ್ಥಿತರಿದ್ದರು. ಸಂತೋಷ ಪೊನ್ನೋಡಿ ಪ್ರಸ್ತಾವಿಸಿ, ಸ್ವಾಗತಿಸಿದರು. ಡಾ ಸ್ವಾತಿ ಹಾಗೂ ಶಶಿಧರ ಕೊಡ್ಮಾಣ್ ಬಹುಮಾನಿತರ ಪಟ್ಟಿ ವಾಚಿಸಿದರು. ಯಜ್ಞೇಶ್ವರಿ ಎನ್ ಕೊಡ್ಮಾಣ್ ಸನ್ಮಾನಿತರ ಬಗ್ಗೆ ಮಾತನಾಡಿದರು. ಸುಜಿತ್ ಕೊಡ್ಮಾಣ್ ಕೊಡಿ ವಂದಿಸಿದರು ಮನಿಷಾ ಕಾರ್ಯಕ್ರಮ ನಿರೂಪಿಸಿದರು.

ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಅನ್ನ ಸಂತರ್ಪಣೆ, ಶಾಲಾ ಮಕ್ಕಳಿಂದ ಹಾಗೂ ಹಳೇ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ತುಳು ನಾಟಕ ಪ್ರದರ್ಶನಗೊಂಡಿತು.

ಕರಂಗಲಪಾಡಿ ಶ್ರೀ ಮಹಾಸತಿ ಅಮ್ಮನಿಗೆ ಸ್ವರ್ಣಮುಖ ಸಮರ್ಪಣೆ



ಮಂಗಳೂರು: ನಗರದ ಕರಂಗಲಪಾಡಿ ಶ್ರೀ ಮಹಾಸತಿ, ಶ್ರೀ ಭಗವತಿ ಅಮ್ಮನವರ ಕಟ್ಟೆ, ಮಂಗಳೂರು ಇಲ್ಲಿನ ಶ್ರೀ ಮಹಾಸತಿ ಅಮ್ಮನವರಿಗೆ ಸ್ವರ್ಣದ ಮುಖ ಅರ್ಪಣೆಯು ಫೆ. 13ರಂದು ಬೆಳಿಗ್ಗೆ ಭಜಕರು ಒಟ್ಟುಸೇರಿ ಸಮರ್ಪಿಸಿದರು. ಮಹಾಸತಿ ಕಟ್ಟೆ ಎದುಗಿರುವ ಶ್ರೀ ಚಂದ್ರಮೌಳೀಶ್ವರ ದೇವರಿಗೆ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಮಹಾಸತಿ ಕಟ್ಟೆಯ ಬಳಿಯ ಭಗವತಿ ಅಮ್ಮನ ಕಟ್ಟೆ ಹಾಗೂ ಅಶ್ವತ್ಥಕಟ್ಟೆ ಬಳಿ ಸಾಗಿ ಬಂದು ಶ್ರೀ ಮಹಾಸತಿ ಅಮ್ಮನ ಪೂಜಾ ಕಾರ್ಯವನ್ನು ನೆರವೇರಿಸುತ್ತಿರುವ ಸುಧನ್ ಜೀಯವರ ಮೂಲಕ ವಿಶೇಷ ಪೂಜೆ ಪ್ರಾರ್ಥನೆ ಸಲ್ಲಿಸಿ ಶ್ರೀ ಮಹಾಸತಿಗೆ ಸ್ವರ್ಣ ಮುಖ ಕವಚವನ್ನು ಸಮರ್ಪಿಸಲಾಯಿತು. ಈ ವೇಳೆ ಸೇವಕರಾದ ನವೀನ್, ರೋಷನ್, ಸ್ವಸ್ತಿಕ್, ರವಿ ಶೆಟ್ಟಿ, ಮಹಾಸತಿ ಅಮ್ಮನ ಭಕ್ತರ ಸಮೂಹದವರು ಇದ್ದರು.



ಸುಬ್ರಹ್ಮಣ್ಯ ಸಮೀಪದ ಕೆಂಜಾಳ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಬೆಳಗ್ಗೆ ಶ್ರೀ ಬಸವೇಶ್ವರ ಭಜನಾ ಮಂಡಳಿ ಕುಲ್ಕುಂದ ಇವರಿಂದ ಕುಣಿತ ಭಜನೆ ನೆರವೇರಿತು. ಭಜನಾ ಸೇವೆ ನೆರವೇರಿಸಿದ ಭಕ್ತರಿಗೆ ಅರ್ಚಕರು ಪ್ರಸಾದ ನೀಡಿದರು.ಈ ಸಂದರ್ಭ ಭಜನಾ ಗುರು ಗಿರೀಶ್ ಆಚಾರ್ಯ ಕುಲ್ಕುಂದ, ಚಂದ್ರಶೇಖರ ಬಸವನಮೂಲೆ ಮತ್ತಿತರರು ಉಪಸ್ಥಿತರಿದ್ದರು.

ಇನೋಳಿಯ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ಭಜನಾ ಮಂಗಳೋತ್ಸವ

ಭಜನೆಯು ಪರಿವರ್ತನೆಯ ಶಕ್ತಿ ಹೊಂದಿದೆ: ಮಾಣಿಲ ಶ್ರೀ

ಕೊಣಾಜೆ: ಭಜನೆಗೆ ಪರಿವರ್ತನೆಯ ಶಕ್ತಿ ಇದೆ. ಮುಂದಿನ ಪೀಳಿಗೆಗೆ ನಾವು ಭಜನೆಯ ಮೂಲಕ ಭಕ್ತಿ ಪರಂಪರೆಯೊಂದಿಗೆ, ನಮ್ಮ ಭಾರತೀಯ ಸಂಸ್ಕೃತಿ, ಸಂಪ್ರದಾಯವನ್ನು ಮುನ್ನಡೆಸೋಣ ಎಂದು ಶ್ರೀಧಾಮ ಮಾಣಿಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಅಭಿಪ್ರಾಯಪಟ್ಟರು.



ಮಹಾಶಿವರಾತ್ರಿ ಪ್ರಯುಕ್ತ ಇನೋಳಿ ಶ್ರೀ ಸೋಮನಾಥೇಶ್ವರ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ 48 ದಿನ ನಡೆದ ಸಂಧ್ಯಾ ಭಜನೆಯ ಶನಿವಾರ ನಡೆದ ಮಂಗಳೋತ್ಸವದ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಈ ಸಂದರ್ಭ ವಿವಿಧ ಕ್ಷೇತದಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು. ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರಂತರ ಶ್ರಮವಹಿಸಿದ ಆಡಳಿತ ಮೊಕ್ತೇಸರ ಚಂದ್ರಹಾಸ ಪೂಂಜ ಕಿಲ್ಲೂರುಗುತ್ತು ದಂಪತಿಯನ್ನು ಅಭಿನಂದಿಸಲಾಯಿತು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್ ಮಂಗಳೂರು ತಾಲೂಕು ಅಧ್ಯಕ್ಷ ಉಮೇಶ್ ಗಟ್ಟಿ, ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಜಿಲ್ಲಾ ನಿರ್ದೇಶಕ ಜನಾರ್ದನ ಗಟ್ಟಿ ಕನ್ನಿಮನೆ, ಪಜೀರು ಅರಸು ಮುಂಡಿತ್ತಾಯ ದೈವಪಾತ್ರಿ ಸುಬ್ರಾಯ ಪೂಜಾರಿ ಭಂಡಾರಮನೆ, ಚೀರುಂಭ ಭಗವತೀ ಕ್ಷೇತ್ರದ ಪ್ರಧಾನ ಅರ್ಚಕ ಮಂಜಪ್ಪ ಕಾರ್ನವರ್, ಪ್ರಗತಿಪರ ಕೃಷಿಕ ಪ್ರಶಾಂತ್ ಮಾರ್ಲ ಧರ್ಮ, ದೇರಳಕಟ್ಟೆ ವಿದ್ಯಾರತ್ನ ಆಂಗ್ಲಮಾಧ್ಯಮ ಶಾಲೆಯ ಆಡಳಿತ ನಿರ್ದೇಶಕ ರವೀಂದ್ರ ಶೆಟ್ಟಿ ಉಳಿದೊಟ್ಟು, ಉದ್ಯಮಿಗಳಾದ ಚಂದ್ರಶೇಖರ ಶೆಟ್ಟಿ ಮಂಟಮೆ, ಪ್ರವೀಣ್ ನಾಟ್ರಕೋಡಿ ಇನೋಳಿ, ಕೊಣಾಜೆ ವಲಯ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷ ರವೀನಾ ಬೋಳಿಯಾರ್, ಶ್ರೀ ಕೊರಗಜ್ಜ ದೈವಸ್ಥಾನದ ಗುರಿಕಾರ ಸೋಮಯ್ಯ ಬಿ.ಸೈಟ್, ಶ್ರೀ ಧರ್ಮಸ್ಥಳ ಭಜನಾ ಪರಿಷತ್ ಜಿಲ್ಲಾ ಸಮನ್ವಯಾಧಿಕಾರಿ ಸಂತೋಷ್ ಪಿ.ಅಳಿಯೂರು, ಕೊಣಾಜೆ ಮತ್ತು ದೇರಳಕಟ್ಟೆ ಮೇಲ್ವಿಚಾರಕರಾದ ಗಿರೀಶ್, ಅಶೋಕ್, ಸಚಿನ್ ಶೆಟ್ಟಿ ಮುಂಬೈ, ಹರಿಶ್ಚಂದ್ರ ಶೆಟ್ಟಿ ಕರ್ನಿರೆಗುತ್ತು ಇದ್ದರು. ರವಿ ರೈ ಪಜೀರ್ ನಿರೂಪಿಸಿದರು.

ತುಂಬೆ ಗ್ರಾಮ ಪಂಚಾಯತ್ 15ನೇ ಹಣಕಾಸು ಯೋಜನೆ

ರುದ್ರಭೂಮಿಯ ಶೆಡ್ ಉದ್ಘಾಟನೆ

ಬಂಟ್ವಾಳ: ತುಂಬೆ ಗ್ರಾಮ ಪಂಚಾಯತ್ 15ನೇ ಹಣಕಾಸು ಯೋಜನೆಯ ಅನುದಾನದಲ್ಲಿ ತುಂಬೆ ಗ್ರಾಮದ ಮುಳಿಪಡ್ಪು ಹಿಂದೂ ರುದ್ರಭೂಮಿಗೆ 3 ಲ.ರೂ.ವೆಚ್ಚದಲ್ಲಿ ಶೆಡ್ ಮತ್ತು ಇಂಟರ್ ಲಾಕ್ ಅಳವಡಿಕೆ ಕಾಮಗಾರಿಯ ಉದ್ಘಾಟನೆಯನ್ನು ತುಂಬೆ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಜಯಂತಿ ಕೇಶವ ಅವರು ನೆರವೇರಿಸಿದರು.



ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ಹಾಗೂ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಗಣೇಶ್ ಸಾಲ್ಯಾನ್, ನಿಕಟ ಪೂರ್ವ ಅಧ್ಯಕ್ಷರಾದ ಪ್ರವೀಣ್ ಬಿ. ತುಂಬೆ, ಸ್ಥಳೀಯ ಸದಸ್ಯರಾದ ಹೇಮಲತಾ, ಅರುಣ್ ಕುಮಾರ್, ಮಾಜಿ ಸದಸ್ಯರಾದ ಮೋನಪ್ಪ ಮಜಿ, ಸ್ಥಳೀಯರಾದ ದೇವದಾಸ್ ತುಂಬೆ, ಅಶೋಕ್ ಕೊಟ್ಟಿಂಜ, ಸಂದೀಪ್ ಕುಲಾಲ್, ಕೃಷ್ಣ ಕುಲಾಲ್, ಹರೀಶ್ ರೊಟ್ಟಿಗುಡ್ಡೆ, ಫ್ರಾನ್ಸಿಸ್ ಮುಳಿಪಡ್ಪು ಯಶವಂತ ಮುಳಿಪಡ್ಪು, ಗುತ್ತಿಗೆದಾರ ಪ್ರಶಾಂತ್ ಕೊಟ್ಟಾರಿ ಇದ್ದರು.

ಸುತ್ತಮುತ್ತ

ಸ್ವಚ್ಛ ವಾರ್ಡ್ ಪ್ರಶಸ್ತಿ: ನಾಮನಿರ್ದೇಶನ ಸಲ್ಲಿಸಲು ಸೂಚನೆ

ಉಡುಪಿ: ಸಾಲಿಗ್ರಾಮ ಪ.ಪಂ.ವ್ಯಾಪ್ತಿಯ 16 ವಾರ್ಡ್ ಗಳಲ್ಲಿ ಅತೀ ಹೆಚ್ಚು ಸ್ವಚ್ಛವಾಗಿರುವ ವಾರ್ಡನ್ನು ಪಟ್ಟಣ ಪಂಚಾಯತ್ ವತಿಯಿಂದ ಗುರುತಿಸಿ 'ಸ್ವಚ್ಛ ವಾರ್ಡ್' ಎಂದು ಘೋಷಿಸಿ, ಪಾರಿತೋಷಕ ನೀಡಲಾಗುವುದು. ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ 16 ವಾರ್ಡಿನ ನಾಗರಿಕರು ತಮ್ಮ ವಾರ್ಡ್ ಅತೀ ಹೆಚ್ಚು ಸ್ವಚ್ಛವಾಗಿದ್ದಲ್ಲಿ ಫೆ. 17 ರ ಒಳಗಾಗಿ ಸ್ವಚ್ಛ ವಾರ್ಡ್ ಬಗ್ಗೆ ಪ.ಪಂ.ಕಚೇರಿಗೆ ನಾಮನಿರ್ದೇಶನ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಕಚೇರಿ ಆರೋಗ್ಯ ವಿಭಾಗ ಸಂಪರ್ಕಿಸುವಂತೆ ಪ.ಪಂ.ಮುಖ್ಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಫೆ.21, 22: ಕುಂಜರಕಾನ ದೇವಳದಲ್ಲಿ ಪ್ರತಿಷ್ಠಾ ವಾರ್ಷಿಕ ಮಹೋತ್ಸವ

ಕಾಸರಗೋಡು: ಕುಂಜರಕಾನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕ ಮಹೋತ್ಸವ, ಬಲಿವಾಡು ಕೂಟ ಮತ್ತು ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಫೆ.21 ಮತ್ತು 22ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಫೆ.21ರಂದು ಬೆಳಗ್ಗೆ 6.30ಕ್ಕೆ ಗಣಪತಿಹೋಮ, ತುಲಾಭಾರ ಸೇವೆ, ಕಲಶ ಪ್ರತಿಷ್ಠೆ 9ರಿಂದ ಭಜನೆ, 11.30ಕ್ಕೆ ತಂಬಿಲ ಸೇವೆ, 11.45ಕ್ಕೆ ಶ್ರೀ ದೇವಿಗೆ ಪಂಚಾಮೃತಾಭಿಷೇಕ, ರುದ್ರಾಭಿಷೇಕ, ಕಲಶಾಭಿಷೇಕ, ಅನ್ನ ಸಂತರ್ಪಣೆ, ಸಂಜೆ 5ಕ್ಕೆ ರಕ್ತೇಶ್ವರಿಸಹಿತ ಒಂದು ಕುಂದ ನಲ್ವತ್ತು ದೈವಗಳಿಗೆ ತಂಬಿಲ, 6 ಗಂಟೆಗೆ ದೀಪಾರಾಧನೆ, ಭಜನೆ, ಮಹಾಪೂಜೆ, ಶ್ರೀ ದೇವರ ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ ನಡೆಯಲಿದೆ. ಫೆ.22ರಂದು ಬೆಳಗ್ಗೆ 9ರಿಂದ ಭಜನೆ, 10 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ.

ವಿಶೇಷ ಅಂಚೆ ಲಕೋಟೆ ಬಿಡುಗಡೆ

ಕಿನ್ನಿಗೋಳಿ: ತುಳುನಾಡಿನ ಮೂಲ ಸಂಪ್ರದಾಯ ಉಳಿಸಿಕೊಂಡು ಆಧುನಿಕತೆ ಮೈಗೂಡಿಸಿಕೊಂಡಿರುವ ಐತಿಹಾಸಿಕ ಐಕಳ ಕಾಂತಾಬಾರೆ–ಬೂದಾಬಾರೆ ಕಂಬಳದ ಸುವರ್ಣ ಮಹೋತ್ಸವದ ಆಚರಣೆಯ ಪ್ರಯುಕ್ತ ಭಾರತೀಯ ಅಂಚೆ ಇಲಾಖೆಯು ಶನಿವಾರ ಐಕಳ ಅಂಚೆ ಕಚೇರಿಯಲ್ಲಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿತು. ಮಂಗಳೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ (ಪ್ರಭಾರ) ಪಿ. ದಿನೇಶ್ ಅವರು ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿದರು. ಐಕಳ ಕಾಂತಾಬಾರೆ–ಬೂದಾಬಾರೆ ಕಂಬಳದ ಕಾರ್ಯಾಧ್ಯಕ್ಷ ಚಿತ್ತರಂಜನ್ ಭಂಡಾರಿ, ಮಂಗಳೂರು ಪ್ರಧಾನ ಅಂಚೆ ಕಚೇರಿಯ ವರಿಷ್ಠ ಅಂಚೆ ಪಾಲಕರಾದ ಲೋಕನಾಥ ಎಂ , ಕಂಬಳ ಸಂಚಾಲಕರಾದ ಮುರಳೀಧರ ಶೆಟ್ಟಿ ಹಾಗೂ ಕರ್ನಾಟಕ ಬ್ಯಾಂಕ್ ಜನರಲ್ ಮ್ಯಾನೇಜರ್ ಜಯ ನಾಗರಾಜ ರಾವ್ ಉಪಸ್ಥಿತರಿದ್ದರು. ಮಂಗಳೂರು ವಿಭಾಗದ ಮಾರುಕಟ್ಟೆ ಅಧಿಕಾರಿ ಸುಭಾಷ್ ಸಾಲ್ಯಾನ್ ವಂದಿಸಿ, ದಯಾನಂದ ಕತ್ತಲ್‌ಸಾರ್ ನಿರೂಪಿಸಿದರು.

ಸಾಫ್ಟ್ ಸ್ಕಿಲ್ ತರಬೇತಿ ಕಾರ್ಯಕ್ರಮ ಸಂಪನ್ನ

ಕುಂದಾಪುರ : ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ನಾಂದಿ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡ ಆರು ದಿನಗಳ ಸಾಫ್ಟ್ ಸ್ಕಿಲ್ಸ್ ತರಬೇತಿ ಕಾರ್ಯಕ್ರಮ ಸಂಪನ್ನಗೊಂಡಿತು. ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ನಾಂದಿ ಫೌಂಡೇಶನ್‌ನ ಜಂಟಿ ಸಂಪರ್ಕ ಅಧಿಕಾರಿ ಪ್ರೀತಿ ಲೇಖಾ ಸಮಾರೋಪ ನುಡಿಗಳನ್ನಾಡಿದರು. ತರಬೇತುದಾರ ದಾಮೋದರ್ ಅನಿಸಿಕೆ ಹಂಚಿಕೊಂಡರು. ಕಾಲೇಜಿನ ವೃತ್ತಿ ಮಾರ್ಗದರ್ಶನ ಘಟಕದ ಅಧಿಕಾರಿ ತಿಮ್ಮಪ್ಪ ಡಿ.ಎಸ್. ಉಪಸ್ಥಿತರಿದ್ದರು. ರಿಶಿತಾ ಪ್ರಾರ್ಥಿಸಿ, ಅಕ್ಷಿತಾ ಸ್ವಾಗತಿಸಿ, ಮಿಥಿಲೇಶ್ ನಿರೂಪಿಸಿ, ಸನ್ಮಿತಾ ವಂದಿಸಿದರು.

ರೆಡ್ ಕ್ರಾಸ್ ಘಟಕ ಉದ್ಘಾಟನೆ

ಕುಂದಾಪುರ : ಹಳ್ನಾಡಿನ ತುಳಸಿ ವಿದ್ಯಾಮಂದಿರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾರತೀಯ ಜೂನಿಯರ್ ರೆಡ್ ಕ್ರಾಸ್ ಘಟಕದ ಉದ್ಘಾಟನೆ ನಡೆಯಿತು. ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕುಂದಾಪುರ ಘಟಕದ ಅಧ್ಯಕ್ಷ ಎಸ್. ಜಯಕರ ಶೆಟ್ಟಿ ಭಾರತೀಯ ಜೂನಿಯರ್ ರೆಡ್ ಕ್ರಾಸ್ ಘಟಕವನ್ನು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಸಂಪೂರ್ಣ ಮಾಹಿತಿ ನೀಡಿದರು. ಜೂನಿಯರ್ ರೆಡ್ ಕ್ರಾಸ್‌ನ ಸಂಯೋಜಕ ದಿನಕರ್ ಆರ್. ಶೆಟ್ಟಿ ಮಕ್ಕಳಿಗೆ ಪ್ರತಿಜ್ಞೆ ಭೋದಿಸಿದರು. ಭಾರತೀಯ ರೆಡ್ ಕ್ರಾಸ್ ಸೊಸೈಟಿ ಖಜಾಂಚಿ ಶಿವರಾಮ ಶೆಟ್ಟಿ, ತುಳಸಿ ವಿದ್ಯಾ ಸಂಸ್ಥೆ ಮುಖ್ಯಸ್ಥ ಕೃಷ್ಣರಾಯ ಶಾನುಬಾಗ್ , ಶಾಲಾ ಮುಖ್ಯ ಶಿಕ್ಷಕಿ ರೇಷ್ಮಾ ಪ್ರದೀಪ್ ಉಪಸ್ಥಿತರಿದ್ದರು.

ಸೋಮೇಶ್ವರ ಸೋಮನಾಥ ಕ್ಷೇತ್ರಕ್ಕೆ 'ನಮ್ಮ ನಡಿಗೆ ಶಿವ ಕ್ಷೇತ್ರದೆಡೆಗೆ' ಪಾದಯಾತ್ರೆ

ಭಜನೆ, ಆರಾಧನೆಯಿಂದ ದೇವರನ್ನು ಒಲಿಸಲು ಸಾಧ್ಯ

ಉಳ್ಳಾಲ: ಕುಟುಂಬದಲ್ಲಿ ಪ್ರೀತಿ, ಸಂಸ್ಕಾರ, ಒಗ್ಗಟ್ಟು ನೆಲೆಗೊಳ್ಳಲು ಹಿರಿಯರ ಮಾರ್ಗದರ್ಶನ ಅಗತ್ಯವಿದೆ. ಭಕ್ತಿಯ ಭಜನೆ, ಆರಾಧನೆ, ಸತ್ಸಂಗಗಳ ಮೂಲಕ ದೇವರನ್ನು ಒಲಿಸಲು ಸಾಧ್ಯ. ಆದರೆ ಭಜನೆ ಎಲ್ಲರಿಗೂ ಸುಲಭದಿಂದ ಒಲಿದು ಬರುವುದಿಲ್ಲ ಎಂದು ಮಾಡೂರು ಮರಿಯಣ್ಣಪಾಲು ಶಿವದುರ್ಗಾಂಭ ಮಠದ ಶ್ರೀ ಶಿವಯೋಗಿ ದುರ್ಗಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮಹಾಶಿವರಾತ್ರಿ ಪ್ರಯುಕ್ತ ತೊಕ್ಕೊಟ್ಟಿನ ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ತೊಕ್ಕೊಟ್ಟು ಒಳಪೇಟೆಯ ವಿದ್ಯಾಗಣಪತಿ ಕಟ್ಟೆಯಿಂದ ಸೋಮೇಶ್ವರ ಸೋಮನಾಥ ಕ್ಷೇತ್ರದ ವರೆಗೆ ಭಾನುವಾರ ನಡೆದ 8ನೇ ವರ್ಷದ 'ನಮ್ಮ ನಡಿಗೆ ಶಿವ ಕ್ಷೇತ್ರದೆಡೆಗೆ 'ಬೃಹತ್ ಪಾದಯಾತ್ರೆ ಉದ್ಘಾಟಿಸಿ ಅವರು ಮಾತನಾಡಿದರು.

ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಲಾರು



ಸಾಯಿ ಮಂದಿರದ ಧರ್ಮದರ್ಶಿ ದಿನೇಶ್ ಶರ್ಮಾ, ತೊಕ್ಕೊಟ್ಟು ಅಂಬಾವನ ನಾಗಕನ್ನಿಕಾ ರಕ್ತೇಶ್ವರಿ ದೈವಸ್ಥಾನದ ಅಧ್ಯಕ್ಷರಾದ ಸುಂದರ ಗಟ್ಟಿ ಕಾಪಿಕಾಡು ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್, ಶ್ರೀ ಕ್ಷೇತ್ರ ಕದ್ರಿಯ ಅರ್ಚಕರಾದ ಕೃಷ್ಣ ಭಟ್, ತೊಕ್ಕೊಟ್ಟು ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷರಾದ ಚಂದ್ರಕಾಂತ್ ತೊಕ್ಕೊಟ್ಟು, ಪ್ರಮುಖರಾದ ಅಶೋಕ್ ಕ್ಲಿಕ್, ಸತೀಶ್ ದೀಪಂ, ವಿಜಯ್ ಮಂಗಳೂರು, ಭವಿತ್ ಬಂಗೇರ, ದರ್ಶನ್ ರಾವ್, ಶರತ್ ಬಂಗೇರ, ಉಮೇಶ್ ಅಬ್ಬಂಜರ, ಸುಜಿತ್ ಐಲ್ಯಾಂಡ್, ಅಭಿಷೇಕ್, ಸೀತಾರಾಮ್ ಕಲ್ಲಾಪು, ವಿಜಯ ಕುಮಾರ್ ಮಂಗಳೂರು, ದಯಾನಂದ್ ಬೋಳಾರ್, ಬ್ರಿಜೇಶ್ ಶೆಟ್ಟಿಗಾರ್, ದಿಶಾಂತ್ ಉಳ್ಳಾಲ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಪ್ರವೀಣ್ ಬಸ್ತಿ ವಂದಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು.

> **ಮಾರ್ಗದರ್ಶನ ಅಗತ್ಯ**
>
> ಯಾವುದೇ ಕಾರ್ಯಕ್ರಮ ನಡೆಯಲೂ ಅಲ್ಲಿ ಸ್ಥಳೀಯ ಸ್ವಾಮೀಜಿಗಳ ಉಪಸ್ಥಿತಿಯೊಂದಿಗೆ ಅವರ ಅಮೂಲ್ಯವಾದ ಮಾರ್ಗದರ್ಶನ ಅಗತ್ಯವಾಗಿದೆ. ಆ ಕಾರ್ಯವನ್ನು ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್ ನಡೆಸುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ಮಹಾಶಿವರಾತ್ರಿಯಂದು ವಿಜೃಂಭಣೆಯ ಧಾರ್ಮಿಕ ಕಾರ್ಯಕ್ರಮ ನಡೆಯಬೇಕಿದ್ದು ಅದಕ್ಕೆ ಈಗಲೇ ಪೂರ್ವ ತಯಾರಿ ನಡೆಸಬೇಕಿದೆ.
>
> ● ಸುರೇಶ್ ಭಟ್ನಗರ

ಕಾಪಿಕಾಡು ಉಮಾಮಹೇಶ್ವರೀ ಕ್ಷೇತ್ರ: ಭಜನಾ ಸಂಕೀರ್ತನೆ



ಉಳ್ಳಾಲ: ತೊಕ್ಕೊಟ್ಟು ಕಾಪಿಕಾಡು ಶ್ರೀ ಉಮಾಮಹೇಶ್ವರೀ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಮಹೋತ್ಸವ ಪ್ರಯುಕ್ತ ಸೂರ್ಯೋದಯದಿಂದ ಸೂರ್ಯಾಸ್ತಮಾನ ತನಕ ಜರುಗುವ ಭಜನಾ ಸಂಕೀರ್ತನೆಗೆ ಸೌಜನ್ಯ ಶೆಟ್ಟಿ ಮತ್ತು ಹರೀಶ್ ಶೆಟ್ಟಿ ಕಿನ್ಯಗುತ್ತು ದಂಪತಿ ದೀಪ ಪ್ರಜ್ವಲನೆ ನಡೆಸಿ ಚಾಲನೆ ನೀಡಿದರು. ಈ ಸಂದರ್ಭ ಕ್ಷೇತ್ರದ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಅತ್ತಾವರ, ಮೊಕ್ತೇಸರರಾದ ಡಾ.ಆರ್.ಕೆ.ಶೆಟ್ಟಿ, ಕೂಸಪ್ಪ ಗಟ್ಟಿ, ನಿರ್ಮಲಾ ಕುಂಜಬು, ಹಿರಿಯರಾದ ಸುರೇಂದ್ರ ನಾಯಕ್, ಸೇವಾ ಸಮಿತಿ ಅಧ್ಯಕ್ಷರಾದ ದಿನೇಶ್ ರೈ ಕಳ್ಳಿಗೆ, ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಪದಾಧಿಕಾರಿಗಳಾದ ಪ್ರವೀಣ್ ಉಳ್ಳಾಲ ಬೈಲ್, ಶಿರಿಶ್ ನಾಯಕ್, ಕೃಷ್ಣ ಹೊಳ್ಳ, ವೇಣುಗೋಪಾಲ್, ಶಿವರಾಂ ಕಾಪಿಕಾಡ್, ಸುಧಾಕರ್ ಕಾಪಿಕಾಡ್ , ಉಮಾಮಹೇಶ್ವರಿ ಭಜನಾ ಸಮಿತಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಂಗಳೂರು ವಿವಿ: ವಿವೇಕ ವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮ



ಕೊಣಾಜೆ: ವ್ಯಕ್ತಿತ್ವ ನಿರ್ಮಾಣವು ಆತ್ಮಶ್ರದ್ಧೆ, ಆತ್ಮವಿಶ್ವಾಸ, ಶಿಸ್ತು ಮತ್ತು ಮೌಲ್ಯಾಧಾರಿತ ಜೀವನಶೈಲಿಯಿಂದ ಆರಂಭವಾಗುತ್ತದೆ. ನಾಯಕತ್ವವು ಹುದ್ದೆಯಿಂದ ಬರುವುದಲ್ಲ, ಅದು ಒಳಗಿನ ಪ್ರಾಮಾಣಿಕತೆ, ಸೇವಾಭಾವ ಮತ್ತು ದೃಢಸಂಕಲ್ಪದಿಂದ ರೂಪುಗೊಳ್ಳುತ್ತದೆ. ಸ್ವಾಮಿ ವಿವೇಕಾನಂದರು ಯುವಕರಲ್ಲಿ ಅಡಗಿರುವ ಅಪಾರ ಶಕ್ತಿ ಜಾಗೃತಗೊಳಿಸುವ ಸಂದೇಶ ನೀಡಿದ್ದು, ಆ ಚಿಂತನೆ ಜೀವನದಲ್ಲಿ ಅಳವಡಿಸಿದಾಗ ಮಾತ್ರ ನಿಜವಾದ ನಾಯಕತ್ವ ಬೆಳೆಯುತ್ತದೆ ಎಂದು ಜೆ.ಎಸ್.ಎಸ್.ಶಿಕ್ಷಣ ಸಂಸ್ಥೆಗಳು, ಸುತ್ತೂರು ಇದರ ಸಂಯೋಜಕ ಜಿ.ಎಲ್. ತ್ರಿಪುರಾಂತಕ ಹೇಳಿದ್ದಾರೆ.

ಅವರು ಮಂಗಳೂರು ವಿವಿ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ವತಿಯಿಂದ, ವಿದ್ಯಾರ್ಥಿ ಪರಿಷತ್, ವಿವಿ ಕಾಲೇಜು, ಮಂಗಳೂರು ಅವರ ಸಹಯೋಗದೊಂದಿಗೆ ಆಯೋಜಿಸಲಾದ 52ನೇ ವಿವೇಕ ವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ವ್ಯಕ್ತಿತ್ವದಿಂದ ನಾಯಕತ್ವದತ್ತ ವಿವೇಕಾನಂದರ ಪಥ' ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ರಾಮಕೃಷ್ಣ ಮಿಷನ್ ಬಾಲಕಾಶ್ರಮ, ಮಂಗಳೂರು ಇದರ ನಿರ್ವಾಹಕರಾದ ಸ್ವಾಮಿ ಯುಗೇಶಾನಂದಜಿ ಮಾತನಾಡಿದರು.

ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯರಾದ ಡಾ. ಮಹದೇಶ ಅವರು, ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಜೀವನದಲ್ಲಿ ಒಂದು ಸ್ಪಷ್ಟಗುರಿಯನ್ನು ಇಟ್ಟುಕೊಂಡು ಮುನ್ನಡೆದರೆ ಯಶಸ್ಸು ಎಂದು ಹೇಳಿದರು.

ಮಂಗಳೂರು ವಿವಿ ಕುಲಪತಿ ಪ್ರೊ. ಪಿ. ಎಲ್. ಧರ್ಮ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ವಾಮಿ ವಿವೇಕಾನಂದರ ಚಿಂತನೆಗಳು ರಾಷ್ಟ್ರ ನಿರ್ಮಾಣಕ್ಕೆ ದಾರಿದೀಪವಾಗಿವೆ ಎಂದರು. ಮಂಗಳೂರು ವಿವಿ ಕಾಲೇಜು ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಉಪಸ್ಥಿತರಿದ್ದರು. ಸಂಯೋಜಕ ಡಾ. ಚಂದ್ರು ಹೆಗಡೆ ಸ್ವಾಗತಿಸಿ, ಪ್ರಾಧ್ಯಾಪಕ ಪ್ರೊ. ಜಯವಂತ ನಾಯಕ್ ವಂದಿಸಿ, ಪರಮೇಶ್ವರಿ ನಿರೂಪಿಸಿದರು.

ಸೂರ್ಯ ಆಸ್ಪತ್ರೆಯ ವಾರ್ಷಿಕೋತ್ಸವ: ಫೆ:17ರಂದು ಆರೋಗ್ಯ ತಪಾಸಣಾ ಶಿಬಿರ

ಉಪ್ಪಿನಂಗಡಿ: ಇಲ್ಲಿನ ಸೂರ್ಯ ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವದ ಪ್ರಯುಕ್ತ ಫೆ.17 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ, ಹೆಲ್ತ್ ಪ್ಯಾಕೇಜ್ ಮತ್ತು ಹೆಲ್ತ್ ಕಾರ್ಡ್ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಎಂದು ಸೂರ್ಯ ಆಸ್ಪತ್ರೆ ಆಡಳಿತ ನಿರ್ದೇಶಕ ಡಾ. ರಾಜೇಶ್ ಎಸ್. ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪಾರ್ಶ್ವದ ಸೂರ್ಯಂಬೈಲು ಸಂಕೀರ್ಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಸಜ್ಜಿತ ಸೂರ್ಯ ಆಸ್ಪತ್ರೆಯು ದಿನದ 24 ಗಂಟೆಯೂ ಸೇವೆಯನ್ನು ಒದಗಿಸುತ್ತಿದ್ದು, ಕಳೆದ ಒಂದು ವರ್ಷಗಳಾವಧಿಯಲ್ಲಿ 200 ಕ್ಕೂ ಮಿಕ್ಕಿದ ದೊಡ್ಡ ಸ್ವರೂಪದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ಕ್ಯಾನ್ಸರ್ ಕಾಯಿಲೆ ಸೇರಿದಂತೆ ವಿವಿಧ ವಿಭಾಗಗಳ ನುರಿತ ವೈದ್ಯರ ಸೇವೆಯು ಲಭ್ಯವಿರುವ ಈ ಆಸ್ಪತ್ರೆಯಲ್ಲಿ ನಗದು ರಹಿತ ವಿಮಾ ಸೌಲಭ್ಯಗಳ ಸೇವೆಯನ್ನು ಒದಗಿಸುವ ಸಂಬಂಧ ಸಂಬಂಧಿತ ಇಲಾಖೆಗಳೊಂದಿಗೆ ವ್ಯವಹರಿಸಲಾಗುತ್ತಿದೆ. ಅದರ ಹೊರತಾಗಿಯೂ ಈ ಪರಿಸರದ ಆರೋಗ್ಯ ರಕ್ಷಣೆಯ ನಿಟ್ಟಿನಲ್ಲಿ ಆಸ್ಪತ್ರೆ ಜನ ಸ್ನೇಹಿ ಸ್ವರೂಪದಲ್ಲಿ ಕಾರ್ಯನಿರ್ವಹಿಸುತ್ತಿದೆ. ವಿಶಾಲ ಪಾರ್ಕಿಂಗ್ ಸ್ಥಳಾವಕಾಶ, ತುರ್ತು ನಿಗಾ ಘಟಕ, ತೀವ್ರ ನಿಗಾ ಘಟಕ, ಆ್ಯಂಬುಲೆನ್ಸ್ ಸೇವೆ ಮೊದಲಾದ ಸೌಲಭ್ಯಗಳನ್ನು ಆಸ್ಪತ್ರೆ ಹೊಂದಿದೆ ಎಂದರು.

ಪ್ರಥಮ ವಾರ್ಷಿಕೋತ್ಸವ

ಆಸ್ಪತ್ರೆಯ ಲೋಕಾರ್ಪಣೆಗೊಂಡು ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿರುವ



ಕಾರಣಕ್ಕೆ ವರ್ಷಾಚರಣೆಯನ್ನು ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ನಡೆಸಲು ಸಂಕಲ್ಪಿಸಲಾಗಿದೆ. ಅದರಂತೆ ಫೆ. 17ರಂದು ಸಾರ್ವಜನಿಕರ ಅನುಕೂಲತೆಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಹೆಲ್ತ್ ಪ್ಯಾಕೇಜ್ ಮತ್ತು ಹೆಲ್ತ್ ಕಾರ್ಡ್ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹಾಗೂ ಎಲುಬು, ಮೂಳೆ ಮತ್ತು ಕೀಲು ತಪಾಸಣೆಯೂ ನಡೆಯಲಿದೆ. ರಕ್ತ ಪರೀಕ್ಷೆ ಹಾಗೂ ಆಸ್ಪತ್ರೆಯ ಔಷಧಾಲಯದಲ್ಲಿ ಖರೀದಿಸುವ ಔಷಧಗಳಿಗೆ ವಿಶೇಷ ರಿಯಾಯಿತಿ, ಇಸಿಜಿ, ಎಕ್ಸ್ರೇ ಹಾಗೂ ರಕ್ತ ತಪಾಸಣಾ ಕಾರ್ಯಗಳಿಗೆ ಶೇ. 50ರ ರಿಯಾಯಿತಿ ನೀಡಲಾಗಿದೆ ಎಂದರು. ಪ್ರಥಮ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಸೂರ್ಯಂಬೈಲು ಫಾರ್ಮ್ಸ್ ಮುಖ್ಯಸ್ಥ ಶಾಂತರಾಮ ಭಟ್ ಅಧ್ಯಕ್ಷತೆ ವಹಿಸಲಿದ್ದು, ಐ ಎಂಎ ಪುತ್ತೂರು ವಲಯದ ಅಧ್ಯಕ್ಷ ಡಾ. ಶ್ರೀಪತಿ ರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಪೂರ್ಣ ಸುರಕ್ಷಾ ವಿಭಾಗದ ಪ್ರಾದೇಶಿಕ ನಿರ್ದೇಶಕರಾದ ಗಣೇಶ್ ಬಿ. ಭಾಗವಹಿಸಲಿದ್ದಾರೆಂದು ತಿಳಿಸಿದರು.

ಜ್ಞಾನದೀಪ ವಿದ್ಯಾಲಯ: ಮಹಿಳಾ ಕಾನೂನು ಮಾಹಿತಿ ಕಾರ್ಯಾಗಾರ



ಸುಬ್ರಹಣ್ಯ: ಮಹಿಳೆಯರು ತಮ್ಮ ಮೇಲಿನ ದೌರ್ಜನ್ಯವನ್ನು ತಪ್ಪಿಸಿ ತಮ್ಮ ರಕ್ಷಣೆ ಹಾಗೂ ಸುರಕ್ಷತೆಗಾಗಿ ಕಾನೂನಿನ ಅರಿವು ಪಡೆದುಕೊಳ್ಳುವುದು ಅಗತ್ಯ ಎಂದು ನ್ಯಾಯವಾದಿ ಕೃಷ್ಣಪ್ರಸಾದ್ ನಡ್ಸಾರ್ ಹೇಳಿದ್ದಾರೆ.

ರೋಟರಿ ಕ್ಲಬ್ ಬೆಳ್ಳಾರೆ ಟೌನ್, ಜ್ಞಾನದೀಪ ಎಜ್ಯುಕೇಶನ್ ಟ್ರಸ್ಟ್ ಮತ್ತು ಜ್ಞಾನದೀಪ ಇಂಟರಾಕ್ಟ್ ಕ್ಲಬ್ ಇವುಗಳ ಆಶ್ರಯದಲ್ಲಿ ಬೆಳ್ಳಾರೆಯ ಜ್ಞಾನದೀಪ ವಿದ್ಯಾಲಯದಲ್ಲಿ ಶನಿವಾರ ನಡೆದ ಮಹಿಳಾ ದೌರ್ಜನ್ಯ ಮತ್ತು ಕಾನೂನು ಪರಿಹಾರಗಳ ಬಗ್ಗೆ ನಡೆದ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ರೋಟರಿ ಕ್ಲಬ್ ಬೆಳ್ಳಾರೆ ಟೌನ್ ಅಧ್ಯಕ್ಷ ವಿಶ್ವನಾಥ ಕೆ. ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು. ವಿದ್ಯಾ ಸಂಸ್ಥೆಯ ಸಂಚಾಲಕ ಉಮೇಶ್ ಮಣಿಕ್ಕಾರ ಸ್ವಾಗತಿಸಿ, ಸಂಸ್ಥೆಯ ಮೊಂಟೆಸ್ಸರಿ ವಿದ್ಯಾರ್ಥಿ ಶಿಕ್ಷಕಿ ಚಿತ್ರಾ ಪಿ. ಕಾರ್ಯಕ್ರಮ ನಿರ್ವಹಿಸಿದರು.

ಶ್ರೀ ಆಳುವಾರದಮ್ಮ ದೇವಸ್ಥಾನಕ್ಕೆ ಕೊಡಗು ಡೀಸಿ ಸೋಮಶೇಖರ್ ಭೇಟಿ



ಕುಶಾಲನಗರ: ತೊರೆನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕ ಆಳುವಾರ ಗ್ರಾಮದಲ್ಲಿರುವ ಶ್ರೀ ಆಳುವಾರದಮ್ಮ ದೇವಾಲಯಕ್ಕೆ ಜಿಲ್ಲಾಧಿಕಾರಿ ಸೋಮಶೇಖರ್ ಅವರು ಭೇಟಿ ನೀಡಿ ದೇವಿಯ ದರುಶನ ಪಡೆದರು.

ಕಾರ್ಯ ನಿಮಿತ್ತ ಆಳುವಾರ ಗ್ರಾಮಕ್ಕೆ ಆಗಮಿಸಿದ್ದ ಸಂದರ್ಭ ದೇವಾಲಯಕ್ಕೆ ಭೇಟಿ ನೀಡಿದ ಅವರು, ಗ್ರಾಮಸ್ಥರ ಮನವಿಗೆ ಸ್ಪಂದಿಸಿ ಜಿಲ್ಲಾಡಳಿತದ ವತಿಯಿಂದ ಅಭಿವೃದ್ಧಿಗೆ ಪೂರಕವಾಗಿ ಅನುದಾನ ನೀಡುವ ಭರವಸೆ ನೀಡಿದರು.

ಈ ಸಂದರ್ಭ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಹೊನ್ನೇಗೌಡ, ಸೋಮವಾರಪೇಟೆ ತಾಲೂಕು ವಲಯ ಅರಣ್ಯಾಧಿಕಾರಿ ಶೈಲೇಂದ್ರ ಕುಮಾರ್, ದೇವಾಲಯ ಸಮಿತಿ ಅಧ್ಯಕ್ಷ ರಮೇಶ್, ಹಾರಂಗಿ ನೀರಾವರಿ ಸಲಹಾ ಸಮಿತಿ ನಿರ್ದೇಶಕ ಟಿ.ಕೆ.ಪಾಂಡುರಂಗ, ಪ್ರಗತಿಪರ ರೈತ ಪ್ರೇಮಕುಮಾರ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ವಕೀಲರು ಸೋಲು-ಗೆಲುವು ಸ್ವೀಕರಿಸುವ ಮನೋಭಾವ ಹೊಂದಿರಬೇಕು: ಪಿ.ಪಿ.ಹೆಗ್ಡೆ



ಬಂಟ್ವಾಳ: ಕ್ರೀಡೆಯಲ್ಲಿ ಗೆಲುವು ಸಾಧಿಸಬೇಕಾದರೆ ನಿತ್ಯ ಅಭ್ಯಾಸ ಮಾಡಬೇಕಾಗುತ್ತದೆ. ಅದೇ ರೀತಿ ವಕೀಲ ವೃತ್ತಿಯಲ್ಲು ಅದೇ ರೀತಿಯ ಅಭ್ಯಾಸಿಸುವ ಅಗತ್ಯವಿದೆ ಎಂದು ಹೈಕೋರ್ಟ್‌ನ ಹಿರಿಯ ವಕೀಲರಾಗಿರುವ ಪದ್ಮಪ್ರಸಾದ್ ಹೆಗ್ಡೆ ಹೇಳಿದ್ದಾರೆ.

ಶನಿವಾರ ಬಂಟ್ವಾಳ ವಕೀಲರ ಸಂಘದ ಆಶ್ರಯದಲ್ಲಿ ಪಾಣೆಮಂಗಳೂರು ಶ್ರೀ ಶಾರದಾ ಪ್ರೌಢ ಶಾಲಾ ಮೈದಾನದಲ್ಲಿ ನಡೆದ ವಾರ್ಷಿಕ ಕ್ರೀಡಾಕೂಟ – 2026 ನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲರು ತಮ್ಮ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕ್ರೀಡೆ ಅಥವಾ ಯೋಗ ಅಭ್ಯಾಸ ಮಾಡಿಕೊಳ್ಳುವುದು ಉತ್ತಮ ಎಂದ ಅವರು, ಸೋಲು ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ವಕೀಲರಲ್ಲಿರಬೇಕು ಎಂದರು.

ಬಂಟ್ವಾಳ ವಕೀಲರ ಸಂಘದ ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಿಚಾರ್ಡ್ ಕೊಸ್ತಾ ಎಂ. ಅಧ್ಯಕ್ಷತೆ ವಹಿಸಿದ್ದರು.

ಸಮಾರೋಪದಲ್ಲಿ ಕೆ.ಎಸ್. ಪಿ.ಸಿ.ಅಭ್ಯರ್ಥಿಗಳು, ವಕೀಲ ಶ್ರೀನಿವಾಸ್ ಟಿ., ಶುಭಾಸ್ ಕೌಡಿಚ್ಚಾರ್, ಶಿವಕುಮಾರ್ ಎನ್. ಭಾಗವಹಿಸಿದರು. ಮಂಗಳೂರು ನ್ಯಾಯವಾದಿಗಳ ಸಂಘದ ಅಧ್ಯಕ್ಷ ವಿಜಯಕುಮಾರ್, ಮಂಗಳೂರು ಎಸ್.ಡಿ.ಎಂ.ಕಾನೂನು ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್, ಮಂಗಳೂರು ವಕೀಲರ ಸಂಘದ ಕೋಶಾಧಿಕಾರಿ ಗಿರೀಶ್, ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ನವೀನ್ ಬಿ.ಕೆ. ಮಾಜಿ ಅಧ್ಯಕ್ಷರಾದ ಅಶ್ವನಿ ಕುಮಾರ್ ರೈ, , ಸುರೇಶ್ ಪೂಜಾರಿ, ಉಮೇಶ್ ಕುಮಾರ್ ವೈ., ಬಿ.ವಿ.ಶೆಣೈ ಉಪಸ್ಥಿತರಿದ್ದರು.

ಬಂಟ್ವಾಳ ವಕೀಲರ ಸಂಘದ ಕಾರ್ಯದರ್ಶಿ ಕೆ.ನರೇಂದ್ರನಾಥ ಭಂಡಾರಿ ಸ್ವಾಗತಿಸಿ, ಕಾರ್ಯಕಾರಿ ಸಮಿತಿ ಸದಸ್ಯ ವೀರೇಂದ್ರ ಎಂ.ಸಿದ್ದಕಟ್ಟೆ ವಂದಿಸಿದರು. ವಿಜಯರಾಘವೇಂದ್ರ, ಕಾವ್ಯ ನಿರೂಪಿಸಿದರು.

ಹರ್ತಟ್ಟು ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇವಳ ವಾರ್ಷಿಕ ಪ್ರತಿಷ್ಠಾ ವರ್ಧಂತಿ ಸಂಪನ್ನ



ಕೋಟ: ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಹರ್ತಟ್ಟು ಗಿಳಿಯಾರು ಕೋಟ ಇದರ ವಾರ್ಷಿಕ ಪ್ರತಿಷ್ಠಾ ವರ್ಧಂತ್ಯೋತ್ಸವ ಕಾರ್ಯಕ್ರಮ ಶನಿವಾರ ಜರಗಿತು.

ಪೂರ್ವಾಹ್ನ ಪ್ರತಿಷ್ಠಾ ವರ್ಧಂತಿ ಉತ್ಸವದ ಅಂಗವಾಗಿ ಶ್ರೀ ಮಹಾಲಿಂಗೇಶ್ವರ ದೇವರಿಗೆ ನವಕ ಪ್ರಧಾನ ಕಲಶ ಸ್ನಪನಾಧಿವಾಸ ಹೋಮ ಹಾಗೂ ಪವಮಾನ ಕಲಶಾಭಿಷೇಕ ಪೂಜೆ, ಕಲಶಾಭಿಷೇಕ, ಮಹಾಪೂಜೆ ಅಪರಾಹ್ನ ಮಹಾಅನ್ನಸಂರ್ತಣೆ ,ಮಧ್ಯಾಹ್ನ ಶ್ರೀರಾಮ ಮಹಿಳಾ ಭಜನಾ ಮಂಡಳಿ, ಮಣೂರು ಹಾಗೂ ಸಂಜೆ ಶ್ರೀ ಕಲ್ಲಟ್ಟು ಮಹಿಳಾ ಭಜನಾ ಮಂಡಳಿ ಹರ್ತಟ್ಟು ಇವರಿಂದ ಭಜನಾ ಕಾರ್ಯಕ್ರಮ, ಸಂಜೆ ರಂಗಪೂಜೆ ಕಾರ್ಯಕ್ರಮ ನಡೆಯಿತು.

ಧಾರ್ಮಿಕ ಕಾರ್ಯಕ್ರಮವನ್ನು ತಂತ್ರಿಗಳಾದ ವೇದ ಮೂರ್ತಿ ಮಂಜುನಾಥ ಉಡುಪ ದೇಗುಲದ ಪ್ರಧಾನ ಅರ್ಚಕ ಸುಧೀರ್ ಐತಾಳ್ ನೇತೃತ್ವದಲ್ಲಿ ಜರಗಿತು. ದೇಗುಲದ ಅಧ್ಯಕ್ಷ ಶೇವಧಿ ಸುರೇಶ್ ಗಾಣಿಗ ದಂಪತಿಗಳು ಧಾರ್ಮಿಕ ಕಾರ್ಯದಲ್ಲಿ ಭಾಗಿಯಾದರು.

ದೇಗುಲದ ಕಾರ್ಯದರ್ಶಿ ಹರೀಷ ದೇವಾಡಿಗ, ಶ್ರೀಧರ ದೇವಾಡಿಗ,ಬಾಬು ಶೆಟ್ಟಿ,ಶೇಖರ್ ದೇವಾಡಿಗ, ತಿಮ್ಮ ಕಾಂಚನ್, ಶಾಂತ ಆಚಾರ್, ರಾಜು ಪೂಜಾರಿ ಹೋಬಳಿಮನೆ, ಸಂತೋಷ್ ದೇವಾಡಿಗ, ಸಂತೋಷ್ ಪೂಜಾರಿ, ಶೇವಧಿ ನಾಗರಾಜ ಗಾಣಿಗ,ಪ್ರಶಾಂತ್ ದೇವಾಡಿಗ ಸಹಿತ ಹಲವರು ಭಾಗಿಯಾದರು.



ಎಳಿಂಜೆ ಶ್ರೀ ಲಕ್ಷ್ಮೀಜನಾರ್ದನ ಮಹಾಗಣಪತಿ ದೇವಸ್ಥಾನದ ವಾರ್ಷಿಕ ಜಾತ್ರಾಮಹೋತ್ಸವದ ಪ್ರಯುಕ್ತ ಧ್ವಜಾರೋಹಣ ನಡೆಯಿತು.

ಮಕ್ಕಳಿಗೆ ಆಧ್ಯಾತ್ಮಿಕ ಶಿಕ್ಷಣ ಇಂದಿನ ಅಗತ್ಯ: ಡಾ.ತಲ್ಲೂರು

ಉಡುಪಿ: ಸಾಮಾಜಿಕ ಜಾಲತಾಗಳಲ್ಲಿ ಕಳೆದು ಹೋಗಿ ನಮ್ಮ ಸಂಸ್ಕೃತಿಯನ್ನು ಮರೆಯುತ್ತಿರುವ ಮಕ್ಕಳನ್ನು ಆಧ್ಯಾತ್ಮಿಕತೆಯತ್ತ ಸೆಳೆಯುವ ಜವಾಬ್ದಾರಿ ಇಂದಿನ ಹೆತ್ತವರ ಕರ್ತವ್ಯವಾಗಿದೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಹೇಳಿದ್ದಾರೆ.

ಅವರು ಕಲ್ಮಾಡಿ ಶ್ರೀ ಭಗವತಿ ಮಾರಿಕಾಂಬ ಸನ್ನಿಧಿಯ ಸಹಕಾರದೊಂದಿಗೆ ಶ್ರೀ ಭೈರವನಾಥೇಶ್ವರ ಸೇವಾ ಸಮಿತಿ, ಪೆರ್ಡೂರು ಹಾಗೂ ಮತ್ಸ್ಯರಾಜ್ ಗ್ರೂಪ್, ಮಲ್ಪೆ ಇವರ ಸಹಯೋಗದೊಂದಿಗೆ ಶ್ರೀಮನ್ಮಹಾಶಿವರಾತ್ರಿ ಪ್ರಯುಕ್ತ ಹಮ್ಮಿಕೊಂಡಿದ್ದ 'ಶಿವಗಾನಾಮೃತ' ಭಜನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮೊಬೈಲ್ ವ್ಯಸನದಿಂದ ಮುಕ್ತರಾಗಿ ಭಗವಂತನ ಆರಾಧನೆಯಲ್ಲಿ ಸುಲಭ ಸಾಧನವಾದ ಭಜನೆಯಲ್ಲಿ ತೊಡಗಿಸಿದರೆ ಮಕ್ಕಳು ಮಾನಸಿಕವಾಗಿ ಸಧೃಢರಾಗಿ ಜೀವನದಲ್ಲಿ ಮುಂದುವರಿಯುತ್ತಾರೆ. ದಾನಧರ್ಮಗಳತ್ತ ಅವರನ್ನು ಪ್ರೇರೇಪಿಸಿ ಭಗವಂತನ ಅನುಗ್ರಹದಿಂದ ಜೀವನ ಸಾರ್ಥಕಗೊಳಿಸುವತ್ತ ಚಿತ್ತ ಹರಿಸಬೇಕು ಎಂದರು.



ಇದೇ ಸಂದರ್ಭ ಮಾತನಾಡಿದ ನಗರಸಭೆ ಸದಸ್ಯ ಸುಂದರ ಕಲ್ಮಾಡಿ ಮಾತನಾಡಿ, ಎರಡೂ ಸಮಿತಿಗಳು ಪರಿಸರದಲ್ಲಿ ನಡೆಸುವ ಧಾರ್ಮಿಕ ಕಾರ್ಯಕ್ರಮಗಳು ಇಂದಿನ ಜನಾಂಗಕ್ಕೆ ಪ್ರೇರಕವಾಗಿವೆ ಎಂದರು.

ಶ್ರೀ ಭೈರವನಾಥೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಸತೀಶ ಕೋಟ್ಯಾನ್ ಅವರು ಸನ್ನಿಧಿಯ ವೈಶಿಷ್ಟವನ್ನು ವಿವರಿಸಿದರು.

ಉದ್ಯಮಿಗಳಾದ ನಾಗರಾಜ ಸುವರ್ಣ, ಪ್ರಸಾದ್ ರಾಜ್ ಕಾಂಚನ್, ಹರಿಯಪ್ಪ ಕೋಟ್ಯಾನ್ , ಸಾಧು ಸಾಲ್ಯಾನ್, ಮತ್ಸ್ಯರಾಜ್ ಗ್ರೂಪ್‌ನ ಕೇಶವ ಎಂ. ಕೋಟ್ಯಾನ್, ಅಭಿನಂದನ್ ಕೋಟ್ಯಾನ್, ಶ್ರೀ ಭಗವತಿ ಮಾರಿಕಾಂಬ ಸನ್ನಿಧಿಯ ಅಧ್ಯಕ್ಷ ಟಿ. ಚಂದ್ರಶೇಖರ್, ಶ್ರೀದೇವಿ ಜ್ಞಾನೋದಯ ಪಾಂಡುರಂಗ ಭಜನಾ ಮಂದಿರ, ಕಾನಂಗಿ ಅಧ್ಯಕ್ಷ ದಾಮೋದರ ಬಂಗೇರ ಉಪಸ್ಥಿತರಿದ್ದರು. ರವೀಂದ್ರ ನಾಡಿಗ್ ಸ್ವಾಗತಿಸಿ, ಉಪೇಂದ್ರ ಆಚಾರ್ಯ ವಂದಿಸಿದರು.

ಕಲ್ಲಬೆಟ್ಟು ಸರಕಾರಿ ಶಾಲೆಯಲ್ಲಿ ಮೆಟ್ರಿಕ್ ಮೇಳ

ಮೂಡುಬಿದಿರೆ : ಇಲ್ಲಿನ ಕಲ್ಲಬೆಟ್ಟು ಪಿಎಂಶ್ರೀ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಮೆಟ್ರಿಕ್ ಮೇಳ ನಡೆಯಿತು.

ಪುರಸಭೆಯ ನಿಕಟಪೂರ್ವ ವಾರ್ಡ್ ಸದಸ್ಯ ಜೊಸ್ಸಿ ಮಿನೇಜಸ್ ಮೆಟ್ರಿಕ್ ಮೇಳವನ್ನು ಉದ್ಘಾಟಿಸಿ ಮಾತನಾಡಿ, ಈ ಮೇಳದ ಮೂಲಕ ವಿದ್ಯಾರ್ಥಿಗಳು ಜೀವನ ಪಾಠ ಕಲಿಯಬಹುದು. ಸಾಧನೆ ಮಾಡಲು ಕಠಿಣ ಪರಿಶ್ರಮ, ಉತ್ತಮ ವ್ಯಕ್ತಿತ್ವ ಮುಖ್ಯ. ಯಶಸ್ವಿ ಉದ್ಯಮಿ, ಸಾಧಕರಾಗಲು ಪರಿಶ್ರಮದೊಂದಿಗೆ ಗುರಿಯೂ ಮುಖ್ಯ ಎಂದ ಅವರು, ವಿದ್ಯಾರ್ಥಿಗಳು ರಾತ್ರಿ ಕನಸು ಕಾಣದೆ ಹಗಲುಗನಸನ್ನು ಕಾಣಿ ಅದು ನಿಮ್ಮ ಯಶಸ್ಸಿಗೆ ಕಾರಣವಾಗುತ್ತದೆ ಎಂದು ಸಲಹೆ ನೀಡಿದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸುಂದರ್ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ವಿರೂಪಾಕ್ಷಪ್ಪ ಭಾಗವಹಿಸಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ



ವ್ಯಕ್ತ ಪಡಿಸಿದರು.ಸಿ. ಆರ್. ಪಿ ಮಹೇಶ್ವರಿ ಅತಿಥಿಯಾಗಿದ್ದರು. ಉಪಾಧ್ಯಕ್ಷೆ ಗಾಯತ್ರಿ, ಸದಸ್ಯೆ ಸೌಧ, ಮುಖ್ಯ ಶಿಕ್ಷಕಿ ನಿಶಾ ಹಾಗೂ ಶಿಕ್ಷಕಿಯರು ಮಹಮ್ಮದ್ ಬಶೀರ್ ಸ್ವಾಗತಿಸಿದರು. ಪೂಜಾ ನಿರೂಪಿಸಿದರು. ತಿಲಕ್ ಚಂದ್ರ ವಂದಿಸಿದರು.

ವ್ಯವಹಾರಿಕ ಜ್ಞಾನ, ಸ್ವಾವಲಂಬಿ ಜೀವನಕ್ಕೆ ಸಹಕಾರಿ

ವ್ಯವಹಾರಿಕ ಜ್ಞಾನ, ಸ್ವತಂತ್ರ ಉದ್ಯಮ, ಸ್ವಾವಲಂಬಿ ಜೀವನ ನಡೆಸಲು ಬೇಕಾದಂತಹ ಆತ್ಮಸ್ಥೈರ್ಯ ಮಕ್ಕಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಆಯೋಜಿಸಿದ ಈ ಮೇಳದಲ್ಲಿ ವಿದ್ಯಾರ್ಥಿಗಳು ವಿವಿಧ ರೀತಿಯ ತರಕಾರಿಗಳ ಒಳಗೊಂಡ ಅಂಗಡಿ, ಹೂವಿನ, ಹಣ್ಣು ಹಂಪಲುಗಳು, ಸಿಹಿ ತಿನಿಸು, ತಂಪು ಪಾನೀಯಗಳು, ಆರೋಗ್ಯವರ್ಧಕ ತಿನಿಸುಗಳು, ಫ್ಯಾನ್ಸಿ, ಚರ್ ಮುರಿ, ತರಕಾರಿ, ಹಣ್ಣುಗಳ ಸ್ಲ್ಯಾಡ್ಸ್, ಪಾನಿಪುರಿ, ಹೂವಿನ ಗಿಡಗಳು, ಐಸ್ ಕ್ಯಾಂಡಿ ಮತ್ತು ದಿನಸಿ ಸಾಮಾಗ್ರಿಗಳನ್ನು ಮಾರಾಟ ಮಾಡಿದರು.

ಸುತ್ತಮುತ್ತ

ಫೆ.18 ಕೆ ಕೋಟದಲ್ಲಿ ಶ್ರವಣ ತಪಾಸಣೆ ಶಿಬಿರ

ಕೋಟ: ರೋಟರಿ ಕ್ಲಬ್ ಕೋಟ ಸಾಲಿಗ್ರಾಮದ ನೇತೃತ್ವದಲ್ಲಿ ಕೋಟ ಸಹಕಾರಿ ವ್ಯವಸಾಯ ಸಂಘ, ಬ್ರಹ್ಮಾವರ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಟೀಮ್ ಈಶ್ವರ ಮಲ್ಪೆ ಸಹಯೋಗದೊಂದಿಗೆ ಕಿವಿಯ ಶ್ರವಣ ತಪಾಸಣೆ ಉಚಿತ ಶಿಬಿರ ಹಾಗೂ ರಿಯಾಯಿತಿ ದರದಲ್ಲಿ ಶ್ರವಣ ಯಂತ್ರ ವಿತರಣೆ ಕಾರ್ಯಕ್ರಮ ಫೆ.18ರಂದು ಬೆಳಗ್ಗೆ 10ರಿಂದ 5 ಗಂಟೆ ತನಕ ಕೋಟ ಸಹಕಾರಿ ಸಂಘದ ಬಿ.ಸಿ. ಹೊಳ್ಳ ಸಭಾಂಗಣದಲ್ಲಿ ಜರಗಲಿದೆ. ಶಿಬಿರದಲ್ಲಿ ತಪಾಸಣೆಗೊಳಪಟ್ಟ ಅರ್ಹರಿಗೆ ಶ್ರವಣ ಯಂತ್ರಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ದೂ.ಸಂ. 8951804399ನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ನಾಳೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಕುಂದಾಪುರ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಜಪ್ತಿ, ಮೊಳಹಳ್ಳಿ, ಬಳ್ಕೂರು, ಅಂಪಾರು, ವಾಟರ್‌ಸಪ್ಲೈ, ಸಂಗಂ, ಖಾರ್ವಿಕೇರಿ, ಕೋಡಿ, ತೆಕ್ಕಟ್ಟೆ, ಕುಂಭಾಶಿ, ಗುರುಕುಲ ಮತ್ತು ಕೋಟೇಶ್ವರ ಮಾರ್ಗಗಳಲ್ಲಿ ನಿರ್ವಹಣಾ ಕಾಮಗಾರಿಯನ್ನು ಫೆ.17ರಂದು ಬೆಳಿಗ್ಗೆ 9ರಿಂದ ಸಂಜೆ 5:30ರವರೆಗೆ ಹಮ್ಮಿಕೊಂಡಿರುವುದರಿಂದ ಮೊಳಹಳ್ಳಿ, ಜಪ್ತಿ, ಕೊರ್ಗಿ, ಹೊಂಬಾಡಿ-ಮಂಡಾಡಿ, ಅಂಪಾರು, ಬಳ್ಕೂರು, ಕಂದಾವರ, ಆನಗಳ್ಳಿ, ಬಸ್ರೂರು, ಕೋಣಿ, ಯಡಾಡಿ-ಮತ್ಯಾಡಿ, ಕೋಡಿ, ಹಂಗಳೂರು, ಕೋಟೇಶ್ವರ, ವಕ್ವಾಡಿ, ತೆಕ್ಕಟ್ಟೆ ಕುಂಭಾಶಿ, ಕುಂದಾಪುರ, ಸಂಗಂ ಮತ್ತು ಖಾರ್ವಿಕೇರಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ಅಂಬಲಪಾಡಿ ಸರ್ವೀಸ್ ರಸ್ತೆ ವಿಸ್ತರಣೆಗೆ ಮನವಿ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66 ಅಂಬಲಪಾಡಿ ಸರ್ವಿಸ್ ರಸ್ತೆಯ ಅಗಲೀಕರಣ ಮತ್ತು ವಿವಿಧ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಮುಗಿಸುವಂತೆ ರಾಷ್ಟ್ರೀಯ ಹೆದ್ದಾರಿ 66 ಅಂಬಲಪಾಡಿ ಬಳಕೆದಾರರ ಹಿತ ರಕ್ಷಣಾ ವೇದಿಕೆಯ ವತಿಯಿಂದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಮನವಿ ಸಲ್ಲಿಸಲಾಯಿತು. ಭೂಸ್ವಾಧೀನ ಮಾಡಿರುವ ದಾಖಲೆಗಳ ಸಹಿತ ಅಧಿಕಾರಿಗಳೊಂದಿಗೆ ನಿಗದಿತ ಕಾಲ ಮಿತಿಯೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಮಾರ್ಕಿಂಗ್ ಮಾಡುವ ಮೂಲಕ ಕಾಮಗಾರಿಗಳನ್ನು ಪೂರ್ಣಮಾಡಬೇಕು ಎಂದು ಆಗ್ರಹಿಸಲಾಯಿತು. ಸಂಸದರು ಮನವಿಯಲ್ಲಿ ಉಲ್ಲೇಖಿಸಿರುವ ಪ್ರಮುಖ ಬೇಡಿಕೆಗಳಿಗೆ ಸ್ಪಂದನೆ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ 66 ಅಂಬಲಪಾಡಿ ಬಳಕೆದಾರರ ಹಿತರಕ್ಷಣಾ ವೇದಿಕೆಯ ಸಂಚಾಲಕ ಭಾಸ್ಕರ್ ಶೆಟ್ಟಿ ಕಡೆಕಾರು, ಬಿಜೆಪಿ ಜಿಲ್ಲಾ ಕೋಶಾಧಿಕಾರಿ ಪ್ರವೀಣ್ ಕುಮಾರ್ ಶೆಟ್ಟಿ ಕಪ್ಪೆಟ್ಟು, ನಿಕಟಪೂರ್ವ ನಗರಸಭಾ ಸದಸ್ಯ ಹರೀಶ್ ಶೆಟ್ಟಿ ಅಂಬಲಪಾಡಿ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಶಿವಕುಮಾರ್ ಅಂಬಲಪಾಡಿ ಹಾಗೂ ಶ್ರೀಕಾಂತ್ ಶೆಟ್ಟಿ ಅಂಬಲಪಾಡಿ ಉಪಸ್ಥಿತರಿದ್ದರು.

ಬಂಟಕಲ್ಲು ಕಾಲೇಜು: ವಿಟಿಯು ಮಾಹಿತಿ ಕಾರ್ಯಾಗಾರ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಕೇಂದ್ರ ಗ್ರಂಥಾಲಯ ವಿಭಾಗವು ಐಇಇಇ ವಿದ್ಯಾರ್ಥಿ ಘಟಕದ ಸಹಯೋಗದೊಂದಿಗೆ ಗುರುವಾರ ಎಬ್‌ಸ್ಕೊ ಆ್ಯಂಡ್ ಐಇಇಇ ಎಕ್ಸ್‌ಪ್ಲೋರ್ ವಿಟಿಯು ಕನ್ಸೋರ್ಟಿಯಮ್ ರಿಸೋರ್ಸಸ್ ವಿಷಯದ ಕುರಿತು ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಿತು. ಎಬ್ಸ್ಕೊ ಐಇಇಇ ಎಕ್ಸ್‌ಪ್ಲೋರ್ ಸಂಸ್ಥೆಗಳ ತರಬೇತಿ ವ್ಯವಸ್ಥಾಪಕ ಎಂ.ಎಸ್. ಶ್ರೀನಿವಾಸ ಅವರು ಮುಖ್ಯ ಅತಿಥಿಗಳಾಗಿದ್ದರು. ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಸಂಶೋಧನಾ ಲೇಖನಗಳನ್ನು ಹೇಗೆ ಹುಡುಕುವುದು ಮತ್ತು ಪ್ರಾಜೆಕ್ಟ್‌ಗಳು, ಪ್ರಕಟಣೆಗಳು ಹಾಗೂ ಉನ್ನತ ಶಿಕ್ಷಣ ಸಿದ್ಧತೆಗೆ ಪ್ರವೇಶ ತಯಾರಿ ಎಂಬುದರ ಬಗ್ಗೆ ಮಾರ್ಗದರ್ಶನ ನೀಡಲಾಯಿತು. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಅಗತ್ಯವಿರುವ ಜರ್ನಲ್‌ಗಳು, ಮಾಹಿತಿಗಳು, ಇ-ಪುಸ್ತಕಗಳು, ಸಮ್ಮೇಳನ ವರದಿಗಳು ಹಾಗೂ ಇತರ ಇ-ಲರ್ನಿಂಗ್ ಸಂಪನ್ಮೂಲಗಳ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲರು, ಡೀನ್‌ಗಳು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಂಡರು. ಕಾಲೇಜಿನ ಗ್ರಂಥಪಾಲಕ ದೀಪಕ್ ಎಸ್ ಮತ್ತು ಗ್ರಂಥಾಲಯ ಸಂಯೋಜಕಿ ಸೌಂದರ್ಯ, ಐಇಇಇ ಘಟಕದ ಸಂಯೋಜಕ ಡಾ. ನಾಗರಾಜ ರಾವ್ ಕಾರ್ಯಕ್ರಮವನ್ನು ಸಂಯೋಜಿಸಿದರು.

ಸುಳ್ಯ ರಂಗಮನೆಯಲ್ಲಿ 'ರಂಗ ಸಂಭ್ರಮ' ಉದ್ಘಾಟನೆ

ವೈವಿಧ್ಯಮಯ ಸಾಂಸ್ಕೃತಿಕ ಉತ್ಸವ ಆರಂಭ



ಸುಳ್ಯ: ಸುಳ್ಯ ಹಳೆಗೇಟಿನಲ್ಲಿರುವ ರಂಗಮನೆ ಸಾಂಸ್ಕೃತಿಕ ಕಲಾ ಕೇಂದ್ರ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಡೆದ ರಂಗಸಂಭ್ರಮ ವೈವಿಧ್ಯಮಯ ಸಾಂಸ್ಕೃತಿಕ ಉತ್ಸವಕ್ಕೆ ಶನಿವಾರ ವಿಧ್ಯುಕ್ತವಾಗಿ ಚಾಲನೆಗೊಂಡಿತು.

ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಪ್ರತಿಭಾ ಎಲ್. ಸಾಮಗ ರಂಗಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿ, ಅಪ್ಪ ಅಮ್ಮ ಮಾಡಿದ ಪುಣ್ಯದ ಫಲದಿಂದ ರಂಗಮನೆಯಲ್ಲಿ ಕಲೆ ತಲೆತಲಾಂತರದಿಂದ ಬೆಳೆದು ಬಂದಿದ್ದು ಅನೇಕ ಕಲಾವಿದರಿಗೆ ಜೀವನ್‌ರಾಮ್ ಜೀವನ ಕೊಟ್ಟಿದ್ದಾರೆ. ಇಂಥ ಚಟುವಟಿಕೆ ಇಲ್ಲಿ ನಿರ್ವಿಘ್ನವಾಗಿ ನಡೆದು ನಿತ್ಯ ರಂಗಮನೆಯಾಗಲಿ ಎಂದು ಹೇಳಿದರು.

ಹಿರಿಯ ಸಾಮಾಜಿಕ ಧುರೀಣ ಜಾಕೆ ಮಾಧವ ಗೌಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಯಕ್ಷ ರಂಗಾಯಣ ಕಾರ್ಕಳ ಇದರ ಆಡಳಿತಾಧಿಕಾರಿ, ಉಡುಪಿ ಜಿಲ್ಲಾ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಸಂಭ್ರಮಕ್ಕೆ ಶುಭಹಾರೈಸಿದರು.

ಇದೇ ಸಂದರ್ಭದಲ್ಲಿ ಯೋಗದಲ್ಲಿ ಸಾಧನೆ ಮಾಡುತ್ತಿರುವ ಬಾಲ ಪ್ರತಿಭೆಗಳಾದ ಸೋನ ಅಡ್ಕಾರು ಮತ್ತು ಆರಾಧ್ಯ ದೇರಾಜೆ ಬೆಂಗಳೂರು ಇವರನ್ನು ರಂಗಮನೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.ರಂಗಮನೆ ಸಂಚಾಲಕ ಡಾ. ಜೀವನರಾಮ್ ಸ್ವಾಗತಿಸಿದರು. ಸುಶ್ಮಿತಾ ಆದಿತ್ಯ ಚಿದ್ಗಲ್ ಕಾರ್ಯಕ್ರಮ ನಿರೂಪಿಸಿದರು.

ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ

ಫೆ.14ರ ಸಂಜೆ 5.45ರ ಸುಜನಾ ಯಕ್ಷ ಶಿಕ್ಷಣ ಕೇಂದ್ರದ ಕಲಾವಿದರಿಂದ, ಕುಮಾರ ಸುಬ್ರಹ್ಮಣ್ಯ ವಳಕುಂಜ ನಿರ್ದೇಶನದಲ್ಲಿ ಚೆಂಡೆ-ಮದ್ದಳೆ ಝೇಂಕಾರ, ಆಳ್ವಾಸ್ ರಂಗ ಅಧ್ಯಯನ ಕೇಂದ್ರ ಮೂಡುಬಿದಿರೆ ಡಾ. ಜೀವನ್ ರಾಂ ಸುಳ್ಯ ಸಂಯೋಜನೆಯಲ್ಲಿ ವೈವಿಧ್ಯಮಯ ಹಾಡುಗಳ ರಂಗ ಪ್ರಸ್ತುತಿ ಕನ್ನಡ ಗಾನ ಗುಚ್ಛ ಆರಾಧ್ಯ ದೇರಾಜೆ ಬೆಂಗಳೂರು ಹಾಗೂ ಸೋನ ಅಡ್ಕಾರು, ಸುಳ್ಯ ಇವರಿಂದ ಯೋಗ ಪ್ರದರ್ಶನ, ಬಳಿಕ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡುಬಿದಿರೆ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಕಲಾವಿದರು ಅಭಿನಯಿಸುವ, ಡಾ. ಜೀವನ್ ರಾಂ ಸುಳ್ಯ ನಿರ್ದೇಶನದ ಕರ್ಣಾಸ್ತಮಾನ ನಾಟಕ ಪ್ರದರ್ಶನವಾಯಿತು.

ಶ್ರೀ ಸಂತ ಸೇವಾಲಾಲ್ ಜಯಂತಿ




ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ, ಕರಾವಳಿ ಶ್ರೀ ಸೇವಾಲಾಲ್ ಬಂಜಾರ (ಲಂಬಾಣಿ) ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಮಂಗಳೂರು ನಗರದ ಪದವು ಶ್ರೀ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ಭಾನುವಾರ ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾಧ್ಯಾಪಕ ಡಾ. ದಿನಕರ ಪಚ್ಚನಾಡಿ, ಶ್ರೀ ಸಂತ ಸೇವಾಲಾಲ್ ಅವರು ಸತ್ಯ, ಅಹಿಂಸೆ ಹಾಗೂ ವ್ಯಸನ ಮುಕ್ತ ಬದುಕು ರೂಪಿಸಲು ಬೋಧನೆ ಮಾಡಿ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ದುಡಿದವರು. ಅವರ ಆದರ್ಶ ಗುಣ ನಮಗೆಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ಇಂದಿನ ಯುವ ಪೀಳಿಗೆಯ ಈ ಮಹಾನ್ ಸಂತರ ವಿಚಾರ ತತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಆ ತತ್ವವೇ ಬದುಕಿಗೆ ದಾರಿದೀಪವಾಗಿದೆ. ಸಮಾಜದ ಏಳಿಗೆಗೆ ಎಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಸಹಾಯಕನಿರ್ದೇಶಕ ರಾಜೇಶ್ ಜಿ. ಸ್ವಾಗತಿಸಿದರು. ವಾಲ್ಮೀಕಿ ಆಶ್ರಮ ಶಾಲೆಯ ಮೇಲ್ವಿಚಾರಕಿ ಎಂ. ಸರಸ್ವತಿ ನಿರೂಪಿಸಿದರು.

ಡಾ.ನಿತ್ಯಾನಂದ ಶೆಟ್ಟಿ ಅವರ 'ಅಳವು ಅರಿಯದ ಭಾಷೆ' ಪುಸ್ತಕದ ಬಿಡುಗಡೆ



ಮಂಗಳೂರು: ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ನಿತ್ಯಾನಂದ ಬಿ. ಶೆಟ್ಟಿ ಅವರ, ಕನ್ನಡ ಸಂಘ ಕಾಂತಾವರ ಹೊರತಂದಿರುವ 'ಅಳವು ಅರಿಯದ ಭಾಷೆ' ಕಲೆ, ಸಮಾಜ, ಇತಿಹಾಸ ಪುಸ್ತಕ ಬಿಡುಗಡೆ ಸಮಾರಂಭ ನಗರದ ಸಂತ ಅಲೋಶಿಯಸ್ ಕಾಲೇಜಿನ ರಂಗ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಭಾಗದ ವತಿಯಿಂದ ಸಂತ ಅಲೋಶಿಯಸ್ ವಿವಿಯ ಎಲ್.ಎಫ್. ರಸ್ಕಿನ್ಹ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಪಾವಂಜೆ ಮೇಳದ ಪ್ರಧಾನ ಭಾಗವತ ಪಟ್ಲ ಸತೀಶ ಶೆಟ್ಟಿ, ಯಕ್ಷಗಾನ ಕಲೆ ಪ್ರಪಂಚದ ಶ್ರೀಮಂತ ಕಲೆಯಾಗಿ ಗುರುತಿಸಿಕೊಂಡಿದೆ. ಇಂತಹ ಕಲೆಯ ಕುರಿತಾದ ಈ ಕೃತಿ ರಚನೆ ಅಭಿನಂದನಾರ್ಹ ಎಂದರು.

ನೃತ್ಯ, ಅಭಿನಯ, ಸಂಗೀತ ಸೇರಿದಂತೆ ಎಲ್ಲಾ ರೀತಿಯ ಕಲಾ ಪ್ರಾಕಾರಗಳನ್ನು ಒಳಗೊಂಡ ಯಕ್ಷಗಾನ ಶುದ್ಧವಾದ ಕನ್ನಡವನ್ನು ಇಂದಿಗೂ ಉಳಿಸಿ, ಬೆಳೆಸುತ್ತಿದೆ. ಯಕ್ಷಗಾನ ಕಲೆಗೆ ಜಾತಿ, ಧರ್ಮ ಮೀರಿ ಕಲಾವಿದರ ಕೊಡುಗೆ ಇದೆ. ಅವರ ಪ್ರೀತಿ ಇದೆ ಎಂದು ಹೇಳಿದ ಅವರು, ಪುಂಡು ವೇಷಧಾರಿಯಾಗಿ ಪ್ರಸಿದ್ಧಿ ಪಡೆದಿರುವ ಕ್ರಿಶ್ಚಿಯನ್ ಬಾಬು ಹಾಗೂ ಯಕ್ಷಗಾನದ ಹಿರಿಯ ಅರ್ಥದಾರಿ ಜಬ್ಬಾರ್ ಸಮೊ ಅವರನ್ನು ನೆನಪಿಸಿಕೊಂಡರು.

ಕೃತಿಯ ಬಗ್ಗೆ ಮಾತನಾಡಿದ ಕಾರ್ಕಳ ಯಕ್ಷ ರಂಗಾಯಣದ ನಿರ್ದೇಶಕ ಬಿ.ಆರ್. ವೆಂಕಟರಮಣ ಐತಾಳ, ಯಕ್ಷಗಾನದ ಇತಿಹಾಸದ ನೋಟ, ಕಲೆ ಸಾಹಿತ್ಯ- ಸಾಮಾಜಿಕ- ರಾಜಕೀಯ ಚಿಂತನೆಯನ್ನು ಪ್ರಸ್ತುತ ಪಡಿಸುವ ವಿಶೇಷ ರೀತಿಯ ಗ್ರಂಥ ಇದಾಗಿದೆ. ಇದು ಇತರ ಭಾಷೆಗಳಿಗೆ ತರ್ಜುಮೆ ಆಗಬೇಕಾದ ಕೃತಿ ಎಂದರು.

ಯಕ್ಷಗಾನದಲ್ಲಿ ಮಾತುಗಾರಿಕೆ ಪ್ರಮುಖವಾಗಿದ್ದು ಮಾತು ಹದ ಮೀರಿದರೆ, ಲಯ ತಪ್ಪಿದರೆ ಪತನದ ಹಾದಿ ಹಿಡಿಯುತ್ತದೆ. ಕರಾವಳಿಯಲ್ಲಿ ಉಂಟಾಗಿರುವ ಈ ಸ್ಥಿತಿಯ ವಿವರವನ್ನು ನಿತ್ಯಾನಂದ ಶೆಟ್ಟಿ ಅವರು ಈ ಕೃತಿಯಲ್ಲಿ ನೀಡಿದ್ದಾರೆ. ಕಾವ್ಯ ಮೀಮಾಂಸೆಯ ಕುರಿತಂತೆ ಕೃತಿಗಳು ಪ್ರಕಟವಾಗಿದ್ದು, ಯಕ್ಷಗಾನ ಕಲಾ ಮೀಮಾಂಸೆಯಾಗಿ ಜನ ಜೀವನದ ಬದುಕಿನ ಮೀಮಾಂಸೆಯಾಗಿ ಈ ಕೃತಿ ಹೊರ ಬಂದಿದೆ ಎಂದು ಹೇಳಿದರು.

ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಸಹ ಕುಲಪತಿ ರೆ.ಫಾ. ಡಾ. ಮೆಲ್ವಿನ್ ಡಿಕುನ್ಹ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಕಿರಣ್ ಮಲ್ಯ, ಪ್ರಾಧ್ಯಾಪಕರಾದ ಡಾ. ದಿನೇಶ್ ನಾಯಕ್, ಮಹಾಲಿಂಗ ಭಟ್, ಕೃತಿಕಾರ ಡಾ. ನಿತ್ಯಾನಂದ ಶೆಟ್ಟಿ ಉಪಸ್ಥಿತರಿದ್ದರು. ಅಭಿಷೇಕ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಬಳಿಕ 'ಹೊತ್ತಗೆಯ ಹೊತ್ತು' ಸಂವಾದ ನಡೆಯಿತು.

ಮೊಬೈಲ್ ನೆಟ್‌ವರ್ಕ್ ಸಮಸ್ಯೆ: ಕಟ್‌ಬೆಲ್ತೂರು ಗ್ರಾಮಸಭೆಯಲ್ಲಿ ಪ್ರಸ್ತಾಪ



ಕುಂದಾಪುರ: ಕಟ್‌ಬೆಲ್ತೂರು ಗ್ರಾಮ ಪಂಚಾಯತ್ ಗ್ರಾಮಸಭೆ ಕಟ್ ಬೆಲ್ತೂರಿನ ಶ್ರೀ ಭದ್ರಮಹಾಕಾಳಿ ಸಭಾಭವನದಲ್ಲಿ ಮಂಗಳವಾರ ನಡೆಯಿತು.

ಕಟ್‌ಬೆಲ್ತೂರು ಹಾಗೂ ದೇವಲ್ಕುಂದ ಗ್ರಾಮಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಬಗ್ಗೆ ಗ್ರಾಮಸ್ಥರು ಪ್ರಸ್ತಾಪಿಸಿದರು. ಇದಕ್ಕೆ ಸಂಬಂಧಪಟ್ಟ ಬಿಎಸ್ಸೆನ್ನೆಲ್ ಹಾಗೂ ಖಾಸಗಿ ಕಂಪೆನಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಹೊಸ ಟವರ್ ನಿರ್ಮಾಣಕ್ಕೆ ಪತ್ರ ಬರೆಯಲಾಗುವುದು ಎನ್ನುವ ಉತ್ತರ ಬಂತು. ಇನ್ನು ಜೆಜೆಎಂ ನೀರಾವರಿ ಪೈಪ್ ಲೈನ್ ಕಾಮಗಾರಿ ಪೂರ್ಣಗೊಳ್ಳದೆಯೇ, ಹಿಂದಿನ ಪಿಡಿಒ ಅವರು ಪೂರ್ಣಗೊಂಡಿದೆ ಎನ್ನುವುದಾಗಿ ಅನುಮತಿ ಪತ್ರ ಕೊಟ್ಟಿರುವ ಕುರಿತು ಭಾರೀ ಚರ್ಚೆಗೆ ಕಾರಣವಾಯಿತು. ದೇವಲ್ಕುಂದದಲ್ಲಿ ಕ್ರೈಸ್ತರ ಹೊಸ ಪ್ರಾರ್ಥನಾ ಮಂದಿರಕ್ಕೆ ಅನುಮತಿ ಕೋರಿ, ಗ್ರಾ.ಪಂ.ಗೆ ಅರ್ಜಿ ಸಲ್ಲಿಕೆಯಾಗಿದ್ದು, ಈ ಬಗ್ಗೆ ಸಾಮಾನ್ಯಸಭೆಯಲ್ಲಿ ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗುವುದು ಎಂದು ತೀರ್ಮಾನಿಸಲಾಯಿತು.

ಬಾಳಿಕೆರೆ ಸಮೀಪದ ಆತ್ರಾಡಿ ಕಿಂಡಿ ಅಣೆಕಟ್ಟಿನಲ್ಲಿ 1 ಗೇಟು ತೆಗೆದು ನೀರು ಹೊರ ಬಿಡಲಾಗುತ್ತಿದ್ದು, ಅದನ್ನು ಮುಚ್ಚುವಂತೆ ಆ ಭಾಗದ ರೈತರು ಮನವಿ ಮಾಡಿದ್ದು, ಈ ಸಂಬಂಧ ಪತ್ರ ಬರೆಯುವ ತೀರ್ಮಾನವಾಯಿತು. ಜಾಲಾಡಿ- ಹರೇಗೋಡು ಭಾಗದಲ್ಲಿ ಉಪ್ಪು ನೀರಿನ ಸಮಸ್ಯೆಯಿದ್ದು ಹೊಸ ವೆಂಟೆಡ್ ಡ್ಯಾಂಗಾಗಿ ಶಾಸಕರು, ಸಂಸದರು, ಸಣ್ಣ ನೀರಾವರಿ ಇಲಾಖೆಗೆ ಪತ್ರ ಬರೆಯಲಾಗುವುದು, ಹರೆಗೋಡು ಭಾಗದಲ್ಲಿ ಕೃಷಿಗಾಗಿ ಟಿಲ್ಲರ್, ಕೊಯ್ಲು ಯಂತ್ರ ಬರಲು ಕಾಲು ಸಂಕದ ಅಗತ್ಯವಿರುವುದಾಗಿ ರೈತರು ಆಗ್ರಹಿಸಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಕಂದಾಯ, ವಾರಾಹಿ ನಿಗಮ, ಮೆಸ್ಕಾಂ ಇಲಾಖೆ, ಪಶು ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯಿಂದ ಸಿಗುವಂತಹ ಸೌಲಭ್ಯಗಳ ಮಾಹಿತಿ ನೀಡಿದರು. ಅಧ್ಯಕ್ಷೆ ವೈಶಾಲಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ರಾಮ ಶೆಟ್ಟಿ ಸದಸ್ಯರಾದ ವಿಮಲಾ, ಶ್ವೇತಾ, ನಾಗರಾಜ್ ಪುತ್ರನ್, ಶಾಲಿನಿ ಶೆಟ್ಟಿ ಅಶೋಕ್ ಬಳೆಗಾರ್, ಶರತ್ ಕುಮಾರ್ ಶೆಟ್ಟಿ ಜ್ಯೋತಿ, ಸವಿತಾ ಇದ್ದರು. ಗ್ರಾ.ಪಂ. ಪಿಡಿಒ ರೇಖಾ ಕಾರ್ಯಕ್ರಮ ನಿರೂಪಿಸಿ, ಕಾರ್ಯದರ್ಶಿ ಸರೋಜಾ ವಂದಿಸಿದರು.

ಎರ್ಮಾಳು ತೆಂಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ರೀಡೋತ್ಸವ



ಪಡುಬಿದ್ರಿ: ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಎರ್ಮಾಳು ತೆಂಕ ಇದರ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ಪೂರ್ವಭಾವಿಯಾಗಿ ಕ್ರೀಡೋತ್ಸವ ಕಾರ್ಯಕ್ರಮ ಶಾಲಾ ಮೈದಾನದಲ್ಲಿ ಜರುಗಿತು.

ಹಳೆ ವಿದ್ಯಾರ್ಥಿಯಾಗಿದ್ದ ಡಾ. ವೈ ಎನ್ ಶೆಟ್ಟಿ ಉದ್ಘಾಟಿಸಿದರು. ಅಧ್ಯಕ್ಷರಾಗಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶಿವಪ್ರಸಾದ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಮಾ. 4ಕ್ಕೆ ಹಳೆ ವಿದ್ಯಾರ್ಥಿ ಸಂಘದಿಂದ ಸ್ನೇಹ ಸಮ್ಮೇಳನ ನಡೆಯಲಿದೆ ಎಂದರು. ಜಿ.ಪಂ. ಮಾಜಿ ಉಪಾಧ್ಯಕ್ಷೆ ಶೀಲಾ ಕೆ. ಶೆಟ್ಟಿ, ತೆಂಕ ಪಂಚಾಯತ್ ಅಧ್ಯಕ್ಷ ಸುರೇಖಾ, ಉಪಾಧ್ಯಕ್ಷೆ ಕಸ್ತೂರಿ ಪ್ರವೀಣ್, ಶಾರದಾ ಕೆ. ಪೂಜಾರಿ ಜ್ಯೋತಿ ಶೆಟ್ಟಿ, ರಾಮಕೃಷ್ಣ ರಾವ್, ಕೇಶವ ಮೊಯ್ಲಿ ಪ್ರಶಾಂತ ದೇವಾಡಿಗ, ರವಿಕಿರಣ್, ಆಕಾಶ ವೈ. ದಾಮೋದರ್ ರತ್ನಾಕರ್ ಕೋಟ್ಯಾನ್ ಅಮ್ಮಣಿ ವಿನೋದ ಮಲ್ಲಿಕಾ ಚೈತ್ರ ಇದ್ದರು.

ಕುಕ್ಕಿಪಾಡಿ ಗ್ರಾ.ಪಂ.: ಗೌರವಾರ್ಪಣೆ



ಬಂಟ್ವಾಳ: ಕುಕ್ಕಿಪಾಡಿ ಗ್ರಾಮ ಪಂಚಾಯತ್‌ನಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತಾವಧಿ ಕೊನೆಯ ಸಾಮಾನ್ಯಸಭೆಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ, ಆಶಾ ಕಾರ್ಯಕರ್ತರು, ಸಂಜೀವಿನಿ ಸೇವಕರು, ಆರೋಗ್ಯ ಇಲಾಖೆಯ ದಾದಿಯರು, ಸಮುದಾಯ ಹೆಲ್ತ್ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಹಾಗೂ ಸಿಬ್ಬಂದಿಗಳನ್ನು ಗೌರವಿಸಲಾಯಿತು.

ಅಧ್ಯಕ್ಷ ಶೇಖರ್ ಶೆಟ್ಟಿ ಬದ್ಯಾರು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಬೇಬಿ ಪೂಜಾರಿ ದೇವಸ, ಸದಸ್ಯರಾದ ಲಿಂಗಪ್ಪ ಪೂಜಾರಿ ಹಲಯಿ, ಯೋಗೀಶ್ ಆಚಾರ್ಯ, ದಿನೇಶ್ ಸುಂದರ ಶಾಂತಿ, ಚಂದ್ರ ಪೂಜಾರಿ, ಸುಜಾತಾ ಪೂಜಾರಿ, ಪ್ರತಿಭಾ ಶೆಟ್ಟಿ, ಶೋಭಾ ಕುಲಾಲ್, ಗೀತಾ ನಾಯ್ಕ್, ಪೂರ್ಣಿಮಾ ರವಿರಾಜ್, ಪುಷ್ಪ ಪಿಡಿಒ ಪದ್ಮಾ ನಾಯ್ಕ್, ಕಾರ್ಯದರ್ಶಿ ಪ್ರೇಮಾ ನಾಯ್ಕ್, ಸಿದ್ದಕಟ್ಟೆ ಸಿಎ ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು, ನಿರ್ದೇಶಕ ರಾಜೇಶ್ ಶೆಟ್ಟಿ ಇದ್ದರು.

ಕರಿಯಂಗಳ ಗ್ರಾ.ಪಂ.: 'ಪಂಚ ಯಾನ' ಪುಸ್ತಕ ಬಿಡುಗಡೆ, ಸದಸ್ಯರಿಗೆ ಗೌರವಾರ್ಪಣೆ



ಬಂಟ್ವಾಳ: ಕರಿಯಂಗಳ ಗ್ರಾಮ ಪಂಚಾಯತ್‌ನಲ್ಲಿ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ಅವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಗೌರವ ಸಮರ್ಪಣೆ ಮತ್ತು ಐದು ವರ್ಷಗಳ ಅವಧಿಯ ಸಾಧನೆಗಳ 'ಪಂಚ ಯಾನ' ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಪೊಳಲಿ ರಾಮಕೃಷ್ಣ ತಪೋವನದ ಶ್ರೀ ವಿವೇಕ ಚೈತನ್ಯಾನಂದ ಸ್ವಾಮೀಜಿ ಪುಸ್ತಕ ಬಿಡುಗಡೆಗೊಳಿಸಿದರು. ಜುಮ್ಮಾ ಮಸೀದಿ ಗುರು ಬಾಬಾ ಫಕ್ರುದ್ದೀನ್, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಸಚಿನ್ ಕುಮಾರ್, ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಸಹಾಯಕ ಚಂದ್ರಶೇಖರ್ ಪಾತೂರ್, ನಿಕಟ ಪೂರ್ವ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಿ.ವಿ. ಮಾಲಿನಿ, ಅಭಿವೃದ್ಧಿ ಅಧಿಕಾರಿ ವಸಂತಿ ಜಯಪ್ರಕಾಶ್, ದ್ವಿತೀಯ ದರ್ಜೆ ಲೆಕ್ಕ ಸಹಾಯಕಿ ಭಾರತಿ, ಸಿಬ್ಬಂದಿ, ಗ್ರಂಥಾಲಯ ಮೇಲ್ವಿಚಾರಕಿ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಮಾನಸ ಸಂಜೀವಿನಿ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು.

ಚೆಲ್ಲೆಮಕ್ಕಿ ಶ್ರೀ ನಾಗಬನ ಜೀರ್ಣೋದ್ಧಾರ, ವರ್ಧಂತಿ ಉತ್ಸವ ಪ್ರಯುಕ್ತ ಧಾರ್ಮಿಕ ಸಭೆ



ಕೋಟ: ಸಾಸ್ತಾನದ ಚೆಲ್ಲೆಮಕ್ಕಿ ಶ್ರೀ ನಾಗಬನ ಪುನರ್ ನಿರ್ಮಾಣ ಜೀರ್ಣೋದ್ಧಾರ ಹಾಗೂ ವರ್ಧಂತಿ ಉತ್ಸವದ ಅಂಗವಾಗಿ ಧಾರ್ಮಿಕ ಸಭೆ ನಡೆಯಿತು.

ರೋಟರಿ ಜಿಲ್ಲಾ ಮಾಜಿ ಗವರ್ನರ್ ಸಿ.ಎ ದೇವಾನಂದ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಪಿಯುಸಿಯಲ್ಲಿ ಸಾಧನೆಗೈದ ಸ್ಥಳೀಯ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಸಿಎ ಪರೀಕ್ಷೆಯನ್ನು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಂದಾರ್ತಿ ದೇಗುಲದ ಮಾಜಿ ಟ್ರಸ್ಟಿ ಶಂಭು ತಿಂಗಳಾಯ ಅವರನ್ನು ಅಭಿನಂದಿಸಲಾಯಿತು. ಅಧ್ಯಕ್ಷತೆಯನ್ನು ನಾಗಬನದ ಅಧ್ಯಕ್ಷ ಸುಧಾಕರ್ ಜಿ.ಆರ್. ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಕುಂದಾಪುರ ಶ್ರೀ ವೇಣುಗೋಪಾಲಕೃಷ್ಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ರಮೇಶ್ ಗಾಣಿಗ ಕೊಲ್ಲೂರು ,ಉದ್ಯಮಿ ಮಾಧವ ಪೂಜಾರಿ ಸಾಲಿಗ್ರಾಮ, ನಾಗಬನ ಸಮಿತಿಯ ಉಪಾಧ್ಯಕ್ಷ ಬಾಲಕೃಷ್ಣ ಬಿರ್ತಿ, ಕೋಶಾಧಿಕಾರಿ ಪರಮೇಶ್ವರ ಗಾಣಿಗ, ಕಾರ್ಯಾಧ್ಯಕ್ಷ ದಿನಕರ್ ವಿ. ರಾವ್, ಎಲ್‌ಐಸಿ ಅಧಿಕಾರಿ ನಾಗರಾಜ್ ಇದ್ದರು. ಕಾರ್ಯದರ್ಶಿ ಗಣೇಶ್ ಜಿ ಸ್ವಾಗತಿಸಿದರು. ಶೈಲಜಾ ವಿವೇಕ್ ನಿರೂಪಿಸಿದರು. ರಾಘವೇಂದ್ರ ಶೇರುಗಾರ್ ವಂದಿಸಿದರು. ವೇ.ಮೂ ಪ್ರಸನ್ನ ತುಂಗ, ವೇ.ಮೂ ಸುಬ್ರಹ್ಮಣ್ಯ ಮಧ್ಯಸ್ಥ ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು.

ಜೀತಪದ್ಧತಿ ರದ್ಧತಿ ಪ್ರತಿಜ್ಞಾ ವಿಧಿ ಬೋಧನೆ



ಬಂಟ್ವಾಳ: ಶ್ರೀಮಂತರು ಬಡವರನ್ನು ದುರ್ಬಳಕೆ ಮಾಡಿ ಕೊಳ್ಳುವ ದುಷ್ಟವ್ಯವಸ್ಥೆಯೇ ಜೀತಪದ್ಧತಿಯಾಗಿದೆ ಎಂದು ಪ್ರಾಂಶುಪಾಲ ಪ್ರೊ. ಎಂ.ಡಿ.ಮಂಚಿ ಹೇಳಿದರು.

ಕಾಲೇಜಿನ ಎನ್ನೆಸ್ಸೆಸ್ ಘಟಕದ ವತಿಯಿಂದ ನಡೆದ 'ಜೀತಪದ್ಧತಿ ರದ್ಧತಿ ಪ್ರತಿಜ್ಞಾ ಕಾರ್ಯಕ್ರಮ'ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸುಯೋಗವರ್ಧನ್ ಡಿ.ಎಂ. ಪ್ರತಿಜ್ಞಾವಿಧಿ ಬೋಧಿಸಿದರು. ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಡಾ.ಕಾಶೀನಾಥ ಶಾಸ್ತ್ರೀ ಎಚ್.ವಿ. ಸ್ವಾಗತಿಸಿದರು. ಗಣಕಯಂತ್ರ ವಿಭಾಗದ ಮುಖ್ಯಸ್ಥೆ ಸಹನಾ ವಂದಿಸಿದರು.

ಪೆರಾಬೆ ಗ್ರಾಮ ಪಂಚಾಯತ್‌ನ 15ನೇ ಹಣಕಾಸು ನಿಧಿಯಿಂದ ನಿರ್ಮಾಣ

ಕುಂತೂರು ಪದವಿನಲ್ಲಿ ಬಸ್ ತಂಗುದಾಣ ಉದ್ಘಾಟನೆ



ಕಡಬ: ಪೆರಾಬೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಂತೂರು-ಪದವು ಸೈಂಟ್ ಜಾರ್ಜ್ ಹೈಸ್ಕೂಲಿನ ಎದುರು ಉಪ್ಪಿನಂಗಡಿ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿ ಬದಿಯಲ್ಲಿ ಪೆರಾಬೆ ಗ್ರಾಮ ಪಂಚಾಯತ್ ವತಿಯಿಂದ ನಿರ್ಮಾಣವಾದ ಬಸ್ ಪ್ರಯಾಣಿಕರ ತಂಗುದಾಣವನ್ನು ಶುಕ್ರವಾರ ಲೋಕಾರ್ಪಣೆ ಮಾಡಲಾಯಿತು.

ಪೆರಾಬೆ ಗ್ರಾ.ಪಂ. ಅಧ್ಯಕ್ಷೆ ಸಂಧ್ಯಾ ಉದ್ಘಾಟಿಸಿದರು. ಕೆ.ಎಸ್.ಆರ್.ಟಿ.ಸಿ. ನಿವೃತ್ತ ಸಂಚಾರ ನಿಯಂತ್ರಕ ಅಬ್ಬಾಸ್ ಕುಂತೂರು, ಕಡಬ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎಸ್. ಬಾಲಕೃಷ್ಣ ಕೊಯ್ಲ, ಸೈಂಟ್ ಜಾರ್ಜ್ ಪ್ರೌಢ ಶಾಲಾ ಮುಖ್ಯ ಶಿಕ್ಷಕ ಹರಿಶ್ಚಂದ್ರ ಅತಿಥಿಗಳಾಗಿ ಮಾತನಾಡಿದರು. ಈ ಸಂದರ್ಭ ಸೈಂಟ್ ಜಾರ್ಜ್ ಪ್ರೌಢ ಶಾಲಾ ಸಂಚಾಲಕ ಕೆ.ಎಸ್. ಥೋಮಸ್, ಮಾಜಿ ಸಂಚಾಲಕ ವಿ.ಐ. ಅಬ್ರಹಾಂ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗುರುಪ್ರಸಾದ್ ರೈ, ಕುಂತೂರು ಪದವು ಹಾಲು ಉತ್ಪಾದಕರಸಹಕಾರಿಸಂಘದಅಧ್ಯಕ್ಷಸೋಮಪ್ಪಗೌಡ, ಉಪಾಧ್ಯಕ್ಷ ಪದ್ಮನಾಭ ಗೌಡ, ಗ್ರಾ.ಪಂ. ಉಪಾಧ್ಯಕ್ಷೆ ವೇದಾವತಿ, ಸದಸ್ಯರಾದ ರಾಜು, ಮೋಹಿನಿ, ಸಿಬಂದಿ ಪ್ರಜ್ವಲ್ ಪಟ್ಟೆ, ಸಮಾಜಿಕ ಕಾರ್ಯಕರ್ತೆ ಗುಲಾಬಿ ಮತ್ತಿತರರು ಉಪಸ್ಥಿತರಿದ್ದರು.

ಪಿಡಿಒ ಅಮ್ಮಿ ಸ್ವಾಗತಿಸಿ, ಪೆರಾಬೆ ಅರಿವು ಕೇಂದ್ರದ ಮೇಲ್ವಿಚಾರಕಿ ಜಯಕುಮಾರಿ ವಂದಿಸಿದರು.

ಸಚ್ಚೇರಿಪೇಟೆಯ ಶ್ರೀ ಶನೈಶ್ಚರ ಪೂಜಾ ಮಹೋತ್ಸವದ ಧಾರ್ಮಿಕ ಸಭೆ

ಗುರುಕುಲ ಮಾದರಿ ಶಿಕ್ಷಣ ಅಗತ್ಯ: ಕೇಮಾರು ಶ್ರೀ



ಕಾರ್ಕಳ: ಹಿಂದು ಸಮಾಜದ ಭದ್ರ ಬುನಾದಿಗೆ ಗುರುಕುಲ ಮಾದರಿ ಶಿಕ್ಷಣ ವ್ಯವಸ್ಥೆ ಮತ್ತು ಕೂಡು ಕುಟುಂಬ ಅತ್ಯಂತ ಪ್ರಾಮುಖ್ಯವಾಗಿದೆ ಎಂದು ಶ್ರೀ ಕ್ಷೇತ್ರ ಕೇಮಾರಿನ ಶ್ರೀ ಈಶ ವಿಠಲದಾಸ ಸ್ವಾಮೀಜಿ ಹೇಳಿದರು.

ಸಚ್ಚೇರಿಪೇಟೆಯ ಶ್ರೀ ಮಹಮ್ಮಾಯೀ ಅಮ್ಮನವರ ಅಶ್ವತ್ಥಕಟ್ಟೆಯಲ್ಲಿ ಸಾರ್ವಜನಿಕ ಶ್ರೀ ಶನೈಶ್ಚರ ಪೂಜಾ ಸೇವಾ ಟ್ರಸ್ಟ್ ಸಚ್ಚೇರಿಪೇಟೆ ಹಾಗೂ ಹಿಂದು ಸಂಘಟನೆಗಳ ಆಶ್ರಯದಲ್ಲಿ ಶನಿವಾರ ನಡೆದ 22ನೇ ವರ್ಷದ ಸಾರ್ವಜನಿಕ ಶ್ರೀ ಶನೈಶ್ಚರ ಪೂಜಾ ಮಹೋತ್ಸವದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪಡೆದ ಪೊಸ್ರಾಲು ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾ ಮಂಡಳಿಯನ್ನು ಗೌರವಿಸಲಾಯಿತು. ಕಿನ್ನಿಗೋಳಿ ಯುಗಪುರುಷದ ಪ್ರಧಾನ ಸಂಪಾದಕ ಕೊಡೆತ್ತೂರು ಭುವನಾಭಿರಾಮ ಉಡುಪ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ಪ್ರಶಾಂತ್ ಕಾಮತ್ ಕಾರ್ಕಳ, ಎಂಆರ್‌ಪಿಎಲ್- ಒಎನ್‌ಜಿಸಿ ಕರ್ಮಾಚಾರಿ ಸಂಘದ ಅಧ್ಯಕ್ಷ ಪ್ರಸಾದ್ ಎನ್ ಅಂಚನ್, ಉದ್ಯಮಿ ಭೋಜ ಸುವರ್ಣ ಸೂರತ್, ಉದ್ಯಮಿ ಭಾಸ್ಕರ್ ಶೆಟ್ಟಿ ಸಂಕಲಕರಿಯ, ಜಿತೇಂದ್ರ ವೇರೂರು ಇದ್ದರು. ಟ್ರಸ್ಟಿನ ಅಧ್ಯಕ್ಷ ಹರೀಶ್ ಸಚ್ಚೇರಿಪೇಟೆ ಸ್ವಾಗತಿಸಿದರು. ಶಿಕ್ಷಕ ಸುಧೀರ್ ನಾಯಕ್ ನಿರೂಪಿಸಿದರು. ಬಳಿಕ ಉಡುಪಿ ಅಭಿನಯ ಕಲಾವಿದರಿಂದ 'ಚಿಟ್ಟೆ' ಭಾವನಾತ್ಮಕ ತುಳು ಹಾಸ್ಯಮಯ ನಾಟಕ ನಡೆಯಿತು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸ ದಿಗಂತ ಸಂಗಮ 5

ಸೋಮವಾರ 16, ಫೆಬ್ರವರಿ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

18 ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಂಡ ಚೊಟ್ಟೆ ಸೇತುವೆ ಕಾಮಗಾರಿ
ಅಂತೂ ಇಂತೂ ನನಸಾಗಿದೆ ಜನರ ಬಹುಕಾಲದ ಕನಸು

ಕಾಸರಗೋಡು: ಜಿಲ್ಲೆಯ ಬೇಡಡ್ಕ, ಮುಳಿಯಾರು ಗ್ರಾ.ಪಂ.ಗಳನ್ನು ಪರಸ್ಪರ ಸಂಪರ್ಕಿಸುವ ಪಯಸ್ವಿನಿ ನದಿಗೆ ಚೊಟ್ಟೆ ಪ್ರದೇಶದಲ್ಲಿ ನೂತನವಾಗಿ ಅಳವಡಿಸಲಾದ ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಇದರಿಂದಾಗಿ ಸಾರ್ವಜನಿಕರ ಬಹುಕಾಲದ ಕನಸು ನನಸಾದಂತಾಗಿದೆ.

18 ಕೋಟಿ ರೂ.ವೆಚ್ಚದ ಈ ಸೇತುವೆಯು 130 ಮೀಟರ್ ಉದ್ದ ಮತ್ತು 11 ಮೀಟರ್ ಅಗಲ ಹೊಂದಿದೆ. ನದಿಯ ಬದಿಯಲ್ಲಿ ಬೇಡಡ್ಕ ಗ್ರಾ.ಪಂ. ವ್ಯಾಪ್ತಿಯ 985 ಮೀಟರ್ ರಸ್ತೆ ಪೂರ್ಣಗೊಂಡಿದ್ದು, ಮುಳಿಯಾರು ಗ್ರಾ.ಪಂ. ವ್ಯಾಪ್ತಿಯ 675 ಮೀ. ಸಂಪರ್ಕ ರಸ್ತೆಯ ಕಾಮಗಾರಿ ಇದೀಗ ಪೂರ್ತಿಯಾಗಿದೆ. ಐದೂವರೆ ಮೀಟರ್ ಅಗಲದ ಈ ರಸ್ತೆಯನ್ನು ಮೆಕ್‌ಡಾಂ ಮೂಲಕ ಅತ್ಯಾಧುನಿಕ ಮಾದರಿಯಲ್ಲಿ ನಿರ್ಮಿಸಲಾಗಿದೆ. ಕೇರಳ ರೋಡ್ ಫಂಡ್ ಬೋರ್ಡ್ ಸೇತುವೆ ನಿರ್ಮಾಣ ಕಾಮಗಾರಿ ನಡೆಸಿದ್ದು, ಸೇತುವೆ ಇಕ್ಕೆಲಗಳಲ್ಲಿ ತಡೆಗೋಡೆಗಳ ನಿರ್ಮಾಣ , ಪಾದಚಾರಿಗಳಿಗೆ ಫುಟ್‌ಬಾತ್



ಅಳವಡಿಸಲಾಗಿದೆ.

ಸೇತುವೆ ನಿರ್ಮಾಣದಲ್ಲಿ ಹಲವರ ಸಹಕಾರ

ಸೇತುವೆ ನಿರ್ಮಾಣ ಕಾರ್ಯದಲ್ಲಿ ಸ್ಥಳೀಯರ ಪ್ರಯತ್ನ ಮತ್ತು ಸಹಕಾರ ಶ್ಲಾಘನೀಯವಾಗಿದೆ. ಅತ್ಯಂತ ಹಿಂದುಳಿದ ಪ್ರದೇಶವಾದ ಚೊಟ್ಟೆ ಮತ್ತು ಸಮೀಪದ ಭಾಗಗಳು ವಾಹನ ಸೌಕರ್ಯವಿಲ್ಲದೆ ತೀರಾ ಹಿಂದುಳಿದಿತ್ತು. ಪಯಸ್ವಿನಿ ನದಿಯ ಇನ್ನೊಂದು ದಡ ಸೇರಲು ಹಲವಾರು ಕಿಲೋ ಮೀಟರ್ ಸುತ್ತುವರಿದು ಸಂಚರಿಸಬೇಕಾದ ಅನಿವಾರ್ಯತೆಯಿತ್ತು. ಈ ಸಂದರ್ಭ ಚೊಟ್ಟೆ ನಿವಾಸಿ ಮೋಹನನ್ ನಾಯರ್ ನೇತೃತ್ವದಲ್ಲಿ ಹಲವು ವರ್ಷಗಳ ಪ್ರಯತ್ನದ ಫಲವಾಗಿ ಸೇತುವೆ ಕಾರ್ಯರೂಪಕ್ಕೆ ಬಂದಿದೆ. ಅವರು ತಮ್ಮ ಕೆಲವು ಎಕ್ರೆ ಸ್ಥಳವನ್ನು ಸೇತುವೆಗಾಗಿ ಒದಗಿಸಿ ದ್ದಾರೆ. ಅಡಿಕೆ ಮರಗಳು, ತೆಂಗಿನ ಮರಗಳು ಅವರಿಗೆ ನಷ್ಟವಾದರೂ ಸೇತುವೆ ನಿರ್ಮಾಣದ ಕನಸು ನನಸಾಗಿರುವುದು ಸಂತಸ ತಂದಿದೆ. ಅಲ್ಲದೆ ನದಿಯ ಇಕ್ಕೆಲಗಳಲ್ಲಿರುವ ಇನ್ನೂ ಕೆಲವರು ಸೇತುವೆ ನಿರ್ಮಾಣಕ್ಕೆ ಸ್ಥಳದಾನ ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕಾಸರಗೋಡು ಭಾಗಕ್ಕೆ ಸುಲಭದ ಮಾರ್ಗ

ಚೊಟ್ಟೆ ಸೇತುವೆ ನಿರ್ಮಾಣದಿಂದ ಬೇಡಡ್ಕ ಪ್ರದೇಶದ ಜನರು ಕರಿಚ್ಚೇರಿ ಮೂಲಕ ಸಾಗದೆ ಸುಲಭವಾಗಿ ಕಾಸರಗೋಡು ತಲುಪಬಹುದು. ಅಂದರೆ ಸಂಚಾರ ದೂರ ಸುಮಾರು 10 ಕಿ.ಮೀ.ಕಡಿಮೆಯಾಗಲಿದೆ. ಸಮಯ , ಆರ್ಥಿಕ ಉಳಿತಾಯ ಸಾಧ್ಯ. ಅಲ್ಲದೆ ಕುಂಡಂಗುಳಿ – ದೋಣಿ ಕಡವು – ಚೊಟ್ಟೆ ರಸ್ತೆ ಮೂಲಕ ಇರಿಯ ಣ್ಣಿಗೆ ಈ ಸೇತುವೆಯಿಂದ ಸುಲಭದಲ್ಲಿ ತೆರಳಬಹುದು.

ವಿದ್ಯಾರ್ಥಿಗಳಿಗೂ ಅನುಕೂಲ

ಚೊಟ್ಟೆ ಹಾಗೂ ಆಸುಪಾಸಿನ ಜನರು ವಿವಿಧ ಸಾಮಗ್ರಿಗಳ ಖರೀದಿಗೆ ಕಾಲ್ನಡಿಗೆಯಲ್ಲೇ ತೆರಳುತ್ತಿದ್ದು, ಇನ್ನು ಮುಂದೆ ಆ ಸಂಕಷ್ಟ ಇಲ್ಲವಾಗಲಿದೆ. ಸೇತುವೆ ನಿರ್ಮಾಣದಿಂದ ಈ ರಸ್ತೆಯಲ್ಲಿ ಬಸ್ ಸಂಚಾರ ಆರಂಭವಾಗಲಿದ್ದು, ಜನರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ.

ಇನು ಕಾಸರಗೋಡು ನಗರಕ್ಕೆ ಸಂಚಾರ ಸುಲಭ

ಚೊಟ್ಟೆ ಸೇತುವೆಗೆ ಸಂಪರ್ಕ ಕಲ್ಪಿಸುವ ಮುಳಿಯಾರು ಗ್ರಾ.ಪಂ.ಗೆ ಸೇರಿದ ರಸ್ತೆಯಲ್ಲಿ ಸುಮಾರು ಒಂದು ಕಿಲೋ ಮೀಟರ್ ಪ್ರದೇಶವು ಅರಣ್ಯ ಇಲಾಖೆಗೆ ಸೇರಿದ್ದಾಗಿದೆ. ಸಂಬಂಧಪಟ್ಟ ಇಲಾಖೆಯು ಈ ಪ್ರದೇಶದ ಅಭಿವೃದ್ಧಿಗೂ ಗ್ರೀನ್ ಸಿಗ್ನಲ್ ಹೊರಡಿಸಿರುವುದರಿಂದ ರಸ್ತೆ ಕಾಮಗಾರಿ ಪೂರ್ಣಗೊಂಡಿದೆ. ಚೊಟ್ಟೆ ಸೇತುವೆಯ ನಿರ್ಮಾಣದಿಂದ ಜನರ ಸಂಚಾರ ಸುಲಭ ಸಾಧ್ಯವಾಗಲಿದೆ. ತೀರಾ ಹಿಂದುಳಿದ ಈ ಪ್ರದೇಶ ಅಭಿವೃದ್ಧಿಯಾಗಲಿದೆ. ಈ ಸೇತುವೆ ನಿರ್ಮಾಣಕ್ಕಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಅಭಿನಂದನೆ ಸಲ್ಲಿಸಬೇಕು. ಚೊಟ್ಟೆ ಸೇತುವೆ ಈ ಪ್ರದೇಶದ ಜನರನ್ನು ಕಾಸರಗೋಡು ಸಿಟಿಗೆ ಸುಲಭದಲ್ಲಿ ತೆರಳಲು ಅನುಕೂಲ ಮಾಡಿಕೊಟ್ಟಿರುವುದು ಉತ್ತಮ ಬೆಳವಣಿಗೆ.

ಸುತ್ತಮುತ್ತ

ಚೌಕಿ–ಬಳ್ಳೂರು–ಕಂಬಾರು: ಕೆಎಸ್ಸಾರ್ಟಿಸಿ ಬಸ್ ಆರಂಭಿಸಲು ಸಾರ್ವಜನಿಕರ ಒತ್ತಾಯ

ಕಾಸರಗೋಡು: ಮೊಗ್ರಾಲ್ ಪುತ್ತೂರು ಪಂಚಾಯತ್‌ನ ಚೌಕಿ ಮಜಲ್ – ಬಳ್ಳೂರು – ಕಂಬಾರು ರೂಟ್‌ನಲ್ಲಿ ಸಂಚಾರ ಸಮಸ್ಯೆ ತೀವ್ರಗೊಂಡಿದ್ದು, ಇದಕ್ಕೆ ಪರಿಹಾರವಾಗಿ ಈ ರೂಟ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಮಂಜುರುಗೊಳಿಸಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಮೊಗ್ರಾಲ್ ಪುತ್ತೂರು ಗ್ರಾ.ಪಂ.ಉಪಾಧ್ಯಕ್ಷ ಅರ್ಫಾನ ನಜೀಬ್, ಸಚಿವ ಎಂ.ವಿ.ರಾಜೇಶ್‌ರೊಂದಿಗೆ ವಿನಂತಿಸಿದ್ದಾರೆ. ಪಂಚಾಯತ್‌ನ ಚೌಕಿ – ಮಜಲ್ – ಬಳ್ಳೂರು – ಕಂಬಾರು ರೂಟ್‌ನಲ್ಲಿ 10 ವರ್ಷಗಳ ಹಿಂದೆ ಕೆಎಸ್ಸಾರ್ಟಿಸಿ ಬಸ್ ಸಂಚಾರ ನಡೆಸುತ್ತಿತ್ತು. ಬಳಿಕ ಅದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. 10 ವರ್ಷ ದಿಂದ ಜನರು ಕಿಲೋಮೀಟರ್‌ಗಳಷ್ಟು ದೂರು ನಡೆದುಕೊಂಡು ಸಾಗುತ್ತಿದ್ದಾರೆ. ಖಾಸಗಿ ಬಸ್‌ಗಳು ಈ ರೂಟ್‌ನಲ್ಲಿ ಸಂಚಾರ ನಡೆಸುತ್ತಿಲ್ಲ, ಜನಸಂಖ್ಯೆ ಹೆಚ್ಚಾಗಿದ್ದು, ಸಾರಿಗೆ ಸಂಚಾರ ಇಲ್ಲದಿರುವುದರಿಂದ ವಿದ್ಯಾರ್ಥಿಗಳು, ವಯಸ್ಕರು, ರೋಗಿಗಳು, ಉದ್ಯೋಗಕ್ಕಾಗಿ ತೆರಳುವವರು ಆತಂಕಕ್ಕೊಳಗಾಗಿದ್ದಾರೆ.

ಈ ಬಗ್ಗೆ ಸಾರಿಗೆ ಸಚಿವ, ಮುಖ್ಯಮಂತ್ರಿ, ಕೆಎಸ್ ಆರ್‌ಟಿಸಿ ಘಟಕ ಅಧಿಕಾರಿ, ಕೆಎಸ್‌ಆರ್‌ಟಿಸಿ ಎಂಡಿ, ಶಾಸಕ, ಸಂಸದ, ಜಿಲ್ಲಾಧಿಕಾರಿ, ಆರ್‌ಟಿಒ, ಟ್ರಾನ್ಸ್‌ಪೋರ್ಟ್ ಕಮೀಷನರ್ ಮೊದಲಾದವರಿಗೆ ಇ ಮೇಲ್ ಕಳುಹಿಸಲಾಗಿದೆ. ಆದರೂ ಯಾವುದೇ ಪ್ರತಿಕ್ರಿಯೆ ಉಂಟಾಗಿಲ್ಲ, ಕೂಡಲೇ ಈ ರೂಟ್‌ನಲ್ಲಿ ಕೆಎಸ್ ಆರ್‌ಟಿಸಿ ಬಸ್ ಮಂಜೂರುಗೊಳಿಸಿ ಜನರು ಅನುಭವಿಸುವ ತೊಂದರೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಫೆ.19: ಪ್ರಕೃತಿ ಚಿಕಿತ್ಸಾ ವೈದ್ಯಾಧಿಕಾರಿಗಳ ಸಭೆ

ಕಾಸರಗೋಡು: ಕಾಞಂಗಾಡು ಜಿಲ್ಲಾ ಹೋಮಿಯೋ ಆಸ್ಪತ್ರೆಯಲ್ಲಿ ಆಯುಷ್ಮಾನ್ ಭವ ಯೋಜನೆಯಡಿ ಪ್ರಕೃತಿ ಚಿಕಿತ್ಸಾ ವೈದ್ಯಾಧಿಕಾರಿ ನೇಮಕಾತಿಗಾಗಿ ಸಂದರ್ಶನವು ಫೆ.19ರಂದು ಬೆಳಗ್ಗೆ 10.30ಕ್ಕೆ ಕಾಞಂಗಾಡು ಜಿಲ್ಲಾ ವೈದ್ಯಕೀಯ ಕಚೇರಿಯಲ್ಲಿ (ಹೋಮಿಯೋ) ನಡೆಯಲಿದೆ. 1972ನೇ ಫೆ.1ರ ನಂತರ ಜನಿಸಿದ ಬಿಎನ್‌ವೈಎಸ್ ಪದವಿ ಮತ್ತು ಟಿ.ಸಿ. ನೋಂದಣಿ ಹೊಂದಿರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗೆ 04672206886 ಕರೆ ಮಾಡಬಹುದು.

ಪಿಎಸ್‌ಸಿ ಸಂದರ್ಶನ

ಕಾಸರಗೋಡು: ಜಿಲ್ಲೆಯ ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಾಲಾ ಶಿಕ್ಷಕ (ನೈಸರ್ಗಿಕ ವಿಜ್ಞಾನ) ಮಲೆಯಾಳ ಮಾಧ್ಯಮ (ವರ್ಗ ಸಂಖ್ಯೆ 602/2024) ಹುದ್ದೆಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ಮೊದಲ ಹಂತದ ಸಂದರ್ಶನವು ಫೆ.18, 19 ಮತ್ತು 20ರಂದು ಕೇರಳ ಲೋಕಸೇವಾ ಆಯೋಗದ ಕಾಸರಗೋಡು ಜಿಲ್ಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 04994230102 ಸಂಪರ್ಕಿಸಬಹುದು.

ಅರ್ಜಿಗಳ ಆಹ್ವಾನ

ಕಾಸರಗೋಡು: ಮಲಬಾರ್ ದೇವಸ್ವಂ ಮಂಡಳಿಯ ಅಧೀನದಲ್ಲಿರುವ ಕೋಮಾರು ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಐದು ಸಾಂಪ್ರದಾಯಿಕವಲ್ಲದ ಟ್ರಸ್ಟಿಗಳ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಿಂದೂ ಧರ್ಮ ಪಾಲಿಸುವ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಗಳು ಫೆ.21ರಂದು ಸಂಜೆ 5 ಗಂಟೆಯೊಳಗೆ ಮಲಬಾರ್ ದೇವಸ್ವಂ ಮಂಡಳಿಯ ಕಾಸರಗೋಡು ವಿಭಾಗದ ಸಹಾಯಕ ಆಯುಕ್ತರ ಕಚೇರಿಯನ್ನು ತಲುಪಬೇಕು. ಅರ್ಜಿ ನಮೂನೆಯು ಮಲಬಾರ್ ದೇವಸ್ವಂ ಮಂಡಳಿಯ ಅಧಿಕೃತ ವೆಬ್‌ಸೈಟ್ ಮತ್ತು ನೀಲೇಶ್ವರ ಸಹಾಯಕ ಆಯುಕ್ತರ ಕಚೇರಿಯಲ್ಲಿ ಕೆಲಸದ ದಿನಗಳಲ್ಲಿ ಉಚಿತವಾಗಿ ಲಭ್ಯವಿದೆ.

ನೇರ ಸಂದರ್ಶನ ವ್ಯವಸ್ಥೆ

ಕಾಸರಗೋಡು: ಕಣ್ಣೂರು ಸರಕಾರಿ ಆಯುರ್ವೇದ ಕಾಲೇಜಿನ ರೋಗಶಾಸ್ತ್ರ ವಿಭಾಗದಲ್ಲಿ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ನಡೆಸಲಾಗುವುದು. ಇದಕ್ಕಾಗಿ ಫೆ.21ರಂದು ಬೆಳಗ್ಗೆ 11 ಗಂಟೆಗೆ ಪರಿಯಾರಂನಲ್ಲಿರುವ ಕಾಲೇಜು ಆವರಣದಲ್ಲಿ ವಾಕ್ ಇನ್ ಸಂದರ್ಶನ ನಡೆಯಲಿದೆ. ಮೂಲ ಅರ್ಹತೆ ಸಂಬಂಧಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕೆಲಸದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಜನನ ದಿನಾಂಕ, ಶೈಕ್ಷಣಿಕ ಅರ್ಹತೆ, ಕೆಲಸದ ಅನುಭವ ಮತ್ತು ಅವುಗಳ ಪ್ರತಿಗಳು, ಆಧಾರ್ ಕಾರ್ಡ್, ಪಾನ್ ಕಾರ್ಡ್ ಪ್ರತಿಗಳು ಹಾಗೂ ಬಯೋಡಾಟಾವನ್ನು ಸಾಬೀತುಪಡಿಸುವ ಮೂಲ ಪ್ರಮಾಣಪತ್ರಗಳೊಂದಿಗೆ ಹಾಜರಾಗಬೇಕೆಂದು ತಿಳಿಸಲಾಗಿದೆ.

ಬಜಲಕರಿಯ ಶ್ರೀ ಕ್ಷೇತ್ರದಲ್ಲಿ ಪ್ರತಿಷ್ಠಾ ವರ್ಧಂತಿ, ಸಭಾಂಗಣದ ಉದ್ಘಾಟನೆ



ಮಂಜೇಶ್ವರ: ವರ್ಕಾಡಿ ಗ್ರಾಮದ ಬಜಲಕರಿಯ ಶ್ರೀ ಶಾರ್ಙ್ಗಪಾಣಿ ಮಹಾವಿಷ್ಣು ಶ್ರೀ ದುರ್ಗಾ ಕ್ಷೇತ್ರದಲ್ಲಿ ಪರಿವಾರ ದೇವರುಗಳ ಪ್ರತಿಷ್ಠಾ ವರ್ಧಂತ್ಯುತ್ಸವ ಮತ್ತು ನೂತನ ಸಭಾಂಗಣದ ಉದ್ಘಾಟನಾ ಸಮಾರಂಭವು ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಮತ್ತು ಸಹಸ್ರಾರು ಮಂದಿ ಭಕ್ತರ ಸಾನಿಧ್ಯದಲ್ಲಿ ನೆರವೇರಿತು.

ದಿಕ್ಸೂಚಿ ಭಾಷಣ ಮಾಡಿದ ವಿದ್ವಾನ್ ಹಿರಣ್ಯ ವೆಂಕಟೇಶ್ವರ ಭಟ್ ಬಾಯಾರು ಅವರು, ಇದು ಮಹಾವಿಷ್ಣು ಮತ್ತು ದುರ್ಗೆ ಒಟ್ಟಿಗೆ ಇರುವ ಅಪರೂಪದ ಪುಣ್ಯಕ್ಷೇತ್ರವಾಗಿದೆ ಎಂದು ಹೇಳಿದರು.

ಪ್ರಶಸ್ತ ಸ್ಥಳವಾಗಿದೆ

ಮದುವೆ, ಹೋಮ, ಯಾಗದಂತಹ ಶುಭ ಕಾರ್ಯಗಳು ಮತ್ತು ಉತ್ತರ ಕ್ರಿಯೆಯಂತಹ ವಿಧಿ ವಿಧಾನಗಳನ್ನು ಪೂರೈಸಲು ಪ್ರಶಸ್ತ ಸ್ಥಳವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಶ್ರೀ ಕ್ಷೇತ್ರದಲ್ಲಿ ಮಹಾವಿಷ್ಣು ಪ್ರಧಾನ ದೇವರಾಗಿ ಮತ್ತು ದುರ್ಗೆಯು ಪ್ರಬಲ ಶಕ್ತಿಯಾಗಿ ನೆಲೆಸಿದ್ದಾರೆ ಎಂದು ಅವರು ತಿಳಿಸಿದರು.

ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ಅಜಿತ್‌ಪ್ರಸಾದ್ ನಾಯ್ಕ್ ಬಜಲಕರಿಯ ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಶ್ರೀ ವರ್ಕಾಡಿ ಹೊಸಮನೆ ರಾಜೇಶ್ ತಾಳಿತ್ತಾಯರ ನೇತೃತ್ವದಲ್ಲಿ ವೈದಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಯಕ್ಷಗಾನ

ಕಟೀಲು ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದವರಿಂದ ಶ್ರೀದೇವಿ ಮಹಾತ್ಮೆ ಪ್ರಸಂಗದ ಯಕ್ಷಗಾನ ಬಯಲಾಟ ಪ್ರದರ್ಶನದೊಂದಿಗೆ ಎರಡು ದಿನಗಳ ಕಾರ್ಯಕ್ರಮವು ಶ್ರದ್ಧಾಭಕ್ತಿಯಿಂದ ಹಾಗೂ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಹಿಂದು ಸಮಾಜ ಒಗ್ಗಟ್ಟಿನಲ್ಲಿ ಇರುವುದು ಇಂದಿನ ಅಗತ್ಯ: ದಾಮೋದರ ದೇಲಂಪಾಡಿ



ಕುಂಬಳೆ: ಸಮಸ್ತ ಹಿಂದುಗಳು ಎಲ್ಲಾ ಅಸಮಾನತೆಯನ್ನು ಮೆಟ್ಟಿ ನಿಂತು ಒಂದಾಗಿ ಬೆರೆತು ಬಾಳಬೇಕಾದ ದಿನಗಳು ಕಾಲಘಟ್ಟದ ಅನಿವಾರ್ಯವಾಗಿದೆ. ಜಾತಿ ನೀತಿ, ರಾಜಕೀಯ, ಬಡವ ಬಲ್ಲಿದ ಎನ್ನುವ ಎಲ್ಲಾ ಗೋಡೆಗಳನ್ನು ಪುಡಿಗಟ್ಟಿ ಹಿಂದುಗಳೆಲ್ಲಾ ಒಂದಾಗಿ ಒಗ್ಗಟ್ಟಾಗಿ ಬದುಕಿ ಬಾಳುವುದಕ್ಕೆ ಪುತ್ತಿಗೆಯ ಪವಿತ್ರ ಮಣ್ಣಲ್ಲಿ ಮಾ.8ರಂದು ನಡೆಯಲಿರುವ ವಿರಾಟ್ ಹಿಂದು ಸಂಗಮ ನಾಂದಿ ಹಾಡಲಿ ಎಂದು ಗ್ರಾಮೀಣ ಬ್ಯಾಂಕ್‌ನ ನಿವೃತ್ತ ವಲಯಾಧಿಕಾರಿ ದಾಮೋದರ ಡಿ. ದೇಲಂಪಾಡಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಸೀತಾಂಗೋಳಿ ಶ್ರೀ ದೇವಿ ಭಜನಾ ಮಂದಿರದಲ್ಲಿ ನಡೆದ ವಿರಾಟ್ ಹಿಂದು ಸಂಗಮ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ಸಾಮಾಜಿಕ ಕಾರ್ಯಕರ್ತ ಉದಯಶಂಕರ ಭಟ್ ಕರೋಡಿ ಅವರು ಸೂರಂಬೈಲು ಸಾಯಿರಾಮ್ ಭಟ್ ನಗರದಲ್ಲಿ ನಡೆಯಲಿರುವ ವಿರಾಟ್ ಹಿಂದು ಸಂಗಮದ ಆಮಂತ್ರಣ ಪತ್ರಿಕೆಯನ್ನು ಸಮಿತಿ ಅಧ್ಯಕ್ಷ ದಾಮೋದರ ದೇಲಂಪಾಡಿ ಅವರಿಗೆ ನೀಡುವ ಮೂಲಕ ಬಿಡುಗಡೆಗೊಳಿಸಿದರು.

ಉದಯಶಂಕರ ಭಟ್ ಮತ್ತು ಕ್ಯಾಂಪ್ಕೋ ನಿರ್ದೇಶಕರಾದ ಕೋಳಾರು ಸತೀಶ್ಚಂದ್ರ ಭಂಡಾರಿ ಮಾತನಾಡಿದರು. ವಿಘ್ನೇಶ್ವರ ಮಾಸ್ಟರ್ ಗುಣಾಜೆ, ಅಶೋಕ ಮಾಸ್ಟರ್ ಬಾಡೂರು, ರವಿಶಂಕರ್ ಸೂರಂಬೈಲು, ಬಾಲಸುಬ್ರಹ್ಮಣ್ಯ ಭಟ್ ಚಕ್ಕಣಿಕೆ, ಕೃಷ್ಣಪ್ರಸಾದ್ ಮುಗು ಮತ್ತಿತರರಿದ್ದರು.

ಈ ಸಂದರ್ಭ ರವಿಶಂಕರ್ ಸೂರಂಬೈಲು ಅವರು ತಮ್ಮ ದೇಣಿಗೆಯನ್ನು ನೀಡಿ ನಿಧಿ ಸಂಗ್ರಹಕ್ಕೆ ಚಾಲನೆ ನೀಡಿದರು. ಸಮಿತಿ ಉಪಾಧ್ಯಕ್ಷ ಪ್ರಸಾದ್ ಮಾಸ್ಟರ್ ಮುಗು ಪ್ರಸ್ತಾವನೆಗೈದರು. ಹರೀಶ್ ಸಿದ್ಧಿಬೈಲು ಸ್ವಾಗತಿಸಿ, ಅವಿನಾಶ್ ಕಾರಂತ ವಂದಿಸಿದರು.

ಆಟೋ ಚಾಲಕರಿಗೆ ನೇತ್ರ ಚಿಕಿತ್ಸಾ ಶಿಬಿರ, ಕನ್ನಡಕ ವಿತರಣೆ



ಕಾಸರಗೋಡು: ಕಾಸರಗೋಡಿನ ಪ್ರಸಾದ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯಲ್ಲಿ ಕಾಸರಗೋಡು ನಗರದ ವಿವಿಧ ಆಟೋರಿಕ್ಷಾ ಚಾಲಕರ ಕಾರ್ಮಿಕ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಕಣ್ಣಿನ ತಪಾಸಣೆ ಮತ್ತು ಕನ್ನಡಕ ವಿತರಣಾ ಶಿಬಿರವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.

ಸುಮಾರು 200ಕ್ಕೂ ಹೆಚ್ಚು ಆಟೋ ಚಾಲಕರು ಮತ್ತು ಅವರ ಕುಟುಂಬಸ್ಥರು ತಪಾಸಣೆಯಲ್ಲಿ ಪಾಲ್ಗೊಂಡರು. ಪ್ರಸಾದ ನೇತ್ರಾಲಯದ ವೈದ್ಯಕೀಯ ನಿರ್ದೇಶಕ ಡಾ.ಕೃಷ್ಣಪ್ರಸಾದ್ ಕೂಡ್ಲು ಅವರ ಮಾರ್ಗದರ್ಶನದಲ್ಲಿ ಹಿರಿಯ ನೇತ್ರ ತಜ್ಞೆ ಡಾ.ವೃಂದಾ ಮತ್ತು ತಂಡದವರು ರೋಗಿಗಳ ತಪಾಸಣೆ ನಡೆಸಿ ಸೂಕ್ತ ಚಿಕಿತ್ಸೆ ನೀಡಿದರು.

ಕನ್ನಡಕ ವಿತರಣೆ

100 ಮಂದಿಗೆ ಉಚಿತ ಕನ್ನಡಕಗಳ ವಿತರಣೆ ಹಾಗೂ 37 ಮಂದಿಗೆ ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಲಾಯಿತು.

ಅಭಿನಂದನೆ

ಈ ಶಿಬಿರದ ಯಶಸ್ಸಿಗೆ ಕಾರಣರಾದ ಬಿಎಂಎಸ್, ಸಿಐಟಿಯು, ಐಎನ್‌ಟಿಯುಸಿ, ಎಸ್‌ಟಿಯು ಮತ್ತು ಎಐಟಿಯುಸಿ ಸಂಘಟನೆಗಳ ಪದಾಧಿಕಾರಿಗಳಿಗೆ, ಆಸ್ಪತ್ರೆಯ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಮತ್ತು ಆರೋಗ್ಯ ಜಾಗೃತಿ ತೋರಿದ ಎಲ್ಲಾ ಚಾಲಕ ಮಿತ್ರರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಮಂಜೇಶ್ವರ ಸರಕಾರಿ ಕಾಲೇಜು ಎನ್ನೆಸ್ಸೆಸ್ ಘಟಕದಿಂದ ನೂತನ ರಸ್ತೆಯ ನಿರ್ಮಾಣ



ಪೆರ್ಲ: ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸ್ವಯಂ ಸೇವಕರು ತಮ್ಮ ಬೇಸಿಗೆ ಶಿಬಿರದ ಅಂಗವಾಗಿ ಮಣಿಯಂಪಾರೆ ಸಮೀಪದ ದೇರಡ್ಕದಲ್ಲಿ ನೂತನ ರಸ್ತೆ ನಿರ್ಮಿಸುವ ಮೂಲಕ ಊರವರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ನೂತನ ರಸ್ತೆಯನ್ನು ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯ ಜೆ.ಎಸ್. ಸೋಮಶೇಖರ್ ಉದ್ಘಾಟಿಸಿದರು. ಎಣ್ಮಕಜೆ ಗ್ರಾಮ ಪಂಚಾಯತ್ ಸದಸ್ಯ ರಾಧಾಕೃಷ್ಣ ನಾಯಕ್, ಶರತ್ಚಂದ್ರ ಶೆಟ್ಟಿ, ಮಂಜೇಶ್ವರ ಸರಕಾರಿ ಕಾಲೇಜು ಪ್ರಾಂಶುಪಾಲ ಡಾ.ಮಹಮ್ಮದಾಲಿ ಪೆರ್ಲ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ವಿಕ್ಟರ್ ಡಿ.ಸೋಜಾ, ಉಪಾಧ್ಯಕ್ಷ ಉಮ್ಮರ್ ಕಂಗಿನಮೂಲೆ, ಅಬೂಬಕ್ಕರ್ ಪೆರ್ದನೆ, ಎಂ.ಎಚ್.ಹ್ಯಾರಿಸ್, ಸೂರ್ಯನಾಯಕ್ ಶೇಣಿ ಮೊದಲಾದವರು ಉಪಸ್ಥಿತರಿದ್ದರು. ಎನ್ನೆಸ್ಸೆಸ್ ಕಾರ್ಯದರ್ಶಿ ಅನುಶ್ರೀ ಸ್ವಾಗತಿಸಿ, ಫಾತಿಮಾ ನವಾಲ್ ವಂದಿಸಿದರು.

ಊರಿನ ಜನತೆಗೆ ಸಾರಿಗೆ ಸೌಕರ್ಯದ ಭಾಗ್ಯ

ದೇರಡ್ಕದಿಂದ ಮಣಿಯಂಪಾರೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯನ್ನು ನೂರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಊರ ವರ ಸಹಕಾರದೊಂದಿಗೆ ನಿರ್ಮಿಸಿಕೊಟ್ಟಿದ್ದಾರೆ. ಕುರುಚಲು ಕಾಡು, ಪೊದೆಗಳಿಂದ ಆವೃತವಾಗಿದ್ದ ಈ ಪ್ರದೇಶದಲ್ಲಿ ಸುಂದರ ರಸ್ತೆ ನಿರ್ಮಾಣಗೊಳ್ಳುವ ಮೂಲಕ ಊರಿನ ಜನತೆಗೆ ಸಾರಿಗೆ ಸೌಕರ್ಯದ ಭಾಗ್ಯ ಲಭಿಸಿದಂತಾಗಿದೆ.

ಪತ್ರಕರ್ತರ ಸಂಘದಿಂದ ಜಿಲ್ಲೆಯ ಕನ್ನಡ ಶಾಲೆಗಳಿಗೆ ಉಚಿತ ಪುಸ್ತಕಗಳ ವಿತರಣೆ



ಕಾಸರಗೋಡು: ಪುಸ್ತಕವೆಂಬ ಜ್ಞಾನದ ಬೆಳಕನ್ನು ಪಸರಿಸುವ ಮೂಲಕವೇ ಉದ್ಘಾಟನೆಗೊಂಡ ಕಾರ್ಯಕ್ರಮ ಔಚಿತ್ಯಪೂರ್ಣವಾಗಿದೆ ಎಂದು ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಪಿಂಟೋ ಅಭಿಪ್ರಾಯಪಟ್ಟರು.

ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಾಸರಗೋಡು ಜಿಲ್ಲಾ ಸಮಿತಿ ಇವರ ಆಶ್ರಯದಲ್ಲಿ ಕಾಸರಗೋಡು ಜಿಲ್ಲೆಯ ಕನ್ನಡ ಶಾಲೆಗಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾಸರಗೋಡು ಕ್ಯಾಪಿಟಲ್ ಇನ್ ಸಭಾಂಗಣ ದಲ್ಲಿ ಶನಿವಾರ ಜರಗಿದ ಗಡಿನಾಡ ಚೇತನ ಪ್ರಶಸ್ತಿ ಪುರಸ್ಕೃತ ಎನ್. ಚನಿಯಪ್ಪ ನಾಯ್ಕ ಅವರನ್ನು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಸನ್ಮಾನಿಸಿದರು.

ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಭಿನಂದನಾ ನುಡಿಗಳನ್ನಾಡಿದರು. ಪತ್ರಕರ್ತ ಪಿ.ಬಿ. ಹರೀಶ್ ರೈ ಮಂಗಳೂರು ಗೌರವಾರ್ಪಣೆ ಸ್ವೀಕರಿಸಿದರು. ಕಾಸರಗೋಡು ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಎಸ್. ಪ್ರದೀಪ್ ಕುಮಾರ್ ಕಲ್ಕೂರ, ಕಸಾಪ ಕೇರಳ ಗಡಿನಾಡ ಘಟಕ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೇರಳ ಪ್ರಾಂತ್ಯ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ್ ಎ., ಅಖಿಲೇಶ್ ನಗುಮುಗಂ, ತೆಕ್ಕೇಕರೆ ಶಂಕರ ನಾರಾಯಣ ಭಟ್ ಅತಿಥಿಗಳಾಗಿದ್ದರು. ಗಂಗಾಧರ ತೆಕ್ಕೆಮೂಲೆ, ಎ.ಆರ್.ಸುಬ್ಬಯ್ಯಕಟ್ಟೆ, ಪುರುಷೋತ್ತಮ ಪೆರ್ಲ, ಶ್ರೀಕಾಂತ್, ವೀಜಿ ಕಾಸರಗೋಡು ಉಪಸ್ಥಿತರಿದ್ದರು.



ಮಹಾಶಿವರಾತ್ರಿ ಮಹೋತ್ಸವದ ಅಂಗವಾಗಿ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಳದಲ್ಲಿ ಭಾನುವಾರ ಕಾಸರಗೋಡು ಕರಂದಕ್ಕಾಡು ಶ್ರೀ ವಿಶ್ವಕರ್ಮ ಭಜನಾ ಸಂಘದವರಿಂದ ಭಜನೆ ಜರಗಿತು.



ಬದಿಯಡ್ಕ ಸಮೀಪದ ಆಲಂಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಮಹೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಭಜನೋತ್ಸವ ಕಾರ್ಯಕ್ರಮವನ್ನು ಉದ್ಯಮಿ ಮಧುಸೂದನ ಆಯರ್ ಮಂಗಳೂರು ದೀಪಬೆಳಗಿಸಿ ಶುಭಕೋರಿದರು.

ಕೊಲ್ಲಂಗಾನ ನವರಂಗ್ ಆರ್ಟ್ಸ್ ಕಲಾಸಂಸ್ಥೆಯ ರಂಗಮಂದಿರ – ಬಣ್ಣದ ಮನೆಯ ಪುನರ್ ನಿರ್ಮಾಣ ಕಾರ್ಯಕ್ಕೆ ಶಿಲಾನ್ಯಾಸ
ಕುಗ್ರಾಮವನ್ನು ಕಲಾಗ್ರಾಮವನ್ನಾಗಿಸಿದ ಸಂಸ್ಥೆಗೆ ಸುವರ್ಣ ಸಂಭ್ರಮ: ಡಾ.ಸುಬ್ಬಣ್ಣ ರೈ

ಬದಿಯಡ್ಕ: ಕೊಲ್ಲಂಗಾನವೆಂಬ ಕುಗ್ರಾಮವನ್ನು ಕಲಾಗ್ರಾಮವನ್ನಾಗಿಸಿದ ಕೀರ್ತಿ ನವರಂಗ್ ಆರ್ಟ್ಸ್ ಸಂಸ್ಥೆಗೆ ಸಲ್ಲುತ್ತದೆ. 50 ದಶಕಗಳ ಹಿಂದೆ ಸಮಾನ ಚಿಂತಕರ ತಂಡದ ಕಾರ್ಯ ಅನೇಕ ಕಲಾವಿದರನ್ನು ಹುಟ್ಟುಹಾಕುವಲ್ಲಿ ಕಾರಣವಾಗಿದೆ ಎಂದು ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಸಚಿವ ಡಾ.ಸುಬ್ಬಣ್ಣ ರೈ ಹೇಳಿದ್ದಾರೆ.

ಕೊಲ್ಲಂಗಾನ ಗಾಂಧಿನಗರ ನವರಂಗ್ ಆರ್ಟ್ಸ್ ಕಲಾಸಂಸ್ಥೆ ಸುವರ್ಣ ವರ್ಷಾಚರಣೆಯ ಸಂದರ್ಭದಲ್ಲಿ ಶಿಥಿಲಾವಸ್ಥೆಯಲ್ಲಿರುವ ರಂಗಮಂದಿರ – ಬಣ್ಣದ ಮನೆಯ ಪುನರ್ ನಿರ್ಮಾಣ ಕಾರ್ಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊಲ್ಲಂಗಾನ ಶ್ರೀ ಕ್ಷೇತ್ರದ ಶ್ರೀ ಚಕ್ರ ಆರಾಧಕ ಬ್ರಹ್ಮಶ್ರೀ ತಂತ್ರಿ ಗಣಾಧಿರಾಜ ಉಪಾಧ್ಯಾಯ ಆಶೀರ್ವಚನ ನೀಡಿ, ಹಿರಿಯರ ಕಾಲದಿಂದಲೇ ರಂಗ ಮಂದಿರದಲ್ಲಿ ದುಡಿದ



ಅನೇಕ ಮಂದಿ ಇಂದು ನಾಡಿನಾದ್ಯಂತ ಹೆಸರನ್ನು ಗಳಿಸುತ್ತಾ ಮುಂದುವರಿಯುತ್ತಿದ್ದಾರೆ. ಅವರೆಲ್ಲರೂ ಒಂದೇ ಮನಸ್ಸಿನಿಂದ ಕೈಜೋಡಿಸಿದರೆ 50ನೇ ವರ್ಷದ ಸಂಭ್ರಮ ಸ್ಮರಣೀಯವಾಗಲಿದೆ ಎಂದರು.

ಸಹಕರಿಸೋಣ

ನವಮಾಧ್ಯಮಗಳಿಂದ ರಂಗಚಟುವಟಿಕೆಗೆ ಸ್ವಲ್ಪಮಟ್ಟಿನ ಹಿನ್ನಡೆಯುಂಟಾಗಿದೆ. ರಂಗ ಚಟುವಟಿಕೆ ಅಂದರೆ ಕೂಡುಕುಟುಂಬದಂತೆ ಇದ್ದರೆ ಮಾತ್ರ ಅದು ಮುನ್ನಡೆಯಲು ಸಾಧ್ಯವಿದೆ. ಸುವರ್ಣ ವರ್ಷಾಚರಣೆಯಲ್ಲಿರುವ ಕೊಲ್ಲಂಗಾನದ ರಂಗ ಮಂದಿರದ ತೇರನ್ನು ಎಳೆಯುವಲ್ಲಿ ನಾವೆಲ್ಲಾ ಕೈಜೋಡಿಸೋಣ.

• ಡಾ.ಸುಬ್ಬಣ್ಣ ರೈ

ನಿವೃತ್ತ ಪ್ರಾಂಶುಪಾಲ ಪ್ರೊ.ಎ.ಶ್ರೀನಾಥ್ ಕೊಲ್ಲಂಗಾನ ಅಧ್ಯಕ್ಷತೆ ವಹಿಸಿದ್ದರು. ಬದಿಯಡ್ಕ ಗ್ರಾ.ಪಂ. ಸದಸ್ಯ ಶ್ಯಾಮ್‌ಪ್ರಸಾದ್ ಮಾನ್ಯ, ಮಧೂರು ಗ್ರಾ.ಪಂ.ಸದಸ್ಯೆ ಮಂಜು ಕೆ. ವಿಜಯ್, ರಾಜ್ಯ ಲೆಕ್ಕಪರಿಶೋಧಕ ವಿಭಾಗ ಅಧಿಕಾರಿ ಗೋಪಾಲಕೃಷ್ಣ ಪಿ., ನಿವೃತ್ತ ಪ್ರಾಂಶುಪಾಲೆ ಸರಸ್ವತಿ ಸುಬ್ಬಣ್ಣ ರೈ, ಕಲ್ಲಕಟ್ಟ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಶಿವರಾಮ ಪಿ.ವಿ. ಚಿತ್ತಾರಿ, ಬೇಳ ಸಂತ ಬಿಎಎಸ್‌ಬಿ ಶಾಲೆಯ ಅಧ್ಯಾಪಕ ಸ್ಟೇನಿ ಲೋಬೋ ಕೊಲ್ಲಂಗಾನ ಗೌರವ ಉಪಸ್ಥಿತರಿದ್ದರು.

ಪ್ರಗತಿಪರ ಕೃಷಿಕ ಗೋಪಾಲಕೃಷ್ಣ ನಾವಡ ಓಣಿಕುಂಡು ಕೊಲ್ಲಂಗಾನ ನಿಧಿ ಸಂಚಯನವನ್ನು ಉದ್ಘಾಟಿಸಿದರು. ಕಾಸರಗೋಡು ಅಗ್ನಿಶಾಮಕ ದಳದ ಅಧಿಕಾರಿ ರಮೇಶ್ ಅರ್ತಲೆ ವಿನಂತಿ ಪತ್ರ ಬಿಡುಗಡೆಗೊಳಿಸಿದರು. ಶ್ರೀ ಶಾರದಾ ಭಜನಾ ಮಂದಿರದ ಅಧ್ಯಕ್ಷ ಶ್ರೀಶರಾಜ್ ಶೆಟ್ಟಿ, ನಿವೃತ್ತ ಅರೆಸೇನಾ ಅಧಿಕಾರಿ ನಾರಾಯಣ ನಾಯ್ಕ ಕೊಲ್ಲಂಗಾನ, ಮುಹಿದ್ದೀನ್ ಜುಮಾ ಮಸೀದಿಯ ಕಾರ್ಯದರ್ಶಿ ಮೊಹಮ್ಮದ್ ಸಾದಿಕ್, ನವರಂಗ್ ಆರ್ಟ್ಸ್‌ನ ಹಿರಿಯ ಸದಸ್ಯೆ ಭವಾನಿ ನಾರಾಯಣ ನಾಯ್ಕ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ನವರಂಗ್ ಆರ್ಟ್ಸ್‌ನ ಹಿರಿಯ ಸದಸ್ಯ ವೆಂಕಪ್ಪ ನಾಯ್ಕ ಪಿ.ಎಂ. ದೇವರಕೆರೆ ಅವರಿಗೆ ಸುವರ್ಣ ಗೌರವಾಭಿನಂದನೆ ಸಲ್ಲಿಸಲಾಯಿತು. ನವರಂಗ್ ಆರ್ಟ್ಸ್‌ನ ಅಧ್ಯಕ್ಷ ಉದಯಕುಮಾರ್ ಆಚಾರ್ಯ ಕೊಲ್ಲಂಗಾನ ಸ್ವಾಗತಿಸಿ, ಕಾರ್ಯದರ್ಶಿ ರವಿಶಂಕರ ಶೆಟ್ಟಿ ಕೊಲ್ಲಂಗಾನ ವಂದಿಸಿದರು. ಗೌರವ ಸಲಹೆಗಾರ ಸುಂದರ ಶೆಟ್ಟಿ ಕೊಲ್ಲಂಗಾನ ನಿರೂಪಿಸಿದರು. ಸಂಸ್ಥೆಯ ಸದಸ್ಯರು ರಂಗಗಾಯನದ ಪ್ರಾರ್ಥನೆ ಹಾಡಿದರು. ಕಿಶೋರ್‌ಚಂದ್ರ ರೈ, ಭವಾನಿ ನಾರಾಯಣ ನಾಯ್ಕ, ಸುಜಾತ ಕಿಶೋರ್ ರೈ, ಊರಿನ ಕಲಾಸಕ್ತರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕೊಲ್ಲಂಗಾನ ಶ್ರೀ ಕ್ಷೇತ್ರದ ಶ್ರೀಚಕ್ರ ಆರಾಧಕ ಬ್ರಹ್ಮಶ್ರೀ ತಂತ್ರಿ ಗಣಾಧಿರಾಜ ಉಪಾಧ್ಯಾಯರಿಂದ ಶಿಲಾನ್ಯಾಸ ಜರಗಿತು.

ಸುತ್ತಮುತ್ತ

ವಂಡ್ಸೆ ನಾರಾಯಣ ಗಾಣಿಗ ಪ್ರಶಸ್ತಿಗೆ ಆಯ್ಕೆ

ಕುಂದಾಪುರ: ಬಡಗುತಿಟ್ಟಿನಲ್ಲಿ ಸಾಂಪ್ರಾದಾಯಿಕ ಶೈಲಿಯ ಭಾಗವತಿಕೆ ಮೂಲಕ ಪ್ರಸಿದ್ಧಿ ಪಡೆದಿರುವ ಭಾಗವತ ಸುಧಾಕರ ಕೊಠಾರಿ ಯಳಜಿತ್ ಅವರಿಗೆ 2026ನೇ ಸಾಲಿನ ವಂಡ್ಸೆ ನಾರಾಯಣ ಗಾಣಿಗ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ನಾರಾಯಣ ಗಾಣಿಗ ಕುಟುಂಬಿಕರು ಕೊಡಮಾಡುವ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಫೆ.20 ಶುಕ್ರವಾರ ನಡೆಯಲಿರುವ ವಂಡ್ಸೆಯ ಶ್ರೀ ತಿರುಮಲ ಲಕ್ಷ್ಮೀವೆಂಕಟರಮಣ ದೇವಸ್ಥಾನದ ಪ್ರತಿಷ್ಠಾನ ವರ್ಧಂತ್ಯೋತ್ಸವದ ಸಂದರ್ಭದಲ್ಲಿ ನಡೆಯಲಿದೆ.

ಹಟ್ಟಿಯಂಗಡಿ ಮೇಳದಲ್ಲಿ ಪ್ರಧಾನ ಭಾಗವತರಾಗಿ ಸೇವೆ ಸಲ್ಲಿಸುತ್ತಿರುವ ಇವರು ಕಳೆದ 31 ವರ್ಷಗಳಿಂದ ಕಲಾಸೇವೆ ಮಾಡುತ್ತಾ ಬಂದಿದ್ದಾರೆ. ಸಂಪ್ರದಾಯದ ಚೌಕಟ್ಟಿನಲ್ಲಿಯೇ ಪೌರಾಣಿಕ ಪ್ರಸಂಗಗಳಿಗೆ ಜೀವ ತುಂಬುತ್ತಾ ಬರುತ್ತಿರುವ ಸುಧಾಕರ ಕೊಠಾರಿ ಏರು ಸ್ಥಾಯಿಯ ಮೂಲಕವೇ ಅಭಿಮಾನಿಗಳ ಮನ ಗೆದ್ದವರು.

ಬಡಗುತಿಟ್ಟಿನ ಪ್ರಸಿದ್ಧ ಭಾಗವತರಾಗಿ ಗುರುತಿಸಿಕೊಂಡಿರುವ ಇವರ ಪ್ರತಿಭೆಗೆ ಯೋಗ್ಯವಾಗಿಯೇ ರಾಜ್ಯೋತ್ಸವ ಪ್ರಶಸಿ ಪುರಸ್ಕೃತ ತೆಂಕು ಬಡಗಿನ ಸವ್ಯಸಾಚಿ ವಂಡ್ಸೆ ನಾರಾಯಣ ಗಾಣಿಗ ಸಂಸ್ಮರಣ ಪ್ರಶಸ್ತಿ ಲಭಿಸಿದೆ.

ಕರಾಟೆಯಲ್ಲಿ ಸೇವಾ ಸಂಗಮ ವಿದ್ಯಾ ಕೇಂದ್ರದ ವಿದ್ಯಾರ್ಥಿ ಸಾಧನೆ

ಕೋಟ: ಕುಂದಾಪುರದ ಜೂನಿಯರ್ ಕಾಲೇಜಿನಲ್ಲಿ ಫೆ. 8ರಂದು ನಡೆದ ಕೆಡಿಎಫ್ ಕಪ್ 2026 ರಾಜ್ಯ



ಮಟ್ಟದ ಅಂತರ್ ಡೋಜೋ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ತೆಕ್ಕಟ್ಟೆಯ ಸೇವಾ ಸಂಗಮ ವಿದ್ಯಾ ಕೇಂದ್ರದ 4ನೇ ತರಗತಿ ವಿದ್ಯಾರ್ಥಿ ಅನಿರುದ್ಧ್ ಆರ್ .ಭಟ್ ಅವರು ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಅವರು ರಾಧಾಕೃಷ್ಣ ಮತ್ತು ಸ್ಮಿತಾ ದಂಪತಿಯ ಪುತ್ರರು. ವಿದ್ಯಾರ್ಥಿಗೆ ತರಬೇತುದಾರರಾದ ಸಮಿತಾ ಆಚಾರ್ಯ ಅವರು ಮಾರ್ಗದರ್ಶನ ನೀಡಿದ್ದರು.

ಅಬಾಕಸ್, ವೇದಗಣಿತ ಸ್ಪರ್ಧೆಯಲ್ಲಿ ಬಹುಮಾನ

ಕುಂದಾಪುರ: ಮುದರಂಗಡಿ ಸೈಂಟ್ ಫ್ರಾನ್ಸಿಸ್ ಆಂಗ್ಲ ಮಾಧ್ಯಮ ಶಾಲೆಯ 7ನೇ ತರಗತಿ ವಿದ್ಯಾರ್ಥಿ ವಾಸುದೇವ ಕೆ.ಶೆಣೈ ಅವರು ಮೂಡುಬಿದಿರೆಯಲ್ಲಿ



ಐಡಿಯಲ್ ಪ್ಲೇ ಅಬಾಕಸ್ ಇಂಡಿಯಾ ಪ್ರೈ.ಲಿ. ಆಯೋಜಿಸಿದ್ದ 20ನೇ ರಾಜ್ಯ ಮಟ್ಟದ ಅಬಾಕಸ್ ಮತ್ತು ವೇದಗಣಿತ ಸ್ಪರ್ಧೆಯಲ್ಲಿ ಪ್ರಥಮ ರನ್ನರ್ ಅಪ್ ಮತ್ತು 21ನೇ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ವಿನ್ನರ್ ಪ್ರಶಸ್ತಿ ಹಾಗೂ 2ನೇ ಅಂತರಾಷ್ಟ್ರೀಯ ವೀಕಿ ಚಾಂಪ್ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಈತ ಮುದರಂಗಡಿಯ ಉದ್ಯಮಿ ಕೆ.ಪ್ರತಾಪ್ ಶೆಣೈ ಮತ್ತು ರಶ್ಮಿ ಪೈ ದಂಪತಿ ಪುತ್ರ. ಪ್ರಸ್ತುತ ಪಡುಬಿದ್ರೆಯ ರೈನಬೋ ಐಡಿಯಲ್ ಪ್ಲೇ ಅಬಾಕಸ್ ಸಂಸ್ಥೆಯಲ್ಲಿ ಸುಧಾ ಶ್ರೀಧರ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಆವರ್ಸೆ, ವಾರಾಹಿ ಮತ್ತು ಬಿದ್ಕಲ್‌ಕಟ್ಟೆ ಮಾರ್ಗಗಳಲ್ಲಿ ಪಾಲನಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ರಟ್ಟಾಡಿ, ಮಾವಿನಕೊಡ್ಲು, ಹೆಮ್ಮಣ್ಣು, ಅಮಾಸೆಬೈಲು, ಜಟ್ಟಿನಗದ್ದೆ, ತೊಂಬಟ್ಟು, ಬಳ್ಮನೆ, ಯಳಜೆಡ್ಡು ಹೊಸಬಾಳು, ಭರತ್‌ಕಲ್ಲು, ಕುಳಂಜೆ, ಬಿದ್ಕಲ್ ಕಟ್ಟೆ, ಮೊಳಹಳ್ಳಿ, ಹಾರ್ದಳ್ಳಿ- ಮಂಡಳ್ಳಿ, ಯಡಾಡಿ-ಮತ್ಯಾಡಿ, ಹಾಲಾಡಿ, ಮಚ್ಚಟ್ಟು ಮತ್ತು ಹಳ್ನಾಡಿ-ಹರ್ಕಾಡಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ. 17ರಂದು ಬೆಳಿಗ್ಗೆ 09.30 ರಿಂದ ಸಂಜೆ 05:30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಲೆಕ್ಕಕ್ಕಿಲ್ಲ!

ರೈಲ್ವೇ ನಿಯಮ ಪಾಲನೆ, ಇಲ್ಲಿಲ್ಲ..!

ರೈಲ್ವೇ ಇಲಾಖೆ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ತೆರೆದ ಗೂಡ್ಸ್ ಬಂಡಿಯಲ್ಲಿ ಯಾವುದೇ ಸರಕುಗಳನ್ನು ಸಾಗಾಟ ಮಾಡುವ ಸಂದರ್ಭದಲ್ಲಿ ಗೂಡ್ಸ್ ಬಂಡಿಯ ವ್ಯಾಗನ್‌ಗೆ ಟರ್ಪಾಲು ಮುಚ್ಚುವ ಕ್ರಮವನ್ನು ಇಲಾಖೆ ಅತ್ಯಂತ ಶಿಸ್ತಿನಿಂದ ಪಾಲಿಸುತ್ತಿದೆ. ಲಾರಿಗಳು ಕೂಡ ಈ ನಿಯಮವನ್ನು ಪಾಲಿಸುವಂತೆ ಪೊಲೀಸರು ಮತ್ತು ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಉಭಯ ಇಲಾಖೆಗಳು ಈ ಕುರಿತು ಕ್ರಮ ಕೈಗೊಳ್ಳದಿರುವುದು ವಿಷಾದನೀಯ.

ಅಪಘಾತಗಳಿಗೆ ಅವಕಾಶ:

ತೆರೆದ ಸ್ಥಿತಿಯಲ್ಲಿ ಮಣ್ಣು ಮತ್ತು ಇತರ ವಸ್ತುಗಳನ್ನು ಜಲ್ಲಿಯನ್ನು ಲಾರಿಯಲ್ಲಿ ಹೇರಿಕೊಂಡು ಹೋಗುವ ಕಾರಣದಿಂದ ಈ ವಾಹನದ ಹಿಂಬದಿಯಿಂದ ಬರುವ ದ್ವಿಚಕ್ರ ಸವಾರರ ಕಣ್ಣಿಗೆ ಧೂಳು ಹಾರಿ ದ್ವಿಚಕ್ರ ವಾಹನಗಳು ಅಪಘಾತಕ್ಕೀಡಾದ, ದ್ವಿಚಕ್ರ ವಾಹನಗಳ ಸವಾರರ ಕಣ್ಣಿಗೆ ಹಾನಿಯಾದ ಘಟನೆಗಳಿವೆ. ಲಾರಿಯಿಂದ ಕೆಂಪು ಕಲ್ಲು ಉರುಳಿ ರಸ್ತೆಗೆ ಬಿದ್ದ ಪ್ರಕರಣಗಳಿವೆ. ಇಂತಹ ಲಾರಿಗಳ ವಿರುದ್ಧ ಪೊಲೀಸರು ಮತ್ತು ಸಾರಿಗೆ ಇಲಾಖೆ ಕ್ರಮ ಕೈಗೊಳ್ಳದಿರುವ ಬಗ್ಗೆ ಸಾರ್ವಜನಿಕ ವಲಯದಿಂದ ಆಕ್ರೋಶ ವ್ಯಕ್ತವಾಗುತ್ತಿದೆ.






ದೇವಾಲಯಗಳಲ್ಲಿ ಭಕ್ತಸಾಗರ | ಬಿಲ್ವಪತ್ರ ಅರ್ಚನೆ, ಶತರುದ್ರಾಭಿಷೇಕ, ವಿಶೇಷ ಪೂಜೆ ಪುನಸ್ಕಾರ

ಉಡುಪಿಯಲ್ಲಿ ವಿಜೃಂಭಣೆಯ ಮಹಾಶಿವರಾತ್ರಿ ಉತ್ಸವ

ಕುಂದಾಪುರ/ಗಂಗೊಳ್ಳಿ/ಉಪ್ಪುಂದ/ಹೆಬ್ರಿ/ಶಿರ್ವ/ ಕೋಟ: ಉಡುಪಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಹಾಶಿವರಾತ್ರಿ ಮಹೋತ್ಸವವನ್ನು ಭಾನುವಾರ ವಿಜೃಂಭಣೆ ಮತ್ತು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಎಲ್ಲೆಡೆಯ ಶಿವ ದೇವಾಲಯಗಳಲ್ಲಿ ಜನಸಾಗರ ಕಂಡುಬಂತು.

ಶಿವರಾತ್ರಿ ಪ್ರಯುಕ್ತ ದೇವಳಗಳಲ್ಲಿ ಬಿಲ್ವಪತ್ರ ಅರ್ಚನೆ, ಶತರುದ್ರಾಭಿಷೇಕ, ವಿಶೇಷ ಪೂಜೆ ಪುನಸ್ಕಾರಗಳು, ಮಹಾಪೂಜೆ, ಅಖಂಡ ಭಜನಾ ಮಹೋತ್ಸವ ಮೊದಲಾದ ಧಾರ್ಮಿಕ ಕಾರ್ಯಕ್ರಮ ನಡೆಯಿತು.






ಗುಜ್ಜಾಡಿ ಶ್ರೀ ಗುಹೇಶ್ವರ ದೇವಾಲಯ

ಗಂಗೊಳ್ಳಿಯ ಗುಜ್ಜಾಡಿ ಗ್ರಾಮದ ಪುರಾಣ ಪ್ರಸಿದ್ಧ ವಿಶಿಷ್ಟ ಗುಹಾಂತರ ಶ್ರೀ ಗುಹೇಶ್ವರ ದೇವಾಲಯದಲ್ಲಿ ಭಕ್ತರು ಪೂಜೆ ಪುನಸ್ಕಾರ ಸಲ್ಲಿಸಿದರು. ಮಹಾಶಿವರಾತ್ರಿ ಮಹೋತ್ಸವ ಅಂಗವಾಗಿ ಬೆಳಿಗ್ಗೆ ಶ್ರೀ ಗಣಪತಿ ದೇವರಿಗೆ ಆರು ಕಾಯಿ ಗಣಹೋಮ, ಶ್ರೀ ದೇವರಿಗೆ ಶತರುದ್ರಾಭಿಷೇಕ, ಮಹಾ ಪೂಜೆ, ಹಣಬಿನ ಸೇವೆ, ಮಹಾ ಮಂಗಳಾರತಿ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಜರಗಿತು. ಶ್ರೀ ಗುಹೇಶ್ವರ ಭಜನಾ ಮಂಡಳಿ ಕೊಡಪಾಡಿ ಹಾಗೂ ವಿವಿಧ ಭಜನಾ ಮಂಡಳಿಗಳಿಂದ ಶ್ರೀಮದ್ ಭಗವದ್ಗೀತಾ ಪಠಣ, ವಿಷ್ಣು ಸಹಸ್ರನಾಮ ಪಠಣ ಮತ್ತು ಭಜನಾ ಕಾರ್ಯಕ್ರಮ ನಡೆಯಿತು. ಅರ್ಚಕ ವೃಂದ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ, ದೇವಸ್ಥಾನದ ಅಭಿವೃದ್ಧಿ ಸಮಿತಿ, ಸ್ಥಳೀಯ ಸವ್ಯಸಾಚಿ ಯುವಕ ಮಂಡಲ, ಭಾರತ್ ಸಂಘ, ತಾಯಿ ಮಾರಿಕಾಂಬಾ ಮಹಿಳಾ ಮಂಡಳಿ, ಗುಹೇಶ್ವರ ಯಕ್ಷಗಾನ ಸಂಘದ ಸದಸ್ಯರು ಭಕ್ತರ ಅನುಕೂಲಕ್ಕೆ ಅಗತ್ಯ ವ್ಯವಸ್ಥೆ ಏರ್ಪಡಿಸಿದ್ದರು.

ಮರವಂತೆಯ ಕಡಲತೀರದ ಮಾರಸ್ವಾಮಿಯಲ್ಲಿನ ಶ್ರೀ ಗಂಗಾಧರೇಶ್ವರ ದೇವಸ್ಥಾನ, ಗಂಗೊಳ್ಳಿಯ ಶ್ರೀ ವೀರೇಶ್ವರ ದೇವಸ್ಥಾನ, ಶ್ರೀ ಇಂದುಧರ ದೇವಸ್ಥಾನ, ಮೇಲ್‌ಗಂಗೊಳ್ಳಿಯ ಶ್ರೀ ಬಸವೇಶ್ವರ ದೇವಸ್ಥಾನ, ಗುಜ್ಜಾಡಿ ನಾಯಕವಾಡಿಯ ಶ್ರೀ ಸಂಗಮೇಶ್ವರ ದೇವಸ್ಥಾನ, ಮೊವಾಡಿ ಗ್ರಾಮದ ಶ್ರೀ ಮಾಣಿಸಿದ್ಧಲಿಂಗೇಶ್ವರ ದೇವಸ್ಥಾನ, ಶ್ರೀ ಮಾಣಿಕೊಳಲು ದೇವಸ್ಥಾನ ಸೇರಿದಂತೆ ಅನೇಕ ಶಿವನ ದೇವಾಲಯಗಳಿಗೆ ಭಕ್ತರು ಭೇಟಿ ನೀಡಿ ವಿವಿಧ ಅರ್ಚನೆ, ಪೂಜೆ ಪುನಸ್ಕಾರ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.

ಉಪ್ಪುಂದ ಉಮಾಮಹೇಶ್ವರ ದೇವಸ್ಥಾನ

ಉಪ್ಪುಂದ ಮಾದಯ್ಯ ಶೆಟ್ರಮನೆ ಸಪರಿವಾರ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಭಾನುವಾರ ಶಿವರಾತ್ರಿ ಪ್ರಯುಕ್ತ ಬೆಳಿಗ್ಗೆ ಪುಣ್ಯಾಹವಾಚನ, ಪವಮಾನ ಹೋಮ, ಲಕ್ಷ್ಮೀನರಸಿಂಹ ಹೋಮ, ರಥಾಧಿವಾಸ ಹೋಮ, ರಥಶುದ್ಧಿ, ಶ್ರೀಬಲಿ, ರಥಬಲಿ, ಶ್ರೀ ಉಮಾಮಹೇಶ್ವರ ರಥಾರೋಹಣ, ರುದ್ರಾನುಷ್ಠಾನ ಕಲಾಪಗಳು ನಡೆಯಿತು. ಸಂಜೆ ರಥಬೀದಿಯಲ್ಲಿರುವ ಅಶ್ವತ್ಥಕಟ್ಟೆ ಪ್ರದಕ್ಷಿಣೆ ಹಾಕುವ ಮೂಲಕ ರಥೋತ್ಸವ ಸಂಪನ್ನಗೊಂಡಿತು. ನಂತರ ಶ್ರೀ ಉಮಾಮಹೇಶ್ವರ ಜ್ಞಾನಮಂಟಪದಲ್ಲಿ ರಾಜೋಪಚಾರಪೂಜೆ,ಮಂಡಲದರ್ಶನ,ಬ್ರಹ್ಮಕಲಶ ಸ್ಥಾಪನೆ, ಭೂತಬಲಿ, ಶ್ರೀ ದುರ್ಗಾಪರಮೇಶ್ವರಿ ಹಣವಿನಕಟ್ಟೆಯಲ್ಲಿ ನೇಮದಂತೆ ಪೂಜಾಕಾರ್ಯ, ಅಹೋರಾತ್ರಿ ಭಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಸಿದ್ದಮ್ಮ ಮಾದಯ್ಯ ಶೆಟ್ಟಿ ಫ್ಯಾಮಿಲಿ ಚಾರಿಟೇಬಲ್ ಟ್ರಸ್ಟ್‌ನ ಪ್ರವರ್ತಕ ಯು. ಸೀತಾರಾಮ ಶೆಟ್ಟಿ ಮತ್ತು ಸಹೋದರರು, ಹಿರಿಯ ಪತ್ರಕರ್ತ ಕೆ. ಸಿ. ರಾಜೇಶ, ಮಾದಯ್ಯ ಶೆಟ್ರಮನೆ ಕುಟುಂಬಸ್ಥರು, ಭಕ್ತರು ಉಪಸ್ಥಿತರಿದ್ದರು.

ವನಕೊಡ್ಲು ಶ್ರೀಮಹಾಲಿಂಗೇಶ್ವರ ದೇಗುಲ

ಬೈಂದೂರು ಗ್ರಾಮದ ವನಕೊಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಭಾನುವಾರ ಹೆಚ್ಚಿನ ಸಂಖ್ಯೆಯ ಭಕ್ತರು ಪ್ರಾತಃಕಾಲದಿಂದಲೇ ದೇವಳಕ್ಕೆ ಆಗಮಿಸಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಬಂದು ಶಿವಲಿಂಗ ಮುಟ್ಟಿ ಆರಾಧನೆ, ಅರ್ಚನೆ ಮಾಡಿದರು. ಈ ಕ್ಷೇತ್ರದಲ್ಲಿ ಜಾತಿ, ಮತ, ಭೇದವಿಲ್ಲದೆ ಸರ್ವ ಭಕ್ತರಿಗೂ ದೇಗುಲದ ಗರ್ಭಗುಡಿ ಪ್ರವೇಶಿಸಿ ಶಿವನ ಮೂರ್ತಿ ಸ್ಪರ್ಶಿಸಿ, ಪೂಜಾ ಕೈಂಕರ್ಯಗಳಲ್ಲಿ ಭಾಗಿಯಾಗುವ ಅವಕಾಶವಿದೆ. ಆದರೆ ಇತ್ತೀಚೆಗೆ ದೇಗುಲದಲ್ಲಿ ದೈವಜ್ಞ ಶ್ರೀ ಬೇಳ ಪದ್ಮನಾಭ ಶರ್ಮ ಇರಿಂಜಾಲಕುಡ ಅವರ ನೇತೃತ್ವದಲ್ಲಿ ನಡೆದ ಅಷ್ಟಮಂಗಲ ಪ್ರಶ್ನಾ ಚಿಂತನೆಯಂತೆ ಮಹಾಶಿವರಾತ್ರಿ ದಿನದಂದು ಗರ್ಭಗುಡಿ ಪ್ರವೇಶಿಸಿ ಶಿವಲಿಂಗ ಮುಟ್ಟಿ ಪೂಜೆ ಮಾಡುವ ಭಕ್ತರು ದೇಗುಲದ ಪುಷ್ಕರಿಣಿಯಲ್ಲಿ ತೀರ್ಥಸ್ನಾನ ಮಾಡಿ, ಮಡಿ ಬಟ್ಟೆ ಧರಿಸಿ ಶಿವಲಿಂಗ ಮುಟ್ಟಿ ಪೂಜೆ ಮಾಡಬೇಕೆಂದು ಕಂಡು ಬಂದಿರುವುದರಿಂದ ಶಿವರಾತ್ರಿ ದಿನದಂದು ಮುಟ್ಟಿ ಪೂಜೆಯಲ್ಲಿ ಕೊಂಚ ಬದಲಾವಣೆ ಮಾಡಲಾಗಿತ್ತು. ಒಂದು ಸಾವಿರ ವರ್ಷಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ 10 ಶತಮಾನದಲ್ಲಿ ನಿರ್ಮಿಸಲಾದ ಗೋಕರ್ಣ ಹೊರತುಪಡಿಸಿದರೆ ಭಕ್ತರು ಶಿವಲಿಂಗ ಮುಟ್ಟಿ ಪೂಜೆ ಮಾಡುವ ರಾಜ್ಯದ ಎರಡನೇ ದೇವಾಲಯ ಇದಾಗಿದೆ. ದೇವಳದ ಆನುವಂಶಿಕ ಆಡಳಿತ ಮೊಕ್ತಸರ ಡಾ. ಯಡ್ತರೆ ರಾಜಮೋಹನ ಶೆಟ್ಟಿ ಮತ್ತು ಸಹೋದರರ ನೇತೃತ್ವದಲ್ಲಿ ಶಿವರಾತ್ರಿ ಉತ್ಸವಕ್ಕೆ ಪೂರ್ವತಯಾರಿ ಮಾಡಿದ್ದರು. ಪಡುವರಿ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಭಾನುವಾರ ಮಹಾಶಿವರಾತ್ರಿ ಉತ್ಸವ ವೈಭವದಿಂದ ಜರುಗಿತು.

ಶ್ರೀಸೇನೇಶ್ವರ ದೇವಸ್ಥಾನ

ಬೈಂದೂರು ಗ್ರಾಮ ದೇವತೆ ಮಹತೋಭಾರ ಶ್ರೀಸೇನೇಶ್ವರ ದೇವಸ್ಥಾನದಲ್ಲಿ ಭಾನುವಾರ ಮಹಾಶಿವರಾತ್ರಿ ಉತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಬೆಳಿಗ್ಗೆ ಸಾಮೂಹಿಕ ನವಗ್ರಹಯುಕ್ತ ರುದ್ರಹೋಮ, ಸಂಜೆ ಶತರುದ್ರ, ಮಹಾಮಂಗಳಾರತಿ ಪನಿವಾರ ವಿತರಣೆ, ರಾತ್ರಿ ಮಹಾಮಂಗಳಾರತಿ ನಗರೋತ್ಸವ ಹಾಗೂ ಮುಂತಾದ ಕಾರ್ಯಕ್ರಮ ನಡೆಯಿತು. ನೂರಾರು ಭಕ್ತರು ಪಾಲ್ಗೊಂಡರು. ವ್ಯವಸ್ಥಾಪನಾ ಸಮಿತಿ ಸದಸ್ಯರು ಹಾಗೂ ಭಕ್ತಾಧಿಗಳು ಇದ್ದರು.

ಶಿರೂರು ಮೇಲ್ಪಂಕ್ತಿ ಶ್ರೀ ಎರಗೇಶ್ವರ ದೇವಸ್ಥಾನದಲ್ಲಿ ಭಾನುವಾರ ಮಹಾಶಿವರಾತ್ರಿ ಉತ್ಸವ ನಡೆಯಿತು. ಬೆಳಿಗ್ಗೆ ದೇವಸ್ಥಾನದಲ್ಲಿ ಅರ್ಚಕ ಲಕ್ಷ್ಮೀನಾರಾಯಣ ಭಟ್ ಇವರ ನೇತೃತ್ವದಲ್ಲಿ ವಿಸೇಷ ಪೂಜಾ ವಿಧಿ ವಿಧಾನಗಳು ನಡೆಯಿತು.

ಕಿರಿಮಂಜೇಶ್ವರದ ಶ್ರೀ ಅಗಸ್ತ್ಯೇಶ್ವರ, ಮೊಗೇರಿ ಶ್ರೀ ಶಂಕರನಾರಾಯಣ, ಹೇರಂಜಾಲಿನ ಗುಡೇಮಹಾಲಿಂಗೇಶ್ವರ, ನಂದನವನದ ಶ್ರೀ ಮಹಾಬಲೇಶ್ವರ, ಕಂಚಿಕಾನ್ ಶ್ರೀ ಮಹಾಲಿಂಗೇಶ್ವರ, ಮಡಿಕಲ್ ಅರಮಕೊಡಿ ಶ್ರೀ ಈಶ್ವರ ದೇವಾಲಯಗಳಲ್ಲಿಯೂ ಕೂಡ ವೈಭವ ಮಹಾಶಿರಾತ್ರಿ ಉತ್ಸವ ಜರುಗಿತು.

ಕಾಡುಹೊಳೆ ಶ್ರೀ ಜಂಗಮೇಶ್ವರ ಮಠ

ಹೆಬ್ರಿ ಬಳಿಯ ಕಾಡುಹೊಳೆ ಶ್ರೀ ಜಂಗಮೇಶ್ವರ ಮಠದಲ್ಲಿ ಶಿವರಾತ್ರಿ ಪ್ರಯುಕ್ತ ಪ್ರಾರ್ಥನೆ, ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಪಾರಾಯಣ, ಮಹಾಪೂಜೆ, ಶ್ರೀ ಮಠದ ಪ್ರಧಾನ ಅರ್ಚಕ ವಿದ್ವಾನ್ ಗುಡ್ಡೆಅಂಗಡಿ ರಾಘವೇಂದ್ರ ಭಟ್ ಇವರ ನೇತೃತ್ವದಲ್ಲಿ, ಆಡಳಿತ ಮೊಕ್ತೇಸರ ಚಿರಂಜಿತು ಅಜಿಲ ಇವರ ಸಹಕಾರದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಕಡಂದಲೆ ಶ್ರೀಶ ಭಟ್ ಮತ್ತು ಬಳಗದವರಿಂದ ಭಕ್ತಿ ಗಾನ ನೇರವೇರಿತು.

ಕುಂದೇಶ್ವರ ದೇವಸ್ಥಾನ

ಕುಂದಾಪುರದ ಪ್ರಸಿದ್ಧ ಹಾಗೂ ಐತಿಹಾಸಿಕ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಮಹೋತ್ಸವ ನಡೆಯಿತು.

ಮಹಾಶಿವರಾತ್ರಿಯ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ವಿಧಿವಿಧಾನಗಳು, ಬೆಳಗ್ಗೆಯಿಂದಲೇ ಶ್ರೀ ಕುಂದೇಶ್ವರ ದೇವರಿಗೆ ವಿಶೇಷ ಶತರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಮತ್ತು ಬಿಲ್ವಾರ್ಚನೆ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ವಿಶೇಷ ಮಹಾಪೂಜೆ ಸಂಜೆ ರಂಗಪೂಜೆ ನಡೆಯಿತು. ಬೆಳಗ್ಗೆಯಿಂದಲೇ ಕುಂದಾಪುರ ತಾಲೂಕು ಭಜನ ಮಂಡಳಿಗಳ ಒಕ್ಕೂಟದಿಂದ ಭಜನೆ, ರಾತ್ರಿ ಇಡೀ ಭಜನೆ, ಶಿವನಾಮ ಸ್ಮರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂದೇವಸ್ಥಾನದ ಆವರಣದಲ್ಲಿಕಲಾವಿದರಿಂದ ಭಜನೆ, ಭಕ್ತಿಗಾನಾವಳಿ, ಭಕ್ತಿ ರಸಮಂಜರಿ, ನೃತ್ಯಸಿಂಚನ ಕಾರ್ಯಕ್ರಮಗಳು ಜರಗಿತು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವಾಸುದೇವ ಯಡಿಯಾಳ್, ಸದಸ್ಯರು, ಅಸಂಖ್ಯ ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಶ್ರೀ ಹಿರೇಮಹಾಲಿಂಗೇಶ್ವರ ದೇಗುಲ

ಕೋಟ ಮಹಾತೋಭಾರ ಶ್ರೀ ಹಿರೇಮಹಾಲಿಂಗೇಶ್ವರ ದೇಗುಲದಲ್ಲಿ ಮಹಾ ಶಿವರಾತ್ರಿ ಉತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಿದವು. ಈ ಅಂಗವಾಗಿ ದೇಗುಲದಲ್ಲಿ ತಂತ್ರಿ ಅರ್ಚಕರ ಸಮ್ಮುಖದಲ್ಲಿ ರುದ್ರಹೋಮ, ರುದ್ರಾಭಿಷೇಕ, ಕಿರಿ ರಂಗಪೂಜೆ, ಮಹಾಪೂಜೆ ಜರಗಿದವು. ಉತ್ಸವದ ಅಂಗವಾಗಿ ದೇಗುಲದ ಶ್ರೀ ಹಿರೇಮಹಾಲಿಂಗೇಶ್ವರ ಮಿತ್ರವೃಂದದ ವತಿಯಿಂದ ಪನಿವಾರ ಫಲಹಾರ ಸೇವೆಯನ್ನು ಹಮ್ಮಿಕೊಂಡಿತು. ಸಾವಿರಾರು ಭಕ್ತಾಧಿಗಳು ಶ್ರೀದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ದೇಗುಲದ ಅರ್ಚಕ ರಾಜೇಂದ್ರ ಅಡಿಗ,ಸದಾಶಿವ ಅಡಿಗ ಸೇರಿದಂತೆ ಅನೇಕ ಅರ್ಚಕರು ಪೂಜಾ ಕಾರ್ಯದಲ್ಲಿ ಭಾಗಿಯಾದರು. ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಹಲಸಿನಕಟ್ಟೆ ಅನಂತಪದ್ಮನಾಭ ಐತಾಳ್,ಸದಸ್ಯರಾದ ಶ್ರೀನಿವಾಸ ಅಡಿಗ,ಭಾಸ್ಕರ್ ಶೆಟ್ಟಿ, ದಿನೇಶ್ ದೇವಾಡಿಗ,ಉಮೇಶ್ ಕದ್ರಿಕಟ್ಟು ಶ್ರೀಲಕ್ಷ್ಮೀ ಪ್ರಭು, ಮಿತ್ರವೃಂದದ ಜಿ.ಎಸ್ ಆನಂದ ದೇವಾಡಿಗ,ರಾಜೇಶ್ ದೇವಾಡಿಗ, ಅವಿನಾಶ್ ದೇವಾಡಿಗ,ಅವಿನಾಶ್ ಆಚಾರ್ ಇದ್ದರು.

ಕಲ್ಲಟ್ಟು ದೇಗುಲ

ಕೋಟದ ಕಲ್ಲಟ್ಟು ಶ್ರೀ ಮಹಾಲಿಂಗೇಶ್ವರ ದೇಗುಲ ಹರ್ತಟ್ಟು ಇಲ್ಲಿ ಮಹಾಶಿವರಾತ್ರಿ ಉತ್ಸವದ ಅಂಗವಾಗಿ ನೂರಾರು ಭಕ್ತರು ಭಾಗಿಯಾಗಿ ವಿವಿಧ ಪೂಜಾ ವಿಧಿವಿಧಾನದಲ್ಲಿ ಭಾಗಿಯಾದರು.

ಈ ಅಂಗವಾಗಿ ದೇಗುಲದಲ್ಲಿ ಪಂಚವರ್ಣ ಮಹಿಳಾ ಮಂಡಲ ಭಜನಾ ತಂಡ ಹಾಗೂ ಶ್ರೀ ಭಗವತ್ ಭಜನಾ ಮಂಡಳಿ ಕೋಟ ಪಡುಕರೆ ಇವರಿಂದ ಭಜನಾ ಕಾರ್ಯಕ್ರಮ ಜರಗಿತು. ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಕಾರ್ಯದರ್ಶಿ ಹರೀಶ್ ದೇವಾಡಿಗ,ಮಹಾಲಿಂಗೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಶೇಖರ್ ದೇವಾಡಿಗ,ಸಿದ್ಧ ದೇವಾಡಿಗ, ದೇಗುಲದ ಅರ್ಚಕ ಸುಧೀರ್ ಐತಾಳ್ ಇದ್ದರು.

ಶ್ರೀಕ್ಷೇತ್ರ ಅಡಪಾಡಿ ಮಹಾ ಶಿವರಾತ್ರಿ ಉತ್ಸವ, ರಥೋತ್ಸವ ಸಂಪನ್ನ

ಶಿರ್ವ: ಪಳ್ಳಿ ಶ್ರೀಕ್ಷೇತ್ರ ಅಡಪಾಡಿ ಶ್ರೀ ಉಮಾಮಹೇಶ್ವರ, ಶ್ರೀದುರ್ಗಾಪರಮೇಶ್ವರೀ ದೇವೀ ಸನ್ನಿಧಿಯಲ್ಲಿ ಮಹಾ ಶಿವರಾತ್ರಿ ಉತ್ಸವ, ರಥೋತ್ಸವ ಭಾನುವಾರ ನೆರವೇರಿತು.



ಕ್ಷೇತ್ರದ ಧರ್ಮದರ್ಶಿ ಪುಂಡಲೀಕ ನಾಯಕ್, ಶ್ರೀಕ್ಷೇತ್ರದ ತಂತ್ರಿ ವೇ.ಮೂ.ದಯಾನಂದ ಭಟ್ ಕಲ್ಲಡ್ಕ, ವೇ.ಮೂ.ಹರಿಪ್ರಸಾದ್ ಭಟ್ ಅಡಪಾಡಿ ನೇತೃತ್ವದಲ್ಲಿ ಕ್ಷೇತ್ರದ ಅರ್ಚಕ ವೇ.ಮೂ. ವಿಷ್ಣುಪ್ರಸಾದ್ ಭಟ್, ಶಿವಪ್ರಸಾದ್ ಭಟ್, ವಿನೋದ್ ಭಟ್, ರಂಜಿತ್ ಭಟ್ ಪಾಲ್ಗೊಳ್ಳುವಿಕೆಯಿಂದ ವಿವಿಧ ಧಾರ್ಮಿಕ ಅನುಷ್ಠಾನಗಳು ಸಂಪನ್ನಗೊಂಡವು.

ಬೆಳಿಗ್ಗೆ ವಿವಿಧ ಧಾರ್ಮಿಕ ಅನುಷ್ಠಾನಗಳು, ನವಕ ಪ್ರಧಾನ ಹೋಮ, ಕಲಶಾಭಿಷೇಕ, ಫಂಚಾಮೃತ ಅಭಿಷೇಕ, ಮಧ್ಯಾಹ್ನ ಮಹಾಪೂಜೆ, ಬಲಿ, ರಜತ ಪಲ್ಲಕಿ ಉತ್ಸವ,ಪಲ್ಲಪೂಜೆ, ರಥೋತ್ಸವ, ಬೆಳಿಗ್ಗೆ ಆರ್‌ಎಸ್‌ಬಿ ಮಹಿಳಾ ವೇದಿಕೆ ಭಜನಾ ಮಂಡಳಿ ಮಣಿಪಾಲ ಮತ್ತು ಸಂಜೆ ಶ್ರೀ ನರಸಿಂಹ ಭಜನಾ ಮಂಡಳಿ ನರಸಿಂಗೆ ಇವರಿಂದ ಭಜನೆ, ಸಂಜೆ ಕಲ್ಪೋಕ್ತ ಪೂಜೆ, ರಂಗಪೂಜೆ, ಬಲಿ, ಮಹಾಬಲಿ ಉತ್ಸವ, ರಥೋತ್ಸವ, ವಸಂತ ಮಂಟಪದಲ್ಲಿ ಅಷ್ಟಾವಧಾನ ಸೇವೆ, ರಾತ್ರಿ ಶ್ರೀಮಹಾಕಾಳಿ ಭಜನಾ ಮಂಡಳಿ ಮಂಗಲ್ದಿಮಠ ಪಳ್ಳಿ ಸಹಯೋಗದೊಂದಿಗೆ 'ಅಹೋರಾತ್ರಿ ಭಜನಾ' ಕಾರ್ಯಕ್ರಮ ಜರುಗಿತು.

ಕುಣಿತ ಭಜನಾ ಸ್ಪರ್ಧೆಯಲ್ಲಿ ಮೊವಾಡಿ ಭಜನಾ ಮಂಡಳಿ ಪ್ರಥಮ

ಗಂಗೊಳ್ಳಿ: ಶ್ರೀ ಇಂದುಧರ ದೇವಸ್ಥಾನ ವತಿಯಿಂದ 81ನೇ ಮಹಾ ಶಿವರಾತ್ರಿ ಮಹೋತ್ಸವದ ಪ್ರಯುಕ್ತ ಗಂಗೊಳ್ಳಿಯ ಸ.ವಿ. ಹಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಆಯೋಜಿಸಲಾಗಿದ್ದ ಕಾರವಾರದಿಂದ ಮಂಗಳೂರುವರೆಗಿನ ಅಂತರ್ ಜಿಲ್ಲಾ ಮಟ್ಟದ ಆಹ್ವಾನಿತ ತಂಡಗಳ ಕುಣಿತ ಭಜನಾ ಸ್ಪರ್ಧೆಯಲ್ಲಿ ಮೊವಾಡಿ ಶ್ರೀ ಮಾಣಿ ಸಿದ್ಧಲಿಂಗೇಶ್ವರ ಭಜನಾ ಮಂಡಳಿ ಪ್ರಥಮ ಸ್ಥಾನ ಪಡೆದುಕೊಂಡಿದೆ.



ಆಶಿಕಾನ್ ಭಜನಾ ಮಂಡಳಿ ಭಟ್ಕಳ (ದ್ವಿತೀಯ) ಮತ್ತು ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂಡಳಿ ಶಾನಮದ್ಲು ಭಟ್ಕಳ (ತೃತೀಯ) ಸ್ಥಾನ ಪಡೆದುಕೊಂಡಿತು. ವಿಜೇತರಿಗೆ ತೀರ್ಪುಗಾರರಾದ ಉಡುಪಿ ಜಿಲ್ಲಾ ಭಜನಾ ಮಂಡಳಿಗಳ ಒಕ್ಕೂಟದ ಸಂಚಾಲಕ ಜಯಕರ ಪೂಜಾರಿ ಗುಲ್ವಾಡಿ, ಭಜನಾ ಪರಿಷತ್ ಗಂಗೊಳ್ಳಿ ವಲಯ ಅಧ್ಯಕ್ಷ ಜಗದೀಶ ಪೂಜಾರಿ, ಬಿ.ಪ್ರಕಾಶ ಶೆಣೈ ಮತ್ತು ಮಾಧವ ದೇವಾಡಿಗ ಬಹುಮಾನ ವಿತರಿಸಿ ಶುಭ ಹಾರೈಸಿದರು. ದೇವಸ್ಥಾನದ ಅಧ್ಯಕ್ಷ ಗುರುರಾಜ್, ಕಾರ್ಯದರ್ಶಿ ವರದರಾಜ್ ಜಿ.ಟಿ. ಮತ್ತು ಅರ್ಚಕ ಕೃಷ್ಣ ಜಿ.ಟಿ., ದೇವಸ್ಥಾನದ ಸದಸ್ಯರು, ಮತ್ತಿತರರು ಉಪಸ್ಥಿತರಿದ್ದರು.

ಸಾಂತೂರು ಶ್ರೀ ಸುಬ್ರಹ್ಮಣ್ಯನ ಕ್ಷೇತ್ರದಲ್ಲಿ ಮುಷ್ಟಿಕಾಣಿಕೆ ಸಮರ್ಪಣೆ

ಶಿರ್ವ: ಸಾಂತೂರಿನ ಶ್ರೀ ಸುಬ್ರಹ್ಮಣ್ಯನ ಪುಣ್ಯಕ್ಷೇತ್ರ ಜೀರ್ಣೋದ್ಧಾರ ಪೂರ್ವಕ ನಡೆಯಲಿರುವ ಬ್ರಹ್ಮಕಲಶೋತ್ಸವಕ್ಕೆ ಮಹಾಶಿವರಾತ್ರಿ ಸಂದರ್ಭ 'ಮುಷ್ಟಿಕಾಣಿಕೆ' ಮೂಲಕ ಚಾಲನೆ ನೀಡಲಾಯಿತು.



ಅಂದಾಜು ಐದು ಕೋಟಿ ರೂ. ವೆಚ್ಚದಲ್ಲಿ ನಡೆಯಲಿರುವ ನವೀಕರಣ ಕಾಮಗಾರಿಗಳಿಗೆ ಯಶಸ್ಸನ್ನು ಕೋರಿ ಕ್ಷೇತ್ರದ ಪ್ರಧಾನ ಅರ್ಚಕ ವೇ.ಮೂ. ವಿಟ್ಠಲ ಜೋಯಿಸರ ಮಾರ್ಗದರ್ಶನದಲ್ಲಿ ವೇ.ಮೂ. ಶ್ರೀನಿವಾಸ ಜೋಯಿಸರು ಹಾಗೂ ಅರ್ಚಕ ವೃಂದದಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು. ಬ್ರಹ್ಮ ಕಲಶೋತ್ಸವ ಸಮಿತಿ ಪದಾಧಿಕಾರಿಗಳು, ಗುತ್ತು-ಬರ್ಕೆ ಪ್ರಮುಖರು, ಸಾಂತೂರು ಪಿಲಾರು ಗ್ರಾಮಸ್ಥರು, ಶ್ರೀದೇವರಿಗೆ ಭಕ್ತಿಪೂರ್ವಕವಾಗಿ ಮುಷ್ಟಿಕಾಣಿಕೆ ಸಮರ್ಪಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುಧೀರ್ ರಾವ್, ಕಾರ್ಯದರ್ಶಿ ಗುರುರಾಜ್ ಪ್ರಭು, ಕೋಶಾಧಿಕಾರಿ ಸುಬ್ರಹ್ಮಣ್ಯ ಭಟ್, ಸಾಂತೂರು ಅಂಬಾನಡಿ ಹೊಸಮನೆ ಗಣೇಶ್ ಶೆಟ್ಟಿ, ಸಾಂತೂರು ಪರಾರಿ ದಯಾನಂದ ಹೆಗ್ಡೆ, ಸುಜಿತ್ ಶೆಟ್ಟಿ,ಬಾಲಚಂದ್ರ ಶೆಟ್ಟಿ, ರವೀಂದ್ರ ಪ್ರಭು, ಜಯರಾಮ ಶೆಟ್ಟಿ ಮತ್ತು ವಿವಿಧ ಸಮಿತಿಗಳ ಪ್ರಮುಖರು ಉಪಸ್ಥಿತರಿದ್ದರು.

ದೇವಾಡಿಗ ಸಮಾಜದ ಮುಂದಾಳು, ಜಿ.ಪಂ. ಮಾಜಿ ಉಪಾಧ್ಯಕ್ಷ ದಿ. ರಾಜು ದೇವಾಡಿಗ ತ್ರಾಸಿ ಅವರ ಶ್ರದ್ಧಾಂಜಲಿ ಸಭೆ, ನುಡಿನಮನ

ದೇವಾಡಿಗ ಸಮಾಜ ಮಾತ್ರವಲ್ಲದೆ ಹಿಂದುಳಿದ ವರ್ಗಗಳ ಧ್ವನಿಯಾಗಿದ್ದರು

- ದಿ. ರಾಜು ದೇವಾಡಿಗತ್ರಾಸಿ ಅವರಿಗೆ ಕುಂದಾಪುರ, ಬೈಂದೂರು ಹಾಗೂ ಬ್ರಹ್ಮಾವರ ತಾಲೂಕು ದೇವಾಡಿಗರ ಒಕ್ಕೂಟದ ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆ, ನುಡಿನಮನ
- ಹಿತೈಷಿಗಳು, ಬಂಧುಗಳು, ಸಮಾಜದ ಪ್ರಮುಖರಿಂದ ದಿ. ರಾಜು ದೇವಾಡಿಗ ಅವರ ಗುಣಗಾಣ

ಕುಂದಾಪುರ: ದೇವಾಡಿಗ ಸಮಾಜದ ಮುಂದಾಳು, ಜಿ.ಪಂ. ಮಾಜಿ ಉಪಾಧ್ಯಕ್ಷ ದಿ. ರಾಜು ದೇವಾಡಿಗ ತ್ರಾಸಿ ಅವರಿಗೆ ಕುಂದಾಪುರ, ಬೈಂದೂರು ಹಾಗೂ ಬ್ರಹ್ಮಾವರ ತಾಲೂಕು ದೇವಾಡಿಗರ ಒಕ್ಕೂಟದ ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆ ಹಾಗೂ ನುಡಿನಮನ ಕಾರ್ಯಕ್ರಮ ತ್ರಾಸಿಯ ಅಣ್ಣಪ್ಪಯ್ಯ ಸಭಾಭವನದಲ್ಲಿ ಶನಿವಾರ ನಡೆಯಿತು.



ಬೈಂದೂರು ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಮಾತನಾಡಿ, ರಾಜು ದೇವಾಡಿಗರು ಹಾಗೂ ನನ್ನದು ಕಳೆದ 30 ವರ್ಷಗಳಿಂದ ಅಣ್ಣ- ತಮ್ಮಂದಿರ ಬಾಂಧವ್ಯ. ನಾನು ರಾಜಕೀಯಕ್ಕೆ ಬರುವಲ್ಲಿ, ಬಂಗಾರಪ್ಪನವರ ಪಕ್ಷ ಸೇರಿ, ಬೈಂದೂರಲ್ಲಿ ಮೊದಲ ಬಾರಿಗೆ ಶಾಸಕರಾಗಲು, ಅನಂತರ ಕಾಂಗ್ರೆಸ್ ನಲ್ಲಿಯೂ 3 ಬಾರಿ ಶಾಸಕರಾಗುವಲ್ಲಿಯೂ ಅವರ ಶ್ರಮವಿದೆ. ಅವರಿಗೆ ನಾನು ಎಂದಿಗೂ ಋಣಿಯಾಗಿರುವೆ ಎಂದು ಹೇಳಿದರು.

ಅವರು ಕೇವಲ ದೇವಾಡಿಗ ಸಮಾಜಕ್ಕೆ ಮಾತ್ರವಲ್ಲ, ಹಿಂದುಳಿದ ವರ್ಗಗಳ ಧ್ವನಿಯಾಗಿದ್ದರು ಎಂದು ಅವರು ಈ ಸಂದರ್ಭ ಸ್ಮರಿಸಿದರು.

ಕುಂದಾಪುರ, ಬೈಂದೂರು ಹಾಗೂ ಬ್ರಹ್ಮಾವರ ತಾಲೂಕು ದೇವಾಡಿಗರ ಒಕ್ಕೂಟದ ಅಧ್ಯಕ್ಷ ರಘುರಾಮ ದೇವಾಡಿಗ. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಾಜೇಶ್ ಕಾರಂತ್ ಉಪ್ಪಿನಕುದ್ರು, ಉದ್ಯಮಿಗಳಾದ ನಾಗರಾಜ ಪಡುಕೋಣೆ, ರಮೇಶ್ ದೇವಾಡಿಗ ವಂಡ್ಸೆ, ಜಿ.ಪಂ. ಮಾಜಿ ಸದಸ್ಯೆ ಗೌರಿ ದೇವಾಡಿಗ, ಬಾರ್ಕೂರಿನ ಶ್ರೀ ಏಕನಾಥೇಶ್ವರಿ ದೇವಸ್ಥಾನದ ಟ್ರಸ್ಟಿ ಜನಾರ್ದನ ದೇವಾಡಿಗ, ದೇವಾಡಿಗರ ಸಂಘ ಪಾವಂಜೆ ಅಧ್ಯಕ್ಷ ಯಾದವ್ ದೇವಾಡಿಗ ನುಡಿನಮನ ಸಲ್ಲಿಸಿದರು.

ಬಾರ್ಕೂರಿನ ಶ್ರೀ ಏಕನಾಥೇಶ್ವರಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅಣ್ಣಯ್ಯ ಶೇರಿಗಾರ್, ಸಮಾಜದ ಪ್ರಮುಖರಾದ ಶೀನ ದೇವಾಡಿಗ, ನಾಗರಾಜ ರಾಯಪ್ಪನಮಠ, ತಮ್ಮಯ್ಯ ದೇವಾಡಿಗ, ತುಂಗಾ ದೇವಾಡಿಗ, ಮಿಥುನ್ ದೇವಾಡಿಗ, ರಾಜು ದೇವಾಡಿಗರ ಪತ್ನಿ ಅಂಬಿಕಾ, ಮಕ್ಕಳು, ಹಿತೈಷಿಗಳು, ಬಂಧುಗಳು, ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ದೇವಾಡಿಗರ ಸಂಘದ ಮಾಜಿ ಅಧ್ಯಕ್ಷ ಶಂಕರ ಅಂಕದಕಟ್ಟೆ ಅವರು ಪ್ರಸ್ತಾವಿಸಿದರು. ಹಟ್ಟಿಯಂಗಡಿಯ ಶ್ರೀ ಸಿದ್ದಿವಿನಾಯಕ ವಸತಿ ಶಾಲೆಯ ಉಪ ಪ್ರಾಂಶುಪಾಲ ರಾಮ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರು.